॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀ ಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

೨೭ನೇ ಅಧ್ಯಾಯವು

ಓಂ ॥ ಅಥಾನುಜ್ಞಾಮುಪಾದಾಯ ದ್ರೌಣೇರ್ದುರ್ಯೋಧನೋನೃಪಃ ।
ಕರ್ಣಂ ಸೇನಾಪತಿಂ ಚಕ್ರೇಸೋsಗಾದ್ಯುದ್ಧಾಯ ದಂಶಿತಃ ॥ ೧ ॥

ನೃಪ : ದುರ್ಯೋಧನ :—ರಾಜನಾದ ದುರ್ಯೋಧನನು, ಅಥ-ದ್ರೋಣರ ಮರಣದ ನಂತರ,ದ್ರೌಣೇಃ ಅನುಜ್ಞಾಂ-ದ್ರೋಣಪುತ್ರರಾದ ಅಶ್ವತ್ಥಾಮರ ಅಪ್ಪಣೆಯನ್ನು, ಉಪಾದಾಯ— ತೆಗೆದುಕೊಂಡು, ಕರ್ಣಂ—ಕರ್ಣನನ್ನು, ಸೇನಾಪತಿಂ—ಸೇನಾಪತಿಯನ್ನಾಗಿ, ಚಕ್ರೇ— ಮಾಡಿದನು. ಸ :— ಆ ಕರ್ಣನು, ದಂಶಿತಃಸನ್—ಕವಚವನ್ನು ಧರಿಸಿದವನಾಗಿ, ಯುದ್ಧಾಯ—ಯುದ್ಧಕ್ಕಾಗಿ, ಅಗಾತ್ – ಹೊರಟನು. ॥ ೧ ॥

ತತ್ರಾಭವದ್ಯುದ್ಧಮತೀವದಾರುಣಂ ಪಾಂಡೋಸ್ಸುತಾನಾಂ
ಧೃತರಾಷ್ಟ್ರಜೈರ್ಗಜೇ । ತತ್ರೋದಯಾದ್ರಿಪ್ರತಿಮೇ ಪ್ರದೃಶ್ಯತೇ
ಭೀಮೋ ಯಥೋದ್ಯನ್ಸವಿತಾತಿನಿರ್ಮಲಃ ॥೨॥

ತತ್ರ—ಆ ದಿನದಲ್ಲಿ, ಪಾಂಡೋಃ ಸುತಾನಾಂ— ಪಾಂಡವರಿಗೆ, ಧೃತರಾಷ್ಟ್ರಜೈಃ ಸಹ— ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳಿಂದ ಕೂಡಿಕೊಂಡು, ಅತೀವದಾರುಣಂ— ಬಹು ಭಯಂಕರವಾದ, ಯುದ್ಧಂ—ಯುದ್ಧವು, ಅಭೂತ್— ನಡೆಯಿತು. ತತ್ರ— ಆ ಯುದ್ಧದಲ್ಲಿ, ಭೀಮಃ— ಶ್ರೀ ಭೀಮಸೇನದೇವರು, ಯಥಾ— ಹೇಗೆ, ಅತಿನಿರ್ಮಲಃ ಸವಿತಾ— ಸ್ವಚ್ಛ ಪ್ರಕಾಶವುಳ್ಳ ಸೂರ್ಯನು ಉದಯಪರ್ವತದ ಮೇಲೆ ಶೋಭಿಸಬೇಕೋ ಹಾಗೆ, ಉದಯಾದ್ರಿ ಪ್ರತಿಮೇ— ಉದಯಪರ್ವತದಂತಿರುವ, ಗಜೇ— ಆನೆಯ ಮೇಲೆ, ಪ್ರದೃಶ್ಯತೇ – ಶೋಭಿಸುತ್ತಿದ್ದರು. ॥೨॥

ತಂ ಕಾಲಯಂತಂ ನೃಪತೀನ್ ಕ್ಷಯೇಮಧೂರ್ತಿರಭ್ಯಾಗಮತ್ತಸ್ಯ
ಗಜಂ ಜಘಾನ । ತಂ ವೀರ್ಯವತ್ತಂ ಪ್ರತಿಲಭ್ಯ ಭೀಮೋ
ನಿನಾಯ ಮೃತ್ಯೋಃ ಸದನಾಯ ಶೀಘ್ರಂ ॥ ೩ ॥

ನೃಪತೀನ್-- ರಾಜರನ್ನು; ಕಾಲಯಮಂತಂ— ಸಂಹರಿಸತಕ್ಕ, ತಂ— ಆ ಭೀಮರನ್ನು ಕುರಿತು, ಕ್ಷೇಮಧೂರ್ತಿಃ — ಕ್ಷೇಮಧೂರ್ತಿ ಎಂಬವನು, ಅಭ್ಯಾಗಮತ್—ಏರಿ ಬಂದನು, ತಸ್ಯ— ಆ ಭೀಮರ, ಗಜಂ – ಆನೆಯನ್ನು ಜಘಾನ—ಕೊಂದನು. ವೀರ್ಯಮತ್ತಂ ತಂ – ತನ್ನ ಪರಾಕ್ರಮದ ಬಗ್ಗೆ ಅಹಂಕಾರವುಳ್ಳ ಆ ಕ್ಷೇಮಧೂರ್ತಿಯನ್ನು, ಪ್ರತಿಲಭ್ಯ—ಯುದ್ಧಕ್ಕಾಗಿ ಪಡೆದು, ಭೀಮ :— ಶ್ರೀ ಭೀಮರು, ತಂ— ಅವನನ್ನು, ಶೀಘ್ರಂ— ಬೇಗನೇ, ಮೃತ್ಯೋಃ ಸದನಾಯ—ಯಮಲೋಕಕ್ಕೆ, ನಿನಾಯ— ಕಳಿಸಿದರು. ॥೩॥

ನಿಹತ್ಯ ತಂ ಮಾರುತಿರಭ್ಯಕೃಂತತ್ ಶಿರಾಂಸಿ ಯೂನಾಂ ಪರಪಕ್ಷಪಾತಿನಾಂ ।
ವಿಕ್ಷೋಭಯಾಮಾಸ ಚ ಶತ್ರುಸೈನ್ಯಂ ಸಿಂಹೋ ಯಥೈನ ಶ್ವಸೃಗಾಲಯೂಥಂ ॥೪॥

ಮಾರುತಿಃ — ಶ್ರೀ ಭೀಮರು, ತಂ – ಆ ಕ್ಷೇಮಧೂರ್ತಿಯನ್ನು, ನಿಹತ್ಯ—ಕೊಂದು, ಪರಪಕ್ಷಪಾತಿನಾಂ— ಶತ್ರು ಪಕ್ಷದವರಾದ, ಯೂನಾಂ— ತರುಣ ಸೈನಿಕರ, ಶಿರಾಂಸಿ – ತಲೆಗಳನ್ನು ಅಭ್ಯಕೃಂತತ್—ಕತ್ತರಿಸಿದರು. ಚ— ಮತ್ತು, ಶತ್ರುಸೈನ್ಯಂ—ವೈರಿ ಸೈನ್ಯವನ್ನು, ಸಿಂಹ :— ಸಿಂಹವು, ಶ್ವಸೃಗಾಲಯೂಥಂ ಯಥಾ— ನಾಯಿ ನರಿಗಳ ಗುಂಪನ್ನು ಹೇಗೆ ಓಡಿಸಬೇಕೋ ಭಯಗೊಳಿಸಬೇಕೋ ಹಾಗೆ, ವಿಕ್ಷೋಭಯಾಮಾಸ—ಓಡಿಸಿದರು; ಭಯಗೊಳಿಸಿದರು. ॥೪॥

ಸಂಕ್ಷೋಭ್ಯಮಾಣಂ ತದನೀಕಮೀಕ್ಷ್ಯ ದ್ರೌಣೀ ರಥೇನ ಪ್ರತಿಜಗ್ಮಿವಾಂಸ್ತಂ ।
ತದ್ಯುದ್ಧಮಾಸೀದತಿಘೋರಮದ್ಭುತಂ ಪುರಾ ಯಥಾನಾಸ ಚ ಕಸ್ಯಚಿತ್ಕ್ವಚಿತ್ ॥೫॥

ದ್ರೌಣಿ :—ಅಶ್ವತ್ಥಾಮರು, ತದನೀಕಂ— ಆ ತಮ್ಮ ಸೈನ್ಯವನ್ನು, ಸಂಕ್ಷೋಭ್ಯಮಾಣಂ—ಭೀತವಾಗಿ ಓಡುವದನ್ನು ಈಕ್ಷ್ಯ— ನೋಡಿ, ರಥೇನ—ರಥದಿಂದ, ತಂ – ಆ ಭೀಮರನ್ನು ಕುರಿತು, ಪ್ರತಿ ಜಗ್ಮಿವಾನ್— ಏರಿ ಹೋದರು. ತದ್ ಯುದ್ಧಂ— ಆಗ ಅಪರಿಚ್ಚರಿಗೂ ನಡೆದ ಯುದ್ಧವು, ಪುರಾ— ಈ ಹಿಂದೆ, ಕ್ವಚಿತ್—ಎಂದೂ, ಕಸ್ಯಚಿತ್—ಯಾರಿಗೂ, ಯಥಾ ನ ಆಸ— ಹೇಗೆ ಆಗಿಲ್ಲವೋ, ತಥಾ—ಹಾಗೆ, ಅತಿಘೋರಂ— ಅತ್ಯಂತ ಭಯಂಕರವಾಗಿ, ಅದ್ಭುತಂ— ಆಶ್ಚರ್ಯಕರವಾಗಿಯೂ, ಆಸೀತ್—ಆಯಿತು. ॥೫॥

ದೃಷ್ಟೈವ ತದ್ದೇವ ಗಂಧರ್ವವಿಪ್ರಾ ಊಚುರ್ನೇದೃಗ್‌ದೃಷ್ಟಪೂರ್ವಂ ಸುಯುದ್ಧಂ ।
ನಚೋತ್ತರಂ ವಾऽಪಿ ಭವಿಷ್ಯತೀದೃಕ್ಕಲಾಂ ಚ ಸರ್ವಾಣಿ ನ ಷೋಡಶೀಮಿಯುಃ ॥೬॥

ನೈತಾದೃಶೀಜ್ಞಾನ ಸಂಪದ್ಬಲಂ ವಾ ದ್ವಯಂ ಕುತೋ ವಾಯುಮೃತೇ ಶಿವಂ ತಥಾ ।
ದ್ವಯೋಸ್ಸಮಾಹಾರ ಇಹದ್ವಯೋರಪಿ ಜ್ಞಾನಸ್ಯ ಬಾಹ್ವೋಶ್ಚ ಬಲಸ್ಯಸೂರ್ಜಿತಃ ॥೭॥

ದೇವಗಂಧರ್ವವಿಪ್ರಾಃ — ದೇವತೆಗಳು, ಗಂಧರ್ವರು, ಬ್ರಾಹ್ಮಣರು, ತತ್‌ದೃಷ್ಟೈವ— ಆ ಯುದ್ಧವನ್ನು ನೋಡಿಯೇ, ಈದೃಗ್, ಈ ತರಹದ, ಸುಯುದ್ಧಂ— ಶ್ರೇಷ್ಠ ಯುದ್ಧವು, ನ ದೃಷ್ಟಪೂರ್ವಂ— ಈ ಮೊದಲು ನೋಡಲ್ಪಟ್ಟಿರುವದಿಲ್ಲ. ಉತ್ತರಂ ಅಪಿ— ಮುಂದಿನ ಯುದ್ಧವೂ ಕೂಡ, ಈದೃಕ್—ಇದರಂತೆ, ನ ಚ ಭವಿಷ್ಯತಿ— ನಡೆಯುವದಿಲ್ಲ. ಸರ್ವಾಣಿ ಚ— ಬೇರೆ ಎಲ್ಲ ಯುದ್ಧಗಳೂ ಕೂಡ, ಷೋಡಶೀಂ ಕಲಾಂ ಚ— ಈ ಯುದ್ಧದ ಹದಿನಾರನೆಯ ಭಾಗವನ್ನೂ ಕೂಡ,ನ ಇಯುಃ — (ಹೋಲಿಕೆಗಾಗಿ) ಹೊಂದುವದಿಲ್ಲ; ಈದೃಶೀ – ಈ ರೀತಿಯಾದ, ಜ್ಞಾನಸಂಪತ್–ಜ್ಞಾನ ಸಂಪತ್ತಾಗಲೀ, ಬಲಂ ವಾ— ಬಾಹು ಶಕ್ತಿಯಾಗಲೀ, ವಾಯುಂ—ಶ್ರೀ ಮುಖ್ಯ ಪ್ರಾಣದೇವರನ್ನು, ತಥಾ ಶಿವಂ—ಹಾಗೂ ಶ್ರೀ ರುದ್ರದೇವರನ್ನು, ಋತೇ—ಬಿಟ್ಟು, ಎಲ್ಲಿಯೂ, ನ—ಇರುವದಿಲ್ಲ, (ಅಂದಮೇಲೆ), ದ್ವಯಂ—ಎರಡು, ಕುತಃ—

ಹೇಗೆ ಬಂದಾವು ? ಒಂದೊಂದೇ ಇಲ್ಲದಿರುವಾಗ ಎರಡೂ ಬರಲು ಹೇಗೆ ಶಕ್ಯ ? ಇಹ— ಈ ಯುದ್ಧದಲ್ಲಿ. ದ್ವಯೋಃ— ಶ್ರೀ ಭೀಮ, ಅಶ್ವತ್ಥಾಮರಿಬ್ಬರಿಗೂ, ಜ್ಞಾನಸ್ಯ ಬಾಹ್ವೋಃ ಬಲಸ್ಯ ಇತಿ ದ್ವಯೋಃ— ಜ್ಞಾನ ಮತ್ತು ಬಾಹು ಶಕ್ತಿಗಳ, ಸೂರ್ಜಿತಃ— ಬಹು ಹೆಚ್ಚಾದ, ಸಮಾಹಾರಃ— ಮೇಲನವು (ಅಸ್ತಿ - ಇರುತ್ತದೆ.) ಇತಿ—ಎಂದು ಊಚುಃ — ಮಾತನಾಡಿದರು. ॥೬॥೭॥

ಇತೀರ್ಯಮಾಣೇ ವಿಭುಧೈರ್ನರೋತ್ತಮೌ ದಿಶಸ್ಸಮಸ್ತಾ ಗಗನಂಚ ಪತ್ರಿಭಿಃ ।
ನಿರಂತರಂ ಚಕ್ರತುರುತ್ತಮೌ ಜಸೌ ದೃಷ್ಟ್ವೈವ ತದ್ಭೀತಿ ಮಗುರ್ಮಹಾರಥಾಃ ॥೮॥

ಇತಿ— ಹೀಗೆ, ವಿಬುಧೈಃ— ದೇವತೆಗಳಿಂದ, ಈರ್ಯಮಾಣೇ ಸತಿ – ಹೇಳಲ್ಪಡುತ್ತಿರಲು, ಉತ್ತಮೌಜಸೌ ನರೋತ್ತಮೌ – ಪರಾಕ್ರಮಿ ಶ್ರೇಷ್ಠರಾದ ಶ್ರೀ ಭೀಮಸೇನ ಅಶ್ವತ್ಥಾಮರು, ಪತ್ರಿಭಿಃ – ಬಾಣಗಳಿಂದ, ಸಮಸ್ತಾಃ ದಿಶಃ – ಎಲ್ಲ ದಿಕ್ಕುಗಳನ್ನು, ಗಗನಂ ಚ – ಆಕಾಶವನ್ನೂ ಕೂಡ, ನಿರಂತರಂ – ಅವಕಾಶರಹಿತಗಳನ್ನಾಗಿ. ಚಕ್ರತುಃ – ಮಾಡಿದರು. ಮಹಾರಥಾಃ – ಮಹಾರಥಿಕರೂ ಕೂಡ, ತತ್ – ಆ ಯುದ್ಧವನ್ನು, ದೃಷ್ಟ್ವೈವ – ನೋಡಿಯೇ, ಭೀತಿಂ ಅಗುಃ – ಭಯವನ್ನು ಹೊಂದಿದರು. ॥೯॥

ಶರಾಸನೇ ಮಾರುತಿನಾ ನಿರಾಕೃತೇದ್ರೌಣಿರ್ಮಹಾಸ್ತ್ರಾಣಿ ಮುಮೋಚ ತಸ್ಮಿನ್ ।
ತಾನ್ಯಸ್ತ್ರವಿದ್ಭಿರ್ಬಲವಾನವಿಸ್ಮಯಸ್ಸಂಶಾಮಯಾಮಾಸ ಸುತೋಽನಿಲಸ್ಯ ॥೯॥

ಮಾರುತಿನಾ – ಶ್ರೀ ಭೀಮರಿಂದ, ಶರಾಸನೇ - (ಅಶ್ವತ್ಥಾಮರ) ಧನುಸ್ಸು, ನಿರಾಕೃತೇ – ಮುರಿಯಲ್ಪಡುತ್ತಿರಲು, ದ್ರೌಣಿಃ – ಅಶ್ವತ್ಥಾಮರು, ಮಹಾಸ್ತ್ರಾಣಿ—ಧನುಸ್ಸಿನ ಅವಶ್ಯಕತೆಯಿಲ್ಲದಿರುವ, ಮಂತ್ರಗಳಿಂದ ಅಭಿಮಂತ್ರಿಸಲ್ಪಟ್ಟ ಶಕ್ತಿ ಪ್ರಾಸ, ಖಡ್ಗ, ಕೊಡಲಿ, ಶತಘ್ನಿ ಮೊದಲಾದ ಆಯುಧಗಳನ್ನು, ತಸ್ಮಿನ್ – ಆ ಭೀಮಸೇನರ ಮೇಲೆ, ಮುಮೋಚ – ಬಿಟ್ಟರು. ~~ಅನಿಲಸ್ಯ ಸುತಃ – ವಾಯು ಪುತ್ರರಾದ ಶ್ರೀ ಭೀಮರು ತಾನಿ – ಆ ಅಸ್ತ್ರಗಳನ್ನು, ಅಸ್ತ್ರವಿದ್ಭಿಃ – ಪ್ರಬಲ ಪ್ರತ್ಯಸ್ತ್ರಗಳಿಂದ~~ ಸಂಶಾಮಯಾಮಾಸ – ನಾಶ ಮಾಡಿದರು. ॥೯॥

ಪುನಶ್ಶರೈರೇವ ಪರಸ್ಪರಂ ತಾವಯುಧ್ಯತಾಂ ಚಿತ್ರಮಲಂ ಚ ಸುಷ್ಠು ।
ತದಾತು ಭೀಮಸ್ಯ ಶರೈರ್ಭೃಶಾರ್ತೋದ್ರೌಣಿಃ ಪಪಾತಾಶು ದೃಢಂ ವಿಚೇತನಃ ॥೧೦॥

ಪುನಃ – ಮತ್ತೆ, ತೌ – ಅವರಿಬ್ಬರು, ಪರಸ್ಪರಂ – ಒಬ್ಬರಿಗೊಬ್ಬರು, ಶರೈರೇವ ಬಾಣಗಳಿಂದಲೇ, ಅಲಂ ಚಿತ್ರಂ– ಬಹಳ ಆಶ್ಚರ್ಯಕರವಾಗಿಯೂ, ಸುಷ್ಠು ಚ – ಚೆನ್ನಾಗಿಯೂ, ಅಯುಧ್ಯತಾಂ – ಯುದ್ಧ ಮಾಡಿದರು. ತು—ಆದರೆ, ತದಾ– ಆಗ, ದ್ರೌಣಿಃ—ಅಶ್ವತ್ಥಾಮರು, ಭೀಮಸ್ಯ ಶರೈಃ— ಶ್ರೀ ಭೀಮಸೇನರ ಬಾಣ (ಪ್ರಹಾರ)ಗಳಿಂದ, ಭೃಶಾರ್ತಸ್ಸನ್ – ಬಹಳ ವ್ಯಥಿತರಾಗಿ, ದೃಢಂ ವಿಚೇತನಸ್ಸನ್ – ಗಾಢ ಮೂರ್ಛೆಯನ್ನು ಹೊಂದಿದವರಾಗಿ, ಆಶು—ಕೂಡಲೇ, ಪಪಾತ – ಬಿದ್ದರು. ॥೧೦॥

ಭೀಮಶ್ಚ ವಿಹ್ವಲತನುಸ್ಸತು ಕಿಂಚಿದೇವ ಪೂರ್ವಂ ಗತೇ ಗುರುಸುತೇ ಪ್ರಯಯೌ ಕ್ಷಣೇನ ।
ನಿರ್ಧೂತಯುದ್ಧಶ್ರಮ ಆತ್ತಧನ್ವಾ ಯೋದ್ಧುಂ ಗಜೌಘಂ ಪ್ರತಿನಾದಿತಾಶಃ ॥೧೧॥

ಗುರುಸುತೇ – ಗುರುಪುತ್ರರಾದ ಅಶ್ವತ್ಥಾಮರು, (ಮೂರ್ಛಾಂ) ಗತೇ ಸತಿ —ಗಟ್ಟಿಯಾಗಿ ಮೂರ್ಛೆಯನ್ನು ಹೊಂದುತ್ತಿರಲು, ಪೂರ್ವಂ— ಈ ಮೊದಲು, ಕಿಂಚಿತ್ – ಸ್ವಲ್ಪ, ವಿಹ್ವಲ ತನುಃ - ಶ್ರಮ ಹೊಂದಿದ, ಸಃ ಭೀಮಶ್ಚ – ಆ

ಶ್ರೀ ಭೀಮರೂ ಕೂಡ, ಕ್ಷಣೇನ ತು – ಕ್ಷಣ ಮಾತ್ರದಲ್ಲಿಯೇ, ನಿರ್ಧೂತ ಯುದ್ಧ ಶ್ರಮಸ್ಸನ್ – ಯುದ್ಧ ಶ್ರಮವನ್ನು ಕಳೆದು ಕೊಂಡವರಾಗಿ, ಪ್ರತಿನಾದಿತಾಶಸ್ಸನ್ – ಎಲ್ಲ ದಿಕ್ಕುಗಳನ್ನು ತಮ್ಮ ಗರ್ಜನ ಧ್ವನಿಯಿಂದ ತುಂಬಿದವರಾಗಿ, ಆತ್ತಧನ್ವಾಸನ್— ಧನುರ್ಧಾರಿಗಳಾಗಿ, ಗಜೌಘಂ – ಆನೆಗಳ ಹಿಂಡನ್ನು ಕುರಿತು, ಯೋದ್ಧುಂ – ಯುದ್ಧ ಮಾಡಲು, ಪ್ರಯಯೌ – ಹೋದರು. ॥೧೧॥

ಭಾವಾನುವಾದ ೧-೧೧ ದ್ರೋಣರು ಗತಿಸಿದ ನಂತರ ಅಶ್ವತ್ಥಾಮರ ಅನುಮತಿಯ ಮೇರೆಗೆ, ದುರ್ಯೋಧನನು ಕರ್ಣನನ್ನು ಸೇನಾಪತಿಯನ್ನಾಗಿ ಮಾಡಿದನು. ಅವನು ಯುದ್ಧಕ್ಕೆ ಹೋದನು. ಪಾಂಡವ-ಕೌರವರಿಗೆ ಘೋರ ಯುದ್ಧವಾಗಿದೆ. ಶ್ರೀ ಭೀಮರು ಎತ್ತರವಾದ ಆನೆಯ ಮೇಲೆ ಉದಯ ಪರ್ವತದ ಮೇಲೆ ಸೂರ್ಯನಂತೆ ಪ್ರಕಾಶಿಸುತ್ತಿದ್ದರು. ಬಹು ಕೌರವ ಪಕ್ಷದ ರಾಜರನ್ನು ಸಂಹರಿಸುತ್ತಿದ್ದರು. ಆಗ ಅವರ ಸಮೀಪಕ್ಕೆ ಕ್ಷೇಮಧೂರ್ತಿಯು ಬಂದನು; ಆನೆಯನ್ನು ಕೊಂದನು. ಭೀಮರು ಅವನನ್ನು ಕೂಡಲೇ ಸಂಹರಿಸಿದರು; ಅನೇಕ ತರುಣ ಸೈನಿಕರನ್ನೂ ಕೊಂದರು; ಸೈನ್ಯವನ್ನು ಓಡಿಸಿದರು. ಇದನ್ನು ನೋಡಿದ ಅಶ್ವತ್ಥಾಮರು ಬಂದಾಗ, ಈ ಹಿಂದೆ ಯಾರಿಗೂ, ಎಂದೂ ಆಗದಂಥ ಭಯಂಕರ ಯುದ್ಧವನ್ನು ಇಬ್ಬರೂ ಮಾಡಿದರು. ಈ ಯುದ್ಧವನ್ನು ನೋಡಿ ದೇವತೆಗಳು, ಬ್ರಾಹ್ಮಣರು, ಗಂಧರ್ವರು ಇಂಥ ಯುದ್ಧವನ್ನು ಈ ಮೊದಲು ನೋಡಿಲ್ಲ; ಮುಂದೆ ನೋಡಲು ಶಕ್ಯವಿಲ್ಲ. ಬೇರೆ ಯಾವ ಯುದ್ಧವೂ ಇದರ ಹದಿನಾರನೆಯ ಅಂಶಕ್ಕೂ ಸಮವಾಗದು. ಇವರಿಬ್ಬರಲ್ಲಿ ತಾರತಮ್ಯದಿಂದ ಇರುವಂಥ ಜ್ಞಾನಬಲ, ಬಾಹುಬಲಗಳು ಬೇರೆ ಯಾರಲ್ಲಿಯೂ ಇಲ್ಲ. ಒಂದೊಂದೂ ಕೂಡ ಇಲ್ಲ. ಅಂದ ಮೇಲೆ ಇಂಥ ಯುದ್ಧ ಬೇರೆಯವರಿಗೆ ಆಗಲು ಹೇಗೆ ಶಕ್ಯ ?' ಎಂದು ಮಾತಾಡಿಕೊಳ್ಳುತ್ತಿದ್ದರು. ಅವರಿಬ್ಬರೂ ಪರಸ್ಪರವಾಗಿ ಬಾಣಗಳನ್ನು ಸತತವಾಗಿ ಬಿಡುತ್ತಾ ಎಲ್ಲ ಕಡೆಗೂ ಪೊಳ್ಳು ಕಾಣದಂತೆ ಮಾಡಿದರು. ಈ ಯುದ್ಧ ದೃಶ್ಯವನ್ನು ನೋಡಿದ ಮಹಾರಥಿಕರೂ ಕೂಡ ಹೆದರಿದರು. ಶ್ರೀ ಭೀಮರು ಅಶ್ವತ್ಥಾಮರ ಬಿಲ್ಲನ್ನು ಕತ್ತರಿಸಿದರು. ಆಗ ಬೇರೆ ಬೇರೆ ಖಡ್ಗ, ಕೊಡಲಿ ಮೊದಲಾದ ಆಯುಧಗಳನ್ನೇ ಮಂತ್ರಗಳಿಂದ ಅಭಿಮಂತ್ರಿಸಿ ಅಶ್ವತ್ಥಾಮರು ಪ್ರಯೋಗಿಸಿದರು. ಶ್ರೀ ಭೀಮರು ಅವುಗಳನ್ನು ಪ್ರಬಲ ಪ್ರತ್ಯಸ್ತ್ರಗಳಿಂದ ನಾಶಮಾಡಿದರು. ಮತ್ತೆ ಬಾಣಗಳಿಂದ ಪರಸ್ಪರ ಯುದ್ಧ ಮಾಡಿದರು. ಭೀಮರ ಬಾಣದ ಪ್ರಬಲ ಹೊಡೆತದಿಂದ ಅಶ್ವತ್ಥಾಮರು ಗಟ್ಟಿಯಾಗಿ ಮೂರ್ಛಿತರಾಗಿ ಬಿದ್ದರು. ಅಶ್ವತ್ಥಾಮರ ಪ್ರಹಾರಗಳಿಂದ ಸ್ವಲ್ಪ ಶ್ರಮ ಹೊಂದಿದ ಶ್ರೀ ಭೀಮರು ಕೂಡಲೇ ಶ್ರಮ ಕಳೆದುಕೊಂಡು ಗರ್ಜನೆ ಮಾಡುತ್ತಾ ಆನೆಗಳ ಹಿಂಡಿನ ಕಡೆಗೆ ಯುದ್ಧಕ್ಕಾಗಿ ಹೋದರು. (ಶ್ರೀ ಭೀಮರು ಶ್ರಮ ಹೊಂದಿದಂತೆ ನಟನೆ ಮಾಡಿದ್ದು ಎಂದು ತಿಳಿಯಬೇಕು.)

ತಸ್ಮಿನ್ನಜಾನ್ಮರ್ದಯತಿ ಧಾರ್ತರಾಷ್ಟ್ರೀ ಯುಧಿಷ್ಠಿರಂ ।
ಆಯೂದ್ಯುದ್ಧಾಯ ತೌ ಯುದ್ಧಂ ರಾಜಾನೌ ಚಕ್ರತುಶ್ಚಿರಂ ॥೧೨॥

ತತ್ರ ತಂ ವಿರಥಂ ಚಕ್ರೇ ಸಹಸೈವ ಯುಧಿಷ್ಠಿರಃ ।
ಸ ಗದಾ ಮಾದದೇ ಗುರ್ವೀಂ ತಂ ಭೀಮೋಽಭ್ಯಪತದ್ಗದೀ ॥೧೩॥

ದೃಷ್ಟ್ವಾಪ ಕೃಪಸ್ತಂ ಸ್ವರಥಮಾರೋಪ್ಯಾಪಯಯೌ ತತಃ ।
ತದೈವ ಕರ್ಣನಕುಲೌ ಭೃಶಂ ಬಾಣೈರಯುಧ್ಯತಾಂ ॥೧೪॥

ನಕುಲಂ ವಿರಥಂ ಕೃತ್ವಾ ಕರ್ಣೋಽಥ ಪ್ರಪಲಾಯಿತಂ ।
ಅನುದ್ಯುತ್ಯ ಚ ವೇಗೇನ ಕಂಠೇ ಧನುರವಾಸೃಜತ್ ॥೧೫॥

ಉಕ್ತ್ವಾಚ ಪರುಷಾ ವಾಚಃ ಕುಂತ್ಯಾವಚನಗೌರವಾತ್ ।
ನ ಜಘಾನೈವ ನಕುಲಂ ವಿಸೃಜ್ಯ ಚ ಯಯೌ ಪರಾನ್ ॥೧೬॥

ತಸ್ಮಿನ್ – ಆ ಭೀಮರು, ಗಜಾನ್ – ಆನೆಗಳನ್ನು, ಮರ್ದಯತಿ ಸತಿ – ಸಂಹರಿಸುತ್ತಿರಲು, ಧಾರ್ತರಾಷ್ಟ್ರ: – ದುರ್ಯೋಧನನು, ಯುಧಿಷ್ಠಿರಂ ಧರ್ಮರಾಜನ ಸಮೀಪಕ್ಕೆ, ಯುದ್ಧಾಯ – ಯುದ್ಧಕ್ಕಾಗಿ, ಆಯಾತ್—ಬಂದನು. ತೌ ರಾಜಾನೌ – ಆ ಇಬ್ಬರು ರಾಜರು, ಚಿರಂ—ಬಹುಸಮಯದವರೆಗೆ, ಯುದ್ಧಂ—ಯುದ್ಧವನ್ನು, ಚಕ್ರತು:– ಮಾಡಿದರು. ॥೧೨॥

ತತ್ರ – ಆ ಯುದ್ಧದಲ್ಲಿ, ಯುಧಿಷ್ಠಿರಃ – ಧರ್ಮರಾಜನು, ಸಹಸೈವ—ಒಮ್ಮೆಲೆ, ಸಾಮರ್ಥ್ಯದಿಂದ, ತಂ – ದುರ್ಯೋಧನನನ್ನು. ವಿರಥಂ – ರಥಹೀನನನ್ನಾಗಿ, ಚಕ್ರೇ – ಮಾಡಿದನು. ಸ: – ಆ ದುರ್ಯೋಧನನು, ಗುರ್ವೀಂ ಗದಾಂ – ದೊಡ್ಡ ಗದೆಯನ್ನು, ಆದದೇ – ತೆಗೆದುಕೊಂಡನು, ತಂ – ಆ ದುರ್ಯೋಧನನನ್ನು ಕುರಿತು, ಗದೀ ಭೀಮ: – ಗದಾಧಾರಿ ಗಳಾದ ಭೀಮರು, ಅಭ್ಯಪತತ್ – ಏರಿ ಬಂದರು. ॥೧೩॥

ಕೃಪ: – ಕೃಪಾಚಾರ್ಯರು, ದೃಷ್ಟ್ವಾ – (ಇದೆಲ್ಲವನ್ನು) ನೋಡಿ, ತಂ – ಆ ದುರ್ಯೋಧನನನ್ನು, ಸ್ವರಥಂ – ತನ್ನ ರಥದಲ್ಲಿ, ಆರೋಪ್ಯ – ಏರಿಸಿಕೊಂಡು, ತತಃ— ಆ ಸ್ಥಳದಿಂದ, ಅಪಯಯೌ – –ಸರಿದು ಹಿಂದೆ ಹೋದರು. ತದೈವ— ಆದೇ ಸಮಯದಲ್ಲಿ, ಕರ್ಣನಕುಲೌ—ಕರ್ಣನಕುಲರು, ಬಾಣೈ:—ಬಾಣಗಳಿಂದ, ಭೃಶಂ – ಚೆನ್ನಾಗಿ; ಬಹಳವಾಗಿ, ಅಯುಂ ಧ್ಯತಾಂ—ಯುದ್ಧ ಮಾಡಿದರು. ॥೧೪॥

ಕರ್ಣ:– ಕರ್ಣನು, ನಕುಲಂ—ನಕುಲನನ್ನು, ವಿರಥಂ—ರಥಹೀನನನ್ನಾಗಿ, ಕೃತ್ವಾ—ಮಾಡಿ, ಅಥ—ಅನಂತರ, ಪ್ರಪಲಾಯಿತಂ—ಓಡಿದಂಥ ನಕುಲನನ್ನು, ವೇಗೇನ ಅನುದ್ಯುತ್ಯ—ವೇಗವಾಗಿ ಬೆನ್ನು ಹತ್ತಿಹೋಗಿ, ಕಂಠೇ—ಅವನ ಕೊರಳಿ ನಲ್ಲಿ, ಧನುಃ—ಬಿಲ್ಲನ್ನು, ಅವಾಸೃಜತ್ – ಹಾಕಿದನು. ॥೧೫॥

ಚ—ಮತ್ತು, ಪರುಷಾಃ ವಾಚಃ—ಕ್ರೂರವಾದ ಮಾತುಗಳನ್ನು, ಉಕ್ತ್ವಾ—ಹೇಳಿ, ಕುಂತ್ಯಾಃ—ಕುಂತೀದೇವಿಗೆ, ವಚನಗೌರವಾತ್ ಏವ—ತಾನು ಕೊಟ್ಟ ''ಅರ್ಜುನನನ್ನು ಬಿಟ್ಟು ಬೇರೆ ಯಾವ ಪಾಂಡವನನ್ನೂ ಕೊಲ್ಲುವದಿಲ್ಲ'' ಎಂಬ ~~ಮಾತಿನ ಮೇಲೆ ಗೌರವದಿಂದಲೇ (ಆ ಮಾತನ್ನು ನಡೆಸುವದಕ್ಕಾಗಿಯೇ) ನಕುಲಂ—ನಕುಲನನ್ನೂ, ನ ಜಘಾನ—ಕೊಲ್ಲಲಿಲ್ಲ.~~ ಚ—ಮತ್ತು, ವಿಸೃಜ್ಯ—ನಕುಲನನ್ನು ಬಿಟ್ಟು, ಪರಾನ್—ಬೇರೆಯವರ ಹತ್ತಿರ, ಯಯೌ—ಹೋದನು. ॥೧೬॥

ವಿಂದಾನುವಿಂದಾವಥ ಕೈಕಯೌ ರಣೇ ಸಮಾಸದತ್ಸಾತ್ಯಕಿ ರುಗ್ರವಿಕ್ರಮಃ ।
ತಯೋರಮುಷ್ಯಾಭವದುಗ್ರವೈಶಸಂ ಪ್ರವರ್ಷತೋರುತ್ತಮಸಾಯಕಾನ್ ಬಹೂನ್ ॥೧೭॥

ಅಥ—ಇನ್ನೊಂದು ಕಡೆಗೆ, ಆನಂತರ, ಉಗ್ರವಿಕ್ರಮಃ—ಭಯಂಕರ ಪರಾಕ್ರಮಿಯಾದ, ಸಾತ್ಯಕಿಃ—ಸಾತ್ಯಕಿಯು, ರಣೇ—ಯುದ್ಧದಲ್ಲಿ, ಕೈಕಯೌ—ಕೇಕಯ ದೇಶದವರಾದ, ವಿಂದಾನುವಿಂದೌ—ವಿಂದ ಮತ್ತು ಅನುವಿಂದರನ್ನು ಕುರಿತು, ಸಮಾಸದತ್—ಏರಿಹೋದನು. ಬಹೂನ್ ಉತ್ತಮ ಸಾಯಕಾನ್ – ಬಹುವಾದ ಶ್ರೇಷ್ಠ ಬಾಣಗಳನ್ನು, ಪ್ರವರ್ಷತೋಃ— ಸುರಿಮಳೆ ಮಾಡತಕ್ಕ, ತಯೋಃ – ಅವರಿಬ್ಬರಿಗೆ, ಅಮುಷ್ಯ – ಆ ಸಾತ್ಯಕಿಗೆ, ಉಗ್ರವೈಶಸಂ ಭಯಾನಕ ಯುದ್ಧವು, ಅಭವತ್—ಆಯಿತು ॥೧೭॥

ತಾಭ್ಯಾಂ ನಿರುದ್ಧಃ ಸಹಸಾ ಜಹಾರ ತತ್ಸಾನುವಿಂದಸ್ಯ ಶಿರೋऽಥ ವಿಂದಃ ।
ಯುಯೋಧ ಶೈನೇಯ ಮಥಾರಥಾವುಭೌ ಪರಸ್ಪರಂ ಚಕ್ರತುರುತ್ತಮಾಹವೇ ॥೧೮॥

ತಾಭ್ಯಾಂ—ಅವರಿಬ್ಬರಿಂದ ನಿರುದ್ಧಃ—ತಡೆಯಲ್ಪಟ್ಟ ಸಾತ್ಯಕಿಯು, ತತ್ರ—ಆಗ, ಸಹಸಾ – ಶಕ್ತಿಯಿಂದ, ಅನ್ಯ ವಿಂದಸ್ಯ—ಅನುವಿಂದನ, ಶಿರಃ—ತಲೆಯನ್ನು, ಜಹಾರ—ಕತ್ತರಿಸಿದನು. ಅಥ – ನಂತರ, ವಿಂದಃ—ವಿಂದನು, ಶೈನೇಯಂ– ಸಾತ್ಯಕಿಯ ಜೊತೆಗೆ, ಯುಯೋಧ – ಯುದ್ಧ ಮಾಡಿದನು. ಅಥ – ಈ ಇಬ್ಬರ ಯುದ್ಧಾರಂಭದ ನಂತರ, ಉಭೌ – ಅವರಿ

ಬ್ಬರೂ, ಪರಸ್ಪರಂ – ಒಬ್ಬರನ್ನೊಬ್ಬರು, ಅರಥೌ —ರಥವಿಲ್ಲದವರನ್ನಾಗಿ, ಉತ್ತಮಾಹವೇ—ಶ್ರೇಷ್ಠವಾದ ಆ ಯುದ್ಧದಲ್ಲಿ, ಚಕ್ರತುಃ – ಮಾಡಿಕೊಂಡರು. ॥೧೮॥

ತತಶ್ಚ ಚರ್ಮಾಸಿಧರೌ ಪ್ರಚೇರತುಃ ಶ್ಯೇನೌ ಯಥಾssಕಾಶತಲೇ ಕೃತಶ್ರಮೌ ।
ನಿಕೃತ್ಯ ಚಾನ್ಯೋನ್ಯ ಮುಭೌ ಚ ಚರ್ಮಣೀ ವರಾಸಿಪಾಣೀ ಯುಗಪತ್ಸಮೀಯತುಃ ॥೧೯॥

ತತಶ್ಚ—ಪರಸ್ಪರ ರಥನಾಶ ಮಾಡಿದ ಮೇಲೆ ಕೂಡ. ಚರ್ಮಾಸಿಧರೌ – ಖಡ್ಗ, ಢಾಲು ಹಿಡಿದ ಅವರಿಬ್ಬರು, ಕೃತ ಶ್ರಮೌ ಸಂತೌ – ಖಡ್ಗ ಯುದ್ಧ ಪ್ರಾವೀಣ್ಯವನ್ನು ತೋರಿಸುವವರಾಗಿ, ಆಕಾಶತಲೇ ಗಗನದಲ್ಲಿ, ಶ್ಯೇನೌ ಯಥಾ—ಎರಡು ಹದ್ದುಗಳು ಹೇಗೆ ಹಾರಾಡುತ್ತಾ ಹೊಡೆದಾಡುತ್ತಿರಬೇಕೋ ಹಾಗೆ, ಪ್ರಚೇರತುಃ—ಆಡ್ಡಾಡಿದರು. ವರಾಸಿಪಾಣೀ ಉಭೌ – ಖಡ್ಗಧಾರಿಗಳಾದ ಇಬ್ಬರೂ, ಅನ್ಯೋನ್ಯಂ—ಪರಸ್ಪರವಾಗಿ, ಚರ್ಮಣೀ - ಢಾಲುಗಳನ್ನು, ಯುಗಪತ್—ಏಕ ಕಾಲದಲ್ಲಿ, ನಿಕೃತ್ಯ – ಕತ್ತರಿಸಿ, ಸಮೀಯತುಃ—ಏರಿ ಬಂದರು. ॥೧೯॥

ತತಾಪಹಸ್ತೇನ ಶಿರಸ್ಸಕುಂಡಲಂ ಜಹಾರ ವಿಂದಸ್ಯ ಮೃಧೇ ಸ ಸಾತ್ಯಕಿಃ ।
ನಿಹತ್ಯ ತೌ ಬಂಧುಜನೈಸ್ಸುಪೂಜಿತೋ ಜಗಾಮ ಶತ್ರೂನಪರಾನ್ಪ್ರಕಂಪಯನ್ ॥೨೦॥

ತತ್ರ – ಆ ಸಂದರ್ಭದಲ್ಲಿ, ಸಃಸಾತ್ಯಕಿಃ – ಆ ಸಾತ್ಯಕಿಯು, ಮೃಧೇ – ಯುದ್ಧದಲ್ಲಿ, ಆಪಹಸ್ತೇನ – ಬಿಡಿಗೆ ಜೀಸಿದ ಕೈಯಿಂದ, ವಿಂದಸ್ಯ – ವಿಂದನ, ಸಕುಂಡಲಂ ಶಿರಃ—ಕರ್ಣಕುಂಡಲಸಹಿತವಾದ ತಲೆಯನ್ನು, ಜಹಾರ – ಕತ್ತರಿಸಿದನು. (ಹೀಗೆ) ತೌ – ಅವರಿಬ್ಬರನ್ನು, ನಿಹತ್ಯ – ಕೊಂದು, ಬಂಧುಜನೈಃ – ಬಾಂಧವರಿಂದ ಸುಪೂಜಿತಸ್ಸನ್—ಆದರಿಸಲ್ಪಟ್ಟವನಾಗಿ, ಅಪರಾನ್ ಶತ್ರೂನ್—ವೈರಿ ಪಕ್ಷದ ಬೇರೆ ರಥಿಕರನ್ನು, ಪ್ರಕಂಪಯನ್ ಸನ್ – ಹೆದರಿಸುತ್ತಾ, ಜಗಾಮ – ಹೋದನು, ॥೨೦॥

ಕೃಪಮಾಯಾಂತಮೀಕ್ಷ್ಯೈವ ತಪಸಾ ಮಾಂ ಪ್ರಪೀಡಯೇತ್ ।
ಇತಿ ಮತ್ವಾ ಪಾರ್ಷತಸ್ತು ಭೀಮಂ ಶರಣಮೇಯಿವಾನ್ ॥೨೧॥

ಪಾರ್ಷತಃ – ಧೃಷ್ಟದ್ಯುಮ್ನನು, ಆಯಾತಂ - ತನ್ನ ಕಡೆಗೆ ಬರುತ್ತಿರುವ, ಕೃಪಂ—ಕೃಪಾಚಾರ್ಯರನ್ನು, ಈಕ್ಷ್ಯೈವ–ನೋಡಿಯೇ, ತಪಸಾ – ತಪಸ್ಸಾಮರ್ಥ್ಯದಿಂದ, ಮಾಂ ಪ್ರಪೀಡಯೇತ್—ನನ್ನನ್ನು ಪೀಡಿಸಬಹುದು, ಇತಿ ಮತ್ವಾ – ಎಂದು ತಿಳಿದು, ಭೀಮಂ – ಶ್ರೀ ಭೀಮರನ್ನು, ಶರಣಂ ಏಯಿವಾನ್—ಮೊರೆಹೊಕ್ಕನು. ॥೨೧॥

ಭಾ.ಅ. ೧೨-೨೧ —ಶ್ರೀ ಭೀಮರು ಗಜಸಮೂಹವನ್ನು ಸಂಹರಿಸುತ್ತಿರುವಾಗ, ದುರ್ಯೋಧನನು ಧರ್ಮರಾಜನ ಹತ್ತಿರ ಯುದ್ಧಕ್ಕೆ ಬಂದನು. ಬಹುಸಮಯ ನಡೆದ ಅವರ ಯುದ್ಧದಲ್ಲಿ ಧರ್ಮರಾಜನು ಸಾಮರ್ಥ್ಯದಿಂದ ದುರ್ಯೋಧನನನ್ನು ರಥವಿಲ್ಲದಂತೆ ಮಾಡಿದಾಗ, ಅವನು ದೊಡ್ಡ ಗದೆಯನ್ನು ತೆಗೆದುಕೊಂಡನು. ಆಗ ಗದಾಧಾರಿಗಳಾದ ಶ್ರೀ ಭೀಮರ್ಯ ಅವನ ಮೇಲೆ ಹೋದರು. ಇದನ್ನು ನೋಡಿದ ಕೃಪರು ದುರ್ಯೋಧನನನ್ನು ತಮ್ಮ ರಥದಲ್ಲಿ ಹತ್ತಿಸಿಕೊಂಡು ಯುದ್ಧದಿಂದ ಹಿಂದೆ ಹೋದರು. ಆಗ ಕರ್ಣ ನಕುಲರು ಬಾಣ ಯುದ್ಧ ಮಾಡುತ್ತಿದ್ದರು. ಕರ್ಣನು ನಕುಲನ ರಥವನ್ನು ನಾಶಮಾಡಿ, ಓಡಿಸಿ ಬೆನ್ನುಹತ್ತಿ ಅವನ ಕೊಳ್ಳಲ್ಲಿ ಬಿಲ್ಲನ್ನು ಹಾಕಿದನು. ನಿಂದಾ ಮಾತುಗಳನ್ನಾಡಿದನು. ಕುಂತೀದೇವಿಗೆ ತಾನು ಅರ್ಜುನನನ್ನು ಬಿಟ್ಟು ಬೇರೆ ಪಾಂಡವರನ್ನು ಸಂಹರಿಸುವದಿಲ್ಲ ಎಂದು ಕೊಟ್ಟ ಮಾತಿನಿಂದ ಅವನನ್ನು ಸಂಹರಿಸದೆ, ಬಿಟ್ಟುಕೊಟ್ಟು ಬೇರೆಯವರ ಕಡೆಗೆ ಯುದ್ಧಕ್ಕಾಗಿ ಹೋದನು. ಮತ್ತೊಂದು ಕಡೆ ಸಾತ್ಯಕಿಯು ಕೈಕಯ ದೇಶದ ವಿಂದ ಅನುವಿಂದರೊಡನೆ ಯುದ್ಧ ಮಾಡುತ್ತಿರುವಾಗ, ಅವರಿಬ್ಬರು ಬಹು ಬಾಣಗಳಿಂದ ಸಾತ್ಯಕಿಯನ್ನು ತಡೆದಾಗ, ಸಾತ್ಯಕಿಯು ತನ್ನ ಸಾಮರ್ಥ್ಯದಿಂದ ಅನುವಿಂದನ ಶಿರಸ್ಸನ್ನು ಕತ್ತರಿಸಿದನು. ಆಗ ವಿಂದನು ಯುದ್ಧಕ್ಕಾಗಿ ಬಂದು ಪರಸ್ಪರ ರಥವನ್ನು ನಾಶಪಡಿಸಿದರು. ಖಡ್ಗಧಾರಿಗಳಾಗಿ ಯುದ್ಧ ಮಾಡುತ್ತಾ ಢಾಲನ್ನು ಕತ್ತರಿಸಿ ಏಕಕಾಲದಲ್ಲಿ ಇಬ್ಬರೂ ಒಬ್ಬರನ್ನೊಬ್ಬರು ಕೊಲ್ಲಲು ಏರಿ

ಹೋದಾಗ, ಸಾತ್ಯಕಿಯು ಬದಿಯಲ್ಲಿ ವಿಂದನು ಇದ್ದನು. ಬದಿಗೇ ಕೈಬೀಸಿ ಸಾತ್ಯಕಿಯು ವಿಂದನ ಶಿರಶ್ಛೇದ ಮಾಡಿದನು. ಹೀಗೆ ಇಬ್ಬರನ್ನೂ ಸಂಹರಿಸಿದಾಗ ಸಾತ್ಯಕಿಯನ್ನು ಅವನ ಬಂಧುಗಳು ತುಂಬಾ ಸಂತೋಷದಿಂದ ಆದರಿಸಿದರು. ನಂತರ ಬೇರೆ ಶತ್ರುಗಳ ಕಡೆಗೆ ಹೋಗಿ ಅವರನ್ನೆಲ್ಲ ನಡುಗಿಸುತ್ತಿದ್ದನು. ಕೃಪಾಚಾರ್ಯರು ಧೃಷ್ಟದ್ಯುಮ್ನನ ಕಡೆಗೆ ಬರುತ್ತಿದ್ದರು. ಅದನ್ನು ಕಂಡ ಆ ಧೃಷ್ಟದ್ಯುಮ್ನನು ಇವರು ತಪಸ್ಸಾಮರ್ಥ್ಯದಿಂದ ನನ್ನನ್ನು ಬಾಧಿಸಬಹುದು ಎಂದು ಹೆದರಿಕೊಂಡು ಶ್ರೀ ಭೀಮರನ್ನೇ ಮೊರೆಹೊಕ್ಕನು.

ಕರ್ಣಂ ಸಮಂತಾತ್ ಪ್ರತಿಕಾಲಯಂತಂ ವರೂಥಿನೀಮಿಂದ್ರ ಸುತಸ್ಸಮಭ್ಯಯಾತ್ ।
ಕ್ಷಣಾತ್ತಮಾಜೌ ವಿರಥಂ ಚ ಚಕ್ರೇ ತತೋಽಪಹಾರಂ ಸಚಕಾರ ಚಮ್ವಾಃ ॥೨೨॥

ಇಂದ್ರಸುತ : – ಇಂದ್ರನ ಮಗನಾದ ಅರ್ಜುನನು, ವರೂಥಿನೀಂ—ತಮ್ಮ ಸೈನ್ಯವನ್ನು, ಸಮಂತಾತ್—ಬಹಳವಾಗಿ, ಪ್ರತಿ ಕಾಲಯಂತಂ – ನಾಶ ಮಾಡತಕ್ಕ, ಕರ್ಣಂ – ಕರ್ಣನನ್ನು ಕುರಿತು, ಸಮಭ್ಯಯಾತ್—ಏರಿಹೋದನು. ಚ—ಮತ್ತು, ಆಜೌ—ಯುದ್ಧದಲ್ಲಿ, ಕ್ಷಣಾತ್ - ಸ್ವಲ್ಪ ಸಮಯದಲ್ಲಿಯೇ, ತಂ—ಆ ಕರ್ಣನನ್ನು, ವಿರಥಂ—ರಥರಹಿತನನ್ನಾಗಿ, ಚಕ್ರೇ—ಮಾಡಿದನು. ತತಃ—ಆಗ, ಸಃ—ಕರ್ಣನು, ಚಮ್ವಾಃ ಅಪಹಾರಂ – ಸೈನ್ಯವನ್ನು ಹಿಂದೆಗೆದುಕೊಳ್ಳುವ ಕಾರ್ಯವನ್ನು ಚಕಾರ— ಮಾಡಿದನು. (ಸೈನ್ಯವನ್ನು ಹಿಂದೆಗೆದುಕೊಂಡನು). ॥೨೨॥

ಪರಾಜಿತಸ್ಸಂಯತಿ ಸೂರ್ಯಸೂನುಃ ಸುತೇನ ಶಕ್ರಸ್ಯ ಸ ಧಾರ್ತರಾಷ್ಟ್ರಂ ।
ಜಗಾದ ಬಾಹುಂ ಪ್ರತಿಗೃಹ್ಯ ಪಾರ್ಥೋ ಜಿಗಾಯ ಮಾಮನ್ಯ ಮನಸ್ಕಮಾಜೌ ॥೨೩॥

ಕಾಮಂರಥೋ ಮೇ ಧನುರಪ್ಯಭೇದ್ಯಂ ದತ್ತಂ ಭೃಗೂಣಾಮುಧಿಪೇನ ದಿವ್ಯಂ ।
ಯಂತಾ ನ ತಾದೃಙ್ಮಮ ಯಾದೃಶೋಹರಿ ಶ್ಯಲ್ಯೋ ಯದಿಸ್ಯಾತ್ತ್ವದರಿಂ ನಿಹನ್ಯಾಂ ॥೨೪॥

ಸಂಯತಿ—ಯುದ್ಧದಲ್ಲಿ, ಶಕ್ರಸ್ಯಸುತೇನ—ಅರ್ಜುನನಿಂದ, ಪರಾಜಿತಃ—ಸೋತಂಥ, ಸಃ ಸೂರ್ಯಸೂನುಃ– ಆ ಕರ್ಣನು, ಧಾರ್ತರಾಷ್ಟ್ರಂ—ದುರ್ಯೋಧನನನ್ನು ಕುರಿತು, ಬಾಹುಂ—ಅವನ ಭುಜವನ್ನು, ಪ್ರತಿಗೃಹ್ಯ—ಹಿಡಿದು, ಪಾರ್ಥಃ—ಅರ್ಜುನನು, ಆಜೌ—ಇಂದಿನ ಯುದ್ಧದಲ್ಲಿ, ಅನ್ಯಮನಸ್ಕಂ ಮಾಂ – ಬೇರೆ ಕಡೆಗೆ ಲಕ್ಷ್ಯವಿದ್ದ ನನ್ನನ್ನು, ಜಿಗಾಯ – ಗೆದ್ದನಂ ಮೇ – ನನಗೆ, ಕಾಮಂ—ನನ್ನ ಇಚ್ಛೆಯಂತೆ, ರಥಃ – ರಥವಿದೆ, ಭೃಗೂಣಾಂ ಅಧಿಪೇನ—ಶ್ರೀ ಪರಶುರಾಮದೇವರಿಂದ, ದತ್ತಂ - ಕೊಡಲ್ಪಟ್ಟಂತಹ, ದಿವ್ಯಂ—ಶ್ರೇಷ್ಠವಾದ, ಅಭೇದ್ಯಂ – ಮುರಿಯುದಂಥ, ಧನುಃ ಅಪಿ—ಬಿಲ್ಲೂ ಕೂಡ ಇದೆ. (ಆದರೆ) ಹರಿಃ – ಶ್ರೀ ಕೃಷ್ಣನು, ಯಾದೃಶಃ ಯಂತಾ ತಾದೃಕ್—ಎಂಥ ಸಾರಥಿಯೋ ಅಂಥ ಸಾರಥಿಯಲಿ, ಮಮ—ನನಗೆ, ನ – ಇರುವದಿಲ್ಲ. ಯದಿ – ಒಂದುವೇಳೆ, ಶಲ್ಯಃ ಶಲ್ಯರಾಜನು, ಮಮ ಯಂತಾ ಸ್ಯಾತ್ – ನನಗೆ ಸಾರಥಿಯಾದರೆ, ತ್ವದರಿಂ – ನಿನ್ನ ವೈರಿಯಾದ ಅರ್ಜುನನನ್ನು ನಿಹನ್ಯಾಂ ಕೊಲ್ಲಬಹುದು. ಇತಿ-ಎಂದು, ಜಗಾದ – ಹೇಳಿದನು. ॥೨೩-೨೪॥

ಇತೀರಿತೇ ಸೌತ್ಯಕೃತೇ ಸ ಶಲ್ಯಂ ಪ್ರೋವಾಚ ಸ ಕ್ರುದ್ಧ ಇವಾಭವತ್ತದಾ ।
ದುರ್ಯೋಧನೋ ರಥಿನಸ್ಸಾರಥೇಸ್ತು ವಿವರ್ಣಯನ್ನುತ್ತಮತಾಮುಶಾಮಯತ್ ॥೨೫॥

ಇತಿ ಈ ರೀತಿಯಾಗಿ, ಈರಿತೇ ಸತಿ - ಕರ್ಣನಿಂದ ಹೇಳಲ್ಪಡುತ್ತಿರಲು, ಸಃ - ದುರ್ಯೋಧನನು, ಸೌತ್ಯಕೃತೇ—ಸಾರಥ್ಯ ಮಾಡುವದಕ್ಕಾಗಿ, ಶಲ್ಯಂ – ಶಲ್ಯನನ್ನು ಕುರಿತು, ಪ್ರೋವಾಚ—ಹೇಳಿದನು. ತದಾ—ಆಗ,ಸಃ—ಆ ಶಲ್ಯನು ಕ್ರುದ್ಧಃ ಇವ – ಸಿಟ್ಟಿಗೆದ್ದವನಂತೆ, ಅಭವತ್ – ಆದನು. ದುರ್ಯೋಧನ ಃ—ದುರ್ಯೋಧನನು ಸಾರಥೇಃ – ಸಾರಥಿಗೆ, ರಥಿನಃ – ರಥಿಕನಿಗಿಂತ, ಉತ್ತಮತಾಂ—ಶ್ರೇಷ್ಠತೆಯನ್ನು, ವಿವರ್ಣಯನ್ ಸನ್—ವಿವರಿಸುತ್ತಾ, ಅಶಾಮಯತ್—ಶಲ್ಯನನ್ನು ಸಮಾಧಾನಗೊಳಿಸಿದನು. ॥೨೫॥

ಬುಧ್ಯಾಬಲೇನ ಜ್ಞಾನೇನ ಧೈರ್ಯಾದ್ಯೈರಪಿ ಯೋಽಧಿಕಃ ।
ರಥಿನಸ್ತಾರಥಿ ಸ್ತಸ್ಯಾದರ್ಜುನಸ್ಯ ಯಥಾಹರಿಃ ॥೨೬॥

ಯಥಾ ಶಿವಸ್ಯ ಬ್ರಹ್ಮಾಽಭೂತ್ ದಹತಸ್ತ್ರಿಪುರಂ ಪುರಾ ।
ಇತ್ಯಾದಿವಾಕ್ಯೈಸ್ತಂಶಾಂತ ಇವ ಶಲ್ಯೋಽಥಸಾರಥಿಃ ॥೨೭॥

ಬಭೂವ ತೇನ ಸಹಿತಸ್ಸೇನಾಂ ವ್ಯೂಹ್ಯ ರವೇಸ್ಸುತಃ ॥
ಗಚ್ಛನ್ ಯುಧ್ಧಾಯ ದರ್ಪೇಣ ಪ್ರಾಹ ಯೋ ಮೇಽರ್ಜುನಂ ಪುಮಾನ್ ॥೨೮॥

ದರ್ಶಯೇತ್ತಸ್ಯ ದಾಸ್ಯಾಮಿ ಪ್ರೀತೋವಿತ್ತಮನರ್ಗಲಂ ॥
ಇತ್ಯುಕ್ತವಂತಂ ಬಹುಶಃ ಪ್ರಾಹ ಶಲ್ಯಃ ಪ್ರಹಸ್ಯ ಚ ॥೨೯॥

ನಿವಾತಕವಚಾ ಯೇನ ಹತಾ ದಗ್ಧಂ ಚ ಖಾಂಡವಂ ।
ಕೋ ನಾಮು ತಂ ಜಯೇನ್ಮರ್ತ್ಯೋ ದೃಷ್ಟೋವೋಽಪಿ ಸ ಗೋಗ್ರಹೇ ॥೩೦॥

ಕಾಕಗೋಮಾಯುಧರ್ಮಾ ತ್ವಂ ಹಂಸಸಿಂಹೋಪಮಂ ರಣೇ ॥
ಮಾ ಯಾಹಿ ಪಾರ್ಥಂ ಮಾಯಾಹಿ ಹತೋಽನೇನ ಯಮಕ್ಷಯಂ ॥೩೧॥

ಯಃ – ಯಾವನು, ಬುಧ್ಯಾ ಬಲೇನ ಜ್ಞಾನೇನ ಧೈರ್ಯಾದ್ಯೈಃ ಅಪಿ – ಸ್ವಾಭಾವಿಕ ಜ್ಞಾನ, ಸಾಮರ್ಥ್ಯ, ಸೂತ ಶಾಸ್ತ್ರಾದಿ ಕೌಶಲ್ಯ, ಧೈರ್ಯ ಮೊದಲಾದ ಗುಣಗಳಿಂದ, ರಥಿನಃ – ರಥಿಕನಿಗಿಂತ, ಅಧಿಕಃ – ಹೆಚ್ಚಿನವನೋ, ಶ್ರೇಷ್ಠನೋ, ಸಃ – ಅವನು. ಸಾರಥಿಃಸ್ಯಾತ್ – ಸಾರಥಿಯಾಗಬಲ್ಲನು. ಯಥಾ – ಹೇಗೆ, ಪುರಾ – ಹಿಂದೆ, ತ್ರಿಪುರಂ ದಹತಃ—ತ್ರಿಪುರಾಸುರನನ್ನು ಸುಡತಕ್ಕ, ಶಿವಸ್ಯ – ರುದ್ರದೇವರಿಗೆ, ಬ್ರಹ್ಮಾ ಸಾರಥಿಃ ಅಭೂತ್ – ಬ್ರಹ್ಮದೇವರು ಸಾರಥಿಯಾಗಿದ್ದರೋ, ಹರಿಃ – ಶ್ರೀ ಕೃಷ್ಣನು, ಅರ್ಜುನಸ್ಯ—ಅರ್ಜುನನಿಗೆ, ಸಾರಥಿಃ ಅಭೂತ್ - ಸಾರಥಿಯಾಗಿದ್ದಾನೋ, ತಥಾ – ಹಾಗೆ ಸಾರಥಿಯು ರಥಿಕನಿಗಿಂತ ಶ್ರೇಷ್ಠನು. ಇತ್ಯಾದಿ ವಾಕ್ಯೈಃ—ಇದೇ ಮೊದಲಾದ ವಾಕ್ಯಗಳಿಂದ, ಸಂಶಾಂತ ಇವ ಶಾಂತನಾದಂತಿರುವ, ಶಲ್ಯಃ– ಶಲ್ಯರಾಜನು, ಅಥ – ನಂತರ, ಸಾರಥಿಃ ಬಭೂವ – ಸಾರಥಿಯಾದನು. ರವೇಃಸುತಃ – ಸೂರ್ಯ ಪುತ್ರನಾದ ಕರ್ಣನು, ತೇನ ಸಹಿತಃ ಸನ್ – ಆ ಶಲ್ಯನಿಂದ ಕೂಡಿದವನಾಗಿ, ಸೇನಾಂ ವ್ಯೂಹ್ಯ – ಸೈನ್ಯವನ್ನು ವ್ಯೂಹರೂಪವಾಗಿ ರಚಿಸಿ, ಯುದ್ಧಾಯ ಗಚ್ಛನ್ – ಯುದ್ಧಕ್ಕೆ ಹೋಗುವವನಾಗಿ, ಯಃ ಪುಮಾನ್ ಯಾವ ಪುರುಷನು, ಮೇ—ನನಗೆ, ಅರ್ಜುನಂ ದರ್ಶಯೇತ್ – ಅರ್ಜುನನನ್ನು ತೋರಿಸುತ್ತಾನೋ, ತಸ್ಯ – ಅವನಿಗೆ, ಪ್ರೀತಃ – ಸಂತುಷ್ಟನಾದ ನಾನು, ಅನರ್ಗಲಂ ವಿತ್ತಂ – ನಿಷ್ಕಂಟಕವಾದ ಬಹುವಾದ ಧನವನ್ನು, ದಾಸ್ಯಾಮಿ – ಕೊಡುವೆನು, ಇತಿ – ಎಂದು, ಬಹುಶಃ ಉಕ್ತವಂತಂ – ಅನೇಕ ಸಲ ಮಾತಾಡಿದಂಥ ಕರ್ಣನನ್ನು ಕುರಿತು, ಶಲ್ಯಃ—ಶಲ್ಯನು, ಯೇನ ಯಾವನಿಂದ, ನಿವಾತಕವಚಾಃ – ನಿವಾತ ಕವಚ ರಾಕ್ಷಸರು, ಹತಾಃ– ಸಂಹರಿಸಲ್ಪಟ್ಟಿದ್ದಾರೋ, ಖಾಂಡವಂ ಚ – ಖಾಂಡವ ವನವೂ ಕೂಡ, ದಗ್ಧಂ – ಸುಡಲ್ಪಟ್ಟಿದೆಯೋ, ತಂ – ಅಂಥ ಅರ್ಜುನನನ್ನು, ಕಃ ಮರ್ತ್ಯಃ – ಯಾವ ಮನುಷ್ಯನು ಜಯೇತ್ – ಗೆಲ್ಲುವನು ? (ಯಾರೂ ಗೆಲ್ಲಲಾರರು ಎಂದು ಅಭಿಪ್ರಾಯ.) ಸಃ– ಆ ಅರ್ಜುನನು, ವಃ – ನಿಮ್ಮಿಂದ, ಗೋಗ್ರಹೇ – ವಿರಾಟರಾಜನ ಗೋಗ್ರಹಣ ಮಾಡಿದ ಸಮಯದಲ್ಲಿ, ದೃಷ್ಟಃ ಅಪಿ – ಕಾಣಲ್ಪಟ್ಟೂ ಆಗಿದೆ. (ಆಗ ನಿಮಗೆ ಏನು ಮಾಡಲಾಯಿತು ಎಂದು ಭಾವ) ಕಾಕಗೋಮಾಯುಧರ್ಮಾ ತ್ವಂ – ಕಾಗೆ,ನರಿಗಳಂತಿರುವ ನೀನು, ಹಂಸಸಿಂಹೋಪಮಂ – ಹಂಸ, ಸಿಂಹಗಳಂತಿರುವ, ಪಾರ್ಥಂ—ಅರ್ಜುನನನ್ನು ಕುರಿತು, ರಣೇ-ಯುದ್ಧಕ್ಕಾಗಿ, ಮಾ ಯಾಹಿ—ಹೋಗಬೇಡ, ಅನೇನ – ಈ ಅರ್ಜುನನಿಂದ, ಹತಃ ಸನ್ – ಸಂಹೃತನಾಗಿ, ಯಮಕ್ಷಯಂ-ಯಮಲೋಕಕ್ಕೆ, ಮಾ ಯಾಹಿ – ಹೋಗಬೇಡ, ಇತಿ – ಎಂದು, ಪ್ರಹಸ್ಯ ಪ್ರಾಹ – ನಕ್ಕು ಹೇಳಿದನು. ॥೨೬-೨೭-೨೮-೨೯-೩೦-೩೧॥

ಇತ್ಯುಕ್ತೇ ರವಿಜೋ ಮದ್ರಾನ್ನಿತರಾಂ ಪರ್ಯಕುತ್ಸಯತ್ ॥
ಶಲ್ಯೋಽಪಿ ಸರ್ವದೇಶೇಷು ನೀಚಮಧ್ಯೋತ್ತಮಾ ನರಾಃ ॥
ಸಂತೀತ್ಯುಕ್ತ್ವಾ ತ್ವಸ್ಯ ಸಾರಥ್ಯಂ ಚಕ್ರೇ ಪಾರ್ಥಹಿತೇಪ್ಸಯಾ ॥೩೨॥

ಇತಿ ಉಕ್ತೇ ಸತಿ — ಶಲ್ಯನಿಂದ ಹೀಗೆ ಹೇಳಲ್ಪಡುತ್ತಿರಲು,

ರವಿಜಃ — ಕರ್ಣನು, ಮದ್ರಾನ್ — ಮದ್ರದೇಶದ ಜನರನ್ನು, ನಿತರಾಂ ಪರ್ಯಕುತ್ಸಯತ್ — ಬಹುವಾಗಿ ನಿಂದಿಸಿದನು. ಶಲ್ಯಃ ಅಪಿ — ಶಲ್ಯನೂ ಕೂಡ, ಸರ್ವದೇಶೇಷು ಅಪಿ — ಎಲ್ಲ ಸ್ಥಳಗಳಲ್ಲಿಯೂ ಕೂಡ, ನೀಚಮಧ್ಯೋತ್ತಮಾಃ ನರಾಃ — ಅಧಮ, ಮಧ್ಯಮ, ಉತ್ತಮ ಜನರು, ಸಂತಿ — ಇರುತ್ತಾರೆ, ಇತಿ — ಎಂದು, ಉಕ್ತ್ವಾ — ಹೇಳಿ, ಪಾರ್ಥಹಿತೇಪ್ಸಯಾ — ಪಾಂಡವರಿಗೆ ಹಿತವಾಗುವ ಇಚ್ಛೆಯಿಂದ, ಅಸ್ಯ — ಈ ಕರ್ಣನ, ಸಾರಥ್ಯಂ — ಸಾರಥ್ಯವನ್ನು, ಚಕ್ರೇ — ಮಾಡಿದನು. ॥೩೨॥

ಭಾ.ಅ. ೨೨–೩೨ ಎಲ್ಲ ಕಡೆಗೂ ತಮ್ಮ ಸೈನ್ಯವನ್ನು ಪೀಡಿಸತಕ್ಕ ಕರ್ಣನನ್ನು ಕುರಿತು ಅರ್ಜುನನು ಬಂದು ಯುದ್ಧ ಮಾಡಿ ಅಲ್ಪಕಾಲದಲ್ಲಿಯೇ ಕರ್ಣನ ರಥವನ್ನು ನಾಶಪಡಿಸಿದನು. ಆಗ ಕರ್ಣನು ಸೈನ್ಯವನ್ನು ಹಿಂದೆಗೆದುಕೊಂಡು ಅಂದಿನ ಯುದ್ಧವನ್ನು ನಿಲ್ಲಿಸಿದನು. ಹೀಗೆ ಅರ್ಜುನನಿಗೆ ಸೋತ ಕರ್ಣನು ದುರ್ಯೋಧನನ ಹತ್ತಿರ ಬಂದು ಕೈಹಿಡಿದು "ನಾನು ಅನ್ಯಮನಸ್ಕನಾಗಿದ್ದದ್ದರಿಂದ, ಅರ್ಜುನನು ನನ್ನನ್ನು ಇಂದು ಗೆದ್ದನು. ಶ್ರೀಪರಶುರಾಮದೇವರು ಕೊಟ್ಟಿರುವ ಅಭೇದ್ಯವಾದ ಧನುಸ್ಸು ಇದೆ, ರಥವಿದೆ: ಆದರೆ ಅರ್ಜುನನಿಗೆ ಶ್ರೀ ಕೃಷ್ಣನು ಎಂಥ ಶ್ರೇಷ್ಠ ಸಾರಥಿಯಿರುವನೋ ಅಂಥ ಸಾರಥಿ ನನಗಿಲ್ಲ. ಒಂದು ವೇಳೆ ಶಲ್ಯರಾಜನು ನನಗೆ ಸಾರಥಿಯಾದರೆ ಅರ್ಜುನನನ್ನು ನಾನು ಸಂಹರಿಸುವೆನು" ಎಂದು ಹೇಳಿದನು. ಆಗ ದುರ್ಯೋಧನನು ಶಲ್ಯನಿಗೆ ಕರ್ಣನ ಸಾರಥಿಯಾಗಲು ಹೇಳಿದನು. ಆಗ ಶಲ್ಯನು ಸಿಟ್ಟಿಗೆದ್ದಂತೆ ವರ್ತಿಸಿದನು. ಅಂದರೆ ನಿಜವಾಗಿಯೂ ಕರ್ಣನ ಸಾರಥ್ಯ ಮಾಡಿ ಪಾಂಡವರಿಗೆ ಅನುಕೂಲವನ್ನು ಮಾಡುವ ಇಚ್ಛೆ ಇದ್ದೇ ಇತ್ತು. ಆದರೆ ಸುಳ್ಳಾದ ಸಿಟ್ಟನ್ನು ತೋರಿಸಿದನು. ಆಗ ದುರ್ಯೋಧನನು 'ಸಾರಥಿ ಎಂದರೆ ಕಡಿಮೆಯಲ್ಲ್ಲ; ರಥಿಕನಿಗಿಂತ ಎಲ್ಲ ಗುಣಗಳಲ್ಲಿಯೂ ಶ್ರೇಷ್ಠನಾಗಿರಬೇಕು. ನೋಡು, ಅರ್ಜುನನಿಗೆ ಕೃಷ್ಣನಿಲ್ಲವೇ ? ಅವನು ಕಡಿಮೆ ಏನು ? ಹಿಂದೆ ತ್ರಿಪುರಾಸುರನನ್ನು ಸಂಹರಿಸಲು ಬಂದ ರುದ್ರದೇವರಿಗೆ ಬ್ರಹ್ಮದೇವರೇ ಸಾರಥಿಯಾಗಿದ್ದರು. ಅವರು ಕಡಿಮೆ ಏನು ? ಅಲ್ಲ, ಅವರೆಲ್ಲ ಶ್ರೇಷ್ಠರಾದವರು; ಆದರೂ ಸಾರಥಿಯಾದದ್ದನ್ನು ನೋಡಿದರೆ, ಸಾರಥಿಯೇ ಶ್ರೇಷ್ಠನು ಎಂದು ತಿಳಿಯುವದು' ಎಂದು ಹೇಳಿ ಸಮಾಧಾನ ಮಾಡಿದನು. ಇದರಿಂದ ಶಾಂತನಾದಂತಾದ (ಕ್ರೋಧದ ನಾಟಕವಾದ್ದರಿಂದ ಶಾಂತಿ ಹೊಂದಿದ್ದು ನಾಟಕವು.) ಶಲ್ಯನು ಕರ್ಣನ ಸಾರಥಿಯಾದನು. ಕರ್ಣನು ಶಲ್ಯಸಹಿತನಾಗಿ ಯುದ್ಧಕ್ಕೆ ಹೊರಟು ಸೈನ್ಯವ್ಯೂಹವನ್ನು ರಚಿಸಿದನು; ಮತ್ತು ತನಗೆ ಅರ್ಜುನನನ್ನು ತೋರಿಸುವವನಿಗೆ ಸಾಕಷ್ಟು ಹಣ ಕೊಡುವದಾಗಿ ಹೇಳಿದನು. ಆಗ ಶಲ್ಯನು 'ಅರ್ಜುನನು ಸಾವಮಾನ್ಯನೇ; ಅವನು ನಿವಾತಕವಚ ರಾಕ್ಷಸರನ್ನು ಸಂಹರಿಸಿದವನು, ಖಾಂಡವ ವನವನ್ನು ದಹನ ಮಾಡಿಸಿದವನು. ಅಂಥ ಪರಾಕ್ರಮಿ ಅರ್ಜುನನನ್ನು ಯಾರು ಗೆಲ್ಲುವರು ? ನೀವೂ ಕೂಡ ವಿರಾಟರಾಜನ ಗೋಗ್ರಹಣದಲ್ಲಿ ಅರ್ಜುನನನ್ನು ಅವನ ಪರಾಕ್ರಮವನ್ನು ಕಂಡಿರುವಿರಿ. ಅರ್ಜುನನ ಮೇಲೆ ಆಗ ಏನೂ ಮಾಡಲಾಗದ ನಿಮ್ಮಿಂದ ಈಗಲಾದರೂ ಏನು ಮಾಡಲು ಶಕ್ಯವಾದೀತು ? ಕಾಗೆ ನರಿಯುಂತಿರುವ ನೀನು ಹಂಸ, ಸಿಂಹದಂತಿರುವ ಅರ್ಜುನನ ಹತ್ತಿರ ಯುದ್ಧಕ್ಕೆ ಹೋದರೆ ಸಾಯುವದು ಖಂಡಿತ. ಆದ್ದರಿಂದ ಯುದ್ಧಕ್ಕೆ ಹೋಗಬೇಡ' ಎಂದು ಕರ್ಣನನ್ನು ಕುರಿತು ನಕ್ಕು ಹೇಳಿದನು. ಆಗ ಕರ್ಣನು ಮದ್ರದೇಶದ ಜನರನ್ನೇ ಚೆನ್ನಾಗಿ ನಿಂದಿಸಿದನು. ಆಗ ಶಲ್ಯನು 'ಒಳ್ಳೆಯ ಹಾಗು ಕೆಟ್ಟ ಜನರು ಎಲ್ಲ ಕಡೆಗೂ ಇರುತ್ತಾರೆ.' ಎಂದು ಹೇಳಿದನು. ಮತ್ತು ಕರ್ಣನ ಸಾರಥ್ಯವನ್ನು ಪಾಂಡವರಿಗೆ ಹಿತವಾಗುವಂತೆ ಮಾಡಲಾರಂಭಿಸಿದನು.

ಕರ್ಣೋಽಥ ಶಲ್ಯನಿಯತೇನ ರಥೇನ ಸೇನಾಮುವಾಪ್ಯ ವಿದುಧಾವ ಶರೈಃ ಸಮುಂತಾತ್ ।
ಸಂರಕ್ಷಿತೋ ಯುಧಿ ಸುಯೋಧನ ಗೌತಮಾದ್ಯೈ ರಾಚಾರ್ಯಜೇನ ಚ ಮಹಾಸ್ತ್ರವಿದಾಂ-
ವರೇಣ ॥೩೩॥

ಅಥ ಶಲ್ಯರಾಜನು ಸಾರಥ್ಯವನ್ನು ವಹಿಸಿಕೊಂಡನಂತರ, ಕರ್ಣ: – ಕರ್ಣನು, ಶಲ್ಯನಿಯತೇನ - ಶಲ್ಯನಿಂದ ಹೊಡೆಯಲ್ಪಟ್ಟ, ರಥೇನ ರಥದಿಂದ, ಸೇನಾಂ – ಸೇನೆಯನ್ನು, ಅವಾಪ್ಯ—ಹೊಂದಿ, ಯುಧಿ-ಯುದ್ಧದಲ್ಲಿ, ಸುಯೋಧನ–ಗೌತಮಾದ್ಯೈ: – ದುರ್ಯೋಧನ,ಕೃಪ ಮೊದಲಾದವರಿಂದ, ಚ–ಮತ್ತು,ಮಹಾಸ್ತ್ರವಿದಾಂವರೇಣ–ಶ್ರೇಷ್ಠ ಅಸ್ತ್ರಜ್ಞಾನಿಯಾದ, ಆಚಾರ್ಯಜೇನ – ದ್ರೋಣಪುತ್ರನಾದ ಅಶ್ವತ್ಥಾಮರಿಂದ, ಸಂರಕ್ಷಿತಸ್ಸನ್ – ರಕ್ಷಿಸಲ್ಪಟ್ಟವನಾಗಿ, ಸಮಂತಾತ್—ಎಲ್ಲ ಕಡೆಯಿಂದಲೂ, ಶರೈಃ – ಬಾಣಗಳಿಂದ, ವಿದುಧಾವ—ಸೈನ್ಯವನ್ನು ಓಡಿಸಿದನು. ॥೩೩॥

ತಂ ಭೀಮಪಾರ್ಷತಶಿನಿಪ್ರವರಾಭಿಗುಪ್ತಾ ಸಾ ಪಾಂಡವೇಯಪೃತನಾsಭಿವವರ್ಷ ಬಾಣೈಃ ।
ತಾಂಸೂರ್ಯಸೂನುರಥಜಾಣವೈರ್ವಿದಾರ್ಯ ಸಂಪ್ರಾರ್ದಯಚ್ಛಿತಶರೈರಥ ಧರ್ಮಸೂನುಂ ॥೩೪॥

ಭೀಮಪಾರ್ಷತಶಿನಿಪ್ರವರಾಭಿಗುಪ್ತಾ—ಶ್ರೀ ಭೀಮಸೇನ, ಧೃಷ್ಟದ್ಯುಮ್ನ, ಸಾತ್ಯಕಿಗಳಿಂದ ರಕ್ಷಿಸಲ್ಪಟ್ಟ, ಸಾ ಪಾಂಡವೇಯ ಪೃತನಾ – ಆ ಪಾಂಡವ ಸೈನ್ಯವು, ತಂ – ಆ ಕರ್ಣನ ಮೇಲೆ, ಬಾಣೈಃ – ಬಾಣಗಳಿಂದ, ಅಭಿವವರ್ಷ – ಸುರಿಮಳೆ ಮಾಡಿತು. ಅಥ—ನಂತರ, ಸೂರ್ಯಸೂನುಃ—ಕರ್ಣನು, ತಾಂ – ಆ ಬಾಣದ ಮಳೆಯನ್ನು, ಬಾಣವರೈಃ – ಪ್ರಬಲಬಾಣಗಳಿಂದ, ವಿದಾರ್ಯ – ಸೀಳಿ(ನಾಶಮಾಡಿ), ಅಥ – ಆಮೇಲೆ, ಶಿತಶರೈಃ – ಹದನವಾದ ಬಾಣಗಳಿಂದ, ಧರ್ಮ ಸೂನುಂ – ಯುಧಿಷ್ಠಿರನನ್ನು, ಸಂಪ್ರಾರ್ದಯತ್—ಪೀಡಿಸಿದನು. ॥೩೪॥

ಕೃತ್ವಾ ತಮಾಶು ವಿರಥಂ ಧನುರಸ್ಯಕಂಠೇಸಜ್ಯಂ ನಿಧಾಯ ಪರುಷಾ ಗಿರ ಆಹಚೋಚ್ಚೈಃ ।
ದೃಷ್ಟ್ವೈವ ಮಾರುತಿರಮುಂ ಭೃಶಮಾತುತೋದ ದುರ್ಯೋಧನಂ ವಿರಥ ಕಾಮ್ರ್ಮುಕ
ಮತ್ರಕೃತ್ವಾ ॥೩೫॥

(ಕರ್ಣ:—ಕರ್ಣನು), ತಂ – ಆ ಧರ್ಮರಾಜನನ್ನು, ಆಶು – ಕೂಡಲೇ, ವಿರಥಂ – ರಥರಹಿತನನ್ನಾಗಿ, ಕೃತ್ವಾ – ಮಾಡಿ, ಅಸ್ಯಕಂಠೇ – ಈ ಧರ್ಮರಾಜನ ಕೊರಳಲ್ಲಿ, ಸಜ್ಯಂ ಧನುಃ – ಜ್ಯಾ ಕಟ್ಟಿದ ಬಿಲ್ಲನ್ನು, ನಿಧಾಯ – ಹಾಕಿ, ಉಚ್ಚೈಃ– ಗಟ್ಟಿಯಾಗಿ, ಪರುಷಾಃ ಗಿರಃ – ಕ್ರೂರವಾದ ನಿಂದಾಮಾತುಗಳನ್ನು, ಆಹ—ಹೇಳಿದನು. ಅತ್ರ – ಈ ಸಮಯದಲ್ಲಿ, ಮಾರುತಿಃ—ಭೀಮಸೇನದೇವರು, ಅಮುಂ—ಧರ್ಮರಾಜನನ್ನು ಹಾಗೆ ಪೀಡಿಸುತ್ತಿರುವ ಕರ್ಣನನ್ನು, ದೃಷ್ಟ್ವೈವ – ನೋಡಿಯೇ, ದುರ್ಯೋಧನಂ – ದುರ್ಯೋಧನನನ್ನು, ವಿರಥಕಾಮ್ರ್ಮುಕಂ – ರಥ ಧನುಸ್ಸುಗಳಿಲ್ಲದವನನ್ನಾಗಿ, ಕೃತ್ವಾ – ಮಾಡಿ, ಭೃಶಂ – ಜೋರಾಗಿ, ಆತುತೋದ – ವ್ಯಥೆಗೊಳಿಸಿದರು. ॥೩೫॥

ತಂ ಪ್ರಾಣಸಂಶಯಗತಂ ನೃಪತಿಂ ನಿರೀಕ್ಷ್ಯ ಕರ್ಣಂ ಜಗಾದ ಯುಧಿ ಮದ್ರಪತಿಃ ಪ್ರದರ್ಶ್ಯ ।
ಯಸ್ಯಾರ್ಥವೇವ ಸಮರಸ್ತ್ವಮಿಯಂ ಚ ಸೇನಾ ತಂ ತ್ವಂ ಯಮಸ್ಯಸದನಂ
ಪ್ರಯಿಯಾಸುಮದ್ಯ ॥೩೬॥

ಭೀಮೇನ ಪೀಡಿತಮಮುಂ ಪರಿಪಾಹಿ ಶೀಘ್ರಂ ಕಿಂ ಶೇ ಯುಧಿಷ್ಠಿರಮಿಮುಂ ಹಿ ಮುಧಾ ನಿಪೀಡ್ಯ ।
ಶ್ರುತ್ವಾsಸ್ಯ ವಾಕ್ಯಮುಪಹಾಯ ಯುಧಿಷ್ಠಿರಂ ತಂ ಕರ್ಣೋ ಯಯೌ ನೃಪತಿ ರಕ್ಷಣ
ತತ್ಪರೋsಲಂ ॥೩೭॥

ಮದ್ರಪತಿ:-ಶಲ್ಯನು, ಯುದ್ಧಿ-ಯುದ್ಧದಲ್ಲಿ, ಪ್ರಾಣಸಂಶಯಗತಂ-ಪ್ರಾಣ ಉಳಿಯುವದೋ ಇಲ್ಲವೋ ಎಂಬ ಸಂಶಯದಲ್ಲಿದ್ದ, ನೃಪತಿಂ – ದುರ್ಯೋಧನನನ್ನು, ನಿರೀಕ್ಷ್ಯ – ನೋಡಿ, ಕರ್ಣಂ–ಕರ್ಣನಿಗೆ, ಪ್ರದರ್ಶ್ಯ—ತೋರಿಸಿ, ಯಸ್ಯಅರ್ಥ ಮೇವ – ಯಾರ ಸಲುವಾಗಿಯೋ, ಸಮರಃ – ಯುದ್ಧವೋ, ತ್ವಂ – ನೀನಿರುವದೋ, ಇಯಂ ಸೇನಾ ಚ—ಈ ಸೇನೆಯೂ

ಕೂಡ ಇರುವದೋ. ತಂ – ಅಂಥ, ಅದ್ಯ – ಈಗ, ಯಮಸ್ಯ ಸದನಂ – ಯಮಲೋಕಕ್ಕೆ, ಪ್ರಯಿಯಾಸುಂ – ಹೋಗಲು ಹತ್ತಿರನಾಗಿರುವ (ಸಾಯುವಷ್ಟು ಹಣ್ಣಾಗಿರುವ), ಭೀಮೇನ ಪೀಡಿತಂ – ಭೀಮಸೇನರಿಂದ ಪೀಡಿತನಾದ, ಅಮುಂ – ಆ ದುರ್ಯೋಧನನನ್ನು, ಶೀಘ್ರಂ – ಬೇಗನೇ, ಪರಿಪಾಹಿ – ರಕ್ಷಿಸು, ಇಮಂ ಯುಧಿಷ್ಠಿರಂ – ಈ ಧರ್ಮರಾಜನನ್ನು, ಮುಧಾ– ವ್ಯರ್ಥವಾಗಿ, ನಿಪೀಡ್ಯ – ಪೀಡಿಸಿ, ತೇ – ನಿನಗೆ, ಕಿಂ ಹಿ—ಏನು ಪ್ರಯೋಜನ ?, ಇತಿ—ಎಂದು, ಜಗಾದ – ಹೇಳಿದನು. ಅಲಂ – ಚೆನ್ನಾಗಿ, ಯಾವಾಗಲೂ, ನೃಪತಿರಕ್ಷಣತತ್ಪರಃ—ರಾಜನಾದ ದುರ್ಯೋಧನನ ರಕ್ಷಣೆಯಲ್ಲಿ ತೊಡಗಿದ, ಕರ್ಣಃ— ಕರ್ಣನು, ಅಸ್ಯ—ಈ ಶಲ್ಯನ, ವಾಕ್ಯಂ—ಮಾತನ್ನು, ಶ್ರುತ್ವಾ—ಕೇಳಿ, ಯುಧಿಷ್ಠಿರಂ – ಧರ್ಮರಾಜನನ್ನು, ಅಪಹಾಯ – ಬಿಟ್ಟು, ತಂ—ಆ ಭೀಮರನ್ನು ಕುರಿತು, ಯಯೌ—ಹೋದನು. ॥೩೬॥೩೭॥

ದೃಷ್ಟ್ವೈವ ತಂ ಪವನಸೂನುರಭಿತ್ವಿಯಾಯ ಕ್ರೋಧಾದ್ದಿಧಕ್ಷುರಿವ ಕರ್ಣಮಮೇಯಧಾಮಾ ॥
ರಾಜಾವನಾಯ ಶಿನಿಪುಂಗವಪಾರ್ಷತೌ ಚ ಸಂದಿಶ್ಯ ಕರ್ಣಮಭಿಗಚ್ಛತ ಆಸರೂಪಂ ॥೩೮॥

ಅಂತೇ ಕೃತಾಂತ ನರಸಿಂಹತನೋರ್ಯಥೈವ ವಿಷ್ಣೋರ್ಹರಂ ಗ್ರಸತ ಆತ್ತಸಮಸ್ತವಿಶ್ವಂ ।
ತದ್ವೇಗತಃ ಪ್ರತಿಚಚಾಲ ಧರಾ ಸಮಸ್ತಾ ವಿದ್ರಾವಿತಾಚ ಸಕಲಾ ಪ್ರತಿವೀರ ಸೇನಾ ॥೩೯॥

ಅಮೇಯಧಾಮಾ ಪವನಸೂನು;—ಅಮಿತ ತೇಜಸ್ಕರಾದ, ವಾಯುಪುತ್ರರಾದ, ಶ್ರೀ ಭೀಮರು, ತಂ—ಆ ಕರ್ಣನನ್ನು, ದೃಷ್ಟ್ವೈವ—ನೋಡಿಯೇ, ಕ್ರೋಧಾತ್ – ಸಿಟ್ಟಿನಿಂದ, ಕರ್ಣಂ—ಕರ್ಣನನ್ನು ದಿಧಕ್ಷುರಿವ—ಸುಡುವಂತೆ, ಅಭಿಯಿಯಾಯ ತು – ಏರಿ ಹೋಗಿಯೇ ಬಿಟ್ಟರು. ರಾಜಾವನಾಯ—ಧರ್ಮರಾಜನ ರಕ್ಷಣೆಗಾಗಿ, ಶಿನಿಪುಂಗವಪಾರ್ಷತೌ – ಸಾತ್ಯಕಿ ಧೃಷ್ಟದ್ಯುಮ್ನರನ್ನು, ಸಂದಿಶ್ಯ – ಆಜ್ಞಾಪಿಸಿ, ಕರ್ಣಂ – ಕರ್ಣನನ್ನು ಕುರಿತು, ಅಭಿಗಚ್ಛತಃ–ಏರಿಹೋಗತಕ್ಕ ಶ್ರೀ ಭೀಮಸೇನರ, ರೂಪಂ – ಸ್ವರೂಪವು, ಅಂತೇ—ಪ್ರಲಯ ಕಾಲದಲ್ಲಿ, ಆತ್ತಸಮಸ್ತವಿಶ್ವಂ – ಎಲ್ಲ ಜಗತ್ತನ್ನು ನುಂಗಿದಂಥ, ಹರಂ – ರುದ್ರದೇವರನ್ನು, ಗ್ರಸತಃ—ನುಂಗತಕ್ಕ, ಕೃತಾಂತ ನರಸಿಂಹ ತನೋಃ—ಸರ್ವಸಂಹಾರಕ ನೃಸಿಂಹ ರೂಪನಾದ, ವಿಷ್ಣೋಃ ರೂಪಂ ಯಥಾ – ಶ್ರೀ ವಿಷ್ಣುವಿನ ರೂಪವು ಹೇಗೋ, ತಥೈವ — ಹಾಗೆಯೇ, ಆಸ – ಆಗಿತ್ತು, ತದ್ವೇಗತಃ – ಆ ಭೀಮರ ಗಮನದ ವೇಗದಿಂದ, ಸಮಸ್ತಾ ಧರಾ— ಭೂಮಿಯೂ, ಪ್ರತಿಚಚಾಲ—ಚೆನ್ನಾಗಿ ಕಂಪಿಸಿತು, ಚ—ಮತ್ತು, ಸಕಲಾ ಪ್ರತಿವೀರಸೇನಾ–ಎಲ್ಲ ಪ್ರತಿಪಕ್ಷ(ಕೌರವ) ವೀರಸೈನ್ಯವು–ವಿದ್ರಾವಿತಾ ಓಡಿಸಲ್ಪಟ್ಟಿತು. ॥೩೮॥೩೯॥

ವೈಕರ್ತನೇನ ಶರಸಂಚಯತಾಡಿತಸ್ಯ ಬಾಣಂಚ ವಜ್ರಸದೃಶಂ ಪ್ರಮುಮೋಚತಸ್ಮಿನ್ ।
ತೇನಾಹತೋಮೃತಕವತ್ಸಪಾತ ಕರ್ಣೋಭೀಮಃ ಕ್ಷುರಂಚ ಜಗೃಹೇ
ಪ್ರಯಯೌ ಚಪದ್ಭ್ಯಾಂ ॥೪೦॥

ವೈಕರ್ತನೇನ—ಕರ್ಣನಿಂದ, ಶರಸಂಚಯತಾಡಿತಃ ಸಃ ಚ – ಬಾಣಸಮೂಹಗಳಿಂದ ತಾಡಿತರಾದ ಆ ಭೀಮರೂ, ವಜ್ರಸದೃಶಂ ಬಾಣಂ - ವಜ್ರಾಯುಧ ಸದೃಶವಾದ ಬಾಣವನ್ನು, ತಸ್ಮಿನ್ — ಆ ಕರ್ಣನಲ್ಲಿ, ಮುಮೋಚ – ಬಿಟ್ಟರು, ತೇನ ಆಹತಃ – ಶ್ರೀ ಭೀಮರ ಆ ಬಾಣದಿಂದ ಹೊಡಿಸಿಕೊಂಡ, ಸಃ ಕರ್ಣಃ–ಆ ಕರ್ಣನು, ಮೃತಕವತ್ ಪಪಾತ–ಸತ್ತಂತೆ ಬಿದ್ದನು, ಭೀಮಃ ಚ – ಭೀಮಸೇನರೂ, ಕ್ಷುರಂ—ಕೊಯ್ಯುವ ಶಸ್ತ್ರವನ್ನು, ಜಗೃಹೇ – ತೆಗೆದುಕೊಂಡರು, ಚ–ಮತ್ತು ಪದ್ಭ್ಯಾಂ – ಕಾಲು ನಡಿಗೆಯಿಂದ, ಪ್ರಯಯೌ – ಕರ್ಣನ ಹತ್ತಿರ ಹೊರಟರು. ॥೪೦॥

ನಿಂದಾಂ ಹರೇಸ್ತು ವಿದಧಾತಿ ಪರೋಕ್ಷಗೋಽಪಿ ಯಸ್ತಂ ಪ್ರಗೃಹ್ಯಕರವಾಣಿ ವಿಜಿಹ್ವಮೇವ ।
ಏವಂ ಹಿ ವಾಯುತನಯಸ್ಯ ಮಹಾಪ್ರತಿಜ್ಞಾ ಛೇತ್ತುಂ ಸ ತೇನ ರವಿಜಸ್ಯ ಸಸಾರ ಜಿಹ್ವಾಂ ॥೪೧॥

ಯಃ – ಯಾವನು, ಪರೋಕ್ಷಗೋಪಿ—ಹಿಂದೆ ದೂರದಲ್ಲಿದ್ದವನಾದರೂ ಕೂಡ, ಹರೇಃ ನಿಂದಾಂ—ಭಗವಂತನ ನಿಂದೆಯನ್ನು, ವಿದಧಾತಿ – ಮಾಡುತ್ತಾನೋ, ತಂ – ಅವನನ್ನು, ತು – ಕೂಡಲೇ, ಪ್ರಗೃಹ್ಯ – ಹಿಡಿದು, ವಿಜಿಹ್ವಂ – ಜಿಹ್ವಾರಹಿತನನ್ನಾಗಿ, ಕರವಾಣಿ ಏವ – ಮಾಡಿಯೇ ಬಿಡುತ್ತೇನೆ, ಏವಂ – ಎಂಬುದಾಗಿ, ವಾಯುತನಯಸ್ಯ – ವಾಯು

ಪುತ್ರರಾದ ಶ್ರೀ ಭೀಮರ, ಮಹಾಪ್ರತಿಜ್ಞಾ —ಶ್ರೇಷ್ಠವಾದ ಪ್ರತಿಜ್ಞೆಯು, ಹಿ – ಯಾವ ಕಾರಣದಿಂದ ಇದೆಯೋ, ತೇನ— ಆ ಕಾರಣದಿಂದ, ಸಃ – ಆ ಭೀಮರು, ರವಿಜಸ್ಯ – ಸೂರ್ಯಪುತ್ರನಾದ ಕರ್ಣನ, ಜಿಹ್ವಾಂ – ನಾಲಿಗೆಯನ್ನು, ಛೇತ್ತುಂ — ಕತ್ತರಿಸಲು, ಸಸಾರ – ಏರಿ ಹೋದರು. ॥೪೧॥

ಆಯಾಂತಮುಂತಿಕಮುಮುಂ ಪ್ರಸಮೀಕ್ಷ್ಯ ಶಲ್ಯೋ ನೇತ್ಯಾಹ ಹೇತುಭಿರಹೋ ನಮೃಷಾ
ಪ್ರತಿಜ್ಞಾ ।
ಕಾರ್ಯಾತ್ವಯೈವ ಪುರುಹೂತಸುತಸ್ಯ ಜಿಹ್ವಾಂ ನೂತೇನ ಪಾತಯ ಮರುತ್ಸುತ
ಸೂತಸೂನೋಃ ॥೪೨॥

ಇತ್ಯುಕ್ತ್ವಾ ಪ್ರಯುಖಾತ್ತಸ್ಯ ರಥೇನೈವ ತು ಮದ್ರರಾಟ್ ।
ವೈಕರ್ತನಮನಮಪೋವಾಹ ಸರ್ವಲೋಕಸ್ಯ ಪಶ್ಯತಃ ॥ ೪೩ ॥

ಶಲ್ಯಃ – ಶಲ್ಯನು, ಅಂತಿಕಂ—ಕರ್ಣನ ಸಮೀಪಕ್ಕೆ, ಆಯಾಂತಂ—ಬರತಕ್ಕ, ಅಮುಂ—ಈ ಭೀಮರನ್ನು, ಪ್ರಸಮೀಕ್ಷ್ಯ – ನೋಡಿ, ನ—ಮುಂದೆ ಬರಬೇಡ, ಪುರುಹೂತಸುತಸ್ಯ ಪ್ರತಿಜ್ಞಾ – ಅರ್ಜುನನ ಪ್ರತಿಜ್ಞೆಯು, ತ್ವಯಾ ಏವ– ಅವನ ಅಣ್ಣನಾದ ನಿನ್ನಿಂದಲೇ, ಮೃಷಾ ನ ಕಾರ್ಯಾ ಅಹೋ—ಸುಳ್ಳು ಮಾಡಲ್ಪಡಬಾರದು ಅಲ್ಲವೇ ? ಇತಿ – ಎಂದು, ತೇನ – ಆ ಕಾರಣದಿಂದ, ಮರುತ್ಸುತ— ವಾಯ್ವವತಾರಿಯಾದ ಭೀಮನೇ, ಸೂತಸೂನೋಃ—ಸೂತಪುತ್ರನಾದ ಕರ್ಣನ. ಜಿಹ್ವಾಂ – ನಾಲಿಗೆಯನ್ನು, ಮಾ ಪಾತಯ—ಬೀಳಿಸಬೇಡ, ಇತಿ – ಎಂದು, ಹೇತುಭಿಃ – ಕಾರಣಗಳಿಂದ (ನೀನು ನಾಲಿಗೆ ಕತ್ತರಿಸಿದರೆ ಅಭಿಮಾನಿಯಾದ ಕರ್ಣನು ಬದುಕುವದಿಲ್ಲ; ಬದುಕಿದರೂ ಅಂಗಹೀನನಾದವನನ್ನು ಕೊಲ್ಲುವದು ಅರ್ಜುನನಂಥ ವೀರನಿಗೆ ಶೋಭಿಸುವದಿಲ್ಲ. ಹೀಗಾಗಿ ಅವನ ಪ್ರತಿಜ್ಞಾಭಂಗವಾಗುತ್ತದೆ ಎಂಬ) ಅಹ – ಹೇಳಿದನು. ಮದ್ರರಾಟ್ – ಮದ್ರಾಧಿಪತಿಯಾದ ಶಲ್ಯನು, ಇತಿ ಉಕ್ತ್ವಾ – ಹೀಗೆ ಹೇಳಿ, ರಥೇನ—ರಥದಿಂದ, ವೈಕರ್ತನಂ– ಕರ್ಣನನ್ನು, ಸರ್ವ ಲೋಕಸ್ಯ ಪಶ್ಯತಃಸತಃ – ಎಲ್ಲ ಜನರು ನೋಡುತ್ತಿರುವ ಹಾಗೆಯೇ, ತಸ್ಯ ಪ್ರಮುಖಾತ್ – ಆ ಭೀಮರ ಎದುರಿನಿಂದ, ಅಪೋವಾಹ – ದೂರಕ್ಕೆ ಕರೆದೊಯ್ದನು. ॥೪೨॥೪೩॥

ಜಿತ್ವಾ ಸೂರ್ಯಸುತಂ ಭೀಮಃ ಕೌರವಾಣಾಮನೀಕಿನೀಂ ।
ಸರ್ವಾಂ ವಿದ್ರಾವಯಾಮಾಸ ದ್ರೌಣಿ ದುರ್ಯೋಧನಾವೃತಾಂ ॥೪೪॥

ಅಕ್ಷೌ ಹಿಣೀತ್ರಯಮಂತೇನ ತದಾವಿಲುಲಿತಂ ಕ್ಷಣಾತ್ ।
ತದೈವ ಗುರುಪುತ್ರೋಽಯಾತ್ ಪಾಂಡವಾನಾಮನೀಕಿನೀಮ್ ॥೪೫॥

ವಿಮೃದ್ಯ ಸಕಲಾಂ ಸೇನಾಂ ಕೃತ್ವಾ ಚ ವಿರಥಂ ನೃಪಂ ।
ಧೃಷ್ಟದ್ಯುಮ್ನಂ ಯುಯೌಚೈವ ಸಾತ್ಯಕಿಂ ದ್ರೌಪದೀಸುತಾನ್ ॥
ಕ್ಷಣೇನ ವಿರಥೀಕೃತ್ಯ ಸರ್ವಾಂಶ್ಚಕ್ರೇ ನಿರಾಯುಧಾನ್ ॥೪೬॥

ಭೀಮಃ – ಶ್ರೀ ಭೀಮರು, ಸೂರ್ಯಸುತಂ – ಕರ್ಣನನ್ನು, ಜಿತ್ವಾ – ಗೆದ್ದು, ದ್ರೌಣಿದುರ್ಯೋಧನಾವೃತಾಂ — ಅಶ್ವತ್ಥಾಮದುರ್ಯೋಧನರಿಂದ ಕೂಡಿದ, ಕೌರವಾಣಾಂ ಸರ್ವಾಂ ಅನೀಕಿನೀಂ – ಕೌರವರ ಎಲ್ಲ ಸೇನೆಯನ್ನೂ, ವಿದ್ರಾವ ಯಾಮಾಸ – ಓಡಿಸಿದರು. ತದಾ – ಆಗ, ತೇನ – ಆ ಭೀಮರಿಂದ, ಕ್ಷಣಾತ್ – ಕ್ಷಣ ಮಾತ್ರದಲ್ಲಿಯೇ, ಅಕ್ಷೌ ಹಿಣೀತ್ರಯಂ– ಮೂರು ಅಕ್ಷೌ ಹಿಣೀ ಸೈನ್ಯವು, ವಿಲುಲಿತಂ – ಸಂಹರಿಸಲ್ಪಟ್ಟಿತು. ತದೈವ– ಆ ಸಮಯದಲ್ಲಿಯೇ, ಗುರುಪುತ್ರಃ — ಅಶ್ವತ್ಥಾಮಾಚಾರ್ಯರು, ಪಾಂಡವಾನಾಂ ಅನೀಕಿನೀಂ – ಪಾಂಡವರ ಸೈನ್ಯದ ಸಮೀಪಕ್ಕೆ, ಅಯಾತ್ – ಬಂದರು. ಚ – ಹಾಗು, ಸಕಲಾಂ ಸೇನಾಂ – ಆ ಎಲ್ಲ ಸೈನ್ಯವನ್ನು ವಿಮೃದ್ಯ – ಮರ್ದಿಸಿ, ನೃಪಂ – ಧರ್ಮರಾಜನನ್ನು, ವಿರಥಂ ಕೃತ್ವಾ – ರಥರಹಿತ

ನನ್ನಾಗಿ ಮಾಡಿ, ಧೃಷ್ಟದ್ಯುಮ್ನಂ – ಧೃಷ್ಟದ್ಯುಮ್ನನನ್ನು, ಯಮೌ – ಅವಳಿಗಳಾದ ನಕುಲ ಸಹದೇವರನ್ನು, ಸಾತ್ಯಕಿಂ – ಸಾತ್ಯಕಿಯನ್ನು, ದ್ರೌಪದೀ ಸುತಾನ್ – ದ್ರೌಪದಿಯ ಮಕ್ಕಳನ್ನು, ಕ್ಷಣೇನ – ಸ್ವಲ್ಪ ಸಮಯದಲ್ಲಿಯೇ, ವಿರಥೀಕೃತ್ಯ – ರಥವಿಲ್ಲದವರನ್ನಾಗಿ ಮಾಡಿ, ಸರ್ವಾನ್ – ಎಲ್ಲರನ್ನು, ನಿರಾಯುಧಾನ್ - ಆಯುಧವಿಲ್ಲದವರನ್ನಾಗಿ, ಚಕ್ರೇ—ಮಾಡಿದರು. ॥೪೪॥೪೫॥೪೬॥

ತಾನ್ಭಗ್ನದರ್ಪಾನ್ರಣತೋಽಪಯಾತಾನನ್ವೇವ ಬಾಣಾವೃತಮಂತರಿಕ್ಷಂ ।
ಕುರ್ವನ್ ಯಯೌ ಧರ್ಮರಾಜಸ್ತಮಾಹಕಿಂನಃ ಸ್ವಧರ್ಮೇ ನಿರತಾನ್ ವಿಹಂಸಿ ॥೪೭॥

(ಸಃ – ಆ ಅಶ್ವತ್ಥಾಮರು), ಭಗ್ನದರ್ಪಾನ್—ರಣೋತ್ಸಾಹದಿಂದ ದೂರರಾದ, (ಡರ್ಪ ಎಂಬ ಶಬ್ದಕ್ಕೆ ಸೊಕ್ಕು ಎಂಬ ಅರ್ಥವಿದ್ದರೂ ಅದು ಪ್ರಸಕ್ತರಾದ ಧರ್ಮರಾಜ, ನಕುಲಸಹದೇವಾದಿಗಳಲ್ಲಿ ಅನ್ವಯಿಸುವದಿಲ್ಲವಾದ್ದರಿಂದ, ಅಶ್ವತ್ಥಾಮರಿಂದ ಪೀಡಿತರಾದ ಅವರಿಗೆ ಯುದ್ಧಮಾಡುವ ಉತ್ಸಾಹ ಈಗ ಇಲ್ಲದ್ದರಿಂದ, ಹಾಗೆ ಅರ್ಥ ಮಾಡುವದು.) ರಣತಃ—ಯುದ್ಧದಿಂದ, ಅಪಯಾತಾನ್—ಹಿಂದೆ ಹೋದಂತಹ, ತಾನ್ – ಆ ಧರ್ಮರಾಜಾದಿಗಳನ್ನು, ಅನು ಏವ – ಅನುಸರಿಸಿಯೇ. ಅಂತರಿಕ್ಷಂ—ಆಕಾಶವನ್ನು, ಬಾಣಾವೃತಂ - ಬಾಣಗಳಿಂದ ತುಂಬಿದ್ದನ್ನಾಗಿ. ಕುರ್ವನ್—ಮಾಡುತ್ತಾ, ಯಯೌ – ಹೋದರು. ತಂ—ಆ ಅಶ್ವತ್ಥಾಮರನ್ನು ಕುರಿತು, ಧರ್ಮರಾಜಃ—ಧರ್ಮರಾಜನು, ಸ್ವಧರ್ಮೇ ನಿರತಾನ್‌ನಃ—ನಮ್ಮ ಕ್ಷತ್ರಧರ್ಮದಲ್ಲಿರುವ ನಮ್ಮನ್ನು, ಕಿಂ – ಏಕೆ. ವಿಹಂಸಿ – ಹಿಂಸಿಸುತ್ತಿರುವಿ ? (ಇತಿ - ಎಂದು), ಆಹ —ಹೇಳಿದನು. ॥೪೭॥

ಕ್ಷತ್ರಿಯಾನ್ ಪರಧರ್ಮಸ್ಥೋ ಮಾ ಹಿಂಸೀರಿತಿ ಚೋದಿತಃ ।
ಪ್ರಹಸ್ಯ ತಾನ್ವಿಹಾಯೈವ ಯಯೌ ಯತ್ರಾಚ್ಯುತಾರ್ಜುನೌ ॥೪೮॥

ಕ್ಷತ್ರಿಯಾನ್ – ಸ್ವೋಚಿತ ಕ್ಷತ್ರಧರ್ಮದಲ್ಲಿರುವ ನಮ್ಮನ್ನು, ಪರಧರ್ಮಸ್ಥಃ—ನೀನು ಬ್ರಾಹ್ಮಣನಾದ್ದರಿಂದ ನಿನಗೆ ಪರವಾದ, ಉಚಿತವಲ್ಲದ ಕ್ಷತ್ರ ಧರ್ಮದಲ್ಲಿರುವ, (ತ್ವಂ – ನೀನು), ಮಾ ಹಿಂಸೀಃ – ಹಿಂಸಿಸಬೇಡ ಇತಿ – ಎಂದು, ಚೋದಿತಃ—ಹೇಳಿಸಿಕೊಳ್ಳಲ್ಪಟ್ಟ ಅಶ್ವತ್ಥಾಮರು, ತಾನ್—ಆ ಧರ್ಮರಾಜ ಮೊದಲಾದವರನ್ನು, ವಿಹಾಯ ಏವ – ಬಿಟ್ಟೇ ಬಿಟ್ಟು, ಅಚ್ಯುತಾರ್ಜುನೌ ಯತ್ರ (ತತ್ರ) ಶ್ರೀ ಕೃಷ್ಣಾರ್ಜುನರು ಎಲ್ಲಿದ್ದರೋ ಅಲ್ಲಿಗೆ, ಯಯೌ – ಹೋದರು. ॥೪೮॥

ಭಾ. ಅ. ೩೩ – ೪೮ ಕರ್ಣನು ಶಲ್ಯನನ್ನು ಸಾರಥಿಯನ್ನಾಗಿ ಪಡೆದು ಅವನಿಂದ ಸಹಿತನಾಗಿ ಪಾಂಡವ ಸೇನೆಯ ಎದುರಾಗಿ ಬಂದು ಬಾಣಗಳಿಂದ ಸೈನ್ಯವನ್ನು ಓಡಿಸುತ್ತಿದ್ದನು. ದುರ್ಯೋಧನ, ಕೃಪ, ಅಶ್ವತ್ಥಾಮ ಮೊದಲಾದವರು ಕರ್ಣನನ್ನು ರಕ್ಷಿಸುತ್ತಿದ್ದರು. ಶ್ರೀಭೀಮಸೇನರು, ಧೃಷ್ಟದ್ಯುಮ್ನ, ಸಾತ್ಯಕಿ ಇವರಿಂದ ಸುರಕ್ಷಿತವಾದ ಪಾಂಡವರ ಸೈನ್ಯವು ಆ ಕರ್ಣನ ಮೇಲೆ ಬಾಣಗಳ ಸುರಿಮಳೆಯನ್ನು ಮಾಡಿತು. ಕರ್ಣನು ಆ ಬಾಣಗಳನ್ನು ತೀಕ್ಷ್ಣವಾದ ಬಾಣಗಳಿಂದ ಕತ್ತರಿಸಿದನು; ಹಾಗು ಧರ್ಮರಾಜನನ್ನು ಪೀಡಿಸಿದನು. ಧರ್ಮರಾಜನ ರಥವನ್ನು ನಾಶಪಡಿಸಿ, ಅವನ ಕೊರಳಿನಲ್ಲಿ ಬಿಲ್ಲನ್ನು ಹಾಕಿ ಚುಚ್ಚು ಮಾತುಗಳನ್ನು ಗಟ್ಟಿಯಾಗಿ ಹೇಳಿದನು. ಅದನ್ನು ನೋಡಿದ ಶ್ರೀಭೀಮರು ದುರ್ಯೋಧನನನ್ನು ರಥ-ಆಯುಧ ಹೀನನನ್ನಾಗಿಸಿ, ತುಂಬಾ ಪೀಡಿಸಿದರು. ಇನ್ನೇನು ಪ್ರಾಣವೇ ಹೋಗುವದೇನೊ ಎಂಬಂಥ ಅವಸ್ಥೆಯಲ್ಲಿರುವ ಅತನನ್ನು ನೋಡಿದ ಶಲ್ಯನು ಕರ್ಣನಿಗೆ 'ನೀನು, ಈ ಸೇನೆಯು ಯಾರ ಸಲುವಾಗಿಯೋ, ಈ ಯುದ್ಧವು ಯಾರ ಸಲುವಾಗಿಯೋ ಅಂಥ ದುರ್ಯೋಧನನು ಶ್ರೀಭೀಮರಿಂದ ಪೀಡಿತನಾಗಿ ಯಮಲೋಕಕ್ಕೆ ಹೋಗುವ(ಸಾಯುವ) ಹಂತದಲ್ಲಿದ್ದಾನೆ. ಆದ್ದರಿಂದ ಮೊದಲು ಅವನನ್ನು ರಕ್ಷಿಸು. ಈ ಧರ್ಮರಾಜನನ್ನು ಪೀಡಿಸಿ ಏನು ಪ್ರಯೋಜನ ?' ಎಂದು ಹೇಳಿದನು. ಆ ವಾಕ್ಯವನ್ನು ಕೇಳಿದ ಕರ್ಣನು ಧರ್ಮರಾಜನನ್ನು ಬಿಟ್ಟು ದುರ್ಯೋಧನನ ರಕ್ಷಣೆಗಾಗಿ ಹೋದನು. ಅವನನ್ನು ನೋಡಿದ ಶ್ರೀಭೀಮರು ಆ ಕರ್ಣನನ್ನು ಸುಡುವರೋ ಎಂಬಂತೆ ಸಿಟ್ಟಿನಿಂದ ನೋಡಿ, ಧರ್ಮಜನ ರಕ್ಷಣೆಗಾಗಿ ಸಾತ್ಯಕಿ ಧೃಷ್ಟದ್ಯುಮ್ನರನ್ನು ಬಿಟ್ಟು, ಕರ್ಣನ ಕಡೆಗೆ ಹೊರಟಾಗ ಅವರ ರೂಪವು ಪ್ರಲಯಕಾಲದಲ್ಲಿ ಇಡೀ ಜಗವನ್ನೇ ನುಂಗಿದ ಶ್ರೀರುದ್ರನನ್ನು

ಕಟಳಿಸುವ ಶ್ರೀನೃಸಿಂಹದೇವರ ರೂಪದಂತೆ ಕಾಣುತ್ತಿತ್ತು. ಆ ಭೀಮರ ಗಮನ ವೇಗದಿಂದ ಇಡೀ ಭೂಮಿಯು ನಡುಗಿತು. ಎಲ್ಲ ವೈರಿ ಸೈನ್ಯವು ಓಡಿತು. ಕರ್ಣನು ಬಹು ಬಾಣಗಳನ್ನು ಅವರ ಮೇಲೆ ಬಿಟ್ಟಾಗ, ಅವರು ವಜ್ರಸದೃಶವಾದ ಒಂದು ಬಾಣವನ್ನು ಕರ್ಣನ ಮೇಲೆ ಬಿಟ್ಟರು. ಅದು ಬಡಿದಾಗ ಕರ್ಣನು ಸತ್ತಂತೆ ಬಿದ್ದನು. ಮತ್ತು ಶ್ರೀಭೀಮರು ಶಸ್ತ್ರವನ್ನು ತೆಗೆದು ಕೊಂಡು ಅವನ ಸಮೀಪಕ್ಕೆ ನಡೆದು ಹೋದರು. ಭಗವಂತನ ನಿಂದೆಯನ್ನು ತಮ್ಮ ಹಿಂಬದಿಯಲ್ಲಿ ಮಾಡಿದವನ ನಾಲಿಗೆ ಕೂಡ ತಕ್ಷಣ ಕತ್ತರಿಸ ವೆನು ಎಂದು ಶ್ರೀಭೀಮರ ಪ್ರತಿಜ್ಞಾ ಇದ್ದದ್ದರಿಂದ, ಕರ್ಣನ ನಾಲಿಗೆ ಕತ್ತರಿಸಲೆಂದು ಹೋದರು. ಅದನ್ನು ನೋಡಿದ ಶಲ್ಯನು ಅರ್ಜುನನ ಅಣ್ಣನಾದ ನೀನೇ ಕುಳಿತು ಅವನ ಕರ್ಣಸಂಹಾರಪ್ರತಿಜ್ಞಾಭಂಗವಾಗುವಂತೆ ಮಾಡಬಾರದು. ಆದ್ದರಿಂದ ಹಾಗೆ ಮಾಡಬೇಡ ಎಂದು ಶ್ರೀಭೀಮರಿಗೆ ಹೇಳಿ ಎಲ್ಲರ ಎದುರೇ ಕರ್ಣನನ್ನು ದೂರಕ್ಕೆ ಕರೆದೊಯ್ದನು. ಹೀಗೆ ಶ್ರೀಭೀಮರು ಕರ್ಣನನ್ನು ಅಶ್ವತ್ಥಾಮ ದುರ್ಯೋಧನರಿಂದ ಕೂಡಿದ ಸೈನ್ಯವನ್ನೂ ಓಡಿಸಿದರು. ಆ ಯುದ್ಧದಲ್ಲಿ ಸ್ವಲ್ಪೇ ಸಮಯದಲ್ಲಿ ಮೂರು ಅಕ್ಷೌಹಿಣೀ ಸೈನ್ಯವನ್ನು ಸಂಹರಿಸಿದ್ದಾರೆ. ಆಗ ಶ್ರೀ ಅಶ್ವತ್ಥಾಮರು ಪಾಂಡವ ಸೈನ್ಯದ ಸಮೀಪಕ್ಕೆ ಬಂದರು. ಸೈನ್ಯವನ್ನು ಮರ್ದಿಸಿ ಧರ್ಮರಾಜ, ಧೃಷ್ಟದ್ಯುಮ್ನ, ನಕುಲ ಸಹದೇವ, ಸಾತ್ಯಕಿ, ದ್ರೌಪದಿಯ ಮಕ್ಕಳು ಎಲ್ಲರನ್ನು ಆಯುಧ ರಥಹೀನರನ್ನಾಗಿ ಮಾಡಿ, ಯುದ್ಧದಿಂದ ಓಡಿಸಿದರು. ಓಡುವ ಅವರನ್ನು ಬೆನ್ನುಹತ್ತಿ ಬಾಣಮಳೆಯನ್ನು ಸುರಿಸುತ್ತಿರಲು ಧರ್ಮರಾಜನು ನಮ್ಮ ಕ್ಷತ್ರಿಯ ಧರ್ಮದಲ್ಲಿರುವ ನಮ್ಮನ್ನು ನಿನ್ನ ಸ್ವಧರ್ಮವನ್ನು ಬಿಟ್ಟು ಪರಧರ್ಮವನ್ನು ಅನುಸರಿಸುತ್ತಿರುವ ನೀನು ಏಕೆ ಪೀಡಿಸುತ್ತಿದ್ದೀದಿ ? ಇದು ಯೋಗ್ಯವಲ್ಲ. ಎಂದು ಹೇಳಿದನು. ಹೀಗೆ ಅಂದಾಗ ಅಶ್ವತ್ಥಾಮರು ಅವರನ್ನು ಬಿಟ್ಟು ಶ್ರೀಕೃಷ್ಣಾರ್ಜುನರಿರುವಲ್ಲಿಗೆ ಹೋದರು.

ಸಂಶಪ್ತಕೈಸ್ತತ್ರಸಂಯುಧ್ಯಮಾನಂ ಸಮಾಹ್ವಯಾಮಾಸ ಸುರೇಂದ್ರಸೂನುಂ ।
ಸ ಬಾಣಯುಕ್ತಂ ಭುಜಗೇಂದ್ರಕಲ್ಪಮುನ್ನಮ್ಯ ಬಾಹುಂ ಯುಧಯೇ ಸುಶೂರಂ ॥೪೯॥

ಸಃ – ಆ ಅಶ್ವತ್ಥಾಮರು, ಬಾಣಯುಕ್ತಂ—ಬಾಣವನ್ನು ಹಿಡಿದಿರುವ, ಭುಜಗೇಂದ್ರಕಲ್ಪಂ—ಶೇಷನಂತಿರುವ, ಬಾಹುಂ – ತಮ್ಮ ಕೈಯನ್ನು, ಉನ್ನಮ್ಯ-ಎತ್ತಿ, ಸುಶೂರಂ—ಶ್ರೇಷ್ಠ ಪರಾಕ್ರಮಿಯಾದ, ತತ್ರ—ಆ ಯುದ್ಧ ಭೂಮಿಯಲ್ಲಿ, ಆ ಸಮಯದಲ್ಲಿ, ಸಂಶಪ್ತಕೈಃ – ಸಂಶಪ್ತಕರ ಜೊತೆಗೆ, ಸಂಯುಧ್ಯಮಾನಂ – ಯುದ್ಧ ಮಾಡತಕ್ಕ, ಸುರೇಂದ್ರಸೂನುಂ—ಅರ್ಜುನನನ್ನು, ಯುಧಯೇ ಸಮಾಹ್ವಯಾಮಾಸ – ಯುದ್ಧಕ್ಕೆ ಕರೆದನು. ॥೪೯॥.

ಪಾರ್ಥಸ್ಸಂಶಪ್ತಕಗಣೈಃ ಸ್ಸಂದೃಷ್ಟಸ್ಸಮರಾರ್ಥಿಭಿಃ ।
ಆಹೂತೋ ದ್ರೌಣಿನಾಚೈವ ಕಾರ್ಯಂ ಕೃಷ್ಣಮಪೃಚ್ಛತ ॥
ಚೋದಯಾಮಾಸಚ ಹಯಾನ್ ಕೃಷ್ಣೋದ್ರೌಣಿರಥಂಪ್ರತಿ ॥ ೫೦ ॥

ಸಮರಾರ್ಥಿಭಿಃ – ಯುದ್ಧಾಪೇಕ್ಷಿಗಳಾದ, ಸಂಶಪ್ತಕಗಣೈಃ – ಸಂಶಪ್ತಕಗಣದ ರಾಕ್ಷಸರಿಂದ, ಸಂದೃಷ್ಟಃ – ಯುದ್ಧಕ್ಕಾಗಿ ಆಮಂತ್ರಿತನಾದ, ಚ— ಮತ್ತು, ದ್ರೌಣಿನಾ – ಅಶ್ವತ್ಥಾಮರಿಂದ, ಆಹೂತಃ—ಆಮಂತ್ರಿಸಲ್ಪಟ್ಟ ಅರ್ಜುನನು, ಕಾರ್ಯಂ – ತಾನು ಮಾಡಬೇಕಾದ ಕಾರ್ಯದ ಬಗ್ಗೆ, ಕೃಷ್ಣಮೇವ—ಶ್ರೀ ಕೃಷ್ಣನನ್ನೇ. ಅಪೃಚ್ಛತ—ಕೇಳಿದನು. ಕೃಷ್ಣಃ—ಶ್ರೀ ಕೃಷ್ಣನಾದರೂ, ಹಯಾನ್—ಕುದುರೆಗಳನ್ನು, ದ್ರೌಣಿರಥಂ ಪ್ರತಿ ಅಶ್ವತ್ಥಾಮರ ರಥವನ್ನು ಕುರಿತು, ಚೋದಯಾಮಾಸ – ಪ್ರೇರಿಸಿದನು. ॥೫೦॥

ಉಭೌ ಚ ತಾವಸ್ತ್ರವಿದಾಂ ಪ್ರಧಾನೌ ಮಹಾಬಲೌ ಸಂಯತಿ ಜಾತದರ್ಪೌ ।
ಶರೈಸ್ಸಮುಸ್ತಾಃ ಪ್ರದಿಶೋದಿಶಶ್ಚ ದ್ರೌಣೀಂದ್ರಸೂನೂತಿವಿರಾಃ ಪ್ರಚಕ್ರತುಃ ॥೫೧॥

ಅಸ್ತ್ರವಿದಾಂ ಪ್ರಧಾನೌ –ಅಸ್ತ್ರಜ್ಞರಲ್ಲಿ ಶ್ರೇಷ್ಠರಾದ, ಮಹಾಬಲೌ –ಶ್ರೇಷ್ಠ ಬಲಿಷ್ಠರಾದ, ಸಂಯತಿ – ಯುದ್ಧದಲ್ಲಿ, ಜಾತದರ್ಪೌ— (ನಾನು ಶ್ರೇಷ್ಠ, ನಾನು ಶ್ರೇಷ್ಠ ಎಂಬ)ಸ್ಪರ್ಧೆಯಿಂದ ಕೂಡಿದ, ತೌ ಉಭೌ ದ್ರೌಣೀಂದ್ರಸೂನೂ—

ಆ ಅಶ್ವತ್ಥಾಮ ಅರ್ಜುನರಿಬ್ಬರೂ, ಸಮಸ್ತಾಃ ದಿಶಃ ಪ್ರದಿಶಶ್ಚ—ಎಲ್ಲ ದಿಕ್ಕು ಉಪದಿಕ್ಕುಗಳನ್ನು ಶರೈಃ—ಬಾಣಗಳಿಂದ, ತಿಮಿರಾಃ— ಕತ್ತಲೆಯುಳ್ಳವುಗಳನ್ನಾಗಿ, ಪ್ರಚಕ್ರತುಃ—ಮಾಡಿದರು. ॥೫೧॥

ದ್ರೌಣಿಸ್ತದಾಸ್ಯಂದನವಾಜಿರೋಮಸ್ವರೋಮಕೂಪಧ್ವಜ ಕಾರ್ಮುಕೇಭ್ಯಃ ।
ಶರಾನಮೋಘಾನ್ಸತತಂ ಸೃಜಾನೋಬಬಂಧ ಪಾರ್ಥಂ ಶರಪಂಜರೇಣ ॥೫೨॥

ತದಾ—ಆಗ, ದ್ರೌಣಿಃ—ಅಶ್ವತ್ಥಾಮರು, ಸ್ಯಂದನವಾಜಿರೋಮಸ್ವರೋಮಕೂಪಧ್ವಜಕಾರ್ಮುಕೇಭ್ಯಃ — ರಥ, ಕುದುರೆ*ರೋಮಗಳು, ತನ್ನ ರೋಮಕೂಪಗಳು, ಧ್ವಜ ಧನುಸ್ಸು ಇವುಗಳ ದೆಶೆಯಿಂದ, ಶರಾನ್ – ಬಾಣಗಳನ್ನು, ಸತತಂ – ಯಶವಾಗಲೂ, ಸೃಜಾನಃ—ಬಿಡುವವರಾಗಿ, ಶರಪಂಜರೇಣ—ಶರಪಂಜರದಿಂದ, ಪಾರ್ಥಂ—ಅರ್ಜುನನನ್ನು, ಬಬಂಧ—ಬಂಧಿಸಿದನು. ॥೫೨॥

ತಸ್ಮಿನ್ನಿಬದ್ಧೇ ಹರಿರಪ್ರಮೇಯೋ ವಿಬೋಧಯಾಮಾಸ ಸುರೇಂದ್ರಸೂನುಂ ।
ಆಲಿಂಗನೇನಾಸ್ಯದದೌ ಬಲಂಚ ಸ ಉತ್ಥಿತೋಽಸ್ತ್ರಾಣ್ಯ ಮುಚನ್ಮಹಾಂತಿ ॥೫೩॥

ತಸ್ಮಿನ್ – ಆ ಅರ್ಜುನನು, ನಿಬದ್ಧೇಸತಿ-ಅಶ್ವತ್ಥಾಮರಿಂದ ಕಟ್ಟಲ್ಪಡುತ್ತಿರಲು, ಅಪ್ರಮೇಯಃ ಹರಿಃ–ಅಪರಿಮಿತ ಮಹಿಮನಾದ ಶ್ರೀಕೃಷ್ಣನು, ಅಸ್ಯ – ಈ ಅರ್ಜುನನಿಗೆ, ಆಲಿಂಗನೇನ—ತನ್ನ ಆಲಿಂಗನ ಪ್ರದಾನದಿಂದ, ವಿಬೋಧಯಾಮಾಸ—ಶರಪಂಜರದಿಂದ ಹೊರಬರುವಂತೆ ಮಾಡಿದನು; ಎಚ್ಚರಪಡಿಸಿದನು. ಚ – ಮತ್ತು, ಬಲಂ—ಶಕ್ತಿಯನ್ನು, ದದೌ– ಕೊಟ್ಟನು. ಉತ್ಥಿತಃ – ಶರಬಂಧನದಿಂದ ಮುಕ್ತನಾದ, ಸಃ—ಆ ಅರ್ಜುನನು, ಮಹಾಂತಿ ಅಸ್ತ್ರಾಣಿ – ಶ್ರೇಷ್ಠ ಅಸ್ತ್ರಗಳನ್ನು, ಅಮುಚತ್—ಪ್ರಯೋಗಿಸಿದನು. ॥೫೩॥

ನಿವಾರ್ಯ ತಾನಸ್ತ್ರವರೈರ್ಗುರೋಸ್ಸುತಶ್ಚಿಚ್ಛೇದ ಚ ಜ್ಯಾಂ ಯುಧಿಗಾಂಡಿವಸ್ಯ ।
ವವರ್ಷ ಪಾರ್ಥಂಚ ಶರೈರಥಾನ್ಯಾ ಜ್ಯಾsಸೀತ್ತಯಾ ಗಾಂಡಿವಂ ಸೋsಪ್ಯಯುಂಕ್ತ ॥೫೪॥

ಗುರೋಃಸುತಃ—ಗುರುಪುತ್ರರಾದ ಅಶ್ವತ್ಥಾಮರು, ಯುಧಿ—ಯುದ್ಧದಲ್ಲಿ, ತಾನ್ – ಅರ್ಜುನನಿಂದ ಪ್ರಯೋಗಿಸಲ್ಪಟ್ಟ ಅಸ್ತ್ರಗಳನ್ನು, ಅಸ್ತ್ರವರೈಃ—ಅವುಗಳಿಗಿಂತ ಉತ್ತಮ ಅಸ್ತ್ರಗಳಿಂದ, ನಿವಾರ್ಯ—ತಡೆದು, ಗಾಂಡಿವಸ್ಯ ಜ್ಯಾಂಚ—ಗಾಂಡಿವ ಧನುಸ್ಸಿನ ಜ್ಯಾವನ್ನೂ ಕೂಡ, ಚಿಚ್ಛೇದ—ಕತ್ತರಿಸಿದರು. ಚ – ಮತ್ತು, ಪಾರ್ಥಂ – ಅರ್ಜುನನ ಮೇಲೆ, ಶರೈಃ ವವರ್ಷ – ಬಾಣಗಳ ಸುರಿಮಳೆ ಮಾಡಿದರು. ಅಥ—ಗಾಂಡಿವಬಿಲ್ಲಿನ ಜ್ಯಾವನ್ನು ಕತ್ತರಿಸಿದ ಕೂಡಲೇ, ಅನ್ಯಾ ಜ್ಯಾ – ಕತ್ತರಿಸಿದ ಬಳ್ಳಿಯು ಪುನಃ ಬೆಳೆಯುವಂತೆ ಕತ್ತರಿಸಲ್ಪಟ್ಟ ಜ್ಯಾದಿಂದ ಬೆಳೆದ ಜ್ಯಾವು, ಆಸೀತ್ – ಉಂಟಾಯಿತು. ತಯಾ— ಆ ಜ್ಯಾದಿಂದ, ಸಃ ಅಪಿ—ಅರ್ಜುನನೂ ಕೂಡ, ಅಯುಂಕ್ತ – ಗಾಂಡಿವವನ್ನು ಕಟ್ಟಿದನು. ॥೫೪॥

ತತಶ್ಶರೇಣಕುಪಿತಶ್ಶಿತೇನ ದ್ರೌಣಿಸಾರಥೇಃ ।
ಶಿರೋಜಹಾರ ಕೌಂತೇಯಸ್ಸಾರಥ್ಯಂಸೋsಕರೋತ್ ಸ್ವಯಂ ॥೫೫॥

ಶರಾನ್ವಿಸೃಜತಾತೇನ ಸಾರಥ್ಯ ಮುಪಿಕುರ್ವತಾ ।
ಶರಕೂಟೇನ ಪಾರ್ಥಸ್ಯ ಪುನರ್ಬದ್ಧೋ ದ್ವಿಜನ್ಮನಾ ॥೫೬॥

ಪುನರಾಲಿಂಗ್ಯ ಕೃಷ್ಣಸ್ತಮಧಾಚ್ಛತ್ರುವಿಘಾತಕಂ ।
ಬಲಮುಸ್ಮಿಂಸ್ತತಃ ಪಾರ್ಥ ಉತ್ತಸ್ಥೌ ಶರಚಾಪಧೃತ್ ॥೫೭॥

ತತಃ – ಅನಂತರ, ಕುಪಿತಃ ಕೌಂತೇಯಃ– ಸಿಟ್ಟಿಗೆದ್ದಂಥ ಅರ್ಜುನನು, ಶಿತೇನ ಶರೇಣ– ಹದನವಾದ ಬಾಣದಿಂದ, ದ್ರೌಣೆ ಸಾರಥೇಃ – ಅಶ್ವತ್ಥಾಮರ ಸಾರಥಿಯ, ಶಿರಃ – ತಲೆಯನ್ನು, ಜಹಾರ–ಕತ್ತರಿಸಿದನು. ಸಃ–ಆ ಅಶ್ವತ್ಥಾಮರು, ಸಾರಥ್ಯಂ–ಸಾರಥಿ ಕೆಲಸವನ್ನು, ಸ್ವಯಂ ಅಕರೋತ್–ತಾವೇ ಮಾಡಿದರು. ಶರಾನ್ ವಿಸೃಜತಾ- ಬಾಣಗಳನ್ನು ಬಿಡತಕ್ಕ, ಸಾರಥ್ಯಂ ಅಪಿ ಕುರ್ವತಾ–ಸಾರಥ್ಯವನ್ನೂ ಕೂಡ ಮಾಡತಕ್ಕ, ತೇನ ದ್ವಿಜನ್ಮನಾ-ಆ ಬ್ರಾಹ್ಮಣರಾದ ಶ್ರೀ ಅಶ್ವತ್ಥಾಮರಿಂದ, ಸಃಪಾರ್ಥಃ–ಆ ಅರ್ಜುನನು ಶರಕೂಟೇನ-ಬಾಣಸಮೂಹದಿಂದ, ಪುನಃ ಬದ್ಧಃ–ಮತ್ತೆ ಕಟ್ಟಲ್ಪಟ್ಟನು. ಕೃಷ್ಣಃ–ಶ್ರೀಕೃಷ್ಣನು, ಪುನಃ ಮತ್ತೆ. ತಂ–ಅರ್ಜುನನನ್ನು, ಆಲಿಂಗ್ಯ–ಆಲಿಂಗಿಸಿಕೊಂಡು, ಶತ್ರುಪಿಘಾತಕಂ ಬಲಂ–ಶತ್ರುಗಳ ಸಂಹಾರ ಮಾಡತಕ್ಕ ಸಾಮರ್ಥ್ಯವನ್ನು, ಅಸ್ಮಿನ್–ಈ ಅರ್ಜುನನಲ್ಲಿ, ಅಧಾತ್–ಇಟ್ಟನು. ತತಃ—ಅದರಿಂದ, ಪಾರ್ಥಃ–ಅರ್ಜುನನು, ಶರಚಾಪಧೃತ್ ಸನ್–ಧನುರ್ಬಾಣಗಳನ್ನು ಧರಿಸಿದವನಾಗಿ, ಉತ್ತಸ್ಥೌ–ಎದ್ದನು. ॥೬೫-೫೬-೨೭॥

ವವರ್ಷ ಚ ಶರಾನ್ಭೂಯೋ ದ್ರೌಣಿಪುತ್ರೇಽರಿಮರ್ದನಃ ।
ಪುನಸ್ತಸ್ಯನುನೋದ ಜ್ಯಾಂ ದ್ರೌಣಿಸ್ಸಂಧಾಯ ತಾಂಪುನಃ ॥೫೮॥

ಪಾರ್ಥೋ ದ್ರೌಣಸುತಸ್ಯಾಶ್ವರಶ್ಮೀಂಶ್ಚಿಚ್ಛೇದ ಸಾಯಕೈಃ ।
ವಿರಥ್ಯೋ ಹಯಾದ್ರೌಣೇಃ ಪುನಃ ಪಾರ್ಥಶರಾಹತಾಃ ॥೫೯॥

ಅಪೋಹುರ್ದೂರಮೇತಸ್ಮಾತ್ಸೋಽಪಿ ಸಂಸ್ಥಾಪ್ಯ ತಾನ್ ಪುನಃ ।
ಚಿಂತಯಾಮಾಸನೈತಸ್ಮಾದಧಿಕಂ ಶಕ್ನುತೇಽರ್ಜುನೇ ॥೬೦॥

ಸಾರಥಿತ್ವಾತ್ ಕೇಶವಸ್ಯ ಧ್ವಜಸ್ಥತ್ವಾದ್ಧನೂಮತಃ ।
ಗಾಂಡೀವತ್ವಾತ್ತಾರ್ಕ್ಷ್ಯಕಸ್ಯ ಚೇಷುಧ್ಯೋರಕ್ಷಯತ್ವತಃ ॥೬೧॥

ಅವಧ್ಯತ್ವಾತ್ತಥಾಶ್ವಾನಾಮಭೇದ್ಯತ್ವಾದ್ರಥಸ್ಯ ಚ ।
ಅತೋ ಯೋದ್ಧುಂಸಮರ್ಥೋಽಪಿ ನಾದ್ಯಯಾಮಿ ಧನಂಜಯಮ್ ॥೬೨॥

ಅರಿಮರ್ದನಃ-ವೈರಿ ಸಂಹಾರಕನಾದ ಅರ್ಜುನನು, ದ್ರೌಣಪುತ್ರೇ-ಅಶ್ವತ್ಥಾಮರ ಮೇಲೆ, ಭೂಯಃ – ಪುನಃ; ಬಹಳಾಗಿ, ಶರಾನ್ ಪವರ್ಷ–ಬಾಣಗಳನ್ನು ಸುರಿಸಿದನು. ಪುನಃ-ಮತ್ತೊಮ್ಮೆ. ದ್ರೌಣಿಃ–ಅಶ್ವತ್ಥಾಮರು, ತಸ್ಯ–ಅರ್ಜುನನ ಆ ಗಾಂಡಿವದ, ಜ್ಯಾಂ-ಜ್ಯಾವನ್ನು, ನುನೋದ–ಕತ್ತರಿಸಿದರು. ಪಾರ್ಥಃ—ಅರ್ಜುನನು. ತಾಂ–ಬೆಳೆದ ಆ ಜ್ಯಾವನ್ನು, ಪುನಃ–ಮತ್ತೆ. ಸಂಧಾಯ–ಜೋಡಿಸಿ, ದ್ರೌಣಸುತಸ್ಯ–ಅಶ್ವತ್ಥಾಮರ, ಅಶ್ವರಶ್ಮೀನ್–ಕುದುರೆಯ ಹಗ್ಗಗಳನ್ನು. ಸಾಯಕೈಃ-ಬಾಣಗಳಿಂದ, ಚಿಚ್ಛೇದ–ಕತ್ತರಿಸಿದನು. ವಿರಥ್ಯಯಃ–ಹಗ್ಗದಿಂದ ಬಿಡುಗಡೆ ಹೊಂದಿದ, ದ್ರೌಣೇಃಹಯಾಃ–ಅಶ್ವತ್ಥಾಮರ ಕುದುರೆಗಳು, ಪುನಃ–ಮತ್ತೆ, ಪಾರ್ಥಶರಾಹತಾಃ—ಅರ್ಜುನನ ಬಾಣಗಳಿಂದ ಹೊಡೆಸಿಕೊಂಡವುಗಳಾಗಿ, ಏತಸ್ಮಾತ್ ದೂರಂ ಅಪೋಹುಃ—ಈ ಅಶ್ವತ್ಥಾಮರಿಂದ ದೂರಕ್ಕೆ ಓಡಿಹೋದವು. ಸಃಅಪಿ—ಆ ಅಶ್ವತ್ಥಾಮರೂ ಕೂಡ, ತಾನ್–ಆ ಕುದುರೆಗಳನ್ನು, ಪುನಃ–ಸಂಸ್ಥಾಪ್ಯ—ಮತ್ತೆ ನಿಲ್ಲಿಸಿ, ಕೇಶವಸ್ಯ ಸಾರಥಿತ್ವಾತ್–ಶ್ರೀ ಕೃಷ್ಣನು ಸಾರಥಿಯಾದ್ದರಿಂದ, ಹನೂಮತಃ–ಧ್ವಜಸ್ಥತ್ವಾತ್–ಶ್ರೀ ಹನುಮಂತ ದೇವರು ಅರ್ಜುನನ ರಥದ ಧ್ವಜದಲ್ಲಿದ್ದದ್ದರಿಂದ, ಗಾಂಡಿವಸ್ಯ ಕಾರ್ಮುಕತ್ವಾತ್–ಗಾಂಡಿವ ಧನುಸ್ಸಿದ್ದದ್ದರಿಂದ, ಇಷುಧ್ಯೋಃ ಅಕ್ಷಯತ್ವತಃ–ಬತ್ತಳಿಕೆಗಳು ಅಕ್ಷಯವಾದ್ದರಿಂದ, ಅಶ್ವಾನಾಂ ಅವಧ್ಯತ್ವಾತ್–ಕುದುರೆಗಳು ಅವಧ್ಯವಾದ್ದರಿಂದ, ಅರ್ಜುನೇ – ಅರ್ಜುನನ ಬಗ್ಗೆ, ಏತಸ್ಮಾತ್ ಅಧಿಕಂ – ಇದಕ್ಕಿಂತ (ಜ್ಯಾ ಕತ್ತರಿಸುವದು, ಅರ್ಜುನನನ್ನು ಬಂಧಿಸುವದು) ಹೆಚ್ಚು ಮಾಡಲು, ನ ಶಕ್ನುತೇ—ಶಕ್ಯವಾಗಲಾರದು, ಅತಃ–ಆದ್ದರಿಂದ, ಯೋದ್ಧುಂ ಸಮರ್ಥಃಅಪಿ–ಯುದ್ಧ ಮಾಡಲು ಸಮರ್ಥನಾದರೂ ಕೂಡ, ಅದ್ಯ–ಈಗ, ಧನಂಜಯಂ–ಅರ್ಜುನನ ಜೊತೆಗೆ, ಯೋದ್ಧುಂ–ಯುದ್ಧ ಮಾಡಲು, ನ ಯಾಮಿ–ಹೋಗುವದಿಲ್ಲ ಇತಿ—ಎಂದು, ಚಿಂತಯಾಮಾಸ–ವಿಚಾರಿಸಿದರು. ॥೫೮॥೫೯॥೬೦॥೬೧॥೬೨॥

ಏವಂಸಮುತ್ಥಾಪ್ರವಿವೇಶಸೇನಾಂ ಪಾಂಡೋಸ್ಸುತಾನಾಮುಥತಂ ಸಮುಭ್ಯಯಾತ್ ॥
ಪಾಂಡ್ಯಸ್ತಯೋರಾಸಸುಯುದ್ಧಮುದ್ಭುತಂ ಪ್ರವರ್ಷತೋಸ್ಸಾಯಕಪೂಗಮುಗ್ರಂ ॥೬೩॥

ಸಃ – ಆ ಅಶ್ವತ್ಥಾಮರು, ಏವಂ – ಹೀಗೆ, ಮತ್ವಾ — ತಿಳಿದು, ಪಾಂಡೋಃ ಸುತಾನಾಂ—ಪಾಂಡವರ, ಸೇನಾಂ—ಸೈನ್ಯವನ್ನು, ಪ್ರವಿವೇಶ— ಪ್ರವೇಶಿಸಿದರು. ಅಥ— ನಂತರ, ಪಾಂಡ್ಯಃ— ಪಾಂಡ್ಯದೇಶದರಾಜನು, ತಂ—ಆ ಅಶ್ವತ್ಥಾಮರನ್ನು ಕರಿತು, ಸಮಭ್ಯಯಾತ್— ಏರಿ ಹೋದನು. ಉಗ್ರಂ— ಭಯಂಕರವಾದ, ಸಾಯಕಪೂಗಂ – ಬಾಣಸಮೂಹವನ್ನು, ಪ್ರವರ್ಷತೋಃ – ಸುರಿಸತಕ್ಕ, ತಯೋಃ – ಅವರಿಗೆ ಅದ್ಭುತಂ ಸುಯುದ್ಧಂ— ಆಶ್ಚರ್ಯಕರವಾದ ಶ್ರೇಷ್ಠ ಯುದ್ಧವು, ಆಸ – ಆಯಿತು. ॥೬೩॥

ಅಷ್ಟಾವಷ್ಟಗವಾನ್ಯೂಹುಶ್ಶಕಟಾನಿ ಯದಾಯುಧಂ ॥
ಅಹ್ನಸ್ತದಷ್ಟಭಾಗೇನ ದ್ರೌಣಿಶ್ಚಿಚ್ಛೇದತತ್ರಹಿ ॥೬೪॥

ಅಷ್ಟಗವಾನಿ – ಎಂಟು ಎಂಟು ಎತ್ತುಗಳುಳ್ಳ, ಅಷ್ಟೌ ಶಕಟಾನಿ— ಎಂಟು ಭಂಡಿಗಳು, ಯತ್ ಆಯುಧಂ- ಯಾವ ಆಯುಧಗಳ ಸಮೂಹವನ್ನು, ಊಹುಃ – ಹೊತ್ತುಕೊಂಡು ಬಂದವೋ, ತತ್-ಆ ಸಮೂಹವನ್ನು, ಅಹ್ನಃ – ಆ ಹಗಲಿನ ಅಷ್ಟಭಾಗೇನ — ಎಂಟನೇಭಾಗದಲ್ಲಿ (ಅಂದರೆ ಒಂದುವರೆಗಂಟೆಯಲ್ಲಿ), ದ್ರೌಣಿಃ – ಅಶ್ವತ್ಥಾಮರು,ಚಿಚ್ಛೇದ — ಕತ್ತರಿಸಿದರು. ॥೬೪॥

ಅಥತಂ ವಿರಥಂಕೃತ್ವಾ ಛಿತ್ವಾಕಾರ್ಮುಕಮಾಹವೇ ॥
ಸಕುಂಡಲಂ ಶಿರೋ ದ್ರೌಣಿರ್ಜಹಾರ ಮುಕುಟೋಜ್ವಲಂ ॥೬೫॥

ದ್ರೌಣಿಃ — ಅಶ್ವತ್ಥಾಮರು, ಅಥ— ಆನಂತರ, ಆಹವೇ – ಯುದ್ಧದಲ್ಲಿ, ತಂ-ಆ ಪಾಂಡ್ಯರಾಜನನ್ನು, ವಿರಥಂ ಕೃತ್ವಾ- ರಥಹೀನನನ್ನಾಗಿ ಮಾಡಿ, ಕಾರ್ಮುಕಂ – ಧನುಸ್ಸನ್ನು, ಛಿತ್ವಾ – ಕತ್ತರಿಸಿ, ಸಕುಂಡಲಂ – ಕರ್ಣಕುಂಡಲಗಳಿಂದ ಸಹಿತವಾದ, ಮುಕುಟೋಜ್ವಲಂ— ಕಿರೀಟದಿಂದ ಶೋಭಿಸತಕ್ಕ, ಶಿರಃ ತಲೆಯನ್ನು, ಜಹಾರ – ಕತ್ತರಿಸಿದರು. ॥೬೫॥

ಭಾ. ಅ. ೪೯ – ೬೫ ಅಶ್ವತ್ಥಾಮರು ಶ್ರೀಕೃಷ್ಣಾರ್ಜುನರಿರುವಲ್ಲಿಗೆ ಹೋಗಿ,ಬಾಣ ಹಿಡಿದು ಆ ಕೈಯನ್ನು ಎತ್ತಿ ಅರ್ಜುನನನ್ನು ಯುದ್ಧಕ್ಕೆ ಕರೆದರು. ಆಗ ಅರ್ಜುನನು ಸಂಶಪ್ತಕರ ಜೊತೆಗೆ ಯುದ್ಧಮಾಡುತ್ತಿದ್ದನು. ಆದ್ದರಿಂದ ಈಗ ಅವರ ಜೊತೆಗೆ ಯುದ್ಧನಡೆಸುವದೋ ಅಥವಾ ಅಶ್ವತ್ಥಾಮರ ಜೊತೆಗೆ ಆರಂಭಿಸುವದೋ ಎಂದು ತಿಳಿಯದೇ ಶ್ರೀಕೃಷ್ಣನನ್ನೇ ಕೇಳಿದನು. ಆಗ ಶ್ರೀಕೃಷ್ಣನು ಅಶ್ವತ್ಥಾಮರ ಕಡೆಗೆ ರಥವನ್ನು ಪ್ರೇರಿಸಿದನು. ಅವರಿಬ್ಬರೂ ಯುದ್ಧವನ್ನಾರಂಭಿಸಿ, ಬಾಣಗಳಿಂದ ದಿಕ್ಕು ದಿಕ್ಕುಗಳನ್ನು ತುಂಬಿದರು. ಎಲ್ಲ ಕಡೆಗಳಿಂದಲೂ ಬಾಣಗಳು ಬರುತ್ತಿದ್ದಾವೇನೋ ಎಂಬಂತೆ ಸತತವಾಗಿ ಬಾಣಗಳನ್ನು ಬಿಡುತ್ತಿರುವ ಅಶ್ವತ್ಥಾಮರು ಅರ್ಜುನನನ್ನು ಬಂಧಿಸಿದರು. ಆಗ ಶ್ರೀಕೃಷ್ಣನು ಅರ್ಜುನನನ್ನು ಆಲಿಂಗಿಸಿ ಆ ಶರಬಂಧವು ಹೋಗಿ ಎಚ್ಚರವಾಗುವಂತೆ ಮಾಡಿದನು. ಎಚ್ಚತ್ತ ಅರ್ಜುನನು ಪ್ರಬಲ ಅಸ್ತ್ರಗಳನ್ನು ಪ್ರಯೋಗಿಸಿದಾಗ, ಅವುಗಳಿಗಿಂತಲೂ ಪ್ರಬಲವಾದ ಅಸ್ತ್ರಗಳನ್ನು ಅಶ್ವತ್ಥಾಮರು ಪ್ರಯೋಗಿಸಿ,ಅವನ್ನು ತಡದು, ಗಾಂಡಿವಧನುಸ್ಸಿನ ಜ್ಯಾವನ್ನು ಕತ್ತರಿಸಿದರು, ತುಂಡಾದ ಜ್ಯಾವು ಪುನಃ ಬೆಳೆಯಿತು. ಅದನ್ನು ಅರ್ಜುನನು ಪುನಃ ಕಟ್ಟಿದನು; ಸಿಟ್ಟಿನಿಂದ ಅಶ್ವತ್ಥಾಮರ ಸಾರಥಿಯ ಶಿರಶ್ಛೇದ ಮಾಡಿದನು. ಆಗ ಅವರು ತಾವೇ ಸಾರಥ್ಯವನ್ನೂ ಮಾಡಿಕೊಂಡರು; ಅರ್ಜುನನನ್ನು ಮತ್ತೆ ಬಂಧಿಸಿದರು. ಪುನಃ ಶ್ರೀಕೃಷ್ಣನು ಆಲಿಂಗನದಿಂದ ಶತ್ರುಗಳನ್ನು ಎದುರಿಸುವ ಶಕ್ತಿಯನ್ನು ಉಂಟುಮಾಡಿದಾಗ, ಅರ್ಜುನನು ಎದ್ದು ಅಶ್ವತ್ಥಾಮರ ಮೇಲೆ ಬಹು ಬಾಣವರ್ಷಣವನ್ನು ಮಾಡಿದನು. ಅವರು ಪುನಃ ಜ್ಯಾವನ್ನು ಕತ್ತರಿಸಿದರು. ಮತ್ತೆ ಬೆಳೆಯಿತು; ಪುನಃ ಕಟ್ಟಿದನು. ಆಗ ಅರ್ಜುನನು ಅವರ ಕುದುರೆಗಳ ಹಗ್ಗವನ್ನೇ ಕತ್ತರಿಸಿದನು; ಅವುಗಳಿಗೂ ಬಾಣ

ಬಿಟ್ಟನು. ಆಗ ಆ ಕುದುರೆಗಳು ದೂರಕ್ಕೆ ಓಡಿದಾಗ ಅಶ್ವತ್ಥಾಮರು ಅವುಗಳನ್ನು ಪುನಃ ತಂದು ರಥಕ್ಕೆ ಹೂಡಿ— 'ಶ್ರೀಕೃಷ್ಣನು ಸಾರಥಿಯಾದ್ದರಿಂದ, ಧ್ವಜದಲ್ಲಿ ಹನುಮಂತನಿದ್ದದ್ದರಿಂದ, ಗಾಂಡೀವಧನುಸ್ಸಿದ್ದದ್ದರಿಂದ, ಅಕ್ಷಯ ಬತ್ತಳಿಕೆಗಳು ಇದ್ದದ್ದರಿಂದ, ಕುದುರೆಗಳು ಅವಧ್ಯವಾದ್ದರಿಂದ, ರಥವು ಅಭೇದ್ಯವಾದ್ದರಿಂದ ಅರ್ಜುನನಿಗೆ ಇದಕ್ಕಿಂತ ಹೆಚ್ಚು ಹಾನಿಯನ್ನು ಮಾಡಲು ನನ್ನಿಂದ ಸಾಧ್ಯವಾಗದು. ಅದಕ್ಕಾಗಿ ಯುದ್ಧಮಾಡಲು ಸಾಮರ್ಥ್ಯವಿದ್ದರೂ ಅವನ ಜೊತೆಗೆ ಇಂದು ಯುದ್ಧಮಾಡುವದಿಲ್ಲ' ಎಂದು ವಿಚಾರಿಸಿ ಅರ್ಜುನನ ಜೊತೆಗೆ ಯುದ್ಧವನ್ನು ಬಿಟ್ಟು ಪಾಂಡವ ಸೈನ್ಯವನ್ನು ಪ್ರವೇಶಿಸಿದರು. ಆಗ ಪಾಂಡ್ಯರಾಜನು ಅವರನ್ನು ಎದುರಿಸಿದನು. ಅವರಿಬ್ಬರಿಗೂ ಭಯಂಕರ ಯುದ್ಧವಾಯಿತು. ಒಂದೊಂದರಲ್ಲಿ ಎಂಟು ಎತ್ತುಗಳುಳ್ಳ ಎಂಟು ಬಂಡಿಗಳು ಹೊತ್ತು ತಂದ ಆಯುಧರಾಶಿಯನ್ನು ಶ್ರೀ ಅಶ್ವತ್ಥಾಮರು ಒಂದುವರೆ ಗಂಟೆಯ ಸಮಯದಲ್ಲಿ ನಾಶಪಡಿಸಿದರು. (ವಿಶೇಷ— ಇಲ್ಲಿಅಷ್ಟಾವಷ್ಟ ಶತಾನಿ' ಎಂಬ ಪಾಠವೂ ಇದ್ದು ಆ ಪಾಠದಂತೆ ಎಂಟು ನೂರಾ ಎಂಟು ಬಂಡಿಗಳಲ್ಲಿ ಬಂದ ಆಯುಧಗಳನ್ನು ಕತ್ತರಿಸಿದರು. ಇದೇ ಯೋಗ್ಯವೆಂದೂ ತೋರುತ್ತದೆ.) ನಂತರ ಪಾಂಡ್ಯರಾಜನನ್ನು ವಿರಥನನ್ನಾಗಿಸಿ, ಧನುಸ್ಸನ್ನು ಕತ್ತರಿಸಿ ಅವನ ಶಿರಸ್ಸನ್ನೇ ಕತ್ತರಿಸಿದರು.

ಅಥವಿದ್ರಾವಯಾಮಾಸ ಪೃತನಾಂ ಪಾಂಡವೀಂಶರೈಃ ॥
ತದಾ ಜಘಾನಪಾರ್ಥೋಽಪಿ ದಂಡಧಾರಾಖ್ಯಮಾಗಧಂ ॥೬೬॥

ಅಥ— ಪಾಂಡ್ಯರಾಜನ ಸಂಹಾರದ ನಂತರ, (ಅಶ್ವತ್ಥಾಮರು) ಪಾಂಡವೀಂ ಪೃತನಾಂ — ಪಾಂಡವರ ಸೈನ್ಯವನ್ನು, ಶರೈಃ — ಬಾಣಗಳಿಂದ, ವಿದ್ರಾವಯಾಮಾಸ — ಓಡಿಸಿದರು. ತದಾ - ಆಗ, ಪಾರ್ಥೋಽಪಿ — ಅರ್ಜುನನೂ ಕೂಡ, ದಂಡಧಾರಾಖ್ಯಮಾಗಧಂ— ದಂಡಧಾರನೆಂಬ ಮಂಗಧದೇಶದ ವೀರನನ್ನು, ಜಘಾನ - ಕೊಂದನು. ॥೬೬॥

ವಿದ್ರಾವ್ಯಮಾಣಾಂ ಪೃತನಾಂನಿರೀಕ್ಷ್ಯಗುರೋಸ್ಸುತೇನಾಭ್ಯಗಮತ್ತ್ವರಾವಾನ್ ॥
ಧೃಷ್ಟದ್ಯುಮ್ನಸ್ತಂ ಸಊಚೇ ಸುಪಾಪಂ ಹನಿಷ್ಯೇ ತ್ವಾಮದ್ಯ ಯುದ್ಧೇ ಗುರುಘ್ನಂ ॥೬೭॥

ಗುರೋಃ ಸುತೇನ ಅಶ್ವತ್ಥಾಮರಿಂದ, ಪೃತನಾಂ — ಪಾಂಡವಸೈನ್ಯವನ್ನು, ವಿದ್ರಾವ್ಯಮಾಣಾಂ - ಓಡಿಸಲ್ಪಟ್ಟದ್ದನ್ನಾಗಿ, ನಿರೀಕ್ಷ್ಯ— ನೋಡಿ, ಧೃಷ್ಟದ್ಯುಮ್ನಃ — ಧೃಷ್ಟದ್ಯುಮ್ನನು, ತ್ವರಾವಾನ್ ಸನ್ — ವೇಗವುಳ್ಳವನಾಗಿ, ಅಭ್ಯಗಮತ್ — ಏರಿಬಂದನು. ತಂ — ಆ ಧೃಷ್ಟದ್ಯುಮ್ನನನ್ನು ಕುರಿತು, ಸಃ — ಆ ಅಶ್ವತ್ಥಾಮರು, ಗುರುಘ್ನಂ — ಗುರು ಹತ್ಯಾ ಮಾಡಿದ, ಸುಪಾಪಂ— ಅತಿಪಾಪಿಷ್ಠನಾದ, ತ್ವಾಂ - ನಿನ್ನನ್ನು, ಅದ್ಯ — ಇಂದು, ಹನಿಷ್ಯೇ —ಸಂಹರಿಸುತ್ತೇನೆ, ಇತಿ— ಎಂದು ಊಚೇ — ಹೇಳಿದರು. ॥೬೭॥

ಇತ್ಯುಕ್ತೋದರ್ಶಯಾಮಾಸ ಪಾರ್ಷತಃ ಖಡ್ಗಮುತ್ತಮಂ ॥
ಅಯಂ ತವ ಪಿತುರ್ಹಂತಾ ವದಿಷ್ಯತಿ ತವೋತ್ತರಂ ॥೬೮॥

ಇತಿ — ಹೀಗೆ, ಉಕ್ತಃ — (ಅಶ್ವತ್ಥಾಮರಿಂದ) ಹೇಳಿಸಿಕೊಳ್ಳಲ್ಪಟ್ಟ, ಪಾರ್ಷತಃ — ಧೃಷ್ಟದ್ಯುಮ್ನನು, ಉತ್ತಮಂ ಖಡ್ಗಂ - ಶ್ರೇಷ್ಠವಾದ ಖಡ್ಗವನ್ನು, ದರ್ಶಯಾಮಾಸ— ತೋರಿಸಿದನು. ತವ — ನಿನ್ನ, ಪಿತುಃ — ತಂದೆಯ, ಹಂತಾ — ಸಂಹಾರಕನಾದ, ಅಯಂ — ಈ ಧೃಷ್ಟದ್ಯುಮ್ನನು, ತವ — ನಿನಗೆ, ಉತ್ತರಂ — ಉತ್ತರವನ್ನು, ವದಿಷ್ಯತಿ — ಹೇಳುತ್ತಾನೆ. ॥೬೮॥

ಇತ್ಯುಕ್ತ್ವಾ ಧನುರಾದಾಯ ವವರ್ಷಚ ಶರಾನ್ಬಹೂನ್ ॥
ತಯೋಸ್ಸಮಭವದ್ಯುದ್ಧಂ ತುಮುಲಂರೋಮಹರ್ಷಣಂ ॥೬೯॥

ಇತಿ—ಈ ರೀತಿಯಾಗಿ, ಉಕ್ತ್ವಾ – ಹೇಳಿ,(ಧೃಷ್ಟದ್ಯುಮ್ನನು) ಧನುಃ ಆದಾಯ ಧನುಸ್ಸನ್ನು ತೆಗೆದುಕೊಂಡು, ಬಹೂನ್ ಶರಾನ್ ವವರ್ಷ—ಬಹುಬಾಣಗಳನ್ನು ಸುರಿಸಿದನು. ಚ-ಮತ್ತು. ತುಮುಲಂ-ಪರಸ್ಪರವಾದ, ರೋಮಹರ್ಷಣಂ ರೋಮಾಂಚಕಾರಿಯಾದ, ಯುದ್ಧಂ – ಯುದ್ಧವು, ತಯೋಃ – ಅವರಿಬ್ಬರಿಗೆ, ಸಮಭವತ್—ಆಯಿತು. ॥೬೯॥

ಸತತ್ರ ಪಾರ್ಷತಂ ದ್ರೌಣಿಃ ಕ್ಷಣೇನ ವಿರಥಾಯುಧಂ ।
ಕೃತ್ವಾಂತಾಯ ಶರಾಂಸ್ತೀಕ್ಷ್ಣಾನ್ಮುಮೋಚ ನಚ ತಸ್ಯತೇ ॥
ತ್ವಚಂ ಚ ಚಿಚ್ಛೆದುರ್ದ್ರೌಣಿಃ ಖಡ್ಗಹಸ್ತೋಽಭಿಜಗ್ಮಿವಾನ್ ॥೭೦॥

ಸಃ ದ್ರೌಣಿಃ – ಆ ಅಶ್ವತ್ಥಾಮನು, ತತ್ರ – ಆ ಯುದ್ಧದಲ್ಲಿ, ಪಾರ್ಷತಂ – ಧೃಷ್ಟದ್ಯುಮ್ನನನ್ನು, ಕ್ಷಣೇನ–ಕ್ಷಣ ಸಮಯದಲ್ಲಿ, ವಿರಥಾಯುಧಂ—ಕೃತ್ವಾ – ರಥ ಆಯುಧಗಳಿಂದ ರಹಿತನನ್ನಾಗಿ ಮಾಡಿ, ಅಂತಾಯ — ಧೃಷ್ಟದ್ಯುಮ್ನನ ಮರಣಕ್ಕಾಗಿ, ತೀಕ್ಷ್ಣಾನ್ ಶರಾನ್—ಹರಿತವಾದ ಬಾಣಗಳನ್ನು, ಮುಮೋಚ - ಬಿಟ್ಟನು, ಚ—ಆದರೆ, ತೇ–ಆ ಬಾಣಗಳು, ತಸ್ಯ – ಆ ಧೃಷ್ಟದ್ಯುಮ್ನನ, ತ್ವಚಂ ಚ - ಚರ್ಮವನ್ನೂ ಕೂಡ, ನ ಚಿಚ್ಛೆದುಃ – ಛೇದಿಸಲಿಲ್ಲ. ದ್ರೌಣಿಃ – ಅಶ್ವತ್ಥಾಮರು, ಖಡ್ಗಹಸ್ತವಾನ್ ಸನ್— ಕೈಯಲ್ಲಿ ಖಡ್ಗವನ್ನು ಹಿಡಿದವರಾಗಿ, ಅಭಿಜಗ್ಮಿವಾನ್ – (ಖಡ್ಗದಿಂದಲಾದರೂ ಕತ್ತರಿಸಿ ಕೊಲ್ಲ ಬೇಕೆಂಬ ಭಾವದಿಂದ) ಏರಿಹೋದರು. ॥೭೦॥

ಖಡ್ಗೇನಸಾಸ್ತ್ರೈಃಸ್ತ್ರೈರಪ್ಯನಿರ್ಭಿಣ್ಣತ್ವಚಂ ತದಾ ॥
ನ್ಯೌವ್ಯಾಮುಮುಂಥಧನುಷಃ ಪಾತಯಿತ್ವಾಧರಾತಳೇ ॥೭೧॥

ಖಡ್ಗೇನ— ಖಡ್ಗದಿಂದ, ಸಾಸ್ತ್ರೈಃ ಶಸ್ತ್ರೈರಪಿ — ಮಂತ್ರಗಳಿಂದ ಅಭಿಮಂತ್ರಿಸಲ್ಪಟ್ಟ ಶಸ್ತ್ರಗಳಿಂದಲೂ ಕೂಡ, ಅನಿರ್ಭಿಣ್ಣತ್ವಚಂ – ಗಾಯವಾಗದೇ ಇದ್ದ ಚರ್ಮವುಳ್ಳ ಧೃಷ್ಟದ್ಯುಮ್ನನನ್ನು, ತದಾ — ಆಗ, (ಅಶ್ವತ್ಥಾಮರು) ಧನುಷಃ ಮೌರ್ವ್ಯಾ — ತಮ್ಮ ಧನುಸ್ಸಿನ ಜ್ಯಾದಿಂದ, ಧರಾತಳೇ – ಭೂಮಿಯಲ್ಲಿ, ಪಾತಯಿತ್ವಾ – ಕೆಡವಿ, ಮುಮುಂಥ – ಜಗ್ಗಿದರು. ॥೭೧॥

ಆಕೃಷ್ಯಮಾಣಂ ಪಾಖುಷತಂ ದೃಷ್ಟ್ವಾ ಕೃಷ್ಣಪ್ರಚೋದಿತಃ ॥
ಪಾರ್ಥೋಭೀಮಶ್ಚೋಭಯತಃ ಶರೈರಭಿನಿಜಘ್ನತುಃ ॥೭೨॥

ಪಾಖುಷತಂ— ಧೃಷ್ಟದ್ಯುಮ್ನನನ್ನು, ಆಕೃಷ್ಯಮಾಣಂ – ಅಶ್ವತ್ಥಾಮರಿಂದ ಎಳೆಯಲ್ಪಟ್ಟವನನ್ನಾಗಿ, ದೃಷ್ಟ್ವಾ–ನೋಡಿ, ಕೃಷ್ಣಪ್ರಚೋದಿತಃ -- ಶ್ರೀಕೃಷ್ಣನಿಂದ ಪ್ರೇರಿಸಲ್ಪಟ್ಟ, ಪಾರ್ಥಃ ಭೀಮಶ್ಚ — ಅರ್ಜುನನು ಶ್ರೀಭೀಮಸೇನರು ಇಬ್ಬರೂ, ಉಭಯತಃ — ಎರಡು ಬದಿಗಳಿಂದಲೂ, ಶರೈಃ— ಬಾಣಗಳಿಂದ, ಅಭಿನಿಜಘ್ನತುಃ— ಅಶ್ವತ್ಥಾಮರನು ಹೊಡೆದರು. ॥೭೨॥

ಸ ತಾಭ್ಯಾಂವಜ್ರಸಮಿತೈಃ ಶರೈರಭಿಹತೋ ಭೃಶಂ ॥
ವಿಸೃಜ್ಯ ಪಾರ್ಷತಂ ಸ್ವೀಯಮಾರುರೋಹ ರಥಂ ಪುನಃ ॥೭೩॥

ತಾಭ್ಯಾಂ— ಅವರಿಬ್ಬರಿಂದ, ವಜ್ರಸಮಿತೈಃ – ವಜ್ರಕ್ಕೆ ಸದೃಶವಾಗಿರುವ, ಶರೈಃ— ಬಾಣಗಳಿಂದ, ಭೃಶಂ— ಚೆನ್ನಾಗಿ, ಅಭಿಹತಃ—ಹೊಡಿಸಿಕೊಂಡಂಥ, ಸಃ—ಆ ಅಶ್ವತ್ಥಾಮರು, ಪಾರ್ಷತಂ—ಧೃಷ್ಟದ್ಯುಮ್ನನನ್ನು ವಿಸೃಜ್ಯ– ಬಿಟ್ಟು, ಪುನಃ – ಮತ್ತೆ, ಸ್ವೀಯಂ ರಥಂ – ತನ್ನ ರಥವನ್ನು, ಆರುರೋಹ – ಏರಿದರು. ॥೭೩॥

ಜಗಾಮಚ ತತೋಽನ್ಯತ್ರ ಪಾಂಚಾಲ್ಯೋಽಪಿರಥಂಪುನಃ ॥
ಆರು ಹ್ಯಾನ್ಯಂ ಸ್ವಾತ್ತಧನ್ವಾ ಕೃತವರ್ಮಾಣಮಭ್ಯಯಾತ್ ॥೭೪॥

ಪಾಂಚಾಲ್ಯಃ ಅಪಿ – ಧೃಷ್ಟದ್ಯುಮ್ನನೂಕೂಡ, ಪುನಃ– ಮತ್ತೆ, ಅನ್ಯಂ ರಥಂ – ಬೇರೆ ರಥವನ್ನು ಆರುಹ್ಯ— ಏರಿ, ಸ್ವಾತ್ತಧನ್ವಾ ಸನ್ – ಧನಂಸ್ಸನ್ನು ಧರಿಸಿದವನಾಗಿ, ತತಃ ಅನ್ಯತ್ರ – ಅಲ್ಲಿಂದ ಬೇರೆ ಕಡೆಗೆ, ಜಗಾಮ – ಹೋದನು. ಚ—ಮತ್ತು, ಕೃತವರ್ಮಾಣಂ– ಕೃತವರ್ಮನನ್ನು, ಅಭ್ಯಯಾತ್ – ಎದುರಿಸಿದನು. ॥೭೪॥

ತಯೋರಾಸೀತ್ಸುತುಮುಲಂ ಯುದ್ಧಮದ್ಭುತ ದರ್ಶನಂ ।
ತತ್ರನಾತಿಪ್ರಯತ್ನೇನ ಪಾಂಚಾಲ್ಯೋವಿರಥಾಯುಧಂ ॥೭೫॥

ಚಕಾರ ಕೃತವರ್ಮಾಣಂ ತಮುಪೋವಾಹ ಗೌತಮಃ ।
ಅಥ ದುರ್ಯೋಧನೋರಾಜಾ ಮಾದ್ರೇಯಾವಭ್ಯಯಾದ್ರಥೀ ॥೭೬॥

←ತಾಭ್ಯಾಂ ತಸ್ಯಾಭವದ್ಘೋರಂ ಯುದ್ಧಮದ್ಭುತದರ್ಶನಂ ।
ತತ್ರ ನಾತಿಪ್ರಯತ್ನೇನ ತೇಸ ತೌ ವಿರಥೀಕೃತೌ ॥೭೭॥

ಸ್ವಯಂ ಯುಧಿಷ್ಠಿರೋರಾಜಾ ತದಾತಂ ಸಮುವಾರಯತ್ ।
ವ್ಯಶ್ವಸೂತಧ್ವಜಂ ಚಕ್ರೇ ತಂಚ ದುರ್ಯೋಧನೋ ರಣೇ ॥೭೮॥

ತಯೋಃ — ಆ ಕೃತವರ್ಮ ಧೃಷ್ಟದ್ಯುಮ್ನರಿಗೆ, ಸುತುಮುಲಂ— ಪರಸ್ಪರರಿಗೆ ನಡೆದ, ಅದ್ಭುತ ದರ್ಶನಂ— ಆಶ್ಚರ್ಯಕರವಾದ, ಯುದ್ಧಂ — ಯುದ್ಧವು, ಆಸೀತ್ — ನಡೆಯಿತು. ತತ್ರ– ಆ ಯುದ್ಧದಲ್ಲಿ, ಪಾಂಚಾಲ್ಯಃ — ಧೃಷ್ಟದ್ಯುಮ್ನನು, ಕೃತವರ್ಮಾಣಂ - ಕೃತವರ್ಮನನ್ನು ನಾತಿಪ್ರಯತ್ನೇನ—ಹೆಚ್ಚು ಶ್ರಮವಿಲ್ಲದೆಯೇ (ಅನಾಯಾಸವಾಗಿ) ವಿರಥಾಯುಧಂ– ರಥ, ಆಯುಧಗಳಿಲ್ಲದವನನ್ನಾಗಿ, ಚಕಾರ– ಮಾಡಿದನು, ತಂ– ಅವನನ್ನು, ಗೌತಮಃ— ಕೃಪಾಚಾರ್ಯರು, ಅಪೋವಾಹ–ಎತ್ತಿಕೊಂಡು ಹೋದರು. ಅಥ-ಇನ್ನೊಂದೆಡೆಗೆ, ರಾಜಾ ದುರ್ಯೋಧನಃ– ರಾಜನಾದ ದುರ್ಯೋಧನನು, ರಥೀಸನ್ — ರಥಾರೂಢನಾಗಿ, ಮಾದ್ರೇಯೌ —ನಕುಲಸಹದೇವರನ್ನು ಕುರಿತು, ಅಭ್ಯಯಾತ್ ಏರಿಹೋದನು. ತಸ್ಯ–ಅವನಿಗೆ,ತಾಭ್ಯಾಂ–ಆ ಮಾದ್ರೀಪುತ್ರರಿಂದ ಕೂಡಿಕೊಂಡು, ಘೋರಂ-ಭಯಂಕರವಾದ, ಅದ್ಭುತದರ್ಶನಂ–ಆಶ್ಚರ್ಯಕರವಾದ,ಯುದ್ಧಂ - ಯುದ್ಧವು, ಅಭವತ್—ಆಯಿತು. ॥೭೫॥೭೬॥೭೭॥೭೮॥

ಅಥಾಗತಂ ಸೂರ್ಯಸುತಂ ಪುನಶ್ಚ ಜಗಾಮಭೀಮೋ ರಭಸೋರಥೇನ ॥
ದುರ್ಯೋಧನಂಚಾಸ್ಯಸಮಕ್ಷಮೇವ ಚಕಾರವೀರೋ ವಿರಥಂಕ್ಷಣೇನ ॥೭೯॥

ಅಥ – ಅನಂತರ, ಪುನಃ -- ಮತ್ತೆ, ಆಗತಂ – ಯುದ್ಧಕ್ಕೆ ಬಂದಂಥ, ಸೂರ್ಯಸುತಂ – ಕರ್ಣನ ಸಮೀಪಕ್ಕೆ, ವೀರಃ ಭೀಮಃ -- ಪರಾಕ್ರಮಿಗಳಾದ ಶ್ರೀ ಭೀಮರು, ರಭಸಃ – ರಭಸದಿಂದ, ರಥೇನ – ರಥದಿಂದ, ಜಗಾಮ – ಹೋದರು, ಚ—ಮತ್ತು, ಅಸ್ಯ ಸಮಕ್ಷಂ ಏವ— ಈ ಕರ್ಣನ ಎದುರಲ್ಲೇ, ದುರ್ಯೋಧನಂ ಚ – ದುರ್ಯೋಧನನನ್ನೂ ಕೂಡ, ಕ್ಷಣೇನ – ಅಲ್ಪ ಸಮಯದಲ್ಲಿಯೇ, ವಿರಥಂ – ರಥರಹಿತನನ್ನಾಗಿ, ಚಕಾರ – ಮಾಡಿದರು. ॥೭೯॥

ನಿವಾರ್ಯಕರ್ಣಂಚ ಶರೈರಮುಷ್ಯ ಸೂನೋಸ್ಸುಷೇಣಸ್ಯ ಶಿರಶ್ಚಕರ್ತ ॥
ಪಪಾತಭೂಮೌ ಸಹಿತುಃ ಸಮೀಪೇ ಯಥಾ ಹತಃ ಸತ್ಯಸೇನೋಽಮುನೈವ ॥೮೦॥

ಯಥೈವ ಕರ್ಣಾವರಜೌ ಪುರೈವನಿಶಾಯುದ್ಧೇಕರ್ಣಪುರಃ ಪ್ರಪಾತಿತೌ ॥
ಹತಂ ತವೀಕ್ಷ್ಯೈವ ವಿಕರ್ತನಾತ್ಮಜಃ ಕ್ರೋಧಾನ್ವಿತೋ ಭೀಮಸೇನಂ ವಿಹಾಯ ॥೬೦॥

ಯಯೌ ಪ್ರಮೃದ್ಯೈವ ಚಮೂಂ ಯುಧಿಷ್ಠಿರಂ ರಥೇ ಪರೇ ಸ್ವಶ್ವಯುತೇ ವ್ಯವಸ್ಥಿತಂ ॥೬೧॥

ನ್ಯವಾರಯೇತಾಂ ಶಿನಿಪೌತ್ರಪಾರ್ಷತೌ ಕೃಷ್ಣಾಸುತಾಃಸೋಮಕಸಂಘಯುಕ್ತಾಃ ॥
ಸತಾನ್ಸಮಸ್ತಾನ್ ವಿರಥಾನ್ ವಿಧಾಯ ಯುಧಿಷ್ಠಿರಂ ಪ್ರಾಪ ಯುತಂಯಮಾಭ್ಯಾಂ ॥೬೨॥

(ಭೀಮಃ – ಶ್ರೀಭೀಮರು), ಕರ್ಣಂಚ–ಕರ್ಣನನ್ನೂ ಕೂಡ,ನಿವಾರ್ಯ–ತಡೆದರು, ಅಮುಷ್ಯ ಸೂನೋಃ ಸುಷೇಣಸ್ಯ–ಈ ಕರ್ಣನ ಮಗನಾದ ಸುಷೇಣನ, ಶಿರಃ ಚಕರ್ತ – ಶಿರಸ್ಸನ್ನು ಕತ್ತರಿಸಿದರು. ಸಃ – ಆವನು, ಅಮುನೈವ – ಈ ಭೀಮನಿಂದಲೇ, ಹತಃ ಸತ್ಯಸೇನಃ ಯಥಾ (ತಥಾ) – ಸಂಹರಿಸಲ್ಪಟ್ಟ ಸತ್ಯಸೇನನೆಂಬ ಮಗನು ಹೇಗೋ ಹಾಗೆ, ಪಿತುಃ ಸಮೀಪೇ – ತಂದೆಯಾದ ಕರ್ಣನ ಸಮೀಪದಲ್ಲಿ, ಭೂಮೌ ಪಪಾತ— ಭೂಮಿಯಲ್ಲಿ ಬಿದ್ದನು. ॥೬೦॥ ಪುರಾ–ಹಿಂದೆ, ನಿಶಾಯುದ್ಧೇ – ರಾತ್ರಿಯುದ್ಧದಲ್ಲಿ, ಕರ್ಣಾವರಜೌ — ಕರ್ಣನ ಇಬ್ಬರು ತಮ್ಮಂದಿರು, ಕರ್ಣಪುರಃ – ಏವ—ಕರ್ಣನ ಎದುರಿನಲ್ಲಿಯೇ (ಅಮುನಾಏವ) ಪ್ರಪಾತಿತೌ – ಈ ಭೀಮನಿಂದಲೇ ಬೀಳಿಸಲ್ಪಟ್ಟಿದ್ದರೋ(ಹಾಗೆಯೇ ಈಗ ಈ ಸುಷೇಣನು ಸಂಹರಿಸಲ್ಪಟ್ಟನು.) ವಿಕರ್ತನಾತ್ಮಜಃ – ಸೂರ್ಯಪುತ್ರನಾದ ಕರ್ಣನು, ಹತಂ ತಂ–ಸತ್ತಂಥ ತನ್ನ ಮಗನನ್ನು, ಈಕ್ಷ್ಯೈವ – ನೋಡಿಯೇ, ಕ್ರೋಧಾನ್ವಿತಃ ಸನ್— ಸಿಟ್ಟಿನಿಂದ ಕೂಡಿದವನಾಗಿ, ಭೀಮಸೇನಂ ವಿಹಾಯ – ಭೀಮಸೇನರನ್ನು ಬಿಟ್ಟಿ, ಚಮೂಂ – ಸೈನ್ಯವನ್ನು, ಪ್ರಮೃದ್ಯ – ಮರ್ದಿಸಿ, ಸ್ವಶ್ವಯುತೇ — ಶೀಘ್ರ ಕುದುರೆಗಳಿಂದ ಕೂಡಿದ, ಪರೇ ರಥೇ— ಇನ್ನೊಂದು ರಥದಲ್ಲಿ, ವ್ಯವಸ್ಥಿತಂ — ಕುಳಿತಿರುವ, ಯುಧಿಷ್ಠಿರಂ ಏವ— ಧರ್ಮರಾಜನ ಸಮೀಪಕ್ಕೆಯೇ, ಯಯೌ — ಹೋದನು. ಶಿನಿಪುತ್ರಪಾರ್ಷತೌ— ಸಾತ್ಯಕಿ ಧೃಷ್ಟದ್ಯುಮ್ನರು, ನ್ಯವಾರಯೇತಾಂ – ಕರ್ಣನನ್ನು ತಡೆದರು. ಸೋಮಕ ಸಂಘಯುಕ್ತಾಃ ಕೃಷ್ಣಾಸುತಾಃ – ಪಾಂಚಾಲಸೈನ್ಯದಿಂದ ಕೂಡಿದ ದ್ರೌಪದೀ ಪುತ್ರರು, (ನ್ಯವಾರಯನ್) — ತಡೆದರು. ~~ಸಃ – ಆ ಕರ್ಣನು, ತಾನ್ ಸಮಸ್ತಾನ್ – ಅವರೆಲ್ಲರನ್ನೂ, ವಿರಥಾನ್ ವಿಧಾಯ—ವಿರಥರನ್ನಾಗಿ ಮಾಡಿ,~~ ಯಮಾಭ್ಯಾಂ ಯುತಂ – ನಕುಲ ಸಹದೇವರಿಂದ ಕೂಡಿದ, ಯುಧಿಷ್ಠಿರಂ — ಧರ್ಮರಾಜನನ್ನು, ಪ್ರಾಪ — ಹೊಂದಿದನು, ॥೬೧॥೬೨॥

ನಿಹತ್ಯಸೋಶ್ವಾನ್ಯುಧಿಧರ್ಮಸೂನೋರ್ನಿರಾಯುಧೌ ತೌ ಚ ಯಮೌ ಚಕಾರ ॥
ತಾನೇಕಯಾನೋಪಗತಾನ್ಪುನಶ್ಚ ಮುಮರ್ದ ಬಾಣೈಶ್ಚವಚೋಭಿರುಗ್ರೈಃ ॥೬೩॥

ಸಃ – ಆ ಕರ್ಣನು, ಯುಧಿ – ಯುದ್ಧದಲ್ಲಿ, ಧರ್ಮಸೂನೋಃ – ಧರ್ಮರಾರ್ಜನ, ಅಶ್ವಾನ್ — ಕುದುರೆಗಳನ್ನು, ನಿಹತ್ಯ – ಕೊಂದು, ತೌ ಯಮೌ ಚ— ಅವಳಿಗಳಾದ ಮಾದ್ರಿನಂದನರನ್ನೂ ಕೂಡ, ನಿರಾಯುಧೌ — ಆಯುಧ ರಹಿತರನ್ನಾಗಿ, ಚಕಾರ – ಮಾಡಿದನು. ಪುನಃ— ಮತ್ತೆ, ಏಕಯಾನೋಪಗತಾನ್ — ಒಂದೇ ರಥದಲ್ಲಿ ಕುಳಿತು ಬಂದ ಅವರೆಲ್ಲರನ್ನು, ಉಗ್ರೈಃ ಬಾಣೈಃ – ಹದನವಾದ ಬಾಣಗಳಿಂದ, ಚ– ಮತ್ತು, ಉಗ್ರೈಃ ವಚೋಭಿಶ್ಚ – ಕ್ರೂರ ಮಾತುಗಳಿಂದಲೂ ಕೂಡ, ಮುಮರ್ದ— ಪೀಡಿಸಿದನು, ॥೬೩॥

ತದೈವಮೋಕ್ಷಾಯ ನೃಪಸ್ಯ ಭೀಮೋದುರ್ಯೋಧನಂವಿರಥಂ ಸಂವಿಧಾಯ ॥
ವಿವ್ಯಾಧ ಮರ್ಮಸ್ವತಿತೀಕ್ಷ್ಣಸಾಯಕೈಸ್ತಂ ದರ್ಶಯಾಮಾಸ ರವೇಃ ಸುತಾಯ ॥೬೪॥

ತದೈವ—ಆದೇ ಕಾಲದಲ್ಲಿ, ಭೀಮಃ – ಶ್ರೀಭೀಮರು, ನೃಪಸ್ಯ ಮೋಕ್ಷಾಯ — ಧರ್ಮರಾಜನ ಬಿಡುಗಡೆಗಾಗಿ, (ಕರ್ಣನಿಂದ ಬಿಡಿಸುವದಕ್ಕಾಗಿ), ದುರ್ಯೋಧನಂ ವಿರಥಂ ಸಂವಿಧಾಯ–ದುರ್ಯೋಧನನನ್ನು ರಥಹೀನನನ್ನಾಗಿಸಿ, ಮರ್ಮಸು–ಮರ್ಮಸ್ಥಾನಗಳಲ್ಲಿ, ಅತಿತೀಕ್ಷ್ಣಸಾಯಕೈಃ – ಚೂಪಾದ ಬಾಣಗಳಿಂದ, ವಿವ್ಯಾಧ— ಹೊಡೆದರು. (ಶಲ್ಯಃ— ಶಲ್ಯನು) ತಂ— ಆ ದುರ್ಯೋಧನನನ್ನು, ರವೇಃ ಸುತಾಯ — ಸೂರ್ಯಪುತ್ರ ಕರ್ಣನಿಗೆ, ದರ್ಶಯಾಮಾಸ— ತೋರಿಸಿದನು. ॥೬೪॥

ಶಲ್ಯಸ್ತದಾ ಧರ್ಮಸುತಂ ವಿಹಾಯ ಕರ್ಣೋ ಯಯೌ ತತ್ರ ಯುಧಿಷ್ಠಿರೋಪಿ ।
ಗತ್ವಾ ಶನೈಃ ಶಿಬಿರಂ ತತ್ರ ಶಿಶ್ಯೇ ಕರ್ಣೋ ಯದಾ ರಾಜಗೃದ್ಧೀ ಜಗಾಮ ॥೮೫॥

ಯದಾ–ಯಾವಾಗ, ರಾಜಗೃದ್ಧೀ–ರಾಜನಾದ ದುರ್ಯೋಧನನ ರಕ್ಷಣಾಕಾಂಕ್ಷಿಯಾದ ಕರ್ಣನು, ಧರ್ಮಸುತಂ ವಿಹಾಯ–ಧರ್ಮರಾಜನನ್ನು ಬಿಟ್ಟು, ತತ್ರ ಯಯೌ — ದುರ್ಯೋಧನನು ಇರುವಲ್ಲಿಗೆ ಹೋದನೋ, ತದಾ—ಆಗ, ಯುಧಿಷ್ಠಿರಃ ಅಪಿ – ಧರ್ಮರಾಜನೂ ಕೂಡ, ಶಿಬಿರಂ–ಶಿಬಿರಕ್ಕೆ, ಶನೈಃ ಜಗಾಮ – ಮೆಲ್ಲನೇ ಹೋದನು, ಗತ್ವಾ—ಹೋಗಿ ತತ್ರ–ಅಲ್ಲಿ, ಶಿಶ್ಯೇ – ವಿಶ್ರಾಂತಿಗಾಗಿ ಮಲಗಿದನು. ॥೮೫॥

ಭಾ. ಅ. ೬೬–೮೫ ನಂತರ ಶ್ರೀ ಅಶ್ವತ್ಥಾಮಾಚಾರ್ಯರು ಪಾಂಡವಸೇನೆಯನ್ನು ಓಡಿಸಿದರು, ಆಗ ಅರ್ಜುನನು ಪ್ರಾಗಧ ದೇಶದ ವೀರ ದಂಡಧಾರನೆಂಬವನನ್ನು ಕೊಂದನು. ಪಾಂಡವರ ಸೈನ್ಯವು ಓಡುತ್ತಿರುವದನ್ನು ನೋಡಿದ ಧೃಷ್ಟದ್ಯುಮ್ನನು ವೇಗವಾಗಿ ಬಂದನು. ಆಗ ಅಶ್ವತ್ಥಾಮರು 'ಬಾ' ಗುರು ಹಂತಕನಾದ, ಪಾಪಿಯಾದ ನಿನ್ನನ್ನು ಕೊಂದೇ ಹಾಕುತ್ತೇನೆ ಎಂದು ಹೇಳಿದಾಗ, ಧೃಷ್ಟದ್ಯುಮ್ನನು ಖಡ್ಗವನ್ನು ಝಳಪಳಿಸುತ್ತಾ ನಿನ್ನ ತಂದೆಯನ್ನು ಕೊಂದ ಈ ಧೃಷ್ಟದ್ಯುಮ್ನನು ನಿನಗೆ ಉತ್ತರವನ್ನು ಹೇಳುವನು ಎಂದು ಹೇಳಿದನು. ಇಬ್ಬರೂ ಘೋರಯುದ್ಧ ಮಾಡಿದರು. ಧೃಷ್ಟದ್ಯುಮ್ನನು ರಥ ಆಯುಧಗಳಿಂದ ಹೀನನಾದನು. ಅವನನ್ನು ಕೊಂದೇಬಿಡಬೇಕೆಂದು ಬಾಣಗಳನ್ನು ಪ್ರಯೋಗಿಸಿದರೂ ಅವು ಅವನ ಚರ್ಮವನ್ನೂ ಕೂಡ ಸೀಳದಿರುವಾಗ ಖಡ್ಗಧಾರಿಯಾಗಿ ಬಂದು ಧೃಷ್ಟದ್ಯುಮ್ನನಿಗೆ ಹೊಡೆದಾಗಲೂ ಚರ್ಮಭೇದನ ವಾಗದಿರಲು, ಬಿಲ್ಲಿನ ಹಗ್ಗವನ್ನು ಕೊಳ್ಳಲ್ಲಿ ಹಾಕಿ, ಜಗ್ಗಿ, ಭೂಮಿಯಲ್ಲಿ ಕೆಡವಿ ಎಳೆಯುತ್ತಿರುವಾಗ ಶ್ರೀಕೃಷ್ಣನಿಂದ ಪ್ರೇರಿತ ರಾದ ಭೀಮಾರ್ಜುನರು ಎರಡೂ ಬದಿಗಳಿಂದಲೂ ಬಾಣಗಳಿಂದ ಅಶ್ವತ್ಥಾಮನಿಗೆ ಹೊಡೆದರು. ಆಗ ಆ ಪೆಟ್ಟುಗಳನ್ನು ಸಹಿಸದೇ, ಧೃಷ್ಟದ್ಯುಮ್ನನನ್ನು ಬಿಟ್ಟು ತನ್ನ ರಥವನ್ನೇರಿದನು. ಧೃಷ್ಟದ್ಯುಮ್ನನೂ ಕೂಡ ಬೇರೆ ರಥವನ್ನೇರಿ ಬೇರೆ ಕಡೆಗೆ ಯುದ್ಧಕ್ಕೆ ಹೊರಟು ಕೃತವರ್ಮನನ್ನು ಎದುರಿಸಿದನು. ಆಗಲೂ ಘೋರಯುದ್ಧವಾಗಿ ಅದರಲ್ಲಿ ಅನಾಯಸವಾಗಿ ಕೃತವರ್ಮನನ್ನು ರಥ ಆಯುಧಗಳಿಂದ ಹೀನನನ್ನಾಗಿ ಮಾಡಿದನು. ಕೃಪಾಚಾರ್ಯರು ಅವನನ್ನು ದೂರಕ್ಕೆ ಕರೆದೊಯ್ದರು. ನಂತರ ದುರ್ಯೋಧನನು ನಕುಲ-ಸಹದೇವರ ಜೊತೆಗೆ ಯುದ್ಧಿಸುತ್ತಾ ಅವರ ರಥಗಳನ್ನು ನಾಶಪಡಿಸಿದನು. ಸ್ವಯಂ ಧರ್ಮರಾಜನು ಯುದ್ಧಕ್ಕೆ ಬಂದಾಗ ದುರ್ಯೋಧನನು ಅವನ ಕುದುರೆಗಳನ್ನು ಸಾರಥಿಯನ್ನು ಸಂಹರಿಸಿ, ರಥ ಧ್ವಜವನ್ನು ಹಾರಿಸಿದನು. ಇನ್ನೊಂದೆಡೆಗೆ ಕರ್ಣನು ಪುನಃ ಭೀಮರ ಕಡೆಗೆ ಯುದ್ಧಕ್ಕೆ ಬಂದಾಗ ಅವನನ್ನು, ಅವನ ಎದುರೇ ದುರ್ಯೋಧನನನ್ನೂ ಕೂಡ ವಿರಥರನ್ನಾಗಿ ಮಾಡಿ, ಕರ್ಣನ ಮಗನಾದ ಸುಷೇಣನ ತಲೆಯನ್ನು ಕತ್ತರಿಸಿದರು. ಅವನು ಅಪ್ಪನ ಎದುರೇ ಸತ್ತನು. ಇದೇ ಭೀಮರು ಈ ಹಿಂದೆ ಸತ್ಯಸೇನ ಎಂಬ ಕರ್ಣಪುತ್ರನನ್ನು. ಹಾಗೂ ನಿಶಾಯುದ್ಧದಲ್ಲಿ ಕರ್ಣನ ತಮ್ಮಂದಿರಿಬ್ಬರನ್ನೂ ಕರ್ಣನ ಸಮಕ್ಷದಲ್ಲಿಯೇ ಕೊಂದಿದ್ದರು. ಈಗ ಈ ಸುಷೇಣ ಸತ್ತಾಗ ಕರ್ಣನಿಗೆ ಸಿಟ್ಟು ಬಂದರೂ ಏನೂ ಮಾಡ-ಲಾಗದೇ ಅವರ ಜೊತೆಗೆ ಯುದ್ಧವನ್ನು ಬಿಟ್ಟು ಬೇರೆಡೆಗೆ ಹೋದನು. ಅಲ್ಲಿ ಸೈನ್ಯವನ್ನು ಮರ್ದಿಸಿದನು. ಹೊಸ ರಥದಲ್ಲಿ ಬಂದ ಧರ್ಮರಾಜನ ಸಮೀಪಕ್ಕೆ ಬರುತ್ತಿರುವಾಗ, ಸಾತ್ಯಕಿ, ಧೃಷ್ಟದ್ಯುಮ್ನ, ದ್ರೌಪದಿಪುತ್ರರು. ಪಾಂಚಾಲ ಸೈನಿಕರು ತಡೆದರು; ಅವರೆಲ್ಲರ ರಥಗಳನ್ನು ಕರ್ಣನು ನಾಶಪಡಿಸಿ ಧರ್ಮರಾಜನ ಹತ್ತಿರಕ್ಕೆ ಬಂದಾಗ ನಕುಲಸಹದೇವರೂ ಇದ್ದರು. ಧರ್ಮರಾಜನ ಕುದುರೆಗಳನ್ನು ಕೊಂದನು; ಮಾದ್ರೇಯರನ್ನು ಆಯುಧ ಹೀನರನ್ನಾಗಿ ಮಾಡಿದನು. ಆಗ ಮೂವರೂ ಒಂದೇ ರಥದಲ್ಲಿ ಕುಳಿತು ಪುನಃ ಯುದ್ಧಕ್ಕೆ ಬಂದಾಗ ಅವರಿಗೆಲ್ಲ ಹದನವಾದ ಬಾಣಗಳನ್ನು ಬಿಟ್ಟು ಪೀಡಿಸಿದನು, ಕ್ರೂರ ಮಾತುಗಳನ್ನು ಹೇಳಿದನು. ಈ ಕಷ್ಟದಿಂದ ಧರ್ಮರಾಜನನ್ನು ಬಿಡಿಸಲು, ಭೀಮರು ಕೂಡಲೇ ದುರ್ಯೋಧನನ ರಥವನ್ನು ನಾಶಮಾಡಿ, ಅವನ ಮರ್ಮಸ್ಥಾನದಲ್ಲಿ ಜೋಪಾದ ಬಾಣಗಳಿಂದ ಹೊಡೆದರು. ಆಗ ನೋವನ್ನನುಭವಿಸುವ ದುರ್ಯೋಧನನನ್ನು ಕರ್ಣನಿಗೆ ಶಲ್ಯನೇ ಪುನಃ ತೋರಿಸಿದಾಗ, ಅವನನ್ನು ರಕ್ಷಿಸಲೆಂದು ಕರ್ಣನು ಧರ್ಮಾದಿಗಳನ್ನು ಬಿಟ್ಟು ದುರ್ಯೋಧನನ ಕಡೆಗೆ ಬಂದಾಗ ಧರ್ಮರಾಜನು ಮೆಲ್ಲನೆ ಶಿಬಿರಕ್ಕೆ ಹೋಗಿ ವಿಶ್ರಾಂತಿಗಾಗಿ ಮಲಗಿದನು.

ದ್ರೌಣಿಃ ಕೃಪಶ್ಚಾತ್ರ ತದೈವ ಜಗ್ಮತುಸ್ತದಾ ಭೀಮೋದ್ರೌಣಿಕರ್ಣೌ ಜಗಾಮ ।
ಕೃಪೋನೃಪಂ ರಥಮಾರೋಪಯಚ್ಚವಿದ್ಧಂ ಶರೈರ್ಭೀಮಬಾಹು ಪ್ರಮುಕ್ತೈಃ ॥೮೬॥

ದ್ರೌಣಃ— ಅಶ್ವತ್ಥಾಮರು, ಕೃಪಶ್ಚ— ಕೃಪರೂ ಕೂಡ, ತದಾಏವ – ಆ ಸಮಯದಲ್ಲಿಯೇ, ಜಗ್ಮತುಃ— (ದುರ್ಯೋಧನನಿರುವ ಸ್ಥಳಕ್ಕೆ) ಹೊರಟರು, ತದಾ— ಆಗ, ಭೀಮಃ – ಶ್ರೀ ಭೀಮರು, ದ್ರೌಣಿಕರ್ಣೌ – ಅಶ್ವತ್ಥಾಮ ಕರ್ಣರನ್ನು, ಜಗಾಮ– ಹೊಂದಿದರು, ಕೃಪಃ – ಕೃಪಾಚಾರ್ಯರು, ಭೀಮಬಾಹುಪ್ರಮುಕ್ತೈಃಶರೈಃವಿದ್ಧಂ– ಭೀಮರಿಂದ ಬಿಡಲ್ಪಟ್ಟ ಬಾಣಗಳಿಂದ ಪೀಡಿತನಾದ, ನೃಪಂ – ದುರ್ಯೋಧನನನ್ನು, ರಥಂ ಆರೋಪಯತ್ – ರಥದಲ್ಲಿ ಏರಿಸಿ ಕೊಂಡರು. ॥೮೬॥

ನೃಪಂ ಸಮಾದಾಯ ಕೃಪೇಽಪಯಾತೇ ಭೀಮಾರ್ದಿತೌ ದ್ರೌಣಿಕರ್ಣೌ ಶರೌಘೈಃ ।
ವಿಹಾಯ ತಂ ಜಗ್ಮತುಸ್ಸೋಮಕಾನಾಂ ಚಮೂಂ ಶರೌಘೈ ರಭಿಪಾತಯಂತೌ ॥೮೭॥

ಕೃಪೇ – ಕೃಪಾಚಾರ್ಯರು, ನೃಪಂ ಸಮಾದಾಯ–ದುರ್ಯೋಧನನನ್ನು ಕರೆದುಕೊಂಡು, ಅಪಯಾತೇ ಸತಿ – ಹಿಂದೆ ಹೋಗುತ್ತಿರಲು, ಶರೌಘೈಃ– ಬಾಣ ಸಮೂಹಗಳಿಂದ, ಭೀಮಾರ್ದಿತೌ – ಶ್ರೀಭೀಮಸೇನದೇವರಿಂದ ಪೀಡಿತರಾದ, ದ್ರೌಣಿ–ಕರ್ಣೌ – ಅಶ್ವತ್ಥಾಮಕರ್ಣರು, ತಂ – ಆ ಭೀಮರನ್ನು, ವಿಹಾಯ – ಬಿಟ್ಟು, ಸೋಮಕಾನಾಂ – ಪಾಂಚಾಲ ದೇಶದವರ, ಚಮೂಂ – ಸೈನ್ಯವನ್ನು ಕುರಿತು, ಶರೌಘೈಃ – ಬಾಣಸಮೂಹಗಳಿಂದ, ವೀರಾನ್ ಅಭಿಪಾತಯಂತೌ – ವೀರರನ್ನು ಚೆನ್ನಾಗಿ ಕೆಡುವುವವರಾಗಿ. ಜಗ್ಮತುಃ – ಹೊರಟರು. ॥೮೭॥

ಅಥಾತ್ರ ರಾಜಾನ ಮಚಕ್ಷಮಾಣೋ ಧನಂಜಯೋ ವಾಸುದೇವ ಪ್ರನುನ್ನಃ ।
ಅಭ್ಯಾಯಯೌ ಪಾರ್ಷತಃ ಸ್ವಾಂತುಸೇನಾಂ ಕರ್ಣಾರ್ದಿತಾಂ ವೀಕ್ಷ್ಯ ಕುರೂನಪೀಡಯತ್ ॥೮೮॥

ಅಥ – ಇದರ ನಂತರ, ರಾಜಾನಂ – ಧರ್ಮರಾಜನನ್ನು, ಅಚಕ್ಷಮಾಣಃ – ಯುದ್ಧಭೂಮಿಯಲ್ಲಿ ಕಾಣದಿರುವ ಧನಂಜಯಃ – ಅರ್ಜುನನು, ವಾಸುದೇವಪ್ರನುನ್ನಃಸನ್ –ಶ್ರೀಕೃಷ್ಣನಿಂದ ಪ್ರೇರಿತನಾಗಿ, (ಶಿಬಿರಂ ಗತ್ವಾ ಆಗತ್ಯ) ಅಭ್ಯಾ-

---

ಯಯೌ –ಶಿಬಿರಕ್ಕೆ ಹೋಗಿಬಂದು ಶತ್ರುಸೈನ್ಯದ ಮೇಲೆ ಏರಿಹೋದನು. ಪಾರ್ಷತಃ – ಧೃಷ್ಟದ್ಯುಮ್ನನು, ಸ್ವಾಂ ಸೇನಾಂ– ತನ್ನ (ಪಾಂಚಾಲ) ಸೈನ್ಯವನ್ನು, ಕರ್ಣಾರ್ದಿತಾಂ – ಕರ್ಣನಿಂದ ಚೆನ್ನಾಗಿ ಪೀಡಿತವಾದದ್ದನ್ನಾಗಿ, ವೀಕ್ಷ್ಯ – ನೋಡಿ, ಕುರೂನ್ – ಕೌರವ ಸೈನ್ಯವನ್ನು, ಅಪೀಡಯತ್ – ಪೀಡಿಸಿದನು. ॥೮೮॥

ನ್ಯವಾರಯತ್ಸಮಾಯಾಂತಂ ಕಪಿಪ್ರವರಕೇತನಂ ।
ದ್ರೌಣಿರ್ದುಶ್ಶಾಸನಶ್ಚೈವ ಧೃಷ್ಟದ್ಯುಮ್ನ ಮವಾರಯತ್ ॥೮೯॥

ದ್ರೌಣಿಃ—ಅಶ್ವತ್ಥಾಮರು, ಸಮಾಯಾಂತಂ – ತಮ್ಮ ಮೇಲೆ ಏರಿಬರುತ್ತಿದ್ದ, ಕಪಿಪ್ರವರಕೇತನಂ – ಕಪಿಧ್ವಜ ಉಳ್ಳ ಅರ್ಜುನನನ್ನು, ನ್ಯವಾರಯತ್ – ತಡೆದರು. ಚ–ಹಾಗು, ದುಶ್ಶಾಸನಃಏವ—ದುಶ್ಶಾಸನನೇ, ಧೃಷ್ಟದ್ಯುಮ್ನಂ—ಧೃಷ್ಟದ್ಯುಮ್ನನನ್ನು, ಅವಾರಯತ್ – ತಡೆದನು. ॥೮೯॥

ಉಭಾವತಿರಥೌ ತೌತು ಶಸ್ತ್ರಾಸ್ತ್ರೈ ರಭ್ಯವರ್ಷತಾಂ ॥
ದುಶ್ಶಾಸನ ಃ ಪಾರ್ಷತಶ್ಚ ಕುರ್ವಂತೌ ಬಾಣಜಂ ತಮಃ ॥೯೦॥

ತತ್ರ ದುಶ್ಶಾಸನೇನಾಜೌ ಸ್ತಂಭಿತೋದ್ಯುಪದಾತ್ಮಜಃ ॥
ಯತನೂನೋಽಪಿ ನಿರ್ಯತ್ನಃ ಕೃತೋಯದ್ಧೇ ನಿರಾಯುಧಃ ॥೯೧॥

ಅತಿರಥೌ – ಮಹಾರಥರಾದ, ಬಾಣಜಂ ತಮಃ– ಬಾಣಗಳಿಂದುಂಟಾದ ಕತ್ತಲೆಯನ್ನು, ಕುರ್ವಂತೌ ಮಾಡುತ್ತಿದ್ದ, ತೌ ದುಶ್ಶಾಸನಃ ಪಾರ್ಷತಶ್ಚ –ಆ ದುಶ್ಶಾಸನ ಧೃಷ್ಟದ್ಯುಮ್ನರಿಬ್ಬರು, ಶಸ್ತ್ರಾಸ್ತ್ರೈಃ–ಶಸ್ತ್ರಾಸ್ತ್ರಗಳಿಂದ, ಅಭ್ಯವರ್ಷತಾಂ

ಚೆನ್ನಾಗಿ ಸುರಿಮಳೆಮಾಡಿದನು. ತತ್ರ ಆಜೌ – ಆ ಯುದ್ಧದಲ್ಲಿ, ದ್ರುಪದಾತ್ಮಜಃ – ಧೃಷ್ಟದ್ಯುಮ್ನನು, ಯುದ್ಧೇ ಯತಮಾನಃ ಅಪಿ - ಯುದ್ಧದ ಬಗ್ಗೆ ಪ್ರಯತ್ನಿಸುತ್ತಿದ್ದರೂ ಕೂಡ, ದುಶ್ಶಾಸನೇನ—ದುಶ್ಶಾಸನನಿಂದ, ಸ್ತಂಭಿತಃ—ಏನೂ ತಿಳಿಯದಂತೆ ಮಾಡಲ್ಪಟ್ಟನು. ನಿರ್ಯತ್ನನಿರಾಯುಧಃ ಕೃತಃ– ಪ್ರಯತ್ನರಹಿತನಾಗಿಯೂ, ಆಯುಧ ರಹಿತನಾಗಿಯೂ ಮಾಡಲ್ಪಟ್ಟನು ॥೯೦-೯೧॥

ತದಾಭವದ್ಯುದ್ಧ ಮತೀವದಾರುಣಂ ದ್ರೌಣೇಸ್ತನೂಜೇನ ತುವಜ್ರಪಾಣೇಃ ॥
ತತ್ರಾಪಿ ಬದ್ಧಃ ಶರಪಂಜರೇಣ ಪಾರ್ಥೋಽಪನುತ್ತ್ಯಾsಪಿಹಿ ಗಾಂಡಿವಜ್ಯಾ ॥೯೨॥

ತದಾ - ಆಗ, ದ್ರೌಣೇ ಃ— ಅಶ್ವತ್ಥಾಮರಿಗೆ, ವಜ್ರಪಾಣೇಃ ತನೂಜೇನ (ಸಹ) – ವಜ್ರಾಯುಧಧಾರಿ ಇಂದ್ರನ ಅವತಾರನಾದ ಅರ್ಜುನನಿಂದ (ಕೂಡಿಕೊಂಡು), ಅತೀವದಾರುಣಂ – ಯುದ್ಧಂ ತು— ಬಹಳ ಭಯಂಕರವಾದ ಯುದ್ಧವು, ಅಭವತ್ – ಆಯಿತು, ತತ್ರಾಪಿ – ಆ ಯುದ್ಧದಲ್ಲಿಯೂ ಕೂಡ, ಪಾರ್ಥ ಃ – ಅರ್ಜುನನು, ಶರಪಂಜರೇಣ ಬದ್ಧಃ – ಬಾಣಸಮೂಹದಿಂದ ಕಟ್ಟಲ್ಪಟ್ಟನು. ಗಾಂಡಿವಜ್ಯಾ ಅಪಿ— ಗಾಂಡೀವದ ಜ್ಯಾ ಕೂಡ – ಅಪನುತ್ತ್ಯಾಹಿ – ಕತ್ತರಿಸಲ್ಪಟಿತು, ॥೯೨॥

ಪಾರ್ಥೋಽಥ ಕೃಷ್ಣೇಧಿತ ಬಾಹುವೀರ್ಯೋ ನಿಹತ್ಯ ಸೂತಂ ಗುರುಪುತ್ರಕಸ್ಯ ।
ಭಿತ್ವಾಚ ರಶ್ಮೀಂಸ್ತುರಗಾನಮುಷ್ಯ ವಿದ್ರಾವಯಾಮಾಸ ಶರೈಸ್ಸುದೂರಮ್ ॥೯೩॥

ಅಥ–ಹೀಗೆ ಅರ್ಜುನನು ಬಂಧಿಸಲ್ಪಟ್ಟನಂತರ, ಕೃಷ್ಣೇಧಿತಬಾಹುವೀರ್ಯಃ ಪಾರ್ಥಃ–(ಹಿಂದಿನಂತೆ) ಕೃಷ್ಣಾಲಿಂಗನದಿಂದ ಅಭಿವೃದ್ಧವಾದ ಬಾಹು ಪರಾಕ್ರಮವುಳ್ಳ ಅರ್ಜುನನು, ಗುರುಪುತ್ರಕಸ್ಯ – ಗುರುಪುತ್ರನಾದ ಅಶ್ವತ್ಥಾಮನ, ಸೂತಂ– ~~ಸಾರಥಿಯನ್ನು! ನಿಹತ್ಯ – ಕೊಂದು, ರಶ್ಮೀಂಶ್ಚ –ಕುದುರೆಯ ಹಗ್ಗಗಳನ್ನೂ ಕೂಡ, ಶರೈಃ – ಬಾಣಗಳಿಂದ, ಭಿತ್ವಾ –ಕತ್ತರಿಸಿ,~~ ಅಮುಷ್ಯ ತುರಗಾನ್ — ಅಶ್ವತ್ಥಾಮರ ಕುದುರೆಗಳನ್ನು, ಸುದೂರಂ – ಬಹಳದೂರಕ್ಕೆ, ವಿದ್ರಾವಯಾಮಾಸ — ಓಡಿಸಿದನು. ॥೯೩॥

ಆತೀತ್ಯ ಪುತ್ರಂ ತುಂ ಗುರೋಸ್ಸಮಾಗತೇ ಪಾರ್ಥೇ ಕರ್ಣೋದ್ರಾವಯಾಮಾಸಸೇನಾಂ ।
ಪಾಂಡೋಸ್ಸುತಾನಾಂ ಶರವರ್ಷಧಾರೋ ದುರ್ಯೋಧನಶ್ಚಾನುಯಯೌ ತಮೇವ ॥೯೪॥

ಪಾರ್ಥೇ— ಅರ್ಜುನನು, ಗುರೋಃ ಪುತ್ರಂ— ಗುರುಪುತ್ರನಾದ ಅಶ್ವತ್ಥಾಮರನ್ನು, ತು ಅತೀತ್ಯ ಸಮಾಗತೇ ಸತಿ– ದಾಟಿ (ಯುದ್ಧಸಾಮರ್ಥ್ಯದಲ್ಲಿ ಚೆನ್ನಾಗಿಮೀರಿ) ಬರುತ್ತಿರಲು, ಕರ್ಣಃ— ಕರ್ಣನು, ಶರವರ್ಷಧಾರಃ ಸನ್— ಬಾಣಗಳಸುರಿಮಳೆ ಮಾಡುವವನಾಗಿ, ಪಾಂಡೋಃ ಸುತಾನಾಂ – ಪಾಂಡವರ, ಸೇನಾಂ–ಸೈನ್ಯವನ್ನು, ದ್ರಾವಯಾಮಾಸ — ಓಡಿಸಿದನು. ದುರ್ಯೋಧನಶ್ಚ– ದುರ್ಯೋಧನನೂಕೂಡ, ತಮೇವ – ಅನುಯಯೌ– ಆ ಕರ್ಣನನ್ನೇ ಅನುಸರಿಸಿ – ಹೋದನು. ॥೯೪॥

ಕರ್ಣಮಾಯಾಂತ ಮಾಲೋಕ್ಯ ದ್ರಾವಯಂತಂ ನಿಜಾಂಚಮೂಂ ।
ಧನುರನ್ಯತ್ಸಮಾದಾಯ ಧೃಷ್ಟದ್ಯುಮ್ನೋನ್ಮಿವಾರಯತ್ ॥೯೫॥

ತಯೋರಾಸೀನ್ಮಹದ್ಯುದ್ಧಂ ಚಿರಂ ಸಮಮವಿಶ್ರಮಮ್ ॥
ತದೈವ ಸಾತ್ಯಕಿರ್ವೀರೋದುರ್ಯೋಧನ ಮವಾರಯತ್ ॥೯೬॥

ನಿವಾರಿತಃ ಸಾತ್ಯಕಿನಾ ರಣೇ ದುರ್ಯೋಧನೋನೃಪಃ ।
ನಿಹತ್ಯ ಸಾತ್ಯಕೇರಶ್ವಾನ್ ದ್ರೌಪದೇಶ್ಚಾಪಮಾಚ್ಛಿನತ್ ॥೯೭॥

ತದಂತರೈವ ಕರ್ಣೋಪಿ ಪಾರ್ಷತಾಶ್ವಾನಪಾತಯತ್ ।
ತಯೋರ್ವಿರಥಯೋರೇವಂ ಭಗ್ನಂ ತತ್ಪಾಂಡವಂಬಲಂ ॥೯೮॥

ಧೃಷ್ಟದ್ಯುಮ್ನಃ - ಧೃಷ್ಟದ್ಯುಮ್ನನು, ಕರ್ಣಂ - ಕರ್ಣನನ್ನು, ಆಯಾಂತಂ— ಬಂದವನನ್ನಾಗಿ, ನಿಜಾಂ ಚಮೂಂ ದ್ರಾವಯಂತಂ - ತನ್ನ ಸೈನ್ಯವನ್ನು ಓಡಿಸುತ್ತಿದ್ದವನನ್ನಾಗಿ, ಆಲೋಕ್ಯ-ನೋಡಿ, ಅನ್ಯತ್ ಧನುಃ - ಮತ್ತೊಂದು ಬಿಲ್ಲನ್ನು ಸಮಾದಾಯ:— ತೆಗೆದುಕೊಂಡು ಬಂದು, ನ್ಯವಾರಯತ್ - ತಡೆದನು. ॥೯೫॥ ತಯೋಃ— ಅವರಿಬ್ಬರಿಗೆ, ಚಿರಂ - ಬಹಳಸಮಯದವರೆಗೆ, ಸಮಂ—ಸಮಾನವಾದ(ಜಯಾಪಜಯವಿಲ್ಲದ)ಅವಿಶ್ರಮಂ - ವಿಶ್ರಾಂತಿ ಇಲ್ಲದ, ಮಹತ್ಯುದ್ಧಂ- ಶ್ರೇಷ್ಠಯುದ್ಧವು, ಆಸೀತ್— ಆಯಿತು. ತದಾಏವ— ಆ ವೇಳೆಯಲ್ಲಿಯೇ, ವೀರಃ ಸಾತ್ಯಕಿಃ - ಪರಾಕ್ರಮಿಯಾದ ಸಾತ್ಯಕಿಯು, ದುರ್ಯೋಧನಂ—ದುರ್ಯೋಧನನನ್ನು,ಅವಾರಯತ್ - ತಡೆದನು. ॥೯೬॥ ರಣೇ - ಯುದ್ಧದಲ್ಲಿ, ಸಾತ್ಯಕಿನಾ- ಸಾತ್ಯಕಿಯಿಂದ, ನಿವಾರಿತಃ— ತಡೆಯಲ್ಪಟ್ಟ, ನೃಪಃ ದುರ್ಯೋಧನಃ— ರಾಜನಾದ ದುರ್ಯೋಧನನು, ಸಾತ್ಯಕೇಃಅಶ್ವಾನ್- ಸಾತ್ಯಕಿಯ ಕುದುರೆಗಳನ್ನು, ನಿಹತ್ಯ —ಕೊಂದು, ದ್ರೌಪದೇಃ ಚಾಪಂ— ಧೃಷ್ಟದ್ಯುಮ್ನನ ಬಿಲ್ಲನ್ನು, ಆಚ್ಛಿನತ್ - ಕತ್ತರಿಸಿದನು. ॥೯೭॥ ತದಂತರಾಏವ—ಆ ಅವಕಾಶದಲ್ಲಿಯೇ,ಕರ್ಣಃ ಅಪಿ - ಕರ್ಣನೂಕೂಡ, ಪಾರ್ಷತಾಶ್ವಾನ್-ಧೃಷ್ಟದ್ಯುಮ್ನನ ಕುದುರೆಗಳನ್ನು, ಅಪಾತಯತ್ - ಕೆಡಹಿದನು. ಏವಂ—ಹೀಗೆ, ತಯೋಃ - ಸಾತ್ಯಕಿ ಧೃಷ್ಟದ್ಯುಮ್ನರಿಬ್ಬರೂ, ವಿರಥಯೋಃ ಸತೋಃ - ರಥಹೀನರಾಗುತ್ತಿರಲು, ತತ್ ಪಾಂಡವಂ ಬಲಂ - ಆ ಪಾಂಡವಸೈನ್ಯವು, ಭಗ್ನಂ— ನಷ್ಟವಾಯಿತು. (ಕೆಲವು ಸೈನ್ಯವು ಸತ್ತಿತು, ಕೆಲವು ಓಡಿತು.) ॥೯೮॥

ಬಲಂಸ್ವಕೀಯಂ ಬಹುಧಾವಿಭಿನ್ನಂ ಸಮೀಕ್ಷ್ಯಭೀಮೋ ಮೃಗರಾಜಕೇತುಃ ॥
ಕೃತ್ವಾಧರಾಕಂಪಕಮುಗ್ರನಾದಂ ರಣೇಽಭ್ಯಯಾತ್ಕೌರವರಾಜಸೈನ್ಯಂ ॥೯೯॥

ಮೃಗರಾಜಕೇತುಃ ಭೀಮಃ- ಸಿಂಹಧ್ವಜರಾದ ಶ್ರೀಭೀಮರು, ಸ್ವಕೀಯಂ ಬಲಂ - ತಮ್ಮ ಸೈನ್ಯವನ್ನು, ಬಹುಧಾ ವಿಭಿನ್ನಂ— ಬಹುನಷ್ಟವಾದದ್ದನ್ನಾಗಿ, ಸಮೀಕ್ಷ್ಯ — ನೋಡಿ, ಧರಾಕಂಪಕಂ ಉಗ್ರನಾದಂ — ಭೂಮಿಯನ್ನು ನಡುಗಿಸಬಲ್ಲ ಭಯಂಕರ ಧ್ವನಿಯನ್ನು, ಕೃತ್ವಾ—ಮಾಡಿ, ರಣೇ-ಯುದ್ಧದಲ್ಲಿ, ಕೌರವರಾಜಸೈನ್ಯಂ-ಕೌರವಸೈನ್ಯದಮೇಲೆ, ಅಭ್ಯಯಾತ್- ಏರಿ ಹೋದರು. ॥೯೯॥

ನಾದೇನಬಾಣೈಶ್ಚವೃಕೋದರೇಣಭಗ್ನಂ ತದಾಕೌರವಸೈನ್ಯಮಾಶು ॥
ದಿಶೋವಿದುದ್ರಾವ ಸುಯೋಧನೋಽಪಿ ಕೃತೋರಣೇ ತೇನ ವಿವಾಹನಾಯುಧಃ ॥೧೦೦॥

ತದಾ – ಆಗ, ಕೌರವಸೈನ್ಯಂ— ಕೌರವಸೈನ್ಯವು, ವೃಕೋದರೇಣ— ಶ್ರೀ ಭೀಮರಿಂದ, ನಾದೇನ—ಗರ್ಜನಧ್ವನಿಯಿಂದ, ಚ – ಮತ್ತು ಬಾಣೈಃ – ಬಾಣಗಳಿಂದ, ಆಶು ಭಗ್ನಂ – ಕೂಡಲೇ ನಷ್ಟವಾಯಿತು ದಿಶಃ ವಿದುದ್ರಾವ, ದಿಕ್ಕು ದಿಕ್ಕಿಗೆ ಓಡಿತು. ಸುಯೋಧನಃ ಅಪಿ – ದುರ್ಯೋಧನನೂ ಕೂಡ, ತೇನ— ಭೀಮರಿಂದ, ರಣೇ— ಯುದ್ಧದಲ್ಲಿ ವಿವಾಹನಾಯುಧಃ – ವಾಹನ ಆಯುಧವಿಲ್ಲದವನಾಗಿ, ಕೃತಃ – ಮಾಡಲ್ಪಟ್ಟನು. ॥೧೦೦॥

ದೃಷ್ಟ್ವೈವತತ್ಪಾಂಡವಾನಾಂಚ ಸೇನಾಸಮಾವೃತ್ತಾತ್ಕ್ಷಿಪ್ರಮುವಾಕ್ಯವಿಕ್ರಮಾ ॥
ತಯಾ ಪುನಃ ಕೌರವಾಣಾಂ ಬಲಂ ತದ್ಭಗ್ನಂದೂರಾದ್ದೂರತರಂ ಪ್ರದುದ್ರುವೇ ॥೧೦೧॥

ಅವಾರ್ಯ ವಿಕ್ರಮಾ— ತಡೆಯಲಸಾಧ್ಯವಾದ ಪರಾಕ್ರಮವುಳ್ಳ, ಪಾಂಡವಾನಾಂ ಸೇನಾ ಚ – ಪಾಂಡವರ ಸೇನೆಯೂ ಕೂಡ, ತತ್ – ಶ್ರೀಭೀಮರು ಮಾಡಿದಕಾರ್ಯವನ್ನು, ದೃಷ್ಟ್ವಾ—ನೋಡಿ, ಕ್ಷಿಪ್ರಂ – ಬೇಗನೇ, ಸಮಾವೃತ್ತಾ– ಯುದ್ಧಕ್ಕಾಗಿ ಹಿಂದಿರುಗಿ ಬಂದಿತು. ತಯಾ— ಆ ಸೈನ್ಯದಿಂದ, ಪುನಃ – ಮತ್ತೆ, ತತ್ ಕೌರವಾಣಾಂ ಬಲಂ— ಆ ಕೌರವಸೈನ್ಯವು, ಭಗ್ನಂಸತ್ — ಪರಾಜಿತವಾಗಿ, ದೂರಾದ್ದೂರತರಂ— ಬಹುದೂರಕ್ಕೆ, ಪ್ರದುದ್ರುವೇ – ಓಡಿತು. ॥೧೧೧॥

ಭಾ. ಅ. ೬೬—೧೦೧ – ಅಶ್ವತ್ಥಾಮ ಕೃಪರಿಬ್ಬರೂ ಶ್ರೀ ಭೀಮರಿಂದ ಪೀಡಿತನಾಗಿ ಬಿದ್ದ ದುರ್ಯೋಧನನ ಸಮೀಪಕ್ಕೆ ಬಂದರು. ಆಗ ಶ್ರೀಭೀಮರು ಕರ್ಣ ಮತ್ತು ಅಶ್ವತ್ಥಾಮರನ್ನು ಎದುರುಗೊಂಡರು. ಈ ಸಮಯದಲ್ಲಿ ಕೃಪಾಚಾರ್ಯರು ದುರ್ಯೋಧನನನ್ನು ರಥದಲ್ಲಿ ಏರಿಸಿಕೊಂಡು ಹೋದರು. ಶ್ರೀಭೀಮರು ಕರ್ಣ ಅಶ್ವತ್ಥಾಮರನ್ನು ಚೆನ್ನಾಗಿ ಪೀಡಿಸಿದರು. ಅವರ ಪೆಟ್ಟನ್ನು ತಾಳಲಾರದ ಅವರಿಬ್ಬರೂ ಶ್ರೀ ಭೀಮರನ್ನು ಬಿಟ್ಟು ಪಾಂಚಾಲ ಸೈನ್ಯದ ಕಡೆಗೆ ಪರಾಕ್ರಮಿಗಳನ್ನು ಕೆಡುವುತ್ತಾ ಹೊರಟರು. ಶ್ರೀಕೃಷ್ಣ ಪ್ರೇರಿತನಾದ ಅರ್ಜುನನು ಯುದ್ಧ ಭೂಮಿಯಲ್ಲಿ ಧರ್ಮರಾಜನನ್ನು ಕಾಣದೇ,ಅವನನ್ನು ನೋಡಲು ಶಿಬಿರಕ್ಕೆ ಬಂದನು. ಧೃಷ್ಟದ್ಯುಮ್ನನು ತಮ್ಮ ಸೈನ್ಯವು ಕರ್ಣನಿಂದ ಪೀಡಿತವಾದದ್ದನ್ನು ನೋಡಿ ಕೌರವರನ್ನು ಪೀಡಿಸಿದನು. ಈ ಸಮಯಕ್ಕೆ ಅರ್ಜುನನು ಶಿಬಿರದಿಂದ ಬಂದನು. ಅವನನ್ನು ನೋಡಿ ಅಶ್ವತ್ಥಾಮರು ತಡೆದರು. ದುಃಶಾಸನನು ಧೃಷ್ಟದ್ಯುಮ್ನನನ್ನು ತಡೆದನು. ಇವರಿಬ್ಬರಿಗೂ ಘೋರವಾದ ಯುದ್ಧವು ನಡೆಯಿತು. ಅದರಲ್ಲಿ ದುಃಶಾಸನನು ಧೃಷ್ಟದ್ಯುಮ್ನನ ಆಯುಧಗಳನ್ನು ನಾಶಪಡಿಸಿ, ಅವನ ಎಲ್ಲ ಪ್ರಯತ್ನಗಳನ್ನು ವ್ಯರ್ಥಪಡಿಸಿ, ಏನೂ ಮಾಡಲಾಗದಂತೆ ಮಾಡಿದನು. ಅರ್ಜುನ ಅಶ್ವತ್ಥಾಮರಿಗೂ ನಡೆದ ಭಯಂಕರ ಯುದ್ಧದಲ್ಲಿ ಅರ್ಜುನನ ಗಾಂಡಿವಧನುಸ್ಸಿನ ಜ್ಯಾವು ಕತ್ತರಿಸಲ್ಪಟ್ಟಿತು. ಅರ್ಜುನನು ಬಾಣಸಮೂಹದಿಂದ ಬಂಧಿಸಲ್ಪಟ್ಟನು, ಆಗ ಪುನಃ ಶ್ರೀಕೃಷ್ಣನ ಆಲಿಂಗನದಿಂದ ಪರಾಕ್ರಮದ ಅಭಿವೃದ್ಧಿಯನ್ನು ಪಡೆದು ಅಶ್ವತ್ಥಾಮರ ಸಾರಥಿಯನ್ನು ಕೊಂದು, ಕುದುರೆ ಹಗ್ಗಗಳನ್ನು ಕತ್ತರಿಸಿ, ಕುದುರೆಗಳನ್ನೂ ಓಡಿಸಿದನು, ಅಶ್ವತ್ಥಾಮರನ್ನು ದಾಟಿ ಮುಂದೆ ಹೋದನು. ಆಗ ಕರ್ಣನು ಅಖಂಡವಾಗಿ ಬಾಣಗಳನ್ನು ಸುರಿಸುವವನಾಗಿ ಪಾಂಡವ ಸೈನ್ಯವನ್ನು ಓಡಿಸಿದನು. ದುರ್ಯೋಧನನೂ ಅವನ ಬೆನ್ನಹಿಂದೆಯೇ ಹೋದನು. ಧೃಷ್ಟದ್ಯುಮ್ನನು ಇದನ್ನು ನೋಡಿ ಮತ್ತೊಂದು ಬಿಲ್ಲನ್ನು ತೆಗೆದುಕೊಂಡು ಬಂದು ಕರ್ಣನನ್ನು ತಡೆದನು; ಸಾತ್ಯಕಿಯು ದುರ್ಯೋಧನನನ್ನು ತಡೆದನು. ಕರ್ಣ ಧೃಷ್ಟದ್ಯುಮ್ನರಿಗೆ ಬಹು ಹೊತ್ತು ಸಮವಾದ, ಸತತವಾಗಿ ವಿಶ್ರಾಂತಿ ಇಲ್ಲದಂತೆ ಯುದ್ಧ ನಡೆಯಿತು. ಸಾತ್ಯಕಿ ದುರ್ಯೋಧನರ ಯುದ್ಧದಲ್ಲಿ ದುರ್ಯೋಧನನು ಸಾತ್ಯಕಿಯ ಕುದುರೆಗಳನ್ನು ಕೊಂದನು. ಧೃಷ್ಟದ್ಯುಮ್ನನ ಕುದುರೆಗಳನ್ನು ಸಂಹರಿಸಿದನು. ಹೀಗೆ ಸಾತ್ಯಕಿ ಧೃಷ್ಟದ್ಯುಮ್ನರಿಬ್ಬರೂ ರಥ ಆಯುಧಗಳನ್ನು ಕಳೆದುಕೊಂಡು ಅಸಹಾಯಕರಾಗುತ್ತಿರಲು, ಅವರ (ಪಾಂಡವ) ಸೈನ್ಯ ಪರಾಜಿತವಾಯಿತು. ಅದನ್ನು ಕಂಡ ಸಿಂಹಧ್ವಜಉಳ್ಳ ಶ್ರೀಭೀಮರು ಭೂಮಿಯೇ ನಡುಗುವಂತೆ ಭಯಂಕರ ಗರ್ಜನವಾಡುತ್ತಾ ಕೌರವಸೈನ್ಯದ ಮೇಲೆ ಏರಿಬಂದರು, ಅವರ ಗರ್ಜನವನ್ನು ಕೇಳಿಯೇ ಎಷ್ಟೋ ಸೈನ್ಯವು ಓಡಿಹೋಯಿತು. ಬಾಣಗಳನ್ನೂ ಪ್ರಯೋಗಿಸಿದರು. ಅದರಿಂದ ಪೂರ್ಣ ಸೈನ್ಯವು ಪರಾಜಿತವಾಗಿ ದಿಕ್ಕು ದಿಕ್ಕಿಗೆ ಪಲಾಯನವಾಡಿತು. ದುರ್ಯೋಧನನನ್ನು ಆಯುಧ ವಾಹನ ರಹಿತನನ್ನಾಗಿಸಿದರು. ಶ್ರೀ ಭೀಮರ ಈ ಪರಾಕ್ರಮ ಕಾರ್ಯವನ್ನು ಕಂಡ ಪಾಂಡವ ಸೈನ್ಯವು ಹುರುಪುಗೊಂಡು ಕೂಡಲೇ ಬಂದು ಯುದ್ಧದಲ್ಲಿ ತೊಡಗಿ ಕೌರವರ ಸೈನ್ಯವನ್ನು ಮತ್ತಿಷ್ಟು ಹೊಡೆಯಿತು, ಅದರಿಂದ ಆ ಸೈನ್ಯವು ಅತಿದೂರಕ್ಕೆ ಓಡಿತು.

ಹನ್ಯಮಾನಂ ದಿಶೋಯಾತಂ ಪಾಂಚಾಲೈರ್ಭೀಮ ಸಂಶ್ರಯಾತ್ ।
ಸುಯೋಧನಬಲಂ ದೃಷ್ಟ್ವಾ ಜಜ್ವಾಲಾಧಿರಥಿಃಕ್ರುಧಾ ॥೧೦೨॥

ಸೋಽಮೋಘಂ ರಾಮದೈವತ್ಯಮುಸ್ತ್ರಂ ಭಾರ್ಗವಸಂಜ್ಞಿತಂ ।
ಸರ್ವಾಸ್ತ್ರನಾಶಕಂ ದಿವ್ಯಮುಪ್ರತಿದ್ವಂದ್ವ ಮಾದದೇ ॥೧೦೩॥

ತಚ್ಚ ಭೀಮಪುರೋಗೇಷು ಸೈನ್ಯೇಷ್ವ ಮುಚದುಲ್ಬಣಂ ।
ತದಸ್ತ್ರಂ ವರ್ಜಯಾಮಾಸ ಭೀಮಂ ರಾಮಪ್ರಸಾದತಃ ॥೧೦೪॥

ಆಧಿರಥಿಃ—ಅಧಿರಥನೆಂಬ ಸೂತನ ಮಗನಾಗಿ ಬೆಳೆದ ಕರ್ಣನು, ಸುಯೋಧನಬಲಂ—ದುರ್ಯೋಧನನ ಸೈನ್ಯವನ್ನು, ಭೀಮಸಂಶ್ರಯಾತ್ – ಶ್ರೀಭೀಮರ ನೇತೃತ್ವದಿಂದಾಗಿ (ಹುರುಪಿನಿಂದ), ಪಾಂಚಾಲ್ಯೈಃ – ಪಾಂಚಾಲ ಸೈನಿಕರಿಂದ, ಹನ್ಯಮಾನಂ – ಹೊಡೆಯಲ್ಪಟ್ಟದ್ದನ್ನಾಗಿ, ದಿಶಃ ಯಾತಂ – ದಿಕ್ಕುಗಳಿಗೆ ಓಡಿದ್ದನ್ನಾಗಿ, ದೃಷ್ಟ್ವಾ—ನೋಡಿ, ಕ್ರುಧಾ– ಸಿಟ್ಟಿನಿಂದ, ಜಜ್ವಾಲ – ಉರಿದನು. (ಬಹಳ ಸಿಟ್ಟಿಗೆದ್ದನು ಎಂದು ತಾತ್ಪರ್ಯ) ॥೧೦೨॥

ಸಃ – ಆ ಕರ್ಣನು, ಭಾರ್ಗವ ಸಂಜ್ಞಿತಂ – ಭಾರ್ಗವಾಸ್ತ್ರ ಎಂದು ಹೆಸರುಳ್ಳ, ರಾಮದೈವತ್ಯಂ– ಶ್ರೀ ಪರಶು ರಾಮದೇವರೇ ದೇವತೆಯಾಗಿ ಉಳ್ಳ, ಅಮೋಘಂ - ವ್ಯರ್ಥವಾಗದಿರುವ, ಸರ್ವಾಸ್ತ್ರನಾಶಕಂ – ಇತರ ಎಲ್ಲ ಅಸ್ತ್ರಗಳನ್ನು ನಾಶಮಾಡಬಲ್ಲ, ಅಪ್ರತಿದ್ವಂದ್ವಂ – ಸಮಾನವಾದ ಇನ್ನೊಂದು ಅಸ್ತ್ರವಿಲ್ಲದಿರುವ, ಅಸ್ತ್ರಂ–ಅಸ್ತ್ರ (ಮಂತ್ರ) ವನ್ನು, ಆದದೇ– ಸ್ವೀಕರಿಸಿದನು. (ಒಂದು ಆಯುಧದಲ್ಲಿ ಅಭಿಮಂತ್ರಿಸಲಾರಂಭಿಸಿದನು.) ॥೧೦೩॥

ಚ – ಮತ್ತು, ಉಲ್ಬಣಂ ತತ್ – ಪ್ರಖರವಾದ ಆ ಅಸ್ತ್ರವನ್ನು, ಭೀಮಪುರೋಗೇಷು ಸೈನ್ಯೇಷು – ಭಿಮರೇ ಮೊದಲಾದ ಸೈನ್ಯದ ಮೇಲೆ, ಅವಾಸೃಜತ್ - ಬಿಟ್ಟನು. (ಪ್ರಯೋಗಿಸಿದನು). ತತ್ ಅಸ್ತ್ರಂ– ಆ ಅಸ್ತ್ರವು, ರಾಮಪ್ರಸಾದತಃ– ಶ್ರೀ ಪರಶುರಾಮದೇವರ ಅನುಗ್ರಹದ ಪ್ರಯುಕ್ತವಾಗಿ, ಭೀಮಂ – ಶ್ರೀಭೀಮಸೇನ ದೇವರನ್ನು, ವರ್ಜಯಾಮಾಸ–ಬಿಟ್ಟಿತು (ಅವರಿಗೆ ಯಾವ ಪರಿಣಾಮವನ್ನೂ ಮಾಡಲಿಲ್ಲ) ॥೧೦೪॥

ಅನ್ಯೇತು ದುದ್ರುವುಃಕೇಚಿಚ್ಛಿಷ್ಟಾಃ ಪ್ರಾಪುರ್ಯಮಕ್ಷಯಮ್ ॥
ನಹ್ಯಸ್ತ್ರಂ ದ್ರವಮಾಣಾಂಸ್ತದ್ದಂತಿ ತೇನ ಸಪಾರ್ಷತಾಃ ॥೧೦೫॥

ಪಾಂಚಾಲಾ ದ್ರೌಪದೇಯಾಶ್ಚ ಶೈನೇಯಾದ್ಯಾಶ್ಚ ಸರ್ವಶಃ ॥
ಪಲಾಯನೇನೋರ್ವರಿತಾ ಅಜುನೋಽಪ್ಯಸ್ತ್ರಮುದ್ಯತಂ ॥೧೦೬॥

ವೀಕ್ಷ್ಯಾಪ್ರತ್ಯಸ್ತ್ರಹೀನಂ ತದಪಾಪ್ಯೈವ ರವೇಸ್ಸುತಂ ॥
ವಾಸುದೇವಮಿದಂಪ್ರಾಹ ವರ್ಜಯಿತ್ವೈವ ಸೂತಜಂ ॥೧೦೭॥

ಅನ್ಯತ್ರಯಾಮಿ ನೈವಾಸ್ಮಾದಸ್ತ್ರಾಜ್ಜೀವನಮನ್ಯಥಾ ॥
ಇತ್ಯೂಚಿವಾಂಸಂ ಪಾರ್ಥಂತಂ ಕೃಷ್ಣೋಽಪ್ರಾಪ್ಯೈವಸೂತಜಮ್ ॥
ಅನ್ಯೇನೈವ ಪಥಾ ಭೀಮಂ ಪ್ರಾಪಯಾಮಾಸ ವಿಶ್ವಕೃತ್ ॥೧೦೮॥

ತತ್ರಾರ್ಜುನೋऽವದದ್ಭೀಮಂ ಯಾಹಿದ್ರಷ್ಟುಂ ಯುಧಿಷ್ಠಿರಂ ॥೧೦೯॥

ಪ್ರವೃತ್ತಿಂ ವಿದ್ಧಿಭೂಪಸ್ಯ ಮಾಂ ತುಸಂಶಪ್ತಕಾ ಯುಧೇ ॥
ಆಹ್ವಯಂತಿ ಹತೋಚ್ಛೇಷಾಸ್ತಾನಹಂ ಯಾಮಿತದ್ಯುಧೇ ॥೧೧೦॥

ಅನ್ಯೇಕೇಚಿತ್—ಬೇರೆ ಕೆಲವರು, ದುದ್ರುವುಃ – ಓಡಿದರು. ಶಿಷ್ಟಾಃಕೇಚಿತ್ – ಉಳಿದ ಕೆಲವರು, ಯಮಕ್ಷಯಂ– ಯಮಲೋಕವನ್ನು, ಪ್ರಾಪುಃ – ಹೊಂದಿದರು. ತತ್ ಅಸ್ತ್ರಂ– ಆ ಭಾರ್ಗವಾಸ್ತ್ರವು, (ಯೇನ — ಯಾವಕಾರಣದಿಂದ) ದ್ರವಮಾಣಾನ್–ಓಡುವವರನ್ನು, ನ ಹಂತಿ—ಸಂಹರಿಸುವದಿಲ್ಲವೋ,ತೇನ—ಆ ಕಾರಣದಿಂದ, ಸಪಾರ್ಷತಾಃ ಪಾಂಚಾಲಾಃ– ಧೃಷ್ಟದ್ಯುಮ್ನನಿಂದ ಕೂಡಿದ ಪಾಂಚಾಲದೇಶದ ಸೈನಿಕರು, ಚ-ಮತ್ತು–- ದ್ರೌಪದೇಯಾಃ— ದ್ರೌಪದೀದೇವಿಯ ಮಕ್ಕಳು,

ಚ–ಮತ್ತು, ಶೈನೇಯಾದ್ಯಾಃ – ಸಾತ್ಯಕಿಯೇ ಮೊದಲಾದ, ಸರ್ವಶಃ— ಎಲ್ಲರೂ, ಪಲಾಯನೇನ — ಓಡುವದರಿಂದ, ಉರ್ವರಿತಾಃ— ಬದುಕಿಉಳಿದರು. ಅರ್ಜುನೋಽಪಿ — ಅರ್ಜುನನೂಕೂಡ, ಉದ್ಯತಂ — ತನ್ನ ಮೇಲೆ ಬರುತ್ತಿರುವ, ಪ್ರತ್ಯಸ್ತ್ರಹೀನಂ – ಪ್ರತಿ (ವಿರೋಧಿ) ಅಸ್ತ್ರದಿಂದ ರಹಿತವಾದ, ತತ್ – ಆ ಭಾರ್ಗವಾಸ್ತ್ರವನ್ನು, ವೀಕ್ಷ್ಯ – ನೋಡಿ, ರವೇಃ ಸುತಂ—ಸೂರ್ಯಪುತ್ರನಾದ ಕರ್ಣನನ್ನು, ಅಪ್ರಾಪ್ಯೈವ – ಹೊಂದದೆಯೇ,ವಾಸುದೇವಂ-ಶ್ರೀಕೃಷ್ಣನನ್ನು ಕುರಿತು, ಸೂತಜಂ ವರ್ಜಯಿತ್ವೈವ – ಈ ಕರ್ಣನನ್ನು ಬಿಟ್ಟುಕೊಟ್ಟೇ, ಅನ್ಯತ್ರ ಯಾಮಿ—ಬೇರೆಡೆಗೆ ಹೋಗುತ್ತೇನೆ. ಅನ್ಯಥಾ–ಹಾಗೆ ಹೋಗದಿದ್ದರೆ, ಅಸ್ಮಾತ್ ಅಸ್ತ್ರಾತ್— ಈ ಅಸ್ತ್ರದಿಂದ, ಜೀವನಂ ಬದುಕಿ ಉಳಿಯುವದು, ನ–ಸಾಧ್ಯವಿಲ್ಲ, ಇತಿ ಇದಂ— ಎಂಬ ಈ ಮಾತನ್ನು, ಪ್ರಾಹ – ಹೇಳಿದನು, ಇತಿ ಊಚಿವಾಂಸಂ — ಹೀಗೆ ಹೇಳುವ, ತಂ ಪಾರ್ಥಂ — ಆ ಅರ್ಜುನನನ್ನು, ವಿಶ್ವಕೃತ್ ಕೃಷ್ಣಃ–ಜಗತ್ಕರ್ತನಾದ ಶ್ರೀಕೃಷ್ಣನು, ಸೂತಜಂ — ಕರ್ಣನನ್ನು, ಅಪ್ರಾಪ್ಯೈವ — ಹೊಂದಿಸದೆಯೇ, ಅನ್ಯೇನ ಪಥಾ ಏವ – ಬೇರೆ ಮಾರ್ಗದಿಂದಲೇ, ಭೀಮಂ ಪ್ರಾಪಯಾಮಾಸ—ಶ್ರೀಭೀಮರನ್ನು ಕುರಿತು ಪುಟ್ಟಿಸಿದನು. (ಶ್ರೀಭೀಮರ ಸಮೀಪಕ್ಕೆ ಕರೆತಂದನು.) ತತ್ರ— ಆ ಕಾಲದಲ್ಲಿ, ಆರ್ಜುನಃ – ಅರ್ಜುನನು, ಭೀಮಂ— ಶ್ರೀಭೀಮರನ್ನು ಕುರಿತು, ಯುಧಿಷ್ಠಿರಂ ದ್ರಷ್ಟುಂ— ಧರ್ಮರಾಜನನ್ನು ಕಾಣಲು (ಅವನ ಯೋಗಕ್ಷೇಮ ತಿಳಿಯಲು) ಯಾಹಿ—ಹೋಗು, ಭೂಪಸ್ಯ– ಧರ್ಮರಾಜನ, ಪ್ರವೃತ್ತಿಂ – ಪರಿಸ್ಥಿತಿಯ ಬಗ್ಗೆ, ವಿದ್ಧಿ – ತಿಳಿದುಬಾ, ಮಾಂ ತು– ನನ್ನನ್ನು ಮಾತ್ರ ಹತ್ತೋಚ್ಛೇಷಾಃ ಸಂಶಪ್ತಕಾಃ—ಸತ್ತಸಂಸಪ್ತಕರಿಂದ ಬೇರೆಯವರಾದ(ಉಳಿದಿರುವ)ಸಂಸಪ್ತಕರು, ಯುಧೇ – ಯುದ್ಧಕ್ಕಾಗಿ, ಆಹ್ವಯಂತಿ— ಕರೆಯುತ್ತಾ ಇದ್ದಾರೆ. ತತ್–ಆದ್ದರಿಂದ, ಯುಧೇ – ಯುದ್ಧಕ್ಕಾಗಿ, ಅಹಂ–ನಾನು —ತಾನ್—ಅವರನ್ನು ಕುರಿತು,ಯಾಮಿ-ಹೋಗುತ್ತೇನೆ, (ಇತಿ)— ಎಂದು ಅವದತ್— ಹೇಳಿದನು. ॥೧೦೫॥೧೦೬॥೧೦೭॥೧೦೮॥೧೦೯॥೧೧೦॥

ಇತ್ಯೂಚಿವಾಂಸಂ ತಮುವಾಚಭೀಮೋ ಜಾನನ್ ಸ್ವಬಾಹ್ವೋರ್ಬಲಮಪ್ರಮೇಯಮ್ ॥
ಸಂಶಪ್ತಕಾನ್ ಸೂತಜಂಕೌರವಾಂಶ್ಚಯೋತ್ಸ್ಯೇಽಹಮೇಕಸ್ತ್ವಮುಪೈಹಿಭೂಪಂ ॥೧೧೧॥

ಇತಿ – ಹೀಗೆ, ಊಚಿವಾಂಸಂ – ಮಾತನಾಡಿದ, ತಂ – ಆ ಅರ್ಜುನನನ್ನು ಕುರಿತು, ಸ್ವಬಾಹ್ವೋಃ— ತನ್ನ ಬಾಹುಗಳ, ಅಪ್ರಮೇಯಂ ಬಲಂ— ಅಪರಿಮಿತ ಸಾಮರ್ಥ್ಯವನ್ನು, ಜಾನನ್ – ತಿಳಿದ, ಭೀಮಃ – ಶ್ರೀಭೀಮರು, ಅಹಂ ಏಕಃ— ನಾನೊಬ್ಬನೇ, ಸಂಶಪ್ತಕಾನ್ — ಸಂಶಪ್ತಕರೊಡನೆ, ಸೂತಜಂ— ಕರ್ಣನೊಡನೆ, ಕೌರವಾಂಶ್ಚ – ಕೌರವರ ಜೊತೆಗೂ, ಯೋತ್ಸ್ಯೇ—ಯುದ್ಧ ಮಾಡುವೆನು. ತ್ವಂ – ನೀನು, ಭೂಪಂ—ಧರ್ಮ ರಾಜನನ್ನು ಕುರಿತು, ಉಪೈಹಿ – ಹೋಗು, ಇತಿ – ಎಂದು. ಉವಾಚ – ಹೇಳಿದರು, ॥೧೧೧॥

ತ್ಯಕ್ತ್ವಾ ರಣಂ ನಾಹಮಿತೋವ್ರಜೇಯಂ ನಮಾಂ ವದೇತ್ಕಶ್ಚನ ಯುದ್ಧಭೀತಂ ।
ಇತಿಬ್ರುವಾಣಂ ತಮನಂತ ಶಕ್ತಿಃ ಪ್ರೀತಃ ಕೃಷ್ಣಃ ಪ್ರಶಶಂಸಾಧಿಕೇಷ್ಟಂ ॥೧೧೨॥

ಅಹಂ— ನಾನು, ರಣಂ – ಯುದ್ಧವನ್ನು, ತ್ಯಕ್ತ್ವಾ – ಬಿಟ್ಟು, ಇತಃ – ಈ ಯುದ್ಧ ಭೂಮಿಯಪ್ರದೇಶದಿಂದ, ನ ವ್ರಜೇಯಂ— ಹೋಗಲಾರೆನು. ಕಶ್ಚನ—ಯಾವನೂ, ಮಾಂ— ನನ್ನನ್ನು, ಯುದ್ಧಭೀತಂ – ಯುದ್ಧಕ್ಕೆ ಹೆದರಿದವನನ್ನಾಗಿ, ನ ವದೇತ್ – ಹೇಳಬಾರದು, ಇತಿ ಬ್ರುವಾಣಂ – ಎಂದು ಹೇಳಿದಂಥ, ಅಧಿಕೇಷ್ಟಂ – ಅತಿ ಪ್ರಿಯನಾದ, ತಂ– ಆ ಶ್ರೀ ಭೀಮರನ್ನು ಕುರಿತು, ಪ್ರೀತಃ – (ಅವರ ಭಾಗವತಧರ್ಮ ಪರಿಪಾಲನ ದೀಕ್ಷಾವನ್ನು ಕಂಡು) ಸಂತುಷ್ಟನಾದಂಥ, ಅನಂತಶಕ್ತಿಃ ಕೃಷ್ಣಃ— ಅಪರಿಮಿತಶಕ್ತಿಯುಳ್ಳ ಶ್ರೀಕೃಷ್ಣನು, ಪ್ರಶಶಂಸ— ಚೆನ್ನಾಗಿ ಹೊಗಳಿದನು. ॥೧೧೨॥

ಯುಯೌ ಯುಧಿಷ್ಠಿರಂ ದ್ರಷ್ಟುಂ ಶಿಬಿರಂ ಸಾರ್ಜುನೋಹರಿಃ ।
ದೃಷ್ಟ್ವಾ ತೌ ನೃಪತಿಃ ಕರ್ಣಂ ಹತಂ ಮತ್ವಾಶಶಂಸಹ ॥೧೧೩॥

ಸಾರ್ಜುನಃ ಹರಿಃ-ಅರ್ಜುನಸಹಿತನಾದ ಶ್ರೀಕೃಷ್ಣನು, ಯುಧಿಷ್ಠಿರಂ ದೃಷ್ಟ್ವಾ-ಧರ್ಮರಾಜನನ್ನು ಕಾಣಲು, ಶಿಬಿರಂ ಯಯೌ – ಶಿಬಿರಕ್ಕೆ ಹೋದನು, ತೌ ದೃಷ್ಟ್ವಾ – ಅವರಿಬ್ಬರನ್ನು ನೋಡಿ, ನೃಪತಿಃ – ಧರ್ಮರಾಜನು, ಕರ್ಣಂ ಹತಂ ವಿತ್ತ್ವಾ – ಕರ್ಣನನ್ನು ಅರ್ಜುನನಿಂದ ಸಂಹೃತನನ್ನಾಗಿ ತಿಳಿದು, ಶಶಂಸ ಹಿ – ಅರ್ಜುನನ್ನು ಚೆನ್ನಾಗಿ ಹೊಗಳಿದನು. ॥೧೧೩॥

ಭಾ. ಅ. ೧೦೨-೧೧೩ ಶ್ರೀಭೀಮರ ಮುಂದಾಳುತನದಲ್ಲಿ ಪಾಂಚಾಲ ಸೈನಿಕರಿಂದ ಪಣ್ಣುಹಣ್ಣಾದ ಕೌರವ ಸೈನ್ಯವು ದಿಕ್ಕು ದಿಕ್ಕಿಗೆ ಪಲಾಯನಮಾಡಿತು. ಅದನ್ನು ಕಂಡ ಕರ್ಣನು ತುಂಬಾ ಸಿಟ್ಟಿಗೆದ್ದು ಭಾರ್ಗವಾಸ್ತ್ರವನ್ನು ಬಿಟ್ಟನು. ಅದು ಶ್ರೀಪರಶುರಾಮ ದೇವತಾಕವಾದ್ದರಿಂದ ವ್ಯರ್ಥವಾಗಲಾರದ್ದು. ಶ್ರೀಭೀಮರ ಮೇಲೆ ಶ್ರೀಹರಿಯು (ಶ್ರೀಪರಶುರಾಮ ರೂಪಾಭಿನ್ನ) ಸರ್ವದಾ ಅನುಗ್ರಹವಿರುವದರಿಂದ ಅವರ ಮೇಲೆ ಯಾವ ಪರಿಣಾಮವನ್ನೂ ಮಾಡಲೂ ಆಗಲಿಲ್ಲ. ಕೆಲವರು ಸತ್ತರು, ಧೃಷ್ಟದ್ಯುಮ್ನ ಸಹಿತರಾದ ಪಾಂಚಾಲ ಸೈನಿಕರು, ದ್ರೌಪದೀಪುತ್ರರು, ಸಾತ್ಯಕಿಮೊದಲಾದ ಕೆಲವರು ಓಡಿದರು. ಓಡಿದವರನ್ನು ಆ ಅಸ್ತ್ರವು ಏನೂ ಮಾಡುವದಿಲ್ಲವಾದ್ದರಿಂದ ಓಡಿದವರೆಲ್ಲ ಉಳಿದರು. ತನ್ನ ಮೇಲೆ ಬರುತ್ತಿದ್ದ ಅದನ್ನು ಕಂಡ ಅರ್ಜುನನು ಬೇರೆಯವರ ಜೊತೆಗೆ ಯುದ್ಧ ಮಾಡುತ್ತಾ ಶ್ರೀಕೃಷ್ಣನನ್ನು ಕುರಿತು "ನಾನು ಕರ್ಣನ ಸಮೀಪಕ್ಕೆ ಹೋಗದೇ ಬೇರೆಡೆಗೆ ಹೋಗುವೆನು; ಇಲ್ಲದಿದ್ದರೆ ನಾನು ಅಸ್ತ್ರದಿಂದ ಉಳಿಯಲಾರೆನು" ಎಂದು ಅಂದನು. ಆಗ ಶ್ರೀಕೃಷ್ಣನು ಅವನನ್ನು ಕರ್ಣನಿಂದ ಬೇರೆಕಡೆಗೆ ಮಾರ್ಗಾಂತರದಿಂದ ಶ್ರೀಭೀಮರ ಸಮೀಪಕ್ಕೆ ತಂದನು. ಆಗ ಅರ್ಜುನನು ಶ್ರೀಭೀಮರನ್ನು ಕುರಿತು 'ನನ್ನನ್ನು ಉಳಿದ ಸಂಶಪ್ತಕರಾಕ್ಷಸರು ಯುದ್ಧಕ್ಕಾಗಿ ಕರೆಯುತ್ತಿದ್ದಾರೆ. ಆದ್ದರಿಂದ, ನೀನು ಶಿಬಿರಕ್ಕೆ ಹೋಗಿ ಧರ್ಮರಾಜನ ಸಮಾಚಾರವನ್ನು ತಿಳಿದುಕೊಂಡು ಬಾ' ಎಂದು ಹೇಳಿದನು. ಆಗ ಶ್ರೀಭೀಮರು ನಾನು ಕರ್ಣಸಂಶಪ್ತಕ ಮತ್ತೆ ಯಾರು ಯಾರು ಬರುವರೋ ಅವರೆಲ್ಲರ ಜೊತೆಗೆ ನಾನೊಬ್ಬನೇ ಯುದ್ಧ ಮಾಡುವೆನು. ನಾನು ಯುದ್ಧ ಭೂಮಿಯಿಂದ ಹಿಂದೆ ಕಾಲ್ತೆಗೆಯುವದಿಲ್ಲ. ಯಾರೂ ನನ್ನನ್ನು ಯುದ್ಧಕ್ಕೆ ಹೆದರಿದ ಎಂದು ಹೇಳಬಾರದು, ಎಂದು ಹೇಳಿದರು. ಆಗ ಅವರ ಭಾಗವತಧರ್ಮಪರಿಪಾಲನ ದೀಕ್ಷೆಯನ್ನು ಕಂಡ ಶ್ರೀಕೃಷ್ಣನು ಸಂತೋಷಬಟ್ಟು ಹೊಗಳಿದನು. ಆಗ ಶ್ರೀಕೃಷ್ಣನು ಧರ್ಮರಾಜನ ಬಗ್ಗೆ ತಿಳಿಯಲು ಅರ್ಜುನನಿಂದ ಸಹಿತನಾಗಿ ಶಿಬಿರಕ್ಕೆ ಹೋದನು. ಅವರಿಬ್ಬರನ್ನು ನೋಡಿ ಧರ್ಮರಾಜನು ಕರ್ಣನಸಂಹಾರವಾಗಿದೆ ಎಂದು ತಿಳಿದು ಸಂತೋಷದಿಂದ ಹೊಗಳಿದನು.

ವಿಶೇಷಾಂಶ :– ~~ಯುದ್ಧಭೂಮಿಗೆ ಒಮ್ಮೆ ಬಂದ ಮೇಲೆ ಯುದ್ಧವಾಗಿಯಾದೇ ಹಿಂದಿರುಗದೇ ಇರುವದು~~ ಭಾಗವತ ಧರ್ಮವು ಎಂಬುದನ್ನು ೧೮ನೆಯ ಅಧ್ಯಾಯದಲ್ಲಿ 'ನಾಪಯಾತಿ ಯಂಧಃ ಕ್ವಾಪಿ' ಎಂಬುದರಿಂದ ಹೇಳಿರುವರು. ಆ ಭಾಗವತಧರ್ಮರಕ್ಷಣಮಾಡಲು ಅಣ್ಣನ ವಾರ್ತೆಯನ್ನು ತಿಳಿಯಲೂ ಕೂಡ ಹೋಗದೇ (ಬಂಧು-ಬಾಂಧವರ ಅಭಿಮಾನ ತ್ಯಾಗಮಾಡಿ) ಇದ್ದದ್ದನ್ನು ನೋಡಿ ಶ್ರೀಕೃಷ್ಣನು ತುಂಬಾ ಸಂತಸಬಟ್ಟನು ಎಂದು, ತಾತ್ಪರ್ಯ. ಬಂಧು ಬಾಂಧವರ ಅಭಿಮಾನದಿಂದ ಧರ್ಮತ್ಯಾಗವನ್ನು ಮಾಡುವದು ಸರಿಯಲ್ಲ; ಧರ್ಮರಕ್ಷಣೆಗಾಗಿ ಅಭಿಮಾನ ತ್ಯಾಗಮಾಡುವ ಧರ್ಮದೀಕ್ಷೆಯು ಅವಶ್ಯ ಎಂಬುದನ್ನು ತಿಳಿಯಬೇಕು.

ಅಭಿವಾದ್ಯ ಹನಿಷ್ಯಾಮೀತ್ಯುಕ್ತಃ ಪಾರ್ಥೇನ ಸಕ್ರುಧಾ ।
ಭೃಶಂ ವಿನಿಂದ್ಯ ಬೀಭತ್ಸುಮಾಹಕೃಷ್ಣಾಯ ಗಾಂಡಿವಂ ।
ದೇಹಿ ಪುತ್ರಂ ಸರಾಧಾಯಾ ಹನಿಷ್ಯತಿ ನಸಂಶಯಃ ॥೧೧೪॥

ಅಥವಾ ಭೀಮ ಏವೈನಂ ನಿವೃತ್ತೇ ತ್ವಯಿ ಪಾತಯೇತ್ ।
ತ್ವಂತು ಕುಂತ್ಯಾ ವೃಥಾ ಸೂತಃ ಕ್ಲೀಬೋ ಮಿಥ್ಯಾಪ್ರತಿಶ್ರವಃ ॥೧೧೫॥

ಅಹಂತು ಸೂತಪುತ್ರೇಣ ಕ್ಲಿಷ್ಟೋನೂರುತಿತೇಜಸಾ ।
ಜೀವಾಮೀ ತ್ಯಗ್ರಜೇನೋಕ್ತ ಉದ್ಬಬರ್ಹಾಸಿ ಮುತ್ತಮಂ ॥೧೧೬॥

ಹನಿಷ್ಯಾಮಿ — (ಇನ್ನುವೇಲೆ ಕರ್ಣನನ್ನು) ಸಂಹರಿಸುವೆನು, ಇತಿ – ಎಂದು, ಅಭಿವಾದ್ಯ – ನಮಸ್ಕರಿಸಿ ಪಾರ್ಥೇನ – ಅರ್ಜುನನಿಂದ, ಉಕ್ತಃ – ಹೇಳಿಸಿಕೊಳಲ್ಪಟ್ಟ, ಸಃ–ಆ ಧರ್ಮರಾಜನು, ಕ್ರುಧಾ–ಸಿಟ್ಟಿನಿಂದ, ಬೀಭತ್ಸುಂ–

ಅರ್ಜುನನನ್ನು, ಭೃಶಂ ವಿನಿಂದ್ಯ – ಬಹಳವಾಗಿ ನಿಂದಿಸಿ, ಗಾಂಡಿವಂ – ಗಾಂಡಿವ ಧನುಸ್ಸನ್ನು, ಕೃಷ್ಣಾಯ – ಕೃಷ್ಣನಿಗೆ,ದೇಹಿ– ಕೊಡು, ಸಃ – ಅವನು, ರಾಧಾಯಾಃಪುತ್ರಂ — ರಾಧೆಯ ಮಗನಾದ ಕರ್ಣನನ್ನು, ಹನಿಷ್ಯತಿ – ಸಂಹರಿಸುತ್ತಾನೆ. ನ ಸಂಶಯಃ – ಸಂಶಯವಿಲ್ಲ. ಅಥವಾ ಭೀಮ ಏವ—ಅಥವಾ ಭೀಮನೇ, ಏನಂ – ಈ ಕರ್ಣನನ್ನು, ತ್ವಯಿ ನಿವೃತ್ತೇ• ಸತಿ—ನೀನು ಯುದ್ಧದಿಂದ ನಿವೃತ್ತನಾಗುತ್ತಿರಲು, ಪಾತಯೇತ್ – ಕೆಡಹುವನು(ಸಂಹರಿಸುವನು), ತ್ವಂತು– ನೀನು ವಿಚಾತ್ರ, ಕುಂತ್ಯಾ– ಕುಂತಿಯಿಂದ, ವೃಥಾ— ವ್ಯರ್ಥವಾಗಿ, ಸೂತಃ– ಪಡೆಯಲ್ಪಟ್ಟಿರುವಿ, ಕ್ಲೀಬಃ– ನಪುಂಸಕನು, ಮಿಥ್ಯಾ ಪ್ರತಿಶ್ರವಃ– ಸುಳ್ಳು ಪ್ರತಿಜ್ಞೆಯುಳ್ಳವನು (ಪ್ರತಿಜ್ಞೆಯಂತೆ ನಡೆಯಲಾಗದವನು). ಅಹಂ – ನಾನು, ಸೂತಪುತ್ರೇಣ — ಕರ್ಣನಿಂದ, ಕ್ಲಿಷ್ಟಃ–ಕಷ್ಟ ಪರಿಸ್ಥಿತಿಯಲ್ಲಿದ್ದೆನು, (ಪೀಡಿತನಾಗಿದ್ದೆನು), ತು–ಆದರೆ, ವಿಚಾರಿತತೇಜಸಾ–ಭೀಮನ ಸಾಮರ್ಥ್ಯ ದಿಂದ, ಜೀವಾಮಿ–ಬದುಕಿರುವೆನು. ಇತಿ – ಎಂದು, ಅಗ್ರಜೇನ—ಅಣ್ಣ ಧರ್ಮರಾಜನಿಂದ, ಉಕ್ತಃ – ಹೇಳಿಸಿಕೊಳ್ಳಲ್ಪಟ್ಟ, ಅರ್ಜುನನು,ಉತ್ತಮಂ ಅಸಿಂ—ಶ್ರೇಷ್ಠ ಖಡ್ಗವನ್ನು, ಉದ್ಬಬರ್ಹ — ಹೊರಗೆ ತೆಗೆದನು. ॥೧೧೪॥೧೧೫॥೧೧೬॥

ವಾಸುದೇವಸ್ತಮಾಹೇದಂ ಕಿಮೇತದಿತಿಸರ್ವವಿತ್ ॥೧೧೭॥

ತಮಾಹ ಗಾಂಡಿವಂ ದಾತುಂ ಯೋವದೇತ್ತದ್ವಧೋಮುಯಾ ॥
ಪ್ರತಿಜ್ಞಾತಸ್ತತೋಹನ್ಮಿ ನೃಪಮಿತ್ಯಾಹ ತಂ ಹರಿಃ ॥೧೧೮॥

ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂತು ದುಷ್ಕರಂ ॥
ಯತ್ಸತಾಂ ಹಿತಮತ್ಯಂತಂ ತತ್ಸತ್ಯಮಿತಿ ನಿಶ್ಚಯಃ ॥೧೧೯॥

ಧರ್ಮಸ್ಯ ವಚನಂ ಶ್ರೇಯೋ ಧರ್ಮಜ್ಞಾನಂ ಸುದುಷ್ಕರಂ ॥
ಯಸ್ಸತಾಂ ಧಾರಕೋ ನಿತ್ಯಂ ಸಧರ್ಮ ಇತಿನಿಶ್ಚಯಃ ॥೧೨೦॥

ಸರ್ವವಿತ್‌ವಾಸುದೇವಃ— ಸರ್ವಜ್ಞನಾದ ಶ್ರೀಕೃಷ್ಣನು,ತಂ–ಖಡ್ಗವನ್ನು ಹೊರತೆಗೆದಂಥ ಅರ್ಜುನನನ್ನು ಕುರಿತು, ಕಿಂ ಏತತ್ — ಎನಿದು ? ಇತಿ ಇದಂ — ಎಂಬ ಈ ಮಾತನ್ನು ಆಹ— ಹೇಳಿದನು. ತಂ – ಆ ಶ್ರೀಕೃಷ್ಣನನ್ನು ಕುರಿತು, (ಅರ್ಜುನಃ–ಅರ್ಜುನನು) ಯಃ – ಯಾವನಃ, ಗಾಂಡಿವಂ ದಾತುಂ– ಗಾಂಡಿವಧನುಸ್ಸನ್ನು ಇನ್ನೊಬ್ಬರಿಗೆ ಕೊಡಲು, (ಮಾಂ – ನನ್ನನ್ನು ಕುರಿತು), ವದೇತ್ – ಹೇಳುತ್ತಾನೋ, ತದ್ವಧಃ— ಅವನ ಸಂಹಾರವು, ಮಯಾ — ನನ್ನಿಂದ, ಪ್ರತಿಜ್ಞಾತಃ – ಪ್ರತಿಜ್ಞೆಮಾಡಲ್ಪಟ್ಟಿದೆ. ತತಃ – ಆದ್ದರಿಂದ, ನೃಪಂ – ಧರ್ಮರಾಜನನ್ನು, ಹನ್ಮಿ — ಕೊಲ್ಲುತ್ತೇನೆ, ಇತಿ ಆಹ — ಎಂದು ಹೇಳಿದನು. ತಂ– ಆ ಅರ್ಜುನನನ್ನು ಕುರಿತು, ಹರಿಃ – ಶ್ರೀಕೃಷ್ಣನು, ಸತ್ಯಸ್ಯ ವಚನಂ – ಸತ್ಯದಬಗ್ಗೆ ಮಾತನಾಡುವದು (ಸತ್ಯಹೇಳು, ಸತ್ಯಹೇಳುತ್ತೇನೆ ಎಂದು ಮಾತನಾಡುವದು), ಶ್ರೇಯಃ – ಸರಳವಾದದ್ದು. ತು– ಆದರೆ, ಸತ್ಯಜ್ಞಾನಂ—ಸತ್ಯ ಯಾವದು ಎಂಬ ತಿಳಿವಳಿಕೆಯು,ದುಷ್ಕರಮ್—ಕಠಿಣವಾದದ್ದು, ಯತ್ – ಯಾವ ಮಾತು, ಸತಾಂ– ಸಜ್ಜನರಿಗೆ, ಅತ್ಯಂತಂ ಹಿತಂ- ಬಹುಹಿತಕರವಾದದ್ದೋ, ತತ್- ಆಮಾತು, ಸತ್ಯಂ–ಸತ್ಯವಚನವು, ಇತಿ-ಎಂದು ನಿಶ್ಚಯಃ- ನಿಶ್ಚಯವು, ಧರ್ಮಸ್ಯ—ಧರ್ಮದ ಬಗ್ಗೆ ಮಾತನಾಡುವದು ಶ್ರೇಯಃ-ಸರಳವು, ಧರ್ಮಜ್ಞಾನಂ- ಧರ್ಮದತಿಳುವಳಿಕೆಯು, ಸುದುಷ್ಕರಂ – ಬಹಳ ಕಠಿಣವಾದದ್ದು. ಯಃ– ಯಾವದು, ನಿತ್ಯಂ – ಯಾವಾಗಲೂ, ಸತಾಂ– ಸಜ್ಜನರ, ಧಾರಕಃ– ರಕ್ಷಕವಾದದ್ದೋ, ಸಃ–ಅದು, ಧರ್ಮಃ–ಧರ್ಮವು ಇತಿ ಆಹ–ಎಂದು ಹೇಳಿದನು. ॥೧೧೭॥೧೧೮॥೧೧೯॥೧೨೦॥

ಕೌಶಿಕಾಖ್ಯೋ ಬ್ರಾಹ್ಮಣೋಹಿ ಲೀನಂ ಗ್ರಾಮಜನಂ ಕ್ವಚಿತ್ ॥
ತಸ್ಕರೇಷ್ವಭಿಧಾಯೈವ ನಿರಯಂ ಪ್ರತ್ಯಪದ್ಯತ ॥೧೨೧॥

ಕಶ್ಚಿದ್ವ್ಯಾಧೋಮೃಗಂಹತ್ವಾ ಮಾತಾಪಿತೃ ನಿಮಿತ್ತತಃ ॥
ಭಕ್ಷಾರ್ಥಮಭ್ಯಗಾತ್ಸ್ವರ್ಗಮಸುರೋಸೌ ಮೃಗೋಯತಃ ॥೧೨೨॥

ಉಪದ್ರವಾಯಲೋಕಸ್ಯ ತಪಶ್ಚರತಿ ದುರ್ಮತಿಃ ॥
ತಸ್ಮಾತ್ತದ್ವಧಕೋಧರ್ಮ ಇತಿಕೃತ್ವಾವಿನಿಶ್ಚಯಂ ॥
ಮಾ ನೃಪಂ ಜಹಿಸತ್ಯಾಂ ತ್ವಂಕುರು ವಾಚಂ ತಿರಸ್ಕುರು ॥೧೨೩॥

ಇತ್ಯುಕ್ತೋ ಬಹುಧಾsನಿಂದತ್ ಕ್ರೋಧಾದೇವಾರ್ಜುನೋ(ಭೃಶಮ್) ನೃಪಂ ॥
ತ್ವಂನೃಶಂಸಃ ಕೃತಘ್ನಶ್ಚನಿರ್ವೀರ್ಯಃ ಪರುಷಂವದಃ ॥೧೨೪॥

ಈ ಶ್ಲೋಕಗಳಲ್ಲಿ ಸತ್ಯ ಧರ್ಮಗಳನ್ನು ದೃಷ್ಟಾಂತಸಹಿತವಾಗಿ ಶ್ರೀಕೃಷ್ಣನು ತಿಳಿಸಿದ್ದಾನೆ.

ಕೌಶಿಕಾಖ್ಯಃ ಬ್ರಾಹ್ಮಣಃ - ಕೌಶಿಕ ಎಂದು ಹೆಸರುಳ್ಳ ಬ್ರಾಹ್ಮಣನು, ಕ್ವಚಿತ್ – ಒಮ್ಮೆ, ಲೀನಂ– ಕಳ್ಳರಿಗೆ ಹೆದರಿ ಅಡಗಿಕೊಂಡಿರುವ, ಗ್ರಾಮಜನಂ— ಗ್ರಾಮದ ಒಬ್ಬವ್ಯಕ್ತಿಯನ್ನು, ತಸ್ಕರೇಷು – ಕಳ್ಳರಿಗೆ, ಅಭಿಧಾಯ – ಹೇಳಿ, ಹಿ—ನಿಶ್ಚಯವಾಗಿ, ನಿರಯಂ ಏವ – ನರಕವನ್ನೇ, ಪ್ರತ್ಯಪದ್ಯತ ಹೊಂದಿದನು.

ಕಶ್ಚಿತ್ವ್ಯಾಧಃ - ಒ ಬ್ಬ ಬೇಡನು, ಮಾತಾಪಿತೃನಿಮಿತ್ತತಃ – ತಾಯಿತಂದೆಗಳ ನಿಮಿತ್ತದಿಂದ, ಭಕ್ಷಾರ್ಥಂ–ಆಹಾರ ಕ್ಕಾಗಿ, ಮೃಗಂ–ಮೃಗವನ್ನು,ಹತ್ವಾ–ಕೊಂದು,ಸ್ವರ್ಗಂ–ಸ್ವರ್ಗಕ್ಕೆ, ಅಭ್ಯಗಾತ್,–ಹೋದನು. ಯತಃ–ಯಾವ ಕಾರಣದಿಂದ, ಅಸೌ ಮೃಗಃ – ಆ ಮೃಗವು, ಅಸುರಃ – ಅಸುರನೇ ಆಗಿದ್ದನೋ, ಯತಶ್ಚ – ಮತ್ತು ಯಾವಕಾರಣದಿಂದ, ದುರ್ಮತಿಃ– ದುರ್ಬುದ್ಧಿಯಾದ ಆ ಅಸುರನು, ಲೋಕಸ್ಯ ಉಪದ್ರವಾಯ—ಲೋಕದ ಅಹಿತಕ್ಕೋಸ್ಕರ, ತಪಃ ಚರತಿ–ತಪಸ್ಸನ್ನು ಆಚರಿಸುತ್ತಿದ್ದನೋ (ಅತಃ ತದ್ವಧಃ ಸತಾಂ ಧಾರಕಃ ಅತಃ ಧರ್ಮಃ–ಆದ್ದರಿಂದ ಅವನ ವಧವು ಸಜ್ಜನರಿಗೆ ಹಿತಕರವು, ಆದ್ದರಿಂದ ಧರ್ಮವಾಯಿತು). ತಸ್ಮಾತ್ – ಆ ದೃಷ್ಟಾಂತದಿಂದಾಗಿ, ಸದ್ಧಾರಕಃ—ಸಜ್ಜನರಿಗೆ ಪೋಷಕವಾದದ್ದು, ಧರ್ಮಃ – ಧರ್ಮವು, ಇತಿ – ಎಂದು, ವಿನಿಶ್ಚಯಂ ಕೃತ್ವಾ – ನಿಶ್ಚಯವನ್ನು ಮಾಡಿ, ನೃಪಂ – ಧರ್ಮರಾಜನನ್ನು, ಮಾ ಜಹಿ– ಕೊಲ್ಲಬೇಡ, ತಿರಸ್ಕುರು – ನಿಂದೆ ಮಾಡು, (ತೇನ— ಅದರಿಂದ) ತ್ವಂ— ನೀನು, ವಾಚಂ – ನಿನ್ನ ಪ್ರತಿಜ್ಞಾರೂಪವಾದ ಮಾತನ್ನು, ಸತ್ಯಾಂ ಕುರು–ಸತ್ಯವನ್ನಾಗಿ ಮಾಡಿಕೊ. ಇತಿ ಉಕ್ತಃ ಅರ್ಜುನಃ —ಎಂದುಶ್ರೀಕೃಷ್ಣನಿಂದ ಹೇಳಿಸಿಕೊಳ್ಳಲ್ಪಟ್ಟ ಅರ್ಜುನನು, ಕ್ರೋಧಾದೇವ–ಸಿಟ್ಟಿನಿಂದಲೇ, ನೃಪಂ – ಧರ್ಮರಾಜನನ್ನು, ಬಹುಧಾ — ಬಹುರೀತಿಯಾಗಿ, ಅನಿಂದತ್ — ನಿಂದಿಸಿದನು. ನಿಂದೆಯ ವಿವರವನ್ನು ಹೇಳುತ್ತಾರೆ, ತ್ವಂ—ನೀನು, ನೃಶಂಸಃ—ಕ್ರೂರನು, ಕೃತಘ್ನಃ— ಕೃತಘ್ನನು, ನಿರ್ವೀರ್ಯಃ – ಪೌರುಷಹೀನನು, ಪರುಷಂವದಃ – ನಿಷ್ಠುರ ಮಾತನಾಡುವವನು. ॥೧೨೦॥ ॥೧೨೨॥ ॥೧೨೩॥ ॥೧೨೪॥,

ತ್ವತ್ತಃ ಸುಖಿನಾಸ್ತಿ ಕಿಂಚಿನ್ನವಾಂ ಗರ್ಹಿತುಮರ್ಹಸಿ ।
ಭೀಮೋವಾಂ ಗರ್ಹಿತುಂ ಯೋಗ್ಯೋ ಯೋಹ್ಯಸ್ಮಾಕಂ ಸದಾಗತಿಃ ॥೧೨೫॥

ಯೋಯುಧ್ಯತೇ ಸರ್ವವೀರೈರದಾ್ಮಪಿತ್ವಂತು ನಿಂದಕಃ ।
ಇತ್ಯಾದ್ಯುಕ್ತ್ವಾತ್ವನಾಶಾಯ ವಿಕೋಶಂ ಕೃತವಾನಸಿಂ ॥೧೨೬॥

ಪುನಃ ಕೃಷ್ಣೇನ ಪೃಷ್ಟಃಸ ಸ್ವಾಭಿಪ್ರಾಯ ಮುವಾಚತಮ್ ।
ತಚ್ಛ್ರುತ್ವಾ ಗರ್ಹಯಿತ್ವೈನಂ ಪುನರಾಹ ಜನಾರ್ದನಃ ॥೧೨೭॥

ಮತಿಪೂರ್ವಂ ದೇಹ(ಹಾನಾತ್) ನಾಶಾತ್ ಪಾಪಂ ಮಹದವಾಪ್ಯತೇ ।
ಧರ್ಮಾರ್ಥಕಾಮಮೋಕ್ಷಾಣಾಂ ಸಾಧನಂ ದೇಹತೋಽಸ್ತಿಯತ್ ॥೧೨೮॥

ಅತೋಮಾತ್ಮಜ ದೇಹಂತು ಕುರುಚಾತ್ಮ ಪ್ರಶಂಸನಂ ।
ವಧೋಗುರೂಣಾಂ ತ್ವಂಕಾರಃ ಸ್ವಪ್ರಶಂಸೈವ ಚಾತ್ಮನಃ ॥೧೨೯॥

ಇತ್ಯುಕ್ತಃ ಸತ್ವಹಂಕಾರಾಚ್ಛಶಂಸ ಸ್ವಗುಣಾನಲಂ ॥೧೩೦॥

ನಃ - ನಮಗೆ, ತ್ವತ್ತಃ – ನಿನ್ನಿಂದ, ಕಿಂಚಿತ್ ಸುಖಂ – ಸ್ವಲ್ಪ ಸುಖವೂ, ನಾಸ್ತಿ – ಇರುವದಿಲ್ಲ. ಮಾಂ– ನನ್ನನ್ನು, ಗರ್ಹಿತುಂ–ನಿಂದಿಸಲು, ನ ಅರ್ಹಸಿ–ಯೋಗ್ಯನಲ್ಲ, ಯಃ–ಯಾವನು,ಅಸ್ಮಾಕಂ–ನಮಗೆ, ಸದಾ– ಯಾವಾಗಲೂ, ಗತಿಃ–ಆಶ್ರಯನು; ರಕ್ಷಕನು ಆಗಿರುವನೋ, ಯಃ–ಯಾವನು, ಅದ್ಯಾಪಿ–ಈಗಲೂಕೂಡ, ಸರ್ವವೀರೈಃ–ಎಲ್ಲವೀರರಿಂದ, ಯುಧ್ಯತೇ–ಯುದ್ಧ ಮಾಡುತ್ತಾ ಇದ್ದಾನೋ, ಸಃ ಭೀಮಃ ಹಿ – ಆ ಭೀಮನೇ, ಮಾಂ– ನನ್ನನ್ನು, ಗರ್ಹಿತುಂ– ನಿಂದಿಸಲು,ಯೋಗ್ಯಃ–ಯೋಗ್ಯನು. ತ್ವಂ ತು– ನೀನು ಮಾತ್ರ, ನಿಂದಕಃ ತು– ಕೇವಲ ನಿಂದಾ ಮಾಡುವವನು (ಕೆಲಸ ಮಾಡಲಾರಿ) ಇತ್ಯಾದಿ – ಇದೇ ಮೊದಲಾದ ನಿಂದಾವಚನವನ್ನು, ಉಕ್ತ್ವಾ–ಹೇಳಿ, (ಅರ್ಜುನಃ–ಅರ್ಜುನನು), ಆತ್ಮನಾಶಾಯ–ತನ್ನ ಸಂಹಾರಕ್ಕಾಗಿ, ಅಸಿಂ – ಖಡ್ಗವನ್ನು, ವಿಕೋಶಂ ಕೃತವಾನ್ — ಅದರ ಆವರಣದಿಂದ ಹೊರತೆಗೆಯಲ್ಪಟ್ಟದ್ದನ್ನಾಗಿ ಮಾಡಿದನು. ಪುನಃ— ಮಂತ್ತೆ, ಕೃಷ್ಣೇನ – ಶ್ರೀಕೃಷ್ಣನಿಂದ, ಪೃಷ್ಟಃ— 'ಏಕೆ ಖಡ್ಗವನ್ನು ಹೊರತೆಗೆದಿ' ಎಂದು ಕೇಳಿಸಿಕೊಳ್ಳಲ್ಪಟ್ಟ, ಸಃ–ಆ ಅರ್ಜುನನು, ಸ್ವಾಭಿಪ್ರಾಯಂ–(ಅಣ್ಣನ ನಿಂದಾ ಮಾಡಿದ ಪಾಪಪರಿಹಾರಕ್ಕಾಗಿ ಪ್ರಾಯಶ್ಚಿತ್ತರೂಪವಾಗಿ ತನ್ನ ಹತ್ಯೆಯನ್ನು ಮಾಡಿಕೊಳ್ಳುವೆನು ಎಂಬ) ತನ್ನ ಅಭಿಪ್ರಾಯವನ್ನು, ತಂ— ಆ ಶ್ರೀಕೃಷ್ಣನಿಗೆ, ಉವಾಚ— ಹೇಳಿದನು. ತತ್– ಆ ವಿಷಯವನ್ನು, ಶ್ರುತ್ವಾ– ಕೇಳಿ, ಜನಾರ್ದನಃ– ಶ್ರೀಕೃಷ್ಣನು, ಏನಂ– ಈ ಅರ್ಜುನನನ್ನು, ಗರ್ಹಯಿತ್ವಾ— ನಿಂದಿಸಿ ಬೈದು, ಪುನಃ ಆಹ– ಮತ್ತೆ ತಿಳಿಹೇಳಿದನು, ಮತಿಪೂರ್ವಂ–ಬುದ್ಧಿಪೂರ್ವಕವಾಗಿ, ದೇಹ (ಹಾನಾತ್) ನಾಶಾತ್–ದೇಹತ್ಯಾಗ ಮಾಡುವದರಿಂದ, ಮಹತ್ ಪಾಪಂ – ಬಹಳ ಪಾಪವು, ಅವಾಪ್ಯತೇ – ಹೊಂದಲ್ಪಡುತ್ತದೆ. ಯತ್– ಏಕೆಂದರೆ, ದೇಹತಃ– ದೇಹದಿಂದ, ಧರ್ಮಾರ್ಥಕಾಮಮೋಕ್ಷಾಣಾಂ ಸಾಧನಂ–ಧರ್ಮ, ಅರ್ಥ, ಕಾಮ ಹಾಗು ಮೋಕ್ಷ ರೂಪ ನಾಲ್ಕು ಪುರುಷಾರ್ಥಗಳ, ಸಾಧನಂ–ಸಿದ್ಧಿಯು, ಅಸ್ತಿ – ಶಕ್ಯವಿದೆ. ಅತಃ–ದೇಹತ್ಯಾಗವು ಪಾಪಕಾರಣವಾದ್ದರಿಂದ, ದೇಹಂ – ನಿನ್ನದೇಹವನ್ನು ಮಾ ತ್ಯಜ–ಬಿಡಬೇಡ, ಆದರೆ(ಪ್ರಾಯಶ್ಚಿತ್ತಕ್ಕಾಗಿ)ಆತ್ಮಪ್ರಶಂಸನಂ ಕುರು–ನಿನ್ನ ಪ್ರಶಂಸೆಯನ್ನು ಮಾಡಿಕೊ, ಚ–ಏಕೆಂದರೆ, ಗುರೂಣಾಂ ತ್ವಂಕಾರಃ– ಗುರು– ಹಿರಿಯರ ನಿಂದೆಯು (ನೀನು ನೀವು ಎಂದು ಮೊದಲಾಗಿ ಆಡುವದು), ಗುರೂಣಾಂ ವಧಃ—ಆ ಗುರು–ಹಿರಿಯರ ವಧಕ್ಕೆ ಸಮಾನವು. ಸ್ವಪ್ರಶಂಸಾ ಏವ – ತನ್ನ ಪ್ರಶಂಸೆ ತಾನು ಮಾಡಿಕೊಳ್ಳುವದೇ, ಆತ್ಮನಃ ವಧಃ— ತನ್ನವಧಕ್ಕೆ ಸಮಾನವು. ಇತಿ ಉಕ್ತಃ – ಹೀಗೆ ಶ್ರೀಕೃಷ್ಣನಿಂದ ಬೋಧಿಸಲ್ಪಟ್ಟ, ಸಃ— ಆ ಅರ್ಜುನನು, ತಂ– ವಿಶೇಷವಾಗಿ, ಅಹಂಕಾರಾತ್ — ಅಹಂಕಾರದಿಂದ, ಸ್ವಗುಣಾನ್ – ತನ್ನಗುಣಗಳನ್ನು, ಅಲಂ— ಬಹಳವಾಗಿ, ಶಶಂಸ– ಹೊಗಳಿಕೊಂಡನು. ॥೧೨೫॥೧೨೬॥೧೨೭॥೧೨೮॥೧೨೯॥೧೩೦॥

ಗುರುನಿಂದಾತ್ಮಪೂಜಾಚ ನಧರ್ಮಾಯ ಭವೇತ್ಕ್ವಚಿತ್ ।
ತಥಾಪ್ಯರ್ಜುನಹಾರ್ದಂ ತತ್ಸಂಪ್ರಕಾಶ್ಯ ಜನಾರ್ದನಃ ॥೧೩೦॥

ತಸ್ಯಲಜ್ಜಾಂ ಸಮುತ್ಪಾದ್ಯ ನಾಶಯಿತ್ವಾಚ ತಂಮುದಂ ।
ನಾಹಂವೇದ ಪರಂ ಧರ್ಮಂ ಕೃಷ್ಣ ಏವ ಗತಿರ್ಮಮ ॥೧೩೨॥

ಇತಿಭಾವಂ ಸಮುತ್ಪಾದ್ಯದೋಷಾನ್ನಾಶಯಿತುಂ ಹರಿಃ ।
ಕಾರಯಾಮಾಸ ತತ್ಸರ್ವಮರ್ಜುನೇನ ಜಗತ್ಪತಿಃ ॥೧೩೩॥

ಅವ— ವಾಸ್ತವಿಕವಾಗಿ ಪೂಜ್ಯರ ನಿಂದೆಯಾಗಲಿ, ಸ್ವ ಪ್ರಶಂಸೆಯಾಗಲಿ ಧರ್ಮಸಾಧನವಾಗುವದಿಲ್ಲ. ಆದರೆ ಇಲ್ಲಿ ಪ್ರತಿಜ್ಞಾ ಪಾಲನರೂಪವು ಒಂದು, ಪ್ರಾಯಶ್ಚಿತ್ತ ರೂಪವು ಇನ್ನೊಂದು. ಈದ್ದರಿಂದ ಅವೂ ಕೂಡ ಧರ್ಮಸಾಧನಗಳಾಗಿದ್ದಾವೆ, ಹಾಗೆ ಮಾಡಿಸಿದವನು ಶ್ರೀಕೃಷ್ಣ. ಆದ್ದರಿಂದ ಅವನಿಗೆ ಮಾತ್ರ ಸರಿಯಾದ ಧರ್ಮಜ್ಞಾನವಿದೆ. ನನಗಿಲ್ಲ. ಎಂಬ ಭಾವನನ್ನು ಅರ್ಜುನನಿಗೆ ಹುಟ್ಟಿಸುವದಕ್ಕೋಸ್ಕರ ಇಷ್ಟೆಲ್ಲ ಘಟನೆಯು ನಡೆಯುವಂತೆ ಸರ್ವ ಪ್ರೇರಕನಾದ ಆ ಶ್ರೀಕೃಷ್ಣ ಭಗವಂತನು ಮಾಡಿಸಿದನು ಎಂದು ಈ ಶ್ಲೋಕಗಳಲ್ಲಿ ತಿಳಿಸುವರು. ಕ್ವಚಿತ್ – ಎಂದೂ, ಗುರುನಿಂದಾ— ಪೂಜ್ಯರ ನಿಂದೆಯು, ಚ – ಮತ್ತು, ಆತ್ಮಪೂಜಾ—ತನ್ನ ಪೂಜೆಯು, ಧರ್ಮಾಯ ನ ಭವೇತ್ – ಧರ್ಮ (ಪುಣ್ಯ) ಕ್ಕೆ ಕಾರಣವಾಗುವದಿಲ್ಲ, ತಥಾಪಿ–ಆದರೂ,ಜಗತ್ಪತಿಃ ಜನಾರ್ದನಃಹರಿಃ–ಜಗತ್ಪಾಲಕನಾದ ಸಂಸಾರ ಮೋಚಕನಾದ ಶ್ರೀಕೃಷ್ಣನು, ತತ್ ಅರ್ಜುನ ಹಾರ್ದಂ—ಅರ್ಜುನನಿಗೆ ಧರ್ಮದ ಬಗ್ಗೆ ಇರುವ ಅಭಿಪ್ರಾಯವನ್ನು, ಸಂಪ್ರಕಾಶ್ಯ – ಪ್ರಕಟಪಡಿಸಿ, ತಸ್ಯ– ಅವನಿಗೆ, ಲಜ್ಜಾಂ—ಸಮುತ್ಪಾದ್ಯ ಹುಟ್ಟಿಸಿ, ತಂ ಮದಂಚ – ಅವನಿಗಿರುವ ನಾನು ಧರ್ಮಜ್ಞಾನಿಯು ಎಂಬ ಅಹಂಕಾರವನ್ನು, ನಾಶಯಿತ್ವಾ—ಹೋಗಲಾಡಿಸಿ, ಅಹಂ – ನಾನು, ಪರಂ ಧರ್ಮಂ—ಶ್ರೇಷ್ಠ(ನಿಜ)ವಾದ ಧರ್ಮವನ್ನು, ನ ವೇದ– ತಿಳಿದಿರುವದಿಲ್ಲ, ಕೃಷ್ಣ ಏವ— ಶ್ರೀಕೃಷ್ಣನೇ, ಮಮ ಗತಿಃ – ನನ್ನ ರಕ್ಷಕನು, ಇತಿ ಭಾವಂ – ಎಂಬ ತಿಳುವಳಿಕೆಯನ್ನು, ಸಮುತ್ಪಾದ್ಯ ಹುಟ್ಟಿಸಿ, ದೋಷಾನ್— ಅರ್ಜುನನ ಅಹಂಕಾರಾದಿ ದೋಷಗಳನ್ನು, ನಾಶಯಿತುಂ – ಹೋಗಲಾಡಿಸಲು, ತತ್ ಸರ್ವಂ–ಆ ಎಲ್ಲ ಘಟನೆಯನ್ನು, ಅರ್ಜುನೇನ–ಅರ್ಜುನನಿಂದ, ಕಾರಯಾಮಾಸ ಮಾಡಿಸಿದನು. ॥೧೩೧॥೧೩೨॥೧೩೩॥

ಭಾ.ಅ. ೧೧೪–೧೩೩ ಧರ್ಮರಾಜನು ಪ್ರಶಂಸಿಸಿದಾಗ ಅರ್ಜುನನು ನಮಸ್ಕರಿಸಿ ಇನ್ನು ಮೇಲೆ ಸಂಹರಿಸುವೆನು ಎಂದು ಹೇಳಿದನು. ಆಗ ಧರ್ಮರಾಜನು ಸಿಟ್ಟಿಗೆದ್ದು ಅರ್ಜುನನನ್ನು ಬಹಳ ನಿಂದಿಸಿ ಗಾಂಡೀವಧನುಸ್ಸನ್ನು ಕೃಷ್ಣನಿಗೆ ಕೊಡು; ಅವನು ಕರ್ಣನನ್ನು ಖಂಡಿತ ಸಂಹರಿಸುವನು. ಅಥವಾ ನೀನು ಯುದ್ಧವನ್ನು ತೊರೆದಾಗ ಭೀಮನು ಸಂಹರಿಸುತ್ತಾನೆ. ಸಂಶಯವಿಲ್ಲ,ನೀನು ನಮ್ಮ ಅವ್ವ ಕುಂತಿಯ ಹೊಟ್ಟೆಯಿಂದ ವ್ಯರ್ಥವಾಗಿ ಹುಟ್ಟಿರುತ್ತಿ; ನಪುಂಸಕನು, ಪ್ರತಿಜ್ಞೆಯನ್ನು ನಡೆಸಲಾರದವನು. ನಾನು ಕರ್ಣನಿಂದ ಎಷ್ಟೋಸಲ ಕಷ್ಟದಲ್ಲಿರುವಾಗಲೆಲ್ಲ ಭೀಮನಿಂದ ಉಳಿದಿರುವೆನು ಎಂದು ಹೇಳಿದನು, ಆಗ ಅರ್ಜುನನು ತನ್ನ ಖಡ್ಗವನ್ನು ಹೊರಗೆ ತೆಗೆದನು. ಶ್ರೀಕೃಷ್ಣನು 'ಯಾಕೆ, ಯಾಕೆ? ಏನು? ಏನಿದು'ಎಂದು ಕೇಳಿದನು. (ಎಲ್ಲವೂ ತಿಳಿದಿದ್ದರೂ ಕೂಡ ನಾಟಕ ಮಾಡಿದ್ದಾನೆ) ಆಗ ಅರ್ಜುನನು 'ನನಗೆ ಗಾಂಡಿವಧನುಸ್ಸನ್ನು ಬೇರೆಯವರಿಗೆ ಕೊಡು ಎಂದು ಯಾರು ಹೇಳುವರೋ ಅವರ ವಧವನ್ನು ಮಾಡುವೆನು ಎಂದು ನನ್ನ ಪ್ರತಿಜ್ಞೆ ಇದೆ. ಆದ್ದರಿಂದ ಈಗ ಅಣ್ಣನಾದ ಧರ್ಮರಾಜನನ್ನು ಕೊಲ್ಲುವೆನು' ಎಂತು ಅಂದನು. ಆಗ ಶ್ರೀಕೃಷ್ಣನು ಸತ್ಯವನ್ನೇ ನುಡಿಯುತ್ತೇನೆ ಎಂದು ಹೇಳುವದು ಸರಳ. ಆದರೆ ಸತ್ಯವೆಂದರೆ ಯಾವದು ಎಂದು ತಿಳಿಯುವದು ಕಷ್ಟ. ಧರ್ಮವನ್ನು ನಡೆಸುತ್ತೇನೆ ಎಂದು ಹೇಳುವದು ಸುಲಭ; ಆದರೆ ಧರ್ಮ ಯಾವದು ಎಂದು ತಿಳಿಯುವದು ಕಷ್ಟಸಾಧ್ಯ. ಕಂಡದ್ದನ್ನು ಕಂಡಹಾಗೆ, ಇದ್ದದ್ದನ್ನು ಇದ್ದಹಾಗೆ ಹೇಳುವದು ಸತ್ಯ ಎಂದು ಜನರು ತಿಳಿದಿರಬಹುದು. ಆದರೇ ಇದೇ ನಿಜವಾಗಿ ಸತ್ಯ ಎಂದು ಅಲ್ಲ. ಯಾವ ವಚನವು ಸಜ್ಜನರಿಗೆ ಹಿತಕರವೋ ಅದು ಸತ್ಯವಚನ. ಅದರಂತೆ ಯಾವ ಕಾರ್ಯ ಸಜ್ಜನರಿಗೆ ರಕ್ಷಕವೋ ಅದೇ ಧರ್ಮಕಾರ್ಯ. ಈ(ಪರಿಭಾಷೆ) ಲಕ್ಷಣಗಳೇ ಸರಿ ಎಂಬುದಕ್ಕೆ ದೃಷ್ಟಾಂತಗಳು ಇವೆ. ಸತ್ಯವ್ರತವುಳ್ಳ ಕೌಶಿಕ ಎಂಬ ಒಬ್ಬ ಬ್ರಾಹ್ಮಣನು ಊರಿನಲ್ಲಿ ಕಳ್ಳರು ಬಂದಾಗ, ಅವರಿಗೆ ಹೆದರಿ ಊರ ಜನರು ಅಡಗಿ ಕುಳಿತಾಗ, ಅದನ್ನು ಕಂಡ ಈ ಬ್ರಾಹ್ಮಣನ ಹತ್ತಿರ ಕಳ್ಳರು ಬಂದು ಊರ ಜನರೆಲ್ಲ ಎಲ್ಲಿ ಎಂದು ಕೇಳಿದಾಗ ಕಂಡಹಾಗೆ ಇಂಥಲ್ಲಿದ್ದಾರೆ ಎಂದು ಹೇಳಿದನು. ಹೀಗೆ ಹೇಳಿದ್ದರ ಫಲವಾಗಿ ಮುಂದೆ ಈ ಬ್ರಾಹ್ಮಣನಿಗೆ ನರಕ ಫಲವಾಯಿತು. ಇದರಿಂದ ತಿಳಿಯುವದು ಹಾಗೆ ಹೇಳಿದ್ದು ನಿಜವಾಗಿ ಸತ್ಯವಲ್ಲ. ಅದು ಸಜ್ಜನರಿಗೆ ಅಹಿತಕರವಾಯಿತೋ ಆದ್ದರಿಂದ ಕಂಡದ್ದನ್ನು ಕಂಡಹಾಗೆ ಹೇಳಿದ ವಚನವಾದರೂ ಅದು ಅಸತ್ಯವಾಯಿತು. ಹಾಗೆ ಒಬ್ಬ ವ್ಯಾಧನು ತಂದೆ–ತಾಯಿಗಳ ರಕ್ಷಣೆ ಮಾಡಬೇಕೆಂಬ ಉದ್ದೇಶದಿಂದ ಮೃಗಗಳನ್ನು ಕೊಂದು ಮಾಂಸದಿಂದ ಅವರಿಗೆ ಊಟಕ್ಕೆ ಹಾಕಿಯೂ ಕೂಡ ಅವನು ಸ್ವರ್ಗಕ್ಕೆ ಹೋದನು. ಹಿಂಸೆ ಎಂಬುವದು ಸಾಮಾನ್ಯವಾಗಿ ಅಧರ್ಮ ಎಂದಾದರೂ, ಇಲ್ಲಿ ಪೂಜ್ಯರಾದ ತಂದೆ ತಾಯಿಗಳ ಹಿತಕ್ಕೆ ಕಾರಣವಾದ್ದರಿಂದ ಧರ್ಮವಾಯಿತು. ಮತ್ತು – ಅವನು ಕೊಂದ ಮೃಗವೂಕೂಡ ಒಬ್ಬ ಅಸುರನಾಗಿದ್ದನು. ಲೋಕದ ಅಹಿತಕ್ಕಾಗಿ ತಪಸ್ಸನ್ನು ಮಾಡುತ್ತಿದ್ದನು. ಅಂಥವನ ಸಂಹಾರವಾದ್ದರಿಂದ ಲೋಕಕ್ಕೇ ಹಿತಕರವಾದ್ದರಿಂದಲೂ ಧರ್ಮರೂಪವಾಯಿತು. ಅವನು ಅಸುರ ಎಂದು ತಿಳಿಯದೇ ಸಂಹರಿಸಿದರೂ ಕೂಡ ಧರ್ಮವಾಗಿರಬೇಕಾದರೆ ತಿಳಿದು

ಮಾಡಿದರಂತೂ ಸುತರಾಂ ಧರ್ಮವಾಗುತ್ತದೆ ಎಂದು ತಿಳಿಯಬೇಕು. ಆದ್ದರಿಂದ ಸರಿಯಾಗಿ ತಿಳಿದು ಕೆಲಸಮಾಡು ಅರ್ಜುನ! ಅಣ್ಣನನ್ನು ಕೊಲ್ಲಬೇಡ. ನಿನ್ನ ಪ್ರತಿಜ್ಞೆಯನ್ನೂ ಸತ್ಯಮಾಡಲು ನಿಮ್ಮ ಅಣ್ಣನನ್ನು ಚೆನ್ನಾಗಿ ನಿಂದಿಸು ಅಷ್ಟೇ, ಎಂದು ಹೇಳಿದನು. ಆಗ ಅರ್ಜುನನು ಬಹುಕ್ರೋಧದಿಂದ 'ನೀನು ಕ್ರೂರ, ಕೃತಘ್ನ, ಹೇಡಿ, ದುಷ್ಟಮಾತಾಡುವವನು. ನಿನ್ನಿಂದ ನಮಗ್ಯಾರಿಗೂ ಸುಖವಿಲ್ಲ. ನನ್ನನ್ನು ಬೈಯುವ ಅರ್ಹತೆ ನಿನಗಿಲ್ಲ. ಯಾವಾಗಲೂ ನಮ್ಮನ್ನೆಲ್ಲ ರಕ್ಷಿಸಿದ ಈಗಲೂ ಯುದ್ಧಭೂಮಿಯಲ್ಲಿ ವೀರರಜೊತೆಗೆ ಯುದ್ಧವನ್ನೇ ಮಾಡುತ್ತಿರುವ ಶ್ರೀಭೀಮರು ಮಾತ್ರ ನನ್ನನ್ನು ಬೈಯಲು ಅರ್ಹರು. ನೀನು ಕೇವಲ ಬೈಯುವವನು; ಕಾರ್ಯ ಮಾತ್ರ ಕೈಯಿಂದ ಆಗುವದಿಲ್ಲ' ಎಂದು ನಿಂದಿಸಿ ಪುನಃ ಖಡ್ಗವನ್ನು ಹೊರತೆಗೆದನು. ಅದನ್ನು ಕಂಡ ಶ್ರೀಕೃಷ್ಣನು ಮತ್ತೆ ಏನಿದು? ಎಂದು ಕೇಳಿದಾಗ, ಅಣ್ಣನನ್ನು ಬೈದದ್ದಕ್ಕೆ ಪಾಪಬಂದಿದೆ. ಅದರ ಪರಿಹಾರಕ್ಕಾಗಿ ಪ್ರಾಯಶ್ಚಿತ್ತವಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವೆನು ಎಂದನು. ಆಗ ಶ್ರೀಕೃಷ್ಣನು ಈ ದೇಹವು ಧರ್ಮಾದಿಪುರುಷಾರ್ಥಗಳ ಸಾಧನವಾದದ್ದು. ಇದನ್ನು ಇಚ್ಛೆಪೂರ್ವಕ ಕಳೆದುಕೊಂಡರೆ ಬಹು ಪಾಪ ಬರುವದು. ಆದ್ದರಿಂದ ದೇಹವನ್ನು ತ್ಯಜಿಸಬೇಡ; ಅದಕ್ಕೆ ಪ್ರತಿನಿಧಿಯಾಗಿ ನಿನ್ನ ಪ್ರಶಂಸೆಯನ್ನು ಮಾಡಿಕೊ. ಪೂಜ್ಯರನ್ನು ನಿಂದಿಸುವದು ಅವರ ಹತ್ಯೆಗೆ ಸಮಾನವಾದರೆ, ತನ್ನ ಪ್ರಶಂಸೆಯನ್ನು ಮಾಡುವದು ತನ್ನಹತ್ಯಾಮಾಡಿಕೊಂಡಂತೆ ಎಂದು ಹೇಳಿದಾಗ ಹಾಗೆ ಮಾಡಿದನು. ಇಷ್ಟೆಲ್ಲ ಮಾಡುವ ದಕ್ಕಾಗಿಯೇ ಅರ್ಜುನನನ್ನು ಶ್ರೀಭೀಮರಸಮೀಪಕ್ಕೆ ಕರೆತಂದು ಈ ಘಟನೆಗಳನು ನಡೆಯುವಂತೆ ಪ್ರೇರಿಸಿದವನು ಶ್ರೀಕೃಷ್ಣನು.

ವಿಶೇಷಾಂಶ:— 1) ಭಾರ್ಗವಾಸ್ತ್ರಕ್ಕೆ ಹೆದರಿ ಅರ್ಜುನನೂ ಕೂಡ ಯುದ್ಧದಿಂದ ಹಿಂದೆ ಹೋಗುವ ಮನಸ್ಸು ಮಾಡಿ ಭಾಗವತಧರ್ಮ ತ್ಯಜಿಸಿದ ಎಂಬುದು ಸ್ಪಷ್ಟ. ಶ್ರೀಭೀಮರು ಮಾತ್ರ ಎಂದೂ ಹೋಗಿಲ್ಲ ಎಂದು ಗಮನಿಸಿದಾಗ ಅವರ ಶುದ್ಧ ಭಾಗವತಧರ್ಮ ದೀಕ್ಷಾ ಸ್ಪಷ್ಟ. **2)** ಹಿಂದೆ ಭಗದತ್ತನು ವೈಷ್ಣವಾಸ್ತ್ರ ಪ್ರಯೋಗ ಮಾಡಿದಾಗ ಅದನ್ನು ಶ್ರೀಕೃಷ್ಣನು ತಾನು ಧರಿಸಿ (ಅದು ವೈಜಯಂತೀ ಮಾಲಾರೂಪವಾಯಿತು) ಅರ್ಜುನನನ್ನು ರಕ್ಷಿಸಿದ್ದು ತಿಳಿದೂಕೂಡ ಅರ್ಜುನನು ಈ ಭಾರ್ಗವಾಸ್ತ್ರದಿಂದ ಶ್ರೀಕೃಷ್ಣನು ರಕ್ಷಿಸುತ್ತಾನೆ ಎಂಬ ದಾರ್ಢ್ಯತೋರದೇ ಓಡಿ ಹೋಗಲು ಮನಸ್ಸು ಮಾಡಿದ್ದನ್ನು ನೋಡಿದರೆ ಭಗವಂತನ ಬಗ್ಗೆ ಆಗಾಗ ತಪ್ಪು ತಿಳಿವಳಿಕೆ ಇತರರಿಗೆ ಬರುವದು. ಆದರೆ ವಾಯುದೇವರಿಗೆ ಮಾತ್ರ ಬರುವದಿಲ್ಲ. ಎಂಬುದು ಸ್ಪಷ್ಟ. **3)** ಧರ್ಮರಾಜನು ಯುದ್ಧಭೂಮಿಯಲ್ಲಿದ್ದು ಯುದ್ಧಮಾಡುತ್ತಿರುವಾಗ ಕಷ್ಟದಲ್ಲಿರುವಾಗ ಅನೇಕ ಸಲ ಅವನನ್ನು ರಕ್ಷಿಸಿದ ಶ್ರೀಭೀಮರು ಯುದ್ಧಬಿಟ್ಟು ಶಿಬಿರದಲ್ಲಿರುವ ಅಣ್ಣನ ಬಗ್ಗೆ ತಿಳಿಯಲೂ ಕೂಡ ಹೋಗಲಿಲ್ಲ ಎಂದು ಕಥೆಯನ್ನು ತಿಳಿದಾಗ ಧರ್ಮರಾಜನು ಸ್ವಧರ್ಮರತನಾದಾಗ ಅವನು ಧರ್ಮಪ್ರತೀಕನಾದ್ದರಿಂದ ಧರ್ಮರಕ್ಷಣೆಗಾಗಿ ಅವನ ರಕ್ಷಣೆ ಮಾಡಿದ್ದು ವಿನಃ ಅಣ್ಣ ಎಂದು ರಕ್ಷಿಸಿದ್ದಲ್ಲ. ಸ್ವಧರ್ಮ (ಯುದ್ಧ) ಬಿಟ್ಟು ಶಿಬಿರದಲ್ಲಿರುವಾಗ ಧರ್ಮಪ್ರತೀಕನಲ್ಲ. ಆದ್ದರಿಂದ ಅವನ ರಕ್ಷಣೆಗೆಅಲ್ಲ ಅವನ ಬಗ್ಗೆ ತಿಳಿಯಲೂ ಹೋಗಿಲ್ಲ ಎಂಬುದನ್ನು ಗಮನಿಸಿದರೆ ಭ್ರಾತೃಮೋಹ ಶ್ರೀಭೀಮರಲ್ಲಿ ಇಲ್ಲ ಎಂದು ಸ್ಪಷ್ಟ. **4)** ಶ್ರೀಭೀಮರು ಯುದ್ಧಭೂಮಿಯಿಂದ ಹಿಂದಿರುಗುವದಿಲ್ಲ ಎಂದು ಅರ್ಜುನನಿಗೆ ಹೇಳಿದಾಗ ಅವರು ಎಷ್ಟು ಶುದ್ಧ ಧರ್ಮಉಳ್ಳವರು ಅರ್ಜುನನು ಅಲ್ಲ ಎಂಬುದು ಅವನಿಗೆ ಗೊತ್ತಾಗಲಿ ಎಂದೇ ಅರ್ಜುನನನ್ನು ಶ್ರೀಭೀಮರ ಬಳಿಗೆ ಶ್ರೀಕೃಷ್ಣನು ಕರೆತಂದನು. **5)** ಧರ್ಮರಾಜ ಅರ್ಜುನರು ಒಬ್ಬರಿಗೊಬ್ಬರು ಬೈದಾಡಿದರೂ ಶ್ರೀಭೀಮರನ್ನು ಮಾತ್ರ ಇಬ್ಬರೂ ಪ್ರಶಂಸಿದ್ದನ್ನು ಗಮನಿಸಿದರೆ, ಅವರ ಶುದ್ಧತ್ವ ಎಲ್ಲರಿಗೂ ಸಮ್ಮತ ಎಂದು ತಿಳಿಯುವದು ಶ್ರೀಭೀಮರು ಎಲ್ಲರನ್ನೂ ರಕ್ಷಿಸಿದವರು ಎಂದು ಅವರ ಮಾತಿನಿಂದಲೇ ವಿದಿತ. **6)** ಧರ್ಮ–ಅರ್ಜುನರಸಂವಾದದ ಸಂದರ್ಭದಲ್ಲಿ ಶ್ರೀಕೃಷ್ಣನಿದ್ದದ್ದರಿಂದಲೇ ಐದೂ ಮಂದಿ ಪಾಂಡವರು ಉಳಿಯುವಂತೆ ಆಯಿತು. ಇಲ್ಲದಿದ್ದರೆ ಒಂದೋ ಧರ್ಮನಿಲ್ಲವೆಂದೋ ಅಥವಾ ಅರ್ಜುನನಿಲ್ಲವೆಂದೋ ಆಗ ಬಹುದಿತ್ತು. ಆದ್ದರಿಂದಲೇ 'ಮಮಪ್ರಾಣಾಃ ಪಾಂಡವಾಃ' ಎಂಬುದು ಸಿದ್ಧವಾಯ್ತು.

ತತ ಏತದವಿಜ್ಞಾನಾತ್ಕುಪಿತೋ ನೃಪತಿರ್ಭೃಶಮ್ ।
ಆಹಾಸ್ತು ರಾಜಾ ಭೀಮಸ್ತ್ವಂ ಯುವಾ ಮಾಂಜಹಿ ಚಸ್ವಯಂ ॥
ವನಂ ವಾ ವಿಫಲೋಯಾವೀತ್ಯುಕ್ತ್ವೋತ್ತಸ್ಥೌ ಸ್ವತಲ್ಪತಃ ॥೧೩೪॥

ತತಃ – ಅರ್ಜುನನು ಅಣ್ಣನನ್ನು ಬೈದು ತನ್ನನ್ನು ಹೊಗಳಿಕೊಂಡ ನಂತರ, ಏತದವಿಜ್ಞಾನಾತ್– ಶ್ರೀ ಕೃಷ್ಣ ಮಾಡಿಸಿದ ಈ ಕಾರ್ಯಗಳ ವಿಚಾರ ತಿಳಿಯದ್ದರಿಂದ, ಭೃಶಂ ಕುಪಿತಃ – ಬಹು ಕ್ರುದ್ಧನಾದ, ನೃಪತಿಃ – ಧರ್ಮರಾಜನು. (ಅಹುದು. ನಾನು ಅಯೋಗ್ಯ,) ಭೀಮಃ ರಾಜಾ ಅಸ್ತು—ಭೀಮನು ರಾಜನಾಗಲಿ, ತ್ವಂ ಯುವಾ (ಭವ) – ನೀನು ಯುವ ರಾ ಜನಾಗು, ಮಾಂಚ—ನನ್ನನ್ನು ಮಾತ್ರ, ಜಹಿ—ಕೊಂದುಬಿಡು. ವಾ—ಅಥವ್ಯಾ, ವಿಫಲಃ – ಅಪ್ರಯೋಜಕನಾದ ನಾನು, ಸ್ವಯಂ ವನಂ ಯಾಮಿ—ಸ್ವತಃ ನಾನೇ ವನಕ್ಕೆ ಹೋಗುವೆನು. ಇತಿ – ಎಂದು, ಉಕ್ತ್ವಾ— ಹೇಳಿ, ಸ್ವತಲ್ಪತಃ – ತನ ಹಾಸಿಗೆಯಿಂದ, ಉತ್ತಸ್ಥೌ – ಎದ್ದು ಕುಳಿತನು. ॥೧೩೪॥

ತಂವಾಸುದೇವಃ ಪ್ರತಿಗೃಹ್ಯ ಹೇತುಮುಕ್ತ್ವಾ ಸರ್ವಂ ಶಮಯಾಮಾಸ ನೇತಾ ।
ಪಾರ್ಥಶ್ಚ ಭೂಪಸ್ಯ ಪಪಾತ ಪಾದಯೋಃ ಕ್ಷಮಾಪಯನ್ ಸೋಽಪಿ ಸುಪ್ರೀತಿಮಾಪ ॥೧೩೫॥

ತೌ ಭ್ರಾತರೌ ವಾಸುದೇವ ಪ್ರಸಾದಾನ್ಮಹಾಪದೋ ಮುಕ್ತಿಮಾಪ್ಯಾತಿಹೃಷ್ಟೌ ।
ಭಕ್ತ್ಯಾಸಮುಸ್ತಾಧಿಪತಿಂ ಶಶಂಸತುಸ್ತ್ವಯಾ ಸಮಃ ಕೋನುಹರೇ ಹಿತೋನಃ ॥೧೩೬॥

ನೇತಾ ವಾಸುದೇವಃ— ಸರ್ವ ಪ್ರೇರಕನಾದ ಶ್ರೀಕೃಷ್ಣನು, ತಂ– ಧರ್ಮರಾಜನನ್ನು, ಪ್ರತಿಗೃಹ್ಯ – ಹಿಡಿದು, ಸರ್ವಂ ಹೇತುಂ—ಅವನ ನಿಂದಾ-ಸ್ತವಪ್ರಶಂಸಾಗಳನ್ನು ಅರ್ಜುನ ಮಾಡಿದ್ದರ ಕಾರಣವನ್ನೆಲ್ಲ, ಉಕ್ತ್ವಾ – ಹೇಳಿ, ಶಮಯಾಮಾಸ – ಸಮಾಧಾನ ಮಾಡಿದನು. ಪಾರ್ಥಶ್ಚ–ಅರ್ಜುನನೂ ಕೂಡ, ಕ್ಷಮಾಪಯನ್ ಸನ್ ಕ್ಷಮಾಕೇಳುವವನಾಗಿ, ಭೂಪಸ್ಯ ಪಾದಯೋಃ—ಧರ್ಮರಾಜನ ಪಾದಗಳಲ್ಲಿ, ಪಪಾತ – ನಮಸ್ಕರಿಸಿದನು, ಸೋಽಪಿ—ಧರ್ಮರಾಜನೂ ಕೂಡ, ಸುಪ್ರೀತಿಂ ಆಪ – ಬಹು ಸಂತೋಷವನ್ನು ಹೊಂದಿದನು. ॥೧೩೫॥ (ಏವಂ – ಹೀಗೆ)ವಾಸುದೇವ ಪ್ರಸಾದಾತ್—ಶ್ರೀಕೃಷ್ಣನ ಅನು ಗ್ರಹದಿಂದ, ಮಹಾಪದಃ – ದೊಡ್ಡ ಆಪತ್ತಿ(ಕುತ್ತಿ)ನಿಂದ, ಮುಕ್ತಿಂ – ಬಿಡುಗಡೆಯನ್ನು, ಆಪ್ಯ—ಹೊಂದಿ, ಅತಿಹೃಷ್ಟೌ – ಬಹುಸಂತೋಷಪಟ್ಟ, ತೌ ಭ್ರಾತರೌ –ಅರ್ಜುನ ಧರ್ಮರಾಜರಿಬ್ಬರೂ, ಸಮುಸ್ತಾಧಿಪತಿಂ– ಸರ್ವೇಶ್ವರನಾದ ಶ್ರೀಕೃಷ್ಣನನ್ನು, ಹರೇ – ಸರ್ವಕಷ್ಟಪರಿಹಾರಕನಾದ ಶ್ರೀಕೃಷ್ಣನೇ, ತ್ವಯಾಸಮಃ ನಃ ಹಿತಃ – ನಿನ್ನ ಸದೃಶನಾದ ನಮ್ಮ ಹಿತಕರನು, ಕಃ ನು– ಯಾವನು ತಾನೇ ಇದ್ದಾನೆ? (ಯಾರೂ ಇಲ್ಲ, ನೀನೇ ಹಿತಕರನು. ಎಂದು ತಾತ್ಪರ್ಯ)ಇತಿ—ಎಂದು, ಭಕ್ತ್ಯಾ ಶಶಂಸತುಃ— ಭಕ್ತಿಯಿಂದ ಸ್ತೋತ್ರಮಾಡಿದರು.

ತತಃ ಪ್ರಣಮ್ಯಬೀಭತ್ಸುರಗ್ರಜಂ ಪರಿರಂಭಿತಃ ॥
ತೇನಾಭಿನಂದಿತಃ ಪ್ರೀತ್ಯಾಚಾಶೀರ್ಭಿಃ ಪ್ರಯಯೌ ಯುಧೇ ॥೧೩೭॥

ತಂ ಶಂಕಿತಂ ಕರ್ಣಜಯೇ ಸ್ವಿನ್ನಗಾತ್ರಂ ಹರಿಸ್ತದಾ ॥
ಸಂಕೀರ್ತ್ಯಪೂರ್ವಕರ್ಮಾಣಿನರಾವೇಶಂ ವಿಶೇಷತಃ ॥
ವ್ಯಂಜಯಾಮಾಸ ಧೈರ್ಯಂಚ ತಸ್ಯಾಸೀತ್ತೇನ ಸುಸ್ಥಿರಮ್ ॥೧೩೮॥

ಭೀಮಸ್ತದಾ ಶತ್ರುಬಲಂ ಸಮುಸ್ತಂ ವಿದ್ರಾವಯಾಮಾಸ ಜಘಾನಚಾಜೌ ॥
ವೀರಾನ್ ರಣಾಯಾಭಿಮುಖಾನ್ ಸ್ವಯಂತ್ರಾ ಕುರ್ವನ್ ಸವಾರ್ತಾಂ ರಮುಮಾಣ ಏವ ॥೧೩೯॥

ತತಃ— ಆ ವಿಷಯಂಗಳನ್ನು ತಿಳಿದನಂತರ, ತೇನ— ಅಣ್ಣ ಧರ್ಮರಾಜನಿಂದ, ಪರಿರಂಭಿತಃ— ಆಲಿಂಗಿಸಲ್ಪಟ್ಟ, ಆಶೀರ್ಭಿಃ— ಆಶೀರ್ವಚನಗಳಿಂದ, ಆಭಿನಂದಿತಃ – ಸಂತೋಷಪಡಿಸಲ್ಪಟ್ಟ, ಬೀಭತ್ಸುಃ – ಅರ್ಜುನನು, ಪ್ರೀತ್ಯಾ—

ಸಂತೋಷದಿಂದ, ಅಗ್ರಜಂ ಪ್ರಣಮ್ಯ – ಅಣ್ಣನನ್ನು ನಮಸ್ಕರಿಸಿ, ಯುಧೇ – ಯುದ್ಧಕ್ಕೆ, ಪ್ರಯಯೌ —ಹೋರಟನು. ತದಾ–ಆಗ, ಕರ್ಣಜಯೇ – ಕರ್ಣನನ್ನು ಜಯಿಸುವ ಬಗ್ಗೆ, ಶಂಕಿತಂ— ಸಂಶಯಪಡುತ್ತಿದ್ದ, ಸ್ವಿನ್ನಗಾತ್ರಂ— ಬೆವರಿದ ದೇಹವುಳ್ಳ, ತಂ– ಆ ಅರ್ಜುನನನ್ನು ಕುರಿತು, ಹರಿಃ – ಶ್ರೀಕೃಷ್ಣನು, ಪೂರ್ವಕರ್ಮಾಣಿ — ಅರ್ಜುನನು ಮಾಡಿದ ನಿವಾತ ಕವಚರಾಕ್ಷಸ ಸಂಹಾರ ಮೊದಲಾದ ಹಿಂದಿನ ಕಾರ್ಯಗಳನ್ನು, ಸಂಕೀರ್ತ್ಯ – ಹೇಳಿ ನರಾವೇಶಂ–ನರಾವೇಶವನ್ನು, ವಿಶೇಷತಃ– ವಿಶೇಷವಾಗಿ, ವ್ಯಂಜಯಾಮಾಸ – ಪ್ರಕಟಮಾಡಿದನು. ತೇನ —ಅದರಿಂದ, ತಸ್ಯ – ಅರ್ಜುನನಿಗೆ, ಧೈರ್ಯಂ— ಧೈರ್ಯವು, ಸುಸ್ಥಿರಂ ಆಸೀತ್ — ಸುಸ್ಥಿರ (ದೃಢ) ವಾಯಿತು. ತದಾ—ಆಗ, ಸ್ವಯಂತ್ರಾ– ತನ್ನಸಾರಥಿಯಿಂದ, ವಾರ್ತಾಂ ಕುರ್ವನ್– ಯುದ್ಧದಮಾತಾಡುತ್ತಿದ್ದ. ಭೀಮಃ— ಶ್ರೀಭೀಮಸೇನರು, ಸಮಸ್ತಂ ಶತ್ರುಬಲಂ – ಎಲ್ಲ ಶತ್ರುಸೈನ್ಯವನ್ನು, ವಿದ್ರಾವಯಾಮಾಸ—ಓಡಿಸಿದರು. ಚ–ಮತ್ತು, ರಮಮಾಣ ಏವ — ಅನಾಯಾಸವಾಗಿ ಇರುವವರಾಗಿಯೇ – ಆಜೌ — ಯುದ್ಧದಲ್ಲಿ, ಅಭಿಮುಖಾನ್ ವೀರಾನ್ – ಯುದ್ಧಕ್ಕೆ ಬಂದ ವೀರರನ್ನು, ಜಘಾನ— ಕೊಂದರು. ॥೧೩೭॥೧೩೮॥೧೩೯॥

ತದಾಸದತ್ತಂ ಶಕುನಿಃಸಸೈನ್ಯೋದುರ್ಯೋಧನಸ್ಯಾವರಜೈರುಪೇತಃ ॥
ತಂಭೀಮಸೇನೋ ವಿರಥಂ ನಿರಾಯುಧಂ ವಿಧಾಯ ಬಾಣೈರ್ಭುವಿ ತಂ ನ್ಯಪಾತಯತ್ ॥೧೪೦॥

ತದಾ – ಆಗ, ಸಸೈನ್ಯಃ — ಸೈನ್ಯಸಮೇತನಾದ, ದುರ್ಯೋಧನಸ್ಯ ಅವರಜೈಃ ಉಪೇತಃ — ದುರ್ಯೋಧನನ ತಮ್ಮಂದಿರಿಂದ ಕೂಡಿದ, ಶಕುನಿಃ — ಶಕುನಿಯು, ತಂ - ಭೀಮರ ಸಮೀಪಕ್ಕೆ, ಉಪೇತಃ — ಬಂದನು. ಭೀಮಸೇನಃ— ಶ್ರೀಭೀಮರು, ತಂ– ಅವನನ್ನು, ವಿರಥಂ ನಿರಾಯುಧಂ ವಿಧಾಯ — ರಥವಿಲ್ಲದವನನ್ನಾಗಿ, ಆಯುಧವಿಲ್ಲದವನನ್ನಾಗಿ ಮಾಡಿ, ಬಾಣೈಃ – ಬಾಣಗಳಿಂದ, ಭುವಿ—ಭೂಮಿಯಲ್ಲಿ ನ್ಯಪಾತಯತ್—ಕೆಡವಿದರು. ॥೧೪೦॥

ನ ಜಘ್ನಿವಾಂಸ್ತಂ ಸಹದೇವಭಾಗಂ ಪ್ರಕಲ್ಪಿತಂ ಸ್ವೇನ ತದಾಕ್ಷಗೋಷ್ಠ್ಯಂ।
ತಂ ಮೂರ್ಛಿತಂ ಶ್ವಾಸಮಾತ್ರಾವಶಿಷ್ಟಂ ದುರ್ಯೋಧನಃ ಸ್ವರಥೇನಾಪನಿನ್ಯೇ ॥೧೪೧॥

ಸ್ವೇನ—ತನ್ನಿಂದ. ತದಾ–ದ್ಯೂತಕಾಲದಲ್ಲಿ, ಅಕ್ಷಗೋಷ್ಠ್ಯಂ – ದ್ಯೂತ ಸಭೆಯಲ್ಲಿ, ಸಹದೇವಭಾಗಂ–ಸಹದೇವನ ಭಾಗನನ್ನಾಗಿ, ಪ್ರಕಲ್ಪಿತಂ – ಸಹದೇವನು ಕೊಲ್ಲುತ್ತಾನೆ ಎಂದು ಹೇಳಲ್ಪಟ್ಟ. ತಂ— ಆ ಶಕುನಿಯನ್ನು. ನಜಘ್ನಿವಾನ್— ಕೊಲ್ಲಲಿಲ್ಲ. ಮೂರ್ಛಿತಂ – ಮೂರ್ಛೆ ಹೊಂದಿದ, ಶ್ವಾಸಮಾತ್ರಾವ ಶಿಷ್ಟಂ—ಶ್ವಾಸೋಚ್ಛ್ವಾಸ ಮಾತ್ರ ಉಳಿದಿರುವ, ತಂ– ಆ ಶಕುನಿಯನ್ನು, ದುರ್ಯೋಧನಃ–ದುರ್ಯೋಧನನು, ಸ್ವರಥೇನ–ತನ್ನ ರಥದಿಂದ, ಅಪನಿನ್ಯೇ– ಹಿಂದಕ್ಕೆ ಒಯ್ದನು. ॥೧೪೧॥

ದುರ್ಯೋಧನಸ್ಯಾವರಜಾ ದಶಾತ್ರ ಪ್ರದುದ್ರುವುರ್ಭೀಮಸೇನಂ ವಿಹಾಯ।
ತತೋಽರ್ಜುನಂ ವಾಸುದೇವಂ ಚ ದೃಷ್ಟ್ವಾ ಪ್ರೀತಃ ಶ್ರುತ್ವಾ ಧರ್ಮರಾಜಪ್ರವೃತ್ತಿಂ ॥೧೪೨॥

ಅತ್ರ—ಈ ಯುದ್ಧದಲ್ಲಿ, ದುರ್ಯೋಧನಸ್ಯ – ದುರ್ಯೋಧನನ, ದಶ ಅವರಜಾಃ— ಹತ್ತುಮಂದಿ ತಮ್ಮಂದಿರು, ಭೀಮಸೇನಂ ವಿಹಾಯ—ಶ್ರೀಭೀಮರನ್ನು ಬಿಟ್ಟು, ಪ್ರದುದ್ರುವುಃ – ಓಡಿದರು. ಭೀಮಃ– ಶ್ರೀಭೀಮರು, ತತಃ–ಆನಂತರ, (ಬಂದಿರುವ) ಅರ್ಜುನಂವಾಸುದೇವಂಚ — ಅರ್ಜುನನನ್ನು ಮತ್ತು ಶ್ರೀಕೃಷ್ಣನನ್ನು, ದೃಷ್ಟ್ವಾ – ಕಂಡು, ಚ – ಮತ್ತು, ಧರ್ಮರಾಜ ಪ್ರವೃತ್ತಿಂ- ಧರ್ಮರಾಜನ ಕ್ಷೇಮವಾರ್ತೆಯನ್ನು, ಶ್ರುತ್ವಾ—ಕೇಳಿ, ಪ್ರೀತಃ–ಸಂತುಷ್ಟರಾದರು ॥೧೪೨॥

ಪುನಶ್ಚ ನಿಘ್ನಂತಮರಿ ಪ್ರವೀರಾನ್ ವಿದ್ರಾವಯಂತಂ ಚ ನಿಜಾಂವರೂಥಿನೀಂ।
ಸಸಾರ ದುಶ್ಶಾಸನ ಆತ್ತಧನ್ವಾ ಭೀಮೋಽಪಿ ತಂ ಸಿಂಹ ಇವಾಭಿಪೇದಿವಾನ್ ॥೧೪೩॥

ಪುನಶ್ಚ – ಮತ್ತೆಯೂ, ಅರಿಪ್ರವೀರಾನ್ – ವೈರಿಪಕ್ಷದ ವೀರರನ್ನು, ನಿಘ್ನಂತಂ— ಸಂಹರಿಸತಕ್ಕಂಥ, ಚ–ಮತ್ತು ನಿಜಾಂ ವರೂಥಿನೀಂ – ತಮ್ಮ ಸೈನ್ಯವನ್ನು, ವಿದ್ರಾವಯಂತಂ – ಓಡಿಸತಕ್ಕಂಥ ಶ್ರೀಭೀಮರ ಸಮೀಪಕ್ಕೆ, ಆತ್ತಧನ್ವಾ – ಧನುರ್ಧಾರಿಯಾದ, ದುಶ್ಶಾಸನಃ— ದುಶ್ಶಾಸನನು, ಸಸಾರ – ಏರಿ ಬಂದನು. ಭೀಮೋಽಪಿ— ಶ್ರೀ ಭೀಮರೂ ಕೂಡ ತಂ – ಅವನಮೇಲೆ, ಸಿಂಹಇವ — ಸಿಂಹವು ಮೃಗದ ಮೇಲೆ ಹೇಗೆ ಹೋಗಬೇಕೋ ಹಾಗೆ, ಅಭಿಪೇದಿವಾನ್ — ಏರಿ ಹೋದರು. ॥೧೪೩॥

ತಂ ರೂಕ್ಷವಾಚೋ ಮುಹುರರ್ಪಯಂತಂ ವಿಧಾಯ ಭೀಮೋ ವಿರಥಂ ಕ್ಷಣೇನ ।
ಪ್ರಗೃಹ್ಯ ಭೂಮೌ ವಿನಿಪಾತ್ಯ ವಕ್ಷೋ ವಿದಾರಯಾಮಾಸಗದಾ ಪ್ರಹಾರತಃ ॥೧೪೪॥

ರೂಕ್ಷವಾಚಃ – ಕ್ರೂರ ಮಾತುಗಳನ್ನು, ಮುಹುಃ – ಮೇಲಿಂದಮೇಲೆ, ಅರ್ಪಯಂತಂ – ಹೇಳತಕ್ಕ, ತಂ—ಆ ದುಶ್ಶಾಸನನನ್ನು, ಭೀಮಃ— ಶ್ರೀಭೀಮರು, ಕ್ಷಣೇ—ಅತ್ಯಲ್ಪ ಸಮಯದಲ್ಲಿಯೇ, ವಿರಥಂ ವಿಧಾಯ—ರಥಹೀನನನ್ನಾಗಿಸಿ, ಪ್ರಗೃಹ್ಯ – ಹಿಡಿದು, ಭೂಮೌ ವಿನಿಪಾತ್ಯ – ಭೂಮಿಯಲ್ಲಿ ಕೆಡವಿ, ಗದಾಪ್ರಹಾರತಃ – ಗದಾ ಹೊಡೆತದಿಂದ, ವಕ್ಷಃ – ಎದೆಯನ್ನು, ವಿದಾರಯಾಮಾಸ – ಸೀಳಿದರು. ॥೧೪೪॥

ಆಕ್ರಮ್ಯ ಕಂಠಂ ಚ ಪದೋದರೇಽಸ್ಯ ನಿವಿಶ್ಯ ಪಶ್ಯನ್ಮುಖಮಾತ್ತ ರೋಷಃ ।
ವಿಕೋಶಮಾಕಾಶನಿಭಂ ವಿಧಾಯ ಮಹಾಸಿಮುಸ್ಯೋರಸಿ ಸಂಚಖಾನ ॥೧೪೫॥

ಪದಾ—ಕಾಲಿನಿಂದ, ಅಸ್ಯಕಂಠಂ – ಈ ದುಶ್ಶಾಸನನ ಕೊರಳನ್ನು, ಆಕ್ರಮ್ಯ — ಏರಿ, ಉದರೇ – ಅವನ ಹೊಟ್ಟೆಯಲ್ಲಿ, ನಿವಿಶ್ಯ –ಕುಳಿತು, ಮುಖಂ – ಅವನ ಮುಖವನ್ನು, ಆತ್ತರೋಷಃ ಸನ್ ಪಶ್ಯನ್ – ಸಿಟ್ಟಿಗೆದ್ದವರಾಗಿ ನೋಡುತ್ತಾ, ಆಕಾಶನಿಭಂ – ಆಕಾಶದಂತೆ ನೀಲವಾಗಿರುವ, ಮಹಾಸಿಂ – ಶ್ರೇಷ್ಠ ಖಡ್ಗವನ್ನು, ವಿಕೋಶಂ ವಿಧಾಯ– ಆವರಣದಿಂದ ಹೊರಗೆ ಬರುವಂತೆ ಮಾಡಿ, (ಹೊರತೆಗೆದು), ಅಸ್ಯ ಉರಸಿ – ಇವನವಕ್ಷಸ್ಥಳದಲ್ಲಿ, ಸಂಚಖಾನ – ಸೀಳಿದರು, ॥೧೪೫॥

ಕೃತ್ವಾಸ್ಯವಕ್ಷಸ್ಯುರುಸತ್ತಟಾಕಂ ಪಪೌ ನಿಕಾಮಂ ತೃಷಿತೋಽಮೃತೋಪಮಂ ॥
ತಚ್ಛೋಣಿತಾಂಭೋಭ್ರಮದಕ್ಷನೇನಂ ಸಂಸ್ಮಾರಯಾಮಾಸ ಪುರಾಕೃತಾನಿ ॥೧೪೬॥

(ಭೀಮಃ — ಶ್ರೀಭೀಮರು) ಅಸ್ಯ ವಕ್ಷಸಿ — ಈ ದುಶ್ಶಾಸನನ ಎದೆಯಲ್ಲಿ, ಉರುಸತ್ತಟಾಕಂ ಕೃತ್ವಾ— ಶ್ರೇಷ್ಠ ದೊಡ್ಡ ಕೆರೆಯನ್ನು (ತಗ್ಗನ್ನು), – ಮಾಡಿ, ತೃಷಿತಃ– ನೀರಡಿಸಿದವನು, ಅಮೃತೋಪಮಂ ಯಥಾ – ಅಮೃತ ಸದೃಶ ನೀರನ್ನು ಹೇಗೆ ಕುಡಿಯಬೇಕೋ ಹಾಗೆ, ತಚ್ಛೋಣಿತಾಂಭಃ – ಅವನರಕ್ತವೆಂಬ ಉದಕವನ್ನು, ನಿಕಾಮಂ — ಬೇಕಾಡಷ್ಟು, ಪಪೌ – ಕುಡಿದರು. ಭ್ರಮದಕ್ಷಂ – ತಿರುಗುತ್ತಿರುವಕಣ್ಣುಳ್ಳ, ಏನಂ—ಈ ದುಶ್ಶಾಸನನಿಗೆ, ಪುರಾಕೃತಾನಿ–ದ್ಯೂತ ಸಭೆಯಲ್ಲಿ ಮಾಡಲ್ಪಟ್ಟ ಕುಕಾರ್ಯಗಳನ್ನು, (ದ್ರೌಪದೀದೇವಿಯಕೇಶ ಹಿಡಿದು ಎಳೆದದ್ದು, ವಸ್ತ್ರಹರಣ, ಪಾಂಡವರ ವಸ್ತ್ರ ತೆಗೆದದ್ದು, ಭೀಮರು ನಡೆಯುವಂತೆ ಅಣಕಿಸಿದ್ದು ಇತ್ಯಾದಿಗಳನ್ನು) ಸಂಸ್ಮಾರಯಾಮಾಸ – ನೆನಪು ಮಾಡಿಕೊಟ್ಟರು ॥೧೪೬॥

ವಾಕ್ಸಾಯಕಾಂಶ್ಚಾಸ್ಯಪುರಾಸಮರ್ಪಿತಾನ್ ಸಂಸ್ಮಾರಯಾಮಾಸಪುನಃಪುನರ್ಭೃಶಮ್ ॥
ದಂತಾಂತರಂನ ಪ್ರವಿವೇಶ ತಸ್ಯರಕ್ತಂಹ್ಯಪೇಯಂ ಪುರುಷಸ್ಯಜಾನತಃ ॥೧೪೭॥

ಪುರಾ—ದ್ಯೂತಸಭೆಯಲ್ಲಿ, ಸಮರ್ಪಿತಾನ್ – ದುಶ್ಶಾಸನನಿಂದ ಪಾಂಡವರಿಗೆ ಆಡಲ್ಪಟ್ಟ, ವಾಕ್ಸಾಯಕಾನ್ – ಮಾತುಗಳೆಂಬ ಬಾಣಗಳನ್ನು, ಪುನಃ ಪುನಃ– ಮತ್ತೂ ಮತ್ತೂ, ಅಸ್ಯ—ಈ ದುಶ್ಶಾಸನನಿಗೆ, ಭೃಶಂ – ವಿಶೇಷವಾಗಿ,

ಸಂಸ್ಮಾರಯಾಮಾಸ – ನೆನಪುಮಾಡಿಕೊಟ್ಟರು. ತಸ್ಯ—ಆ ನೀಚದುಶ್ಶಾಸನನ, ರಕ್ತಂ–ರಕ್ತವು, ಪುರುಷಸ್ಯ ರಕ್ತಂ– ಮನಷ್ಯ ರಕ್ತವನ್ನು, ಅಪೇಯಂ -- ಪೇಯವಲ್ಲದ್ದನ್ನಾಗಿ, ಜಾನತಃ— ತಿಳಿದಿರುವ ಶ್ರೀಭೀಮರ, ದಂತಾಂತರಂ – ಹಲ್ಲಿನಒಳಭಾಗಕ್ಕೆ ಕೂಡ, ನ ಪ್ರವಿವೇಶ – ಪ್ರವೇಶಿಸಿಲ್ಲ. (ವಸ್ತುತಃ ರಕ್ತಪಾನಮಾಡಿಲ್ಲ). ॥೧೪೭॥

ತಥಾಪಿ ಶತ್ರುಪ್ರತಿಭೀಷಣಾಯ ಪಪಾವಿವಾಸ್ವಾದ್ಯ ಪುನಃ ಪುನರ್ಭೃಶಂ ॥
ಸ್ಮರನ್ನೃಸಿಂಹಂ ಭಗವಂತ ಮೀಶ್ವರಂ ಸಮನ್ಯುಸೂಕ್ತಂಚ ದದರ್ಶಭಕ್ತ್ಯಾ ॥೧೪೮॥

ತಥಾಪಿ – ರಕ್ತವನ್ನು ಕುಡಿಯದಿದ್ದರೂ ಕೂಡ, ಸಃ–ಆ ಭೀಮರು, ಶತ್ರುಪ್ರತಿಭೀಷಣಾಯ – ಶತ್ರುಪಕ್ಷಕ್ಕೆ ಭಯವನ್ನುಂಟುಮಾಡುವದಕ್ಕಾಗಿ, ಪುನಃ ಪುನಃ– ಮೇಲಿಂದ ಮೇಲೆ, ಆಸ್ವಾದ್ಯ – ಬಾಯಿಚಪ್ಪರಿಸಿ ಚಪ್ಪರಿಸಿ, ಭೃಶಂ– ಚೆನ್ನಾಗಿ, ಪಪೌ ಇವ— ಕುಡಿದಂತೆ ಮಾಡಿದರು. ಚ–ಮತ್ತು, ಭಗವಂತಂ —ಷಡ್ಗುಣಪೂರ್ಣನಾದ, ಈಶ್ವರಂ—ಸರ್ವ ನಿಯಾಮಕನಾದ, ನೃಸಿಂಹಂ–ಶ್ರೀನೃಸಿಂಹದೇವರನ್ನು, ಭಕ್ತ್ಯಾ ಸ್ಮರನ್ – ಭಕ್ತಿಯಿಂದ ಸ್ಮರಿಸುವವರಾಗಿ, ಮನ್ಯುಸೂಕ್ತಂ— ದದರ್ಶ— ಮನ್ಯುಸೂಕ್ತವನ್ನು ಕಂಡರು. (ಶ್ರೀನೃಸಿಂಹದೇವರನ್ನು ಮನ್ಯುಸೂಕ್ತೋಕ್ತಗುಣ ವಿಶಿಷ್ಟನನ್ನಾಗಿ ಕಂಡರು ಎಂದು ತಾತ್ಪರ್ಯ.) ॥೧೪೮॥

ಯಸ್ತೇ ಮನ್ಯೋಽಇತ್ಯತೋನಾರಸಿಂಹಂ ಸೋಮಂ ತಸ್ಮೈಪ್ರಾರ್ಪಯಚ್ಛೋಣಿತಾಖ್ಯಂ ॥
ಯುದ್ಧಾಖ್ಯಯಜ್ಞೇಸೋಮಬುಧ್ಯಾರಿವಕ್ಷ ಈಹೇತಿಸಾಮ್ನಾಗದಯಾವಿಭಿಂದನ್ ॥೧೪೯॥

ಭೀಮಃ— ಶ್ರೀಭೀಮರು, ಯುದ್ಧಾಖ್ಯಯಜ್ಞೇ – ಯುದ್ಧ ಎಂಬ ಯಜ್ಞದಲ್ಲಿ, ಸೋಮಬುಧ್ಯಾ – ಸೋಮರಸವನ್ನು ತೆಗೆಯಬೇಕೆಂಬ ಅಭಿಪ್ರಾಯದಿಂದ, ಈಹೇತಿಸಾಮ್ನಾ – 'ಈಹಾ' ಎಂದು ಆರಂಭವಾಗುವ, ಸೋಮರಸ ತೆಗೆಯುವಾಗ ಹೇಳತಕ್ಕ ಸಾಮ ಮಂತ್ರದಿಂದ(ಆ ಮಂತ್ರವನ್ನು ಹೇಳುತ್ತಾ). ಅರಿವಕ್ಷಃ – ದುಶ್ಶಾಸನನ ಎದೆಯನ್ನು, ಗದಯಾ–ಗದೆಯಿಂದ, ವಿಭಿಂದನ್–ಸೋಮಲತಾ ಎಂಬ ಅಭಿಪ್ರಾಯದಿಂದ ಒಡೆಯುವವ(ಸೀಳುವವ)ರಾಗಿ, ಯಸ್ತೇ ಮನ್ಯೋ ಇತ್ಯತಃ– ಯಸ್ತೇಮನ್ಯೋ ಎಂದು ಆರಂಭ ಆಗುವ ಮನ್ಯುಸೂಕ್ತದಿಂದ, ನಾರಸಿಂಹಂ – ಶ್ರೀನೃಸಿಂಹದೇವರನ್ನು. (ಧ್ಯಾಯನ್‌ಸನ್ – ಧ್ಯಾನಮಾಡುವವರಾಗಿ) ತಸ್ಮೈ– ಆ ಮನ್ಯುನಾಮಕ ಶ್ರೀನೃಸಿಂಹದೇವರಿಗೆ, ಶೋಣಿತಾಖ್ಯಂ – ರಕ್ತವೆಂಬ, ಸೋಮಂ— ಸೋಮರಸವನ್ನು, ಪ್ರಾರ್ಪಯತ್– ಸಮರ್ಪಿಸಿದರು. ॥೧೪೯॥

ಉವಾಚವಾಚಂ ಪುರುಷಪ್ರವೀರಸ್ತಾಂ ಪ್ರತಿಜ್ಞಾಂ ಲೋಕಮಧ್ಯೇ ವಿಧಾಯ ॥
ಯಾಸ್ಸಪತಯಸ್ತಾ ಅಪತಯೋಹಿಜಾತಾ ಯಾಚಾಪತಿಸ್ಸಾಸಪತಿಶ್ಚಜಾತಾ ॥೧೫೦॥

ಪುರುಷಪ್ರವೀರಃ– ಶ್ರೇಷ್ಠಪರಾಕ್ರಮಿಯಾದ ಶ್ರೀಭೀಮರು, ಲೋಕಮಧ್ಯೇ– ಎಲ್ಲ ಜನರ ಮಧ್ಯ (ಸಮಕ್ಷ) ದಲ್ಲಿ, ಪ್ರತಿಜ್ಞಾಂ—ದುಶ್ಶಾಸನನ ರಕ್ತವನ್ನು ಎಲ್ಲರ ಎದುರೆ ಕುಡಿಯುವೆನೆಂಬ ತಮ್ಮ ಪ್ರತಿಜ್ಞೆಯನ್ನು, ಸತ್ಯಂ ವಿಧಾಯ– ಸತ್ಯವನ್ನಾಗಿಮಾಡಿ, ಯಾಃ– ಯಾವಸ್ತ್ರೀಯರು, ಸಪತಯಃ–ಪತಿಸಹಿತರಾಗಿದ್ದರೋ, ತಾಃ– ಅವರು (ಆ ಕೌರವಸ್ತ್ರೀಯರು) ಅಪತಯಃ–ಜಾತಾಃ– ಪತಿರಹಿತರಾದರು. ಚ–ಹಾಗು, ಯಾ– ಯಾವಳು, ಅಪತಿಃ– ಪತಿರಹಿತಳು ಎಂದು ಕೌರವರಿಂದ ಹೇಳಲ್ಪಟ್ಟಿದ್ದಳೋ, ಸಾ–ಅವಳು(ದ್ರೌಪದಿಯು), ಸಪತಿಃ ಜಾತಾ–ಪತಿಸಹಿತಳಾಗಿದ್ದಳು ಎಂದು ಸಿದ್ಧವಾಯಿತು. ॥೧೫೦॥

ಪಶ್ಯಂತು ಚಿತ್ರಾಂ ಪರಮಸ್ಯಶಕ್ತಿಂ ಯೇವೈತಿಲಾಷ್ಪಂಡತಿಲಾಬಭೂವುಃ ॥
ಏನಂಗೃಹೀತಂಚಮಯಾಯದೀಹ ಕಶ್ಚಿತ್ಪುಮಾನ್ಮೋಚಯತು ಸ್ವವೀರ್ಯಾತ್ ॥೧೫೧॥

ಪರಮಸ್ಯ– ಸರ್ವೋತ್ತಮನಾದ ಭಗವಂತನ, ಚಿತ್ರಾಂ ಶಕ್ತಿಂ— ಅದ್ಭುತಶಕ್ತಿಯನ್ನು, ಪಶ್ಯಂತಃ– ನೋಡಿರಿ, ಯೇವೈ– ಯಾರು, ತಿಲಾಃ ಬಭೂವುಃ– ಒಳ್ಳೆಎಳ್ಳುಗಳಾಗಿದ್ದರೋ (ಎಣ್ಣೆಯಿಂದ ಕೂಡಿದ ಎಳ್ಳುಗಳಾಗಿದ್ದರೋ ಅಂದರೆ ಮೈಯಲ್ಲಿ ಎಣ್ಣೆ ಇದ್ದವರು, ಅಂದರೆ ಸಮರ್ಥರಾಗಿದ್ದರೋ ಎಂದು ಅರ್ಥ), ತೇ– ಅವರು (ಕೌರವರು), ವೈ – ಖಂಡಿತ, ಪಂಡತಿಲಾಃ ಬಭೂವುಃ– ಜೊಳ್ಳು ಎಳ್ಳುಗಳಾದರು. (ನಿರ್ವೀರ್ಯರಾದರು)ಯೇ–ಯಾರು, ಪಂಡತಿಲಾಃ ಬಭೂವುಃ–ನಿರ್ವೀರ್ಯರೆಂದು ಹೇಳಲ್ಪಟ್ಟಿದ್ದರೋ ತೇ–ಆ(ಪಾಂಡವರು)ತಿಲಾಃ ಬಭೂವುಃ—ನಿಜವಾದ ವೀರರೆಂದು ಪ್ರಕಟವಾಯಿತು. ಚ–ಮತ್ತು ಇಹ–ಈ ರಣ ಭೂಮಿಯಲ್ಲಿ, ಯದಿ—ಒಂದುವೇಳೆ, ಕಶ್ಚಿತ್ ಪುಮಾನ್— ಯಾವನಾದರೂ ಗಂಡು (ಪ್ರರಾಕ್ರಮಿ) ಇದ್ದರೆ ಸಃ–ಅವನು, ಮಯಾ ಗೃಹೀತಂ ಏನಂ–ನನ್ನಿಂದ ಹಿಡಿಯಲ್ಪಟ್ಟ ಇವನನ್ನು, ಸ್ವವೀರ್ಯಾತ್ – ತನ್ನಪರಾಕ್ರವದಿಂದ, (ನನಗೆ ಶರಣು ಬಂದು ಅಲ್ಲ) ಮೋಚಯಂತು–ಬಿಡಿಸಲಿ, ಇತಿ—ಎಂದು, ವಾಚಂ– ಮಾತನ್ನು, ಉವಾಚ –ಹೇಳಿದರು. ॥೧೫೧॥

ಭಾ. ಅ. ೧೩೪–೧೫೧— ಅನಂತರ ಈ ಘಟನೆಗಳ ಅರಿವು ಇಲ್ಲದ ಧರ್ಮರಾಜನು, ಸಿಟ್ಟಿಗೆದ್ದು ಆಗಲಿ ನಾನು ಅಸಮರ್ಥ; ನೀಚ. ಆದ್ದರಿಂದ ನಾನು ರಾಜ ಪದವಿಯನ್ನು ಬಿಟ್ಟುಕೊಡುವೆನು. ಭೀಮನು ರಾಜನಾಗಲಿ, ನೀನು ಯುವರಾಜನಾಗು. ನನ್ನನ್ನು ಕೊಲ್ಲು; ಅಥವಾ ನಾನೇ ವನಕ್ಕಾದರೂ ಹೋಗುವೆನು. ಎಂದು ಹೇಳಿ ತನ್ನ ಶಯ್ಯಾದಿಂದ ಎದ್ದನು. ಆಗ ಶ್ರೀಕೃಷ್ಣನು ಹಿಡಿದೆಳೆದು ಈ ಘಟನೆಗಳ ಕಾರಣವನ್ನೆಲ್ಲ ಹೇಳಿ ಸಮಾಧಾನ ಮಾಡಿದನು. ಅರ್ಜುನನೂ ಕ್ಷಮೆ ಕೇಳುತ್ತಾ ನಮಸ್ಕರಿಸಿದನು. ಧರ್ಮರಾಜನೂ ವಿಷಯವನ್ನೆಲ್ಲ ತಿಳಿದು ಸಂತೊಷಪಟ್ಟನು. ಶ್ರೀಕೃಷ್ಣನ ಅನುಗ್ರಹದಿಂದ ಆ ಇಬ್ಬರೂ ಬದುಕಿದರು. ಭಕ್ತಿಯಿಂದ ಸ್ತೋತ್ರ ಮಾಡಿದರು. ಅರ್ಜುನನು ಅಣ್ಣನ ಆಶಿರ್ವಾದ ಹೊಂದಿ ಯುದ್ಧಕ್ಕೆ ಹೋದನು. ಕರ್ಣನನ್ನು ಗೆಲ್ಲುವ ಬಗ್ಗೆ ಸಂಶಯದಿಂದ ಕೂಡಿದ್ದ, ಬೆವತಿದ್ದ ಅರ್ಜುನನನ್ನು ಶ್ರೀಕೃಷ್ಣನು ಅವನ ಪೂರ್ವ ಕಾರ್ಯಗಳನ್ನು ಹೇಳಿ ಹುರಿದುಂಬಿಸಿ ಅವನಲ್ಲಿರುವ ನರಾವೇಶವನ್ನೂ ಕೂಡ ವ್ಯಕ್ತ ಮಾಡಿಕೊಟ್ಟನು. ಆಗ ಭೀಮರು ಎಲ್ಲ ಕೌರವ ಸೈನ್ಯವನ್ನು ಓಡಿಸಿದರು. ಪ್ರಮುಖ ವೀರರನ್ನು ಸಂಹರಿಸಿದರು. ಇದನ್ನೆಲ್ಲ ಮಾಡುವಾಗ ತಮ್ಮ ಸಾರಥಿಯ ಜೊತೆಗೆ ಯುದ್ಧ ವಾರ್ತಾವನ್ನು ಮಾತಾಡುತ್ತಾ ಮಾಡುತ್ತಿದ್ದರು. ಆಗ ಸೈನ್ಯ ಸಹಿತನಾದ ಶಕುನಿಯು ದುರ್ಯೋಧನನ ಅನುಜರೊಡನೆ ಕೂಡಿಕೊಂಡು ಬಂದನು. ಅವನ ರಥ – ಆಯುಧಗಳನ್ನು ನಾಶಪಡಿಸಿ ಅವನನ್ನು ಕೆಳಗೆ ಕೆಡವಿದರು. ಆದರೆ ಸಹದೇವನು ಅವನನ್ನು ಕೊಲ್ಲುವೆನೆಂದು ಪ್ರತಿಜ್ಞಾವನ್ನು ತಾವು ಮಾಡಿದ್ದರಿಂದ ಆಗ ಅವನನ್ನು ಸಂಹರಿಸಲಿಲ್ಲ. ಶ್ವಾಸಮಾತ್ರ ಉಳಿದಿರುವ ಆ ಶಕುನಿಯನ್ನು ದುರ್ಯೋಧನನು ಕರೆದುಕೊಂಡು ಹೋದನು. ದುರ್ಯೋಧನನ ತಮ್ಮಂದಿರು ಭೀಮರನ್ನು ಬಿಟ್ಟು ಓಡಿದರು. ಶ್ರೀಕೃಷ್ಣ ಅರ್ಜುನರನ್ನು ಕಂಡ ಶ್ರೀಭೀಮರು ಧರ್ಮರಾಜನ ಕ್ಷೇಮ ವಿಚಾರವನ್ನು ತಿಳಿದು ಸಂತೋಷಪಟ್ಟರು. ಆಗ ದುಃಶಾಸನನು ಶ್ರೀ ಭೀಮರ ಮೇಲೆ ಯುದ್ಧಕ್ಕೆ ಬಂದನು. ಭೀಮರೂ ಏರಿಹೋದರು. ದುಃಶಾಸನನು ಬಹು ನಿಂದಾ ಮಾತುಗಳನ್ನು ಆಡುತ್ತಿದ್ದನು. ಶ್ರೀಭೀಮರು ಅವನನ್ನು ಹಿಡಿದು, ಕೆಡವಿ ಗದಾ ಪ್ರಹಾರದಿಂದ ಅವನ ಎದೆಯನ್ನು ಭೇದಿಸಿ, ತಮ್ಮ ಒಂದು ಕಾಲನ್ನುಅವನ ಕಂಠದಲ್ಲಿಟ್ಟು ಎದೆಯ ಮೇಲೆ ಕುಳಿತು ಖಡ್ಗದಿಂದ ಅವನ ಎದೆಯನ್ನು ಸೀಳಿ ದೊಡ್ಡ ಕೆರೆಯಂತೆ ತಗ್ಗನ್ನು ಮಾಡಿ, ರಕ್ತವನ್ನು ಪಾನ ಮಾಡಿದವರಂತೆ ತೋರಿಸಿದರು. ಅವನ ರಕ್ತವನ್ನು ತಮ್ಮ ಹಲ್ಲಿನ ಹೊರ ಭಾಗದಲ್ಲಿಯೇ ಹಾಕುತ್ತಾ ಕುಡಿದವರಂತೆ ಕೇವಲ ನಟನೆಯನ್ನು ಮಾಡಿದರು. ಅದೂ ಕೂಡ ತಮ್ಮ ಪ್ರತಿಜ್ಞಾಪಾಲನಕ್ಕಾಗಿ, ಶತ್ರುಗಳನ್ನು ಹೆದರಿಸುವದಕ್ಕಾಗಿ, ಆ ನೀಚ ದುಃಶಾಸನನು ಮಾಡಿದ ನೀಚಕಾರ್ಯಗಳನ್ನು ನೆನಪಿಗೆ ತಂದುಕೊಡುತ್ತಾ ಛೇಡಿಸಿದರು. ಮನ್ಯುಸೂಕ್ತವನ್ನು ಅದರಲ್ಲಿ ಪ್ರತಿಪಾದ್ಯ ಗುಣ ವಿಶಿಷ್ಟರಾದ ಶ್ರೀ ನೃಸಿಂಹದೇವರನ್ನು ಸ್ಮರಿಸುತ್ತಾ ಯುದ್ಧವೆಂಬ ಈ ಯಜ್ಞದಲ್ಲಿ ರಕ್ತವೆಂಬ ಸೋಮರಸವನ್ನು ತೆಗೆಯುವದಕ್ಕಾಗಿ ಎಂಬಂತೆ ಎದೆ ಸೀಳಿ, ರಕ್ತವೆಂಬ ಸೋಮರಸವನ್ನು ಶ್ರೀನೃಸಿಂಹದೇವರಿಗೆ ಸಮರ್ಪಿಸಿದರು. ಹೀಗೆ ಎಲ್ಲರ ಸಮಕ್ಷದಲ್ಲಿ ತಮ್ಮ ಪ್ರತಿಜ್ಞೆಯನ್ನು ಪೂರ್ಣಮಾಡಿ–"ನೋಡಿರಿ, ದೇವರ ವಿಚಿತ್ರ ಶಕ್ತಿಯನ್ನು ಯಾವ ಹೆಣ್ಣುಮಕ್ಕಳು ಪತಿಸಹಿತರಾಗಿದ್ದರೋ ಅವರು (ಕೌರವಸ್ತ್ರೀಯರು) ಈಗ ವಿಧವೆಯರಾದರು. ಯಾವ ದ್ರೌಪದಿಯನ್ನು ಪತಿರಹಿತಳೆಂದು ನೀಚ ಕೌರವರು, ಅಂದಿದ್ದರೋ, ಆ ದ್ರೌಪದಿಯು ಪತಿಸಹಿತಳೇ ಎಂದು ಪ್ರಕಟವಾಯಿತು. ತಮ್ಮನ್ನು ಮಹಾ ವೀರರನ್ನಾಗಿ, ನಮ್ಮನ್ನು ನಿರ್ವೀರ್ಯರನ್ನಾಗಿ ಹೇಳಿದ ಕೌರವರೇ ನಿರ್ವೀರ್ಯರು ಎಂದು ನಾವೇ ವೀರರೆಂದೂ ಪ್ರಕಟವಾಯಿತು. "ಇಲ್ಲಿ ಯಾವನಾದರೂ ಗಂಡು ಇದ್ದರೆ ಬರಲಿ! ನಾನು ಹಿಡಿದಿರುವ ಇವನನ್ನು ತನ್ನ ಶಕ್ತಿಯಿಂದ ಬಿಡಿಸಿಕೊಂಡು ಹೋಗಲಿ" ಎಂದು ಹೇಳಿದರು.

ಇತಿಬ್ರುವಾಣಃ ಪುನರೇವರಕ್ತಂ ಪಪೌ ಸುಧಾಂ ದೇವವರೋ ಯಥಾದಿವಿ ॥
ಪುನಶ್ಚ ಸಪ್ರಾಣಮಮುಂ ವಿಸೃಜ್ಯನದನ್ನನರ್ತಾರಿಬಲೇ ನಿರಾಯುಧಃ ॥೧೫೨॥

ಇತಿಬ್ರುವಾಣಃ ಸನ್ – ಹೀಗೆ ಹೇಳುವವರಾಗಿ, ಪುನಃ ಏವ – ಮತ್ತೂ ಮತ್ತೂ, ರಕ್ತಂ,–ರಕ್ತವನ್ನು, ದಿವಿ–ಸ್ವರ್ಗಲೋಕದಲ್ಲಿ, ದೇವವರಃ— ಶ್ರೇಷ್ಠದೇವತೆಯಾದ ಇಂದ್ರನು, ಸುಧಾಂ ಯಥಾ – ಅಮೃತವನ್ನು ಹೇಗೆ ಕುಡಿಯಬೇಕೋ ಹಾಗೆ, ಪಪೌ– ಕುಡಿದಂತೆ ತೋರಿಸಿದರು. ಪುನಃ – ನಂತರ ಸಪ್ರಾಣಂ ಅಮುಂ – ಜೀವಸಹಿತನಾದ ಈ ದುಶ್ಶಾಸನನನ್ನು, ವಿಸೃಜ್ಯ – ಬಿಟ್ಟು ಅರಿಬಲೇ – ಶತ್ರುಸೈನ್ಯದ ಮಧ್ಯದಲ್ಲಿ, ನಿರಾಯುಧಃ ಸನ್– ಆಯುಧವಿಲ್ಲದವನಾಗಿ, ನನರ್ತ – ಕುಣಿದರು. ॥೧೫೨॥

ಪ್ರತ್ಯನೃತ್ಯನ್ ಪುರಾಯೋಽಸ್ಮಾನ್ ಪುನರ್ಗೌರಿಗೌರಿತಿ ॥
ತಾನ್ವಯಂ ಪ್ರತಿನೃತ್ಯಾಮೋ ಪುನರ್ಗೌರಿತಿಗೌರಿತಿ ॥೧೫೩॥

ಇತಿಬ್ರುವನ್ನೃತ್ಯಮಾನೋಽರಿಧ್ಯೇ ಆಸ್ಫೋಟಯಂಶ್ಚತುರ್ಗಣಾನ್ ಅಜೋಹವೀತ್ ॥
ಶಶಾಕಚದ್ರುಷ್ಟುಮಮುಂ ನ ಕಶ್ಚಿದ್ವೈಕರ್ತನದ್ರೌಣಿ ಸುಯೋಧನಾದಿಷು ॥೧೫೪॥

ಪುರಾ— ಹಿಂದೆ (ನಾವು ದ್ಯೂತಸಭೆಯಿಂದ ವನಕ್ಕೆ ಹೊರಡುವಾಗ) ಯೇ – ಯಾವದುಷ್ಟ ಕೌರವರು, ಅಸ್ಮಾನ್ ಪ್ರತಿ – ನಮ್ಮನ್ನು ಕುರಿತು, ಪುನಃ – ಮೇಲಿಂದ ಮೇಲೆ ಗೌರಿತಿ ಗೌರಿತಿ – ಎತ್ತು ಎತ್ತು ಎಂದು ಹೇಳಿ (ಗೂಳಿ ಹೊರಟ ಹಾಗೆ ಹೊರಟಾನೆ ನೋಡಿ ಎಂದು ಹೇಳಿ), ಅನೃತ್ಯನ್ – ಕುಣಿದರೋ, ತಾನ್ ಪ್ರತಿ ಅವರನ್ನು ಕುರಿತು, ವಯಂ— ನಾವು, ಪುನಃ—ಮೇಲಿಂದ ಮೇಲೆ, ಗೌರಿತಿ ಗೌರಿತಿ ನೃತ್ಯಾಮಃ – ಗೂಳಿ ಎಂದು ಹೇಳಿ ಹೇಳಿ ಕುಣಿಯುತ್ತೇವೆ. ಇತಿ ಬ್ರುವನ್ — ಹೀಗೆ ಹೇಳುತ್ತಾ,ಅರಿಮಧ್ಯೇ— ವೈರಿಗಳ ಮಧ್ಯದಲ್ಲಿಯೇ, ನೃತ್ಯಮಾನಃ – ಕುಣಿಯುತ್ತಿರುವ ಶ್ರೀಭೀಮರು (ಊರುಂ—ತೊಡೆಯನ್ನು) ಆಸ್ಫೋಟಯನ್ – ಬಡಿಯುವವರಾಗಿ (ಶೆಡ್ಡು ಹೊಡೆಯುವವರಾಗಿ), ಯೋದ್ಧುಂ—ಯುದ್ಧ ಮಾಡಲು, ಶತ್ರುಗಣಾನ್ – ಶತ್ರುಸಮೂಹವನ್ನು, ಅಜೋಹವೀತ್ — ಕರೆದರು. ಚ– ಆದರೆ, ವೈಕರ್ತನದ್ರೌಣಿ ಸುಯೋಧನಾದಿಷು – ಕರ್ಣ, ಅಶ್ವತ್ಥಾಮ ದುರ್ಯೋಧನ ಇವರಲ್ಲಿ, ಕಶ್ಚಿತ್ – ಯಾವನೂ, ಅಮುಂ – ಆ ಭೀಮರನ್ನು, ದ್ರಷ್ಟುಂಚ – ನೋಡಲೂ ಕೂಡ, ನ ಶಶಾಕ – ಸಮರ್ಥರಾಗಲಿಲ್ಲ. ॥೧೫೩॥೧೫೪॥

ಭಯಾತ್ತು ಕರ್ಣಸ್ಯ ಪಪಾತ ಕಾರ್ಮುಕಂ ನ್ಯಮೀಲಯಾಮಾಸ ತದಾಕ್ಷಿಣೇಚ ।
ಸಂಬೋಧಿತೋ ಮದ್ರರಾಜೇನ ಯುದ್ಧೇಸ್ಥಿತಃ ಕಥಂಚಿತ್ಸತು ಪಾರ್ಥಭಾಗಃ ॥೧೫೫॥

ಭಯಾತ್—ಹೆದರಿಕೆಯಿಂದ, ಕರ್ಣಸ್ಯ ಕಾರ್ಮುಕಂತು— ಕರ್ಣನ ಧನುಸ್ಸುಮಾತ್ರ, ಪಪಾತ – ಬಿದ್ದೇಬಿಟ್ಟಿತು. ಚ— ಮತ್ತು(ಸಃ– ಆ ಕರ್ಣನು)ಅಕ್ಷಿಣೇ ನ್ಯಮೀಲಯಾಮಾಸ–ಕಣ್ಣುಗಳನ್ನು ಮುಚ್ಚಿದನು. ಪಾರ್ಥಭಾಗಃ ಸಃ– ಅರ್ಜುನನ ಪಾಲಾದ, ಆ ಕರ್ಣನು, ಮದ್ರರಾಜೇನ – ಶಲ್ಯನಿಂದ, ಸಂಬೋಧಿತಃ ಸನ್ – ಧೈರ್ಯ ತುಂಬಲ್ಪಟ್ಟವನಾಗಿ, ಕಥಂಚಿತ್ – ಹೇಗೋ, ಯುದ್ಧೇಸ್ಥಿತಃ—ಯುದ್ಧದಲ್ಲಿ ನಿಂತನು. ॥೧೫೫॥

ದ್ರೌಣಿರ್ವಿಹಾಯೈನಮುಪಾಜಗಾಮ ದೂರಂ ತದಾ ಭೀಮಸೇನೋಜಗಾದ ।
ಪೀತಃ ಸೋಮೋ ಯುದ್ಧಯಜ್ಞೇ ಮಯಾದ್ಯ ವಧ್ಯಃ ಪುಶುರ್ಮೇಹರಯೇ ಸುಯೋಧನಃ ॥೧೫೬॥

ದ್ರೌಣಿಃ – ಅಶ್ವತ್ಥಾಮಾಚಾರ್ಯರು, ಏನಂ – ಈ ಭೀಮರನ್ನು, ವಿಹಾಯ–ಬಿಟ್ಟು,ದೂರಂ—ಬಹು ದೂರಕ್ಕೆ, ಉಪಾಜಗಾಮ – ಹಿಂದೆ ಸರಿದರು. ತದಾ–ಆಗ, ಭೀಮಸೇನಃ – ಶ್ರೀಭೀಮರು, ಅದ್ಯ–ಇಂದು(ಈಗ), ಯುದ್ಧ ಯಜ್ಞೇ—

ಯುದ್ಧವೆಂಬ ಯಜ್ಞದಲ್ಲಿ, ಸೋಮಃ—(ದುಃಶಾಸನನ ರಕ್ತ ವೆಂಬ)ಸೋಮರಸವು, ಪೀತಃ– ಕುಡಿಯಲ್ಪಟ್ಟಿತು. ಹರಯೇ– ಶ್ರೀಹರಿಪ್ರೀತಿಗಾಗಿ, ಪಶುಃ – ಯಜ್ಞ ಪಶುವಿನಂತಿರುವ, ಸುಯೋಧನಃ – ದುರ್ಯೋಧನನು, ವಧ್ಯಃ– ಸಂಹರಿಸಲ್ಪಡಬೇಕು, ಇತಿ–ಎಂದು, ಜಗಾದ – ಹೇಳಿದರು. ॥೧೫೬॥

ಇತಿಬ್ರುವನ್ವ್ಯತಮುತ್ಸೃಜ್ಯ ಶತ್ರುಂ ದುರ್ಯೋಧನಂಚಾಶುರುಷಾಭಿದುದ್ರುವೇ ॥
ಆಯಾಂತಮೀಕ್ಷ್ಯೈವತಮುಗ್ರಪೌರುಷಂ ದುದ್ರಾವ ಭೀತಃ ಸ ಸುಯೋಧನೋ ಭೃಶಮ್ ॥೧೫೭॥

ಇತಿ ಬ್ರುವನ್ ಸನ್— ಹೀಗೆ ಹೇಳುವವರಾಗಿ, (ಭೀಮಃ– ಶ್ರೀಭೀಮರು), ವ್ಯತಂ ಶತ್ರುಂ – (ಆ ಹೊತ್ತಿಗೆ) ಸತ್ತಿರುವ, ದುಃಶ್ಯಾಸನನನ್ನು, ಉತ್ಸೃಜ್ಯ— ಬಿಟ್ಟು, ರುಷಾ – ಸಿಟ್ಟಿನಿಂದ, ಆಶು— ಕೂಡಲೇ, ದುರ್ಯೋಧನಂ ಚ – ದುರ್ಯೋಧನನಸಮೀಪಕ್ಕೂ ಕೂಡ, ಅಭಿದುದ್ರುವೇ – ಓಡಿಹೋದರು. ಆಯಾಂತಂ— ತನ್ನ ಕಡೆಗೆ ಬರುತ್ತಿರುವ, ಉಗ್ರ ಪೌರುಷಂ ತಂ— ಬಹುಪರಾಕ್ರಮಿಯಾದ ಆ ಭೀಮರನ್ನು ಈಕ್ಷ್ಯೈವ— ನೋಡಿಯೇ, ಸುಯೋಧನಃ – ದುರ್ಯೋಧನನು, ಭೃಶಂ ಭೀತಃಸನ್– ಚೆನ್ನಾಗಿ ಹೆದರಿದವನಾಗಿ, ದುದ್ರಾವ – ಓಡಿದನು. ॥೧೫೭॥

ಬಲದ್ವಯಂಚಾಪಯಯೌ ವಿಹಾಯಭಯಾದ್ಭೀಮಂ ಕೃಷ್ಣಪಾರ್ಥೌ ವಿನೈವ ॥
ಆಯೋಧನಂ ಶೂನ್ಯಮಭೂನ್ಮುಹೂರ್ತಂನನರ್ತ ಭೀಮೋ ವ್ಯಾಪ್ತಪದೇನ ಹರ್ಷಾತ್ ॥೧೫೮॥

ಬಲದ್ವಯಂಚ – ಎರಡುಸೈನ್ಯವೂಕೂಡ, ಭಯಾತ್— ಹೆದರಿಕೆಯಿಂದ, ಭೀಮಂ–ಶ್ರೀಭೀಮರನ್ನು, ವಿಹಾಯ– ಬಿಟ್ಟು, ಅಪಯಯೌ— ಯುದ್ಧಭೂಮಿಯಿಂದ ಹಿಂದಕ್ಕೆ ಹೋಯಿತು. ಆಯೋಧನಂ – ಯುದ್ಧಭೂಮಿಯು, ಕೃಷ್ಣಪಾರ್ಥೌಏವ ವಿನಾ – ಶ್ರೀಕೃಷ್ಣಾರ್ಜುನರಿಬ್ಬರನ್ನೇ ಬಿಟ್ಟು, ಮುಹೂರ್ತಂ– ಮುಹೂರ್ತ(ಎರಡುಗಳಿಗೆಗಳ)ಪರ್ಯಂತ, ಶೂನ್ಯಂ ಅಭೂತ್– ಎಲ್ಲರಿಂದ ರಹಿತವಾಗಿತ್ತು. ಭೀಮಃ – ಶ್ರೀಭೀಮರು, ಹರ್ಷಾತ್– ಸಂತೋಷದಿಂದ, ವ್ಯಾಪ್ತಪದೇನ– ~~ಹುಲಿ ಹೆಜ್ಜೆಯಂತೆ ಹೆಜ್ಜೆಹಾಕುತ್ತಾ(ಎರಡುಕೈಗಳನ್ನೂ ಕೂಡ ಊರಿ ಹುಲಿ ಕುಣಿಯುವಂತೆ),~~ನನರ್ತ – ಕುಣಿದರು. ॥೧೫೮॥

ಸಂಕಲ್ಪ್ಯಶತ್ರೂನ್ ಗೋವದೇವಾಜಿಮಧ್ಯೇ ಶಾರ್ದೂಲವತ್ತಚ್ಚರಿತಂನಿಶಾಮ್ಯ ॥
ಜಹಾಸ ಕೃಷ್ಣಶ್ಚ ಧನಂಜಯಶ್ಚ ಶಶಂಸತುಶ್ಚೈನಮತಿಪ್ರಹೃಷ್ಟೌ ॥೧೫೯॥

ಶತ್ರೂನ್— ವೈರಿಗಳನ್ನು, ಆಜಿಮಧ್ಯೇ – ರಣಭೂಮಿಯ ಮಧ್ಯದಲ್ಲಿ, ಗೋವದೇವ – ಗೋವಿನಂತೆಯೇ ಸಂಕಲ್ಪ್ಯ—ಸಂಕಲ್ಪಿಸಿ, ಶಾರ್ದೂಲವತ್ – ಹುಲಿಯಂತೆ, ತಚ್ಚರಿತಂ— ಆ ಶ್ರೀಭೀಮಸೇನದೇವರ ನರ್ತನಕಾರ್ಯವನ್ನು ನಿಶಾಮ್ಯ–ನೋಡಿ, ಕೃಷ್ಣಃಜಹಾಸ–ಶ್ರೀಕೃಷ್ಣನು ನಕ್ಕನು, ಚ–ಮತ್ತು, ಧನಂಜಯಃ ಚ – ಧನಂಜಯನೂ, ಕೂಡ, ಜಹಾಸ– ನಕ್ಕನು. ಚ–ಮತ್ತು. ಅತಿಪ್ರಹೃಷ್ಟೌ – ಶ್ರೀಭೀಮರ ವೀರಕಾರ್ಯದಿಂದ, ಅತ್ಯಂತ ಸಂತೋಷಪಟ್ಟಂಥ ಇಬ್ಬರೂ, ಏನಂ – ಈ ಭೀಮರನ್ನು, ಶಶಂಸತುಃ— ಹೊಗಳಿದರು. ॥೧೫೯॥

ಯದಾ ಸರಂಗಃಪವಮಾನಸೂನುನಾ ಶೂನ್ಯಃಕೃತಸ್ತತ್ರ ಮುಹೂರ್ತಮಾತ್ರಾತ್ ॥
ದುರ್ಯೋಧನಸ್ಯಾವರಜಾಃ ಶರೌಘೈರವೀವೃಷನ್ ಭೀಮಮುದಾರಸತ್ವಂ ॥೧೬೦॥

ಯದಾ — ಯಾವಸಮಯದಲ್ಲಿ, ಸಃ ರಂಗಃ—ಆ ರಣಭೂಮಿಯು, ಪವಮಾನಸೂನುನಾ– ವಾಯುಪುತ್ರ ಭೀಮ ರಿಂದ,ಶೂನ್ಯಃಕೃತಃ – ಎಲ್ಲಸೈನ್ಯದಿಂದ ರಹಿತವಾಗಿಮಾಡಲ್ಪಟ್ಟಿತೋ, ತತ್ರ – ಆ ಸಮಯದಿಂದ, ಮುಹೂರ್ತ ಮಾತ್ರಾತ್– ಒಂದು ಮುಹೂರ್ತ ಸಮಯದನಂತರ, ದುರ್ಯೋಧನಸ್ಯ ಅವರಜಾಃ— ದುರ್ಯೋಧನನ ತಮ್ಮಂದಿರು, ಉದಾರಸತ್ವಂ –

ಉತ್ಕೃಷ್ಟಜ್ಞಾನ ಹಾಗೂ ಬಲಗಳಿಗಳಿಂಳ್ಳ, ಭೀಮಂ – ಶ್ರೀಭೀಮರ ಮೇಲೆ, ಶರೌಘೈಃ— ಬಾಣಗಳ ಸಮೂಹಗಳಿಂದ, ಅವೀವೃಷನ್ ಸುರಿಮಳೆ ಮಾಡಿದರು. ॥೧೬೮॥

ತಾನ್ಮಾರುತಿರ್ಬಾಣವರೈರ್ನಿಕೃತ್ತಶೀರ್ಷಾನ್ಯಮಾಯಾನಯದಾಶುವೀರಃ ।
ತಸ್ಮಿನ್ದಿನೇ ವಿಂಶತಿರ್ಧಾರ್ತರಾಷ್ಟ್ರಾ ಹತಾಸ್ತದನ್ಯೇ ಸಮರಾತ್ಪ್ರದುದ್ರುವುಃ ॥೧೬೯॥

ವೀರಃ ಮಾರುತಿಃ—ಪರಾಕ್ರಮಿಗಳಾದ ಭೀಮಸೇನದೇವರು, ತಾನ್ - ಆ ಕೌರವರನ್ನು, ಬಾಣವರೈಃ—ಶ್ರೇಷ್ಠ ಬಾಣಗಳಿಂದ, ನಿಕೃತ್ತಶೀರ್ಷಾನ್ – ಕತ್ತರಿಸಲ್ಪಟ್ಟ ತಲೆಯುಳ್ಳವರನ್ನಾಗಿ, (ಕೃತ್ವಾ–ಮಾಡಿ), ಯಮಾಯ — ಯಮನ ಸಮೀಪಕ್ಕೆ, ಅನಯತ್—ಕಳಿಸಿದರು (ಕೊಂದರು), ತಸ್ಮಿನ್ದಿನೇ – ಆ ದಿನದಲ್ಲಿ, ವಿಂಶತಿಃ ಧಾರ್ತರಾಷ್ಟ್ರಾಃ — ಇಪ್ಪತ್ತು ಮಂದಿ ಧೃತರಾಷ್ಟ್ರಪುತ್ರರು, ಹತಾಃ ಸಂಹರಿಸಲ್ಪಟ್ಟರು, ತದನ್ಯೇ— ಅವರಿಂದ ಉಳಿದವರು, ಸಮರಾತ್ ಪ್ರದುದ್ರುವುಃ– ಯುದ್ಧದಿಂದ ಓಡಿದರು. ॥೧೬೯॥

ಕರ್ಮಾಣ್ಯನನ್ಯೋಪಯಿಕಾನಿ ಭೀಮೇ ಕುರ್ವತ್ಯೇವಂ ಭೀತ ಭೀತೇಽರಿಸಂಘೇ ।
ನಿಮೀಲಿತಾಕ್ಷೇಚ ಭಯೇನ ಕರ್ಣೇ ಕರ್ಣಾತ್ಮಜೋನಕುಲಂ ಪ್ರತ್ಯಧಾವತ್ ॥೧೭೨॥

ಏವಂ - ಈ ಪ್ರಕಾರ, ಭೀಮೇ—ಶ್ರೀಭೀಮರು, ಅನನ್ಯೋಪಯಿಕಾನಿ – ಬೇರೆಯವರಿಂದ ಮಾಡಲಸಾಧ್ಯವಾದ, ಕರ್ಮಾಣಿ—ಕಾರ್ಯಗಳನ್ನು, ಕುರ್ವತಿ ಸತಿ – ಮಾಡುತ್ತಿರಲು, ಅರಿಸಂಘೇ – ವೈರಿ ಸಮೂಹವು, ಭೀತಭೀತೇ ಸತಿ–ತುಂಬಾ, ಹೆದರುತ್ತಿರಲು, ಕರ್ಣೇ ಚ – ಕರ್ಣನೂ, ನಿಮೀಲಿತಾಕ್ಷೇ ಸತಿ —ಕಣ್ಣು ಮುಚ್ಚುತ್ತಿರಲು, ಕರ್ಣಾತ್ಮಜಃ— ಕರ್ಣಪುತ್ರನ ನಕುಲಂ ಪ್ರತಿ ಅಧಾವತ್—ನಕುಲನನ್ನು ಕುರಿತು ಓಡಿಬಂದನು. ॥೧೭೨॥

~~ಮಾದ್ರೀಸುತೋ ವೃಷಸೇನಂ ಶರೌಘೈರವಾರಯತ್ತಂ ವಿರಥಂ ಚಕಾರ ।~~
ಕರ್ಣಾತ್ಮಜಃ ಸೋಽಪ್ಯಸಿ ಚರ್ಮಪಾಣಿಸ್ತಸ್ಯಾನುಗಾಂಸ್ತ್ರಿಸಹಸ್ರಂ ಜಘಾನ ॥೧೭೩॥

ಮಾದ್ರೀಸುತಃ – ನಕುಲನು, ವೃಷಸೇನಂ - ವೃಷಸೇನನೆಂಬ ಕರ್ಣಪುತ್ರನನ್ನು,ಶರೌಘೈಃ– ಬಾಣಸಮೂಹಗಳಿಂದ ಅವಾರಯತ್ – ತಡೆದನು, ವಿರಥಂ ಚಕಾರ – ರಥಹೀನನನ್ನಾಗಿ ಮಾಡಿದನು, ಸಃ ಕರ್ಣಾತ್ಮಜಃ ಅಪಿ–ಆ ಕರ್ಣಪುತ್ರನೂ ಕೂಡ, ಅಸಿಚರ್ಮಪಾಣಿಃ ಸನ್ – ಖಡ್ಗಢಾಲುಧರನಾಗಿ, ತಸ್ಯ – ಆ ನಕುಲನ, ತ್ರಿಸಹಸ್ರಂ ಅನುಗಾನ್—ಮೂರುಸಾವಿರ ಸೈನಿಕರನ್ನು, ಜಘಾನ—ಕೊಂದನು. ॥೧೭೩॥

ಕರ್ಣಾತ್ಮಜಸ್ತಸ್ಯ ಸಂಛಿದ್ಯ ಚರ್ಮ ಭೀಮಾರ್ಜುನಾದೀನಪಿ ಬಾಣಸಂಘೈಃ ।
ಅವೀವೃಷತ್ತಸ್ಯ ಪಾರ್ಥಃ ಶರೇಣ ಗ್ರೀವಾಬಾಹೂರೂನ್ಯುಗಪಚ್ಚಕರ್ತ ॥೧೭೪॥

ಕರ್ಣಾತ್ಮಜಃ – ಕರ್ಣಪುತ್ರನಾದ ವೃಷಸೇನನು, ತಸ್ಯ – ಆ ನಕುಲನ, ಚರ್ಮ—ಢಾಲನ್ನು, ಸಂಛಿದ್ಯ–ಕತ್ತರಿಸಿ, ಅರ್ಜುನಾದೀನಪಿ – ಅರ್ಜುನ ಮೊದಲಾದವರ ಮೇಲೆ ಕೂಡ, ಬಾಣ ಸಂಘೈಃ – ಬಾಣಸಮೂಹಳಿಗಂದ, ಅವೀವೃಷತ್—ಸುರಿಮಳೆ ಮಾಡಿದನು, ಪಾರ್ಥಃ—ಅರ್ಜುನನು, ಶರೇಣ – ಒಂದು ಬಾಣದಿಂದ, ತಸ್ಯ—ಆ ವೃಷಸೇನನ, ಗ್ರೀವಾಬಾಹೂರೂನ್ – ಕಂಠ ಕೈ ಕಾಲುಂಗಳನ್ನು, ಯುಗಪತ್ – ಏಕಕಾಲದಲ್ಲಿ. ಚಕರ್ತ—ಕತ್ತರಿಸಿದನು. ॥೧೭೪॥

ಭಾ. ಅ. ೧೫೨–೧೭೪ ಇಂದ್ರನು ಅಮೃತಪಾನ ಮಾಡಿದಂತೆ,ಶ್ರೀಭೀಮರು ದುಃಶಾಸನನ ರಕ್ತಪಾನ ಮಾಡಿದಂತೆ ಪುನಃ ಪುನಃ ನಟನೆ ಮಾಡುತ್ತಾ, ಇನ್ನೂ ಜೀವಂತನಾಗಿದ್ದ ಆ ದುಃಶಾಸನನನ್ನು ಬಿಟ್ಟು ವೈರಿಪಕ್ಷದ ಮಧ್ಯದಲ್ಲಿಯೇ

ಯಾವ ಭಯವೂ ಕೈಯಲ್ಲಿಲ್ಲದೇ ಕಾಣಿದರು. ಹಿಂದೆ ನಾವು ವನಕ್ಕೆ ಹೊರಡುವಾಗ ನಮ್ಮನ್ನು ಅಣಕಿಸಿ ಕುಣಿದಂಥಾ ಈ ದುಷ್ಟ ಕೌರವರನ್ನು ಅಣಕಿಸಿ ಈಗ ನಾವು ಕುಣಿಯುತ್ತೇವೆ. ವೀರರೆಂಬುವವರೇ ಬನ್ನಿರಿ, ಯಾರು ಬರುವಿರೋ ಬನ್ನಿರಿ, ಎಂದು ಶೆಡ್ಡು ಹೊಡೆದು ಕರೆದರು. ಈ ಭೀಮರನ್ನು ನೋಡಲೂ ಕೂಡ ಕರ್ಣ ಅಶ್ವತ್ಥಾಮ ದುರ್ಯೋಧನರಂಥ ಪರಾಕ್ರಮಿಗಳಿಗೂ ಕೂಡ ಆಗಲಿಲ್ಲ. ಭಯದಿಂದ ಕರ್ಣನ ಬಿಲ್ಲೇ ಕೆಳಗೆ ಬಿತ್ತು; ಕಣ್ಣನ್ನು ಮುಚ್ಚಿದನು. ಶಲ್ಯರಾಜನು ಕೊಟ್ಟ ಧೈರ್ಯದಿಂದ ಹೇಗೋ ಅಲ್ಲಿ ನಿಂತನಷ್ಟೇ. ಅಶ್ವತ್ಥಾಮರೂ ಭಯದಿಂದ ದೂರಕ್ಕೆ ಹೋದರು. ಆಗ ಶ್ರೀಭೀಮರು 'ಇಂದು ಈ ಯುದ್ಧಯಜ್ಞದಲ್ಲಿ ದುಶ್ಶಾಸನನ ರಕ್ತವೆಂಬ ಸೋಮರಸವನ್ನು ಕುಡಿದಿರುವೆನು. ಇನ್ನು ಯಜ್ಞನಿಯಾಮಕನಾದ ಶ್ರೀಹರಿಯ ಪ್ರೀತಿಗಾಗಿ ಯಜ್ಞಪಶುವಿನಂತಿರುವ ದುರ್ಯೋಧನನನ್ನು ಸಂಹರಿಸುವೆನು' ಎಂದು ಹೇಳಿ ಆ ಸಮಯಕ್ಕೆ ಸತ್ತ ದುಶ್ಶಾಸನನನ್ನು ಪೂರ್ಣ ಬಿಟ್ಟು, ಸಿಟ್ಟಿನಿಂದ ದುರ್ಯೋಧನನ ಕಡೆಗೆ ಓಡಿದದರು. ಅವರು ಬರುವದನ್ನು ನೋಡಿಯೇ ಹೆದರಿ ದುರ್ಯೋಧನನು ಓಡಿದನು. (ಇಲ್ಲಿ ಆಚಾರ್ಯರು ಸುಯೋಧನ ಎಂಬ ಶಬ್ದ ಪ್ರಯೋಗ ಮಾಡಿ ಭಾರೀಯುದ್ಧಮಾಡುವವನೂ ಕೂಡ ಓಡಿದನು ಎಂಬ ತಾತ್ಪರ್ಯ ತಿಳಿಸಿದ್ದಾರೆ. ಆದರಿಂದ ಶ್ರೀಭೀಮರ ಪರಾಕ್ರಮವನ್ನು ಊಹಿಸಬಹುದು.) ಎರಡೂ ಸೈನ್ಯಗಳೂ ಕೂಡ ಶ್ರೀಭೀಮರನ್ನು ಬಿಟ್ಟು ಹೆದರಿಕೆಯಿಂದ ಓಡಿದವು ಯುದ್ಧಭೂಮಿಯು ಒಂದು ಮುಹೂರ್ತಸಮಯ (48 ನಿಮಿಷ) ಶೂನ್ಯವಾಗಿತ್ತು. ಭೀಮರು ಕೈಗಳನ್ನು ನೆಲದಮೇಲಿಟ್ಟು ಹುಲಿಯು ಕುಣಿಯುವಂತೆ ಕುಣಿದರು. ಎಲ್ಲ ಶತ್ರುಗಳನ್ನು ಗೋವುಗಳಿಂಬಂತೆ ಸಂಕಲ್ಪಿಸಿ, ಅವರನ್ನು ಸಂಹರಿಸಲು ತಾವು ಹುಲಿಯಂತೆ ಇರುವದಾಗಿ ತೋರಿಸುವ ಭಾವವಿರುವ ಅವರ ಕುಣಿತವನ್ನು ನೋಡಿದ ಶ್ರೀಕೃಷ್ಣನು ಶ್ರೀಭೀಮರ ಭೀಮಪರಾಕ್ರಮ ಕಾರ್ಯದಿಂದ ಸಂತುಷ್ಟನಾಗಿ ನಕ್ಕನು. ಅರ್ಜುನನೂ ನಕ್ಕನು. ಇಬ್ಬರೂ ಹೊಗಳಿದರು. ಮುಹೂರ್ತ ಸಮಯದ ನಂತರ ಮತ್ತೇ ಹೇಗೋ ಧೈರ್ಯಮಾಡಿಕೊಂಡು ಬಂದ ದುರ್ಯೋಧನನ ತಮ್ಮಂದಿರು ಶ್ರೀ ಭೀಮರ ಮೇಲೆ ಬಾಣವೃಷ್ಟಿಯನ್ನು ಮಾಡಿದರು. ಅವರೆಲ್ಲರ ತಲೆಗಳನ್ನು ಶ್ರೀಭೀಮರು ಬಾಣಗಳಿಂದ ಕತ್ತರಿಸಿ ಸಂಹರಿಸಿದರು. ಅಂದು ಇಪ್ಪತ್ತುಮಂದಿ ಧೃತರಾಷ್ಟ್ರಪುತ್ರರು ಸತ್ತರು. ಉಳಿದವರು ಯುದ್ಧಬಿಟ್ಟು ಓಡಿದರು. ಹೀಗೆ ಬೇರೆಯವರಿಂದ ಮಾಡಲಾಗದ ವೀರಕಾರ್ಯಗಳನ್ನು ಶ್ರೀಭೀಮರು ಮಾಡಿದಾಗ, ಎಲ್ಲ ಶತ್ರುಗಳೂ ಹೆದರಿದಾಗ, ಕರ್ಣನೂ ಕೂಡ ಕಣ್ಣುಮುಚ್ಚಿರುವಾಗ, ಅವನ ಮಗನಾದ ವೃಷಸೇನನು ನಕುಲನ ಮೇಲೆ ಯುದ್ಧಕ್ಕೆ ಹೋದನು. ಆಗ ನಕುಲನು ಅವನನ್ನು ತಡೆದು ರಥವನ್ನು ಧ್ವಂಸಮಾಡಿದನು. ವೃಷಸೇನನು ಖಡ್ಗಧಾರಿಯಾಗಿ ಬಂದು ನಕುಲನ ಮೂರುಸಾವಿರ ಸೈನಿಕರನ್ನು ಸಂಹರಿಸಿ ನಕುಲನ ಢಾಲನ್ನು ಕತ್ತರಿಸಿ ಭೀಮಾರ್ಜುನಾದಿಗಳ ಮೇಲೆ ಕೂಡ ಬಾಣವೃಷ್ಟಿಯನ್ನು ಮಾಡಿದನು. ಆಗ ಅರ್ಜುನನು ಒಂದೇ ಬಾಣದಿಂದ ಏಕಕಾಲದಲ್ಲಿ ಆ ವೃಷಸೇನನ ಕುತ್ತಿಗೆ ಕೈಕಾಲುಗಳನ್ನು ಕತ್ತರಿಸಿ ಸಂಹರಿಸಿದನು.

ಏಕೇನ ಬಾಣೇನ ಸುತೇಹತೇಸ್ಮೇ ವೈಕರ್ತನೋ ವಾಸವಿಮಭ್ಯಧಾವತ್ ।
ತಯೋರಭೂ ದ್ವೈರಥಯುದ್ಧ ಮದ್ಭುತಂ ಸರ್ವಾಸ್ತ್ರವಿದ್ವರಯೋರುಗ್ರರೂಪಂ ॥೧೬೫॥

ವೈಕರ್ತನಃ — ಕರ್ಣನು, ಸ್ವೇಸುತೇ — ತನ್ನ ಮಗನು, ಏಕೇನ ಬಾಣೇನ ಹತೇ ಸತಿ — (ಅರ್ಜುನನಿಂದ) ಒಂದೇ ಬಾಣದಿಂದ ಸಂಹರಿಸಲ್ಪಡುತ್ತಿರಲು, ವಾಸವಿಂ ಅಭ್ಯಧಾವತ್— ಅರ್ಜುನನ ಮೇಲೆ ಏರಿಬಂದನು. ಅಥ — ನಂತರ, ಸರ್ವಾಸ್ತ್ರವಿದ್ವರಯೋಃ ತಯೋಃ — ಸರ್ವಾಸ್ತ್ರ ಜ್ಞಾನಿ ಶ್ರೇಷ್ಠರಾದ ಅವರಿಬ್ಬರಿಗೆ, ಅದ್ಭುತಂ ಉಗ್ರರೂಪಂ ದ್ವೈರಥ ಯುದ್ಧಂ—ಆಶ್ಚರ್ಯಕರವಾದ, ಭಯಂಕರವಿರುವ ದ್ವಂದ್ವ ಯುದ್ಧವು, ಅಭೂತ್ — ಆಯಿತು. ॥೧೬೫॥

ಪಕ್ಷಗ್ರಹಾಸ್ತತ್ರ ಸುರಾಸುರಾಸ್ತಯೋರನ್ಯೇಚ ಜೀವಾಗಗನಂ ಸಮಾಶ್ರಿತಾಃ ।
ಮಹಾನ್ವಿವಾದೋಽಪ್ಯಭವತ್ತಯೋಃಕೃತೇ ತದಾಗಿರೀಶೋಽವದದಬ್ಜಯೋನಿವ್ ॥೧೬೬॥

ತತ್ರ— ಆ ಯುದ್ಧದಲ್ಲಿ, ಸುರಾಸುರಾಃ — ದೇವದಾನವರು, ಅನ್ಯೇಚ ಜೀವಾಃ — ಬೇರೆ ಭೂತಪಿಶಾಚಾದಿ ಚೇತನರೂ ಕೂಡ, ಗಗನಂ ಸಮಾಶ್ರಿತಾಸ್ಸಶತಃ— ಆಕಾಶವನ್ನು ಆಶ್ರಯಿಸಿದವರಾಗಿ, ತಯೋಃ— ಆ ಅರ್ಜುನ ಕರ್ಣರ, ಪಕ್ಷಗ್ರಹಾಃ-ಪಕ್ಷವನ್ನು ಹಿಡಿದವರು. (ದೇವತೆಗಳು ಅರ್ಜುನನ ಪಕ್ಷ ನಮ್ಮದು ಎಂದೂ, ದೈತ್ಯದಾನವರು ಕರ್ಣನ ಪಕ್ಷ ನಮ್ಮದು ಎಂದೂ ಹೇಳುವವರು) ಆಸುಃ— ಆಗಿದ್ದರು. ತಯೋಃಕೃತೇ — ಅವರಿಬ್ಬರಸಲುವಾಗಿ, ತೇಷಾಂ— ಆ ಎಲ್ಲರಿಗೆ

ಮಹಾನ್ ವಿವಾದಃ ಅಪಿ— ಬಹಳ ಚರ್ಚೆಯೂ ಕೂಡ, (ಅರ್ಜುನನು ಗೆಲ್ಲುತ್ತಾನೆ ಎಂದು ದೇವತೆಗಳೂ, ಕರ್ಣನು ಗೆಲ್ಲುತ್ತಾನೆ ಎಂದು ಅಸುರರೂ ಹೀಗೆ), ಅಭವತ್— ಆಯಿತು. ತದಾ — ಆ ಸಮಯದಲ್ಲಿ, ಗಿರೀಶಃ – ರುದ್ರದೇವರು, ಅಬ್ಜಯೋನಿಂ – ಚತುರ್ಮುಖಿ ಬ್ರಹ್ಮದೇವರನ್ನು ಕುರಿತು, ಅವದತ್ – ಮಾತನಾಡಿದರು. ॥೧೬೬॥

ಸುರಾಸುರಾಣಾಂ ಭೀಮಸುಯೋಧನೌ ದ್ವೌ ಸಮಾಶ್ರಯೌ ತತ್ಪ್ರಿಯೌ ಕರ್ಣಪಾರ್ಥೌ ।
ಪ್ರಾಣೋಪಮೌ ತೇನ ಚೈತತ್ಕೃತೇ ತೇ ಸುರಾಸುರಾಃ ಕರ್ತುಮಿಚ್ಛಂತಿ ಯುದ್ಧಮ್ ॥೧೬೭॥

ತದಾವಿನಾಶೋ ಜಗತಾಂಮಹಾನ್ಸ್ಯಾತ್ತೇನಾನಯೋಃ ಸಮಮೇವಾಸ್ತು ಯುದ್ಧಂ ।
ಇತೀರಿತೇ ವಾಸವಃ ಪದ್ಮಯೋನಿಂ ಜಗಾದ ಕೃಷ್ಣೋ ಯತ್ರ ಜಯಶ್ಚ ತತ್ರ ॥೧೬೮॥

ಸುರಾಸುರಾಣಾಂ— ದೇವಾಸುರರಿಗೆ, ದ್ವೌ ಭೀಮಸುಯೋಧನೌ – ಭೀಮ ದುರ್ಯೋಧನರಿಬ್ಬರು, ಸಮಾಶ್ರಯೌ —ಆಶ್ರಯರು. ಪ್ರಾಣೋಪಮೌ ತತ್ಪ್ರಿಯೌ -ಅವರಿಬ್ಬರಿಗೆ ಪ್ರಾಣಸದೃಶರಾಗಿ ಪ್ರಿಯರಾದವರು, ಕರ್ಣಪಾರ್ಥೌ—ಕರ್ಣಾರ್ಜುನರು. ತೇನ – ಆ ಕಾರಣದಿಂದ, ತೇ ಸುರಾಸುರಾಃ— ಆ ದೇವಾಸುರರೂಕೂಡ, ಏತತ್ಕೃತೇ — ಕರ್ಣಾರ್ಜುನರಸಲುವಾಗಿ, ಯುದ್ಧಂ ಕರ್ತುಂ ಇಚ್ಛಂತಿ – ಯುದ್ಧವನ್ನು ಮಾಡಲು ಇಚ್ಛಿಸುತ್ತಿದ್ದಾರೆ. ತದಾ— ಎಲ್ಲರೂ ಯುದ್ಧವನ್ನು ಆರಂಭಿಸಿದಾಗ, ಜಗತಾಂ – ಲೋಕಗಳ, ಮಹಾನ್ ವಿನಾಶಃ ಸ್ಯಾತ್— ದೊಡ್ಡ ನಾಶವು ಆಗಬಹುದು. ತೇನ-ಆದ್ದರಿಂದಃ ಯುದ್ಧಂ – ಈ ಕರ್ಣಾರ್ಜುನರ ಯುದ್ಧವು, ಸಮಮೇವ – ಸಮವಾಗಿ ಜಯಾಪಜಯ ರಹಿತವಾಗಿ; ಅಸ್ತು–ಆಗಲಿ. ಇತಿ ಈರಿತೇಸತಿ — ಹೀಗೆ ರುದ್ರದೇವರಿಂದ ಹೇಳಲ್ಪಡುತ್ತಿರಲು, ವಾಸವಃ — ಇಂದ್ರನು, ಯತ್ರ ಕೃಷ್ಣಃ ತತ್ರಚ ಜಯಃ – ಎಲ್ಲಿ ಶ್ರೀಕೃಷ್ಣನಿರುವನೋ ಅಲ್ಲಿಯೇ ಜಯವು, ಇತಿ – ಎಂದು, ಪದ್ಮಯೋನಿಂ — ಬ್ರಹ್ಮದೇವರಿಗೆ, ಜಗಾದ— ಹೇಳಿದನು. ॥೧೬೭॥೧೬೮॥

ಕಾಮೋನಕೃಷ್ಣಸ್ಯ ಮೃಷಾಭವೇದ್ಧಿ ಕಾಮೋಽಸ್ಯಪಾರ್ಥಸ್ಯ ಜಯಂ ಪ್ರದಾತುಂ ॥
ಇತ್ಯೂಚಿವಾನ್ವಾಸವಃ ಫಲ್ಗುನಸ್ಯ ಜಯೋಽಸ್ತು ಕರ್ಣಸ್ಯ ವಧಸ್ತಥೇತಿ ॥
ಉಕ್ತ್ವೇತಿನಮತ್ಕಂಜಭವಂ ತಥೇತಿ ಪ್ರಾಹಾಸುರಾನ್ದೇವತಾಶ್ಚಾಬಭಾಷೇ ॥೧೬೯॥

ನ ಕರ್ಣಾರ್ಜುನಯೋರರ್ಥೇ ವಿರೋಧಂಕುರುತ ಕ್ವಚಿತ್ ॥
ಭೀಮದುರ್ಯೋಧನಾರ್ಥೇವಾ ಪಶ್ಯಂತ್ವೇವ ಚಸಂಗರಮ್ ।
ಇತ್ಯುಕ್ತೇ ಶಾಂತಿಮಾಪನ್ನಾ ದದೃಶುಃ ಸಂಗರಂ ತಯೋಃ ॥೧೭೦

ಹಿ—ಯಾವ ಕಾರಣದಿಂದ, ಕೃಷ್ಣಸ್ಯಕಾಮಃ— ಶ್ರೀಕೃಷ್ಣನ ಇಚ್ಛೆಯು, ಮೃಷಾ ನ ಭವೇತ್ ಹಿ— ಸುಳ್ಳಾಗುವದಿಲ್ಲ ಎಂದೂ ಶ್ರುತಿ ಪ್ರಸಿದ್ಧವೋ, ಅಸ್ಯ – ಈ ಶ್ರೀಕೃಷ್ಣನಿಗೆ, ಪಾರ್ಥಸ್ಯ ಜಯಂ ಪ್ರದಾತುಂ – ಅರ್ಜುನನಿಗೆ ಜಯವನ್ನು ಕೊಡಲು, ಕಾಮಃ – ಇಚ್ಛೆ ಇರುವದೋ, (ತಸ್ಮಾತ್ – ಆ ಕಾರಣದಿಂದಲೂ ಅರ್ಜುನನಿಗೆ ಜಯವು) ಇತಿ – ಎಂದು ಊಚಿವಾನ್ – ಹೇಳಿದಂತೆ, ವಾಸವಃ – ಇಂದ್ರನು, ಫಲ್ಗುನಸ್ಯ ಜಯಃ ಅಸ್ತು— ಅರ್ಜುನನಿಗೆ ಜಯವಾಗಲಿ, ತಥಾ – ಕರ್ಣಸ್ಯ ವಧಃ ಅಸ್ತು– ಕರ್ಣನ ವಧವಾಗಲಿ, ಇತಿ ಚ – ಎಂದೂ, ಉಕ್ತ್ವಾ – ಹೇಳಿ, ಕಂಜಭವಂ – ಬ್ರಹ್ಮದೇವರಿಗೆ, ಅನಮತ್ – ನಮಸ್ಕರಿಸಿದನು. (ತದಾ – ಆಗ, ಸಃ— ಬ್ರಹ್ಮದೇವರು) ತಥಾ ಅಸ್ತು ಇತಿ — ಹಾಗೇ ಆಗಲಿ ಎಂದೂ, ಪ್ರಾಹ – ಹೇಳಿದರು; ಅಸುರಾನ್ ದೇವತಾಶ್ಚ – ದೈತ್ಯರಿಗೆ ದೇವತೆಗಳಿಗೆಕೂಡ, – ಯೂಯಂ-ನೀವು ಯಾರೂ, ಕ್ವಚಿತ್– ಯಾವ ಪ್ರಸಂಗದಲ್ಲಿಯೂಕೂಡ, ಕರ್ಣಾರ್ಜುನಯೋಃ ಅರ್ಥೇ, ಭೀಮ ದುರ್ಯೋಧನಯೋಃ ಅರ್ಥೇವಾ— ಕರ್ಣಾರ್ಜುನರ ಸಲುವಾಗಿಯಾಗಲಿ, ಭೀಮದುರ್ಯೋಧನರ ಸಲುವಾಗಿ ಯಾಗಲಿ, ವಿರೋಧಂ ನ ಕುರುತ – ಜಗಳವಾಡಬೇಡಿರಿ. ಚ – ಆದರೆ ಸಂಗರಂ ಪಶ್ಯಂತು ಏವ— ಅವರ ಯುದ್ಧವನ್ನು ನೋಡುವದನ್ನು ಮಾತ್ರ ಮಾಡಿರಿ, ಇತಿ— ಎಂದು ಅಬಭಾಷೇ – ಮಾತ

ನಾಡಿದರು. ಇತಿ ಉಕ್ತೇ ಸತಿ – ಹೀಗೆ ಹೇಳಿದಾಗ, ಶಾಂತಿಂಆಪನ್ನಾಃ – ಶಾಂತರಾದ ದೇವಾಸುರರು, ತಯೋಃ ಸಂಗರಂ ದದೃಶುಃ – ಅವರ ಯುದ್ಧವನ್ನು ನೋಡಿದರು. ॥೧೬೯॥೧೭೦॥

ವವರ್ಷತುಸ್ತೌಚ ಮಹಾಸ್ತ್ರಶಸ್ತ್ರೈರ್ಭೀಮೋರಥಸ್ಥೋऽವರಜಂಜುಗೋಪ ॥
ಶೈನೇಯಪಾಂಚಾಲ ಮುಖಾಶ್ಚಪಾರ್ಥಮಾವಾರ್ಯತಸ್ಥುಃಪ್ರಸಭಂನದಂತಃ ॥೧೭೧॥

ತೌಚ– ಆ ಕರ್ಣಾರ್ಜುನರೂ, ಮಹಾಸ್ತ್ರಶಸ್ತ್ರೈಃ – ಪ್ರಬಲಶಸ್ತ್ರಾಸ್ತ್ರಗಳಿಂದ, ವವರ್ಷತುಃ – (ಪರಸ್ಪರರ ಮೇಲೆ) ಸುರಿಮಳೆಗರೆದಾಡಿದರು. ರಥಸ್ಥಃ ಭೀಮಃ— ರಥದಲ್ಲಿ ಕುಳಿತಿರುವ ಶ್ರೀಭೀಮರು, ಅವರಜಂ—ತಮ್ಮನಾದ ಅರ್ಜುನನನ್ನು, ಜುಗೋಪ – ರಕ್ಷಿಸಿದರು. ಶೈನೇಯ ಪಾಂಚಾಲ ಮುಖಾಶ್ಚ— ಸಾತ್ಯಕಿ ಧೃಷ್ಟದ್ಯುಮ್ನನ ಮೊದಲಾದವರೂ ಕೂಡ, ಪ್ರಸಭಂ ನದಂತಃ ಸಂತಃ – ಚೆನ್ನಾಗಿ ಗರ್ಜಿಸುವವರಾಗಿ, ಪಾರ್ಥಂ ಆವಾರ್ಯತಸ್ಥುಃ – ಅರ್ಜುನನನ್ನು ಸುತ್ತುವರಿದು ನಿಂತರು. ॥೧೭೧॥

ದುರ್ಯೋಧನದ್ರೌಣಿಮುಖಾಶ್ಚ ಕರ್ಣಂ ರರಕ್ಷುರಾವಾರ್ಯ ತದಾऽऽಸಯುದ್ಧಂ ॥
ತತಾರ್ಜುನಂ ಬಾಣಗಣೈಃ ಸಕರ್ಣಃಸಂಮರ್ದಯಾಮಾಸ ವಿಶೇಷಯನ್ರಣೇ ॥
ತದಾ ನದನ್ ಭೀಮಸೇನೋ ಜಗಾದಗದಾಂ ಸಮಾದಾಯ ಸಮಾತ್ತರೋಷಃ ॥೧೭೨॥

ಅಹಂಚೈನಂ ಗದಯಾ ಪೋಥಯಾಮಿತ್ವಂ ವಾಜಹೀಮಂ ಸಮುಪಾತ್ತವೀರ್ಯಃ ॥
ಕೃಷ್ಣೋऽಪಿತಂ ಬೋಧಯಾಮಾಸ ಸಮ್ಯಕ್ ನರಾವೇಶಂವ್ಯಂಜಯನ್ ಭೂಯಏವ ॥೧೭೩॥

ದುರ್ಯೋಧನದ್ರೌಣಿಮುಖಾಶ್ಚ –ದುರ್ಯೋಧನ ಅಶ್ವತ್ಥಾಮ ಮೊದಲಾದವರು, ಕರ್ಣಂ–ಕರ್ಣನನ್ನು, ಆವಾರ್ಯ – ಸುತ್ತುವರಿದುನಿಂತು, ರರಕ್ಷುಃ -- ರಕ್ಷಿಸಿದರು. ತದಾ–ಆಗ, ಯುದ್ಧಂ ಆಸ– ಯುದ್ಧವು ಆಯಿತು. ತತ್ರ ರಣೇ– ಆ ಯುದ್ಧದಲ್ಲಿ, ಸಃ ಕರ್ಣಃ – ಆ ಕರ್ಣನು. ಅರ್ಜುನಂ – ಅರ್ಜುನನನ್ನು, ವಿಶೇಷಯನ್ ಸನ್ – ಮೀರಿಸುವವನಾಗಿ, ಬಾಣಗಣೈಃ– ಬಾಣಗಳ ಸಮೂಹಗಳಿಂದ ಸಂಮರ್ದಯಾಮಾಸ – ಪೀಡಿಸಿದನು: ತದಾ–ಆಗ ಸಮಾತ್ತರೋಷಃ ಭೀಮಸೇನಃ– ಸಿಟ್ಟಿಗೆದ್ದ ಶ್ರೀಭೀಮರು, ನದನ್ — ಗರ್ಜಿಸುವವರಾಗಿ, ಗದಾಂ ಸಂಮಾದಾಯ– ಗದೆಯನ್ನು ತೆಗೆದುಕೊಂಡು, ಅಹಂ— ನಾನು, ಏನಂ – ಈ ಕರ್ಣನನ್ನು, ಚ – ಖಂಡಿತವಾಗಿ, ಗದಯಾ–ಈ ಗದೆಯಿಂದ, ಪ್ರೋಥಯಾಮಿ – ಸಂಹರಿಸುವೆನು. ವಾ – ಅಥವಾ, ತ್ವಂ– ನೀನು, ಸಮುಪಾತ್ತವೀರ್ಯಃ ಸನ್—ವಿಶೇಷ ಪರಾಕ್ರಮವನ್ನು ಹೊಂದಿದವನಾಗಿ, ಇಮಂ ಜಹಿ– ಇವನನ್ನು ಸಂಹರಿಸು, ಇತಿ– ಎಂದು, ಜಗಾದ– ಹೇಳಿದರು. ಕೃಷ್ಣಃ ಅಪಿ– ಶ್ರೀಕೃಷ್ಣನಾದರೂ ಕೂಡ, ಭೂಯಏವ– ಮೇಲಿಂದ ಮೇಲೆ, ನರಾವೇಶಂ ವ್ಯಂಜಯನ್ ಸನ್ – ಅರ್ಜುನನಲ್ಲಿರುವ ನರಾವೇಶವನ್ನು ಪ್ರಕಟಪಡಿಸುವವನಾಗಿ, ತಂ– ಅರ್ಜುನನಿಗೆ, ಸಮ್ಯಕ್ ಬೋಧಯಾಮಾಸ – ನೀನು ಕರ್ಣನನ್ನು (ಜಯಿಸಲು) ಸಮರ್ಥನಿರುವಿ ಇತ್ಯಾದಿ ಧೈರ್ಯವಾಕ್ಯಗಳಿಂದ ತಿಳಿಹೇಳಿದನು. ॥೧೭೨-೧೭೩॥

ಸಮೃದ್ಧವೀರ್ಯಃ ಸತದಾ ಧನಂಜಯಃಸುಯೋಧನದ್ರೌಣಿಕೃಪಾನ್ ಸಭೋಜಾನ್ ॥
ಸಾಕಂಚಬಾಣೈರ್ವಿರಥಾಂಶ್ಚಕಾರ ವಿವ್ಯಾಧ ತಾನಪ್ಯರಿಹಾಸುಪುಂಖೈಃ ॥೧೭೪॥

ತದಾ— ಆಗ, ಸಮೃದ್ಧವೀರ್ಯಃ—ವಿಶೇಷವಾಗಿ ಹೆಚ್ಚು ಪರಾಕ್ರಮವನ್ನು ಹೊಂದಿದ,ಅರಿಹಾ ಸಃಧನಂಜಯಃ– ಶತ್ರುಸಂಹಾರಕನಾದ ಆ ಅರ್ಜುನನು, ಸಭೋಜಾನ್ — ಭೋಜವಂಶದ ಕೃತವರ್ಮನಿಂದ ಸಹಿತರಾದ, ಸುಯೋಧನ ದ್ರೌಣಿಕೃಪಾನ್ –ದುರ್ಯೋಧನ ಅಶ್ವತ್ಥಾಮಕೃಪಾಚಾರ್ಯರನ್ನು, ಸುಪುಂಖೈಃ ಬಾಣೈಃ– ಶೋಭನವಾದ ಹಿಂಭಾಗವುಳ್ಳ ಬಾಣಗಳಿಂದ, ಸಾಕಂ – ಏಕಕಾಲದಲ್ಲಿ, ವಿರಥಾನ್ ರಥರಹಿತರನ್ನಾಗಿ, ಚಕಾರ – ಮಾಡಿದನು. ತಾನ್ ಅಪಿ – ದುರ್ಯೋಧನಾದಿಗಳನ್ನೂ ಕೂಡ, ವಿವ್ಯಾಧ– ಪೀಡಿಸಿದನು. ॥೧೭೪॥

ತೇಕಿಂಚಿದ್ದೂರತಸ್ತಸ್ಥುಃ ಪಶ್ಯಂತೋಯುದ್ಧಮದ್ಭುತಂ ॥
ಅಮಾನುಷಂತತ್ಪಾರ್ಥಸ್ಯ ದೃಷ್ಟ್ವಾಕರ್ಮಗುರೋಃಸುತಃ ॥
ಗೃಹೀತ್ವಾಪಾಣಿನಾಪಾಣಿಂ ದುರ್ಯೋಧನಮುಭಾಷತ ॥೧೭೫॥

ತೇ – ಆ ದುರ್ಯೋಧನಾದಿಗಳು, ಅದ್ಭುತಂ ಯುದ್ಧಂ ಪಶ್ಯಂತಃ ಸಂತಃ – ಆಶ್ಚರ್ಯಕರವಾದ ಯುದ್ಧವನ್ನು ನೋಡುವವರಾಗಿ, ಕಿಂಚಿತ್ ದೂರತಃ– ಸ್ವಲ್ಪ ದೂರಕ್ಕೆ, ತಸ್ಥುಃ— ನಿಂತರು. ಗುರೋಃ ಸುತಃ – ಗುರುಪುತ್ರರಾದ ಅಶ್ವತ್ಥಾಮಾಚಾರ್ಯರು, ಪಾರ್ಥಸ್ಯ – ಅರ್ಜುನನ, ತತ್ ಅಮಾನುಷಂ ಕರ್ಮ—ಮನುಷ್ಯನಿಗೆ ಅಸಾಧ್ಯವಾದ ಆ ಕಾರ್ಯವನ್ನು, ದೃಷ್ಟ್ವಾ – ನೋಡಿ, ಪಾಣಿನಾ — ಕೈಯಿಂದ, ಪಾಣಿಂ – ದುರ್ಯೋಧನನ ಕೈಯನ್ನು, ಗೃಹೀತ್ವಾ — ಹಿಡಿದು, ದುರ್ಯೋಧನಂ— ದುರ್ಯೋಧನನಿಗೆ, ಅಭಾಷತ – ಹೇಳಿದರು. ॥೧೭೫॥

ದೃಷ್ಟಂ ಹಿ ಭೀಮಸ್ಯ ಬಲಂ ತ್ವಯಾದ್ಯತಥೈವ ಪಾರ್ಥಸ್ಯ ಯಥಾ ಜಿತಾ ವಯಮ್ ।
ಅಲಂ ವಿರೋಧೇನ ಸಮೇತ್ಯ ಪಾಂಡವೈಃ ಪ್ರಶಾಧಿರಾಜ್ಯಂಚ ಮಯಾಸಮೇತಃ ॥೧೭೬॥

ಅದ್ಯ—ಇಂದು, ತ್ವಯಾ – ನಿನ್ನಿಂದ, ಭೀಮಸ್ಯ ಬಲಂ – ಶ್ರೀಭೀಮರ ಶಕ್ತಿಯು, ದೃಷ್ಟಂ – ಕಾಣಲ್ಪಟ್ಟಿತು, ತಥೈವ — ಹಾಗೆಯೇ, ಪಾರ್ಥಸ್ಯ ಬಲಂ – ಅರ್ಜುನನ ಸಾಮರ್ಥ್ಯವು, ಯಥಾವಯಂ ಜಿತಾಃ – ನಾವು ಹೇಗೆ ಸೋತೆವೋ ತಥಾ – ಹಾಗೆ, ದೃಷ್ಟಂ — ಕಾಣಲ್ಪಟ್ಟಿತು, ವಿರೋಧೇನ ಅಲಂ — ದ್ವೇಷ, ಯುದ್ಧಗಳು ಸಾಕು, ಪಾಂಡವೈಃ— ಪಾಂಡವರಿಂದ, ಸಮೇತ್ಯ—ಸೇರಿ, ಮಯಾಚ — ನನ್ನಿಂದಲೂ, ಸಮೇತಃಸನ್ – ಕೂಡಿದವನಾಗಿ, ರಾಜ್ಯಂ ಪ್ರಶಾಧಿ— ರಾಜ್ಯವನ್ನು ಆಳು. ॥೧೭೬॥

ಧನಂಜಯಸ್ತಿಷ್ಠತಿ ವಾರಿತೋಮಯಾ ಜನಾರ್ದನೋನೈವ ವಿರೋಧಮಿಚ್ಛತಿ ।
ವೃಕೋದರಸ್ತದ್ವಚನೇ ಸ್ಥಿತಃಸದಾ ಯುಧಿಷ್ಠಿರಃ ಶಾಂತಮನಾಸ್ತಥಾಯಮೌ ॥೧೭೭॥

ಹಿತಾರ್ಥಮೇತತ್ತವ ವಾಕ್ಯಮೀರಿತಂ ಗೃಹಾಣ ಮೇನೈವ ಭಯಾದುದೀರಿತಂ ।
ಅಹಂ ಹ್ಯವಧ್ಯೋಮಮಚೈವ ಮಾತುಲೋನಶಂಕಿತುಂ ಮೇ ವಚನಂ ತ್ವಮರ್ಹಸಿ ॥೧೭೮॥

ಧನಂಜಯಃ – ಅರ್ಜುನನು, ಮಯಾ ವಾರಿತಸ್ಸನ್ – ನನ್ನಿಂದ ತಡೆಯಲ್ಪಟ್ಟವನಾಗಿ, ತಿಷ್ಠತಿ – ಯುದ್ಧಬಿಟ್ಟು ನಿಲ್ಲುತ್ತಾನೆ, ಜನಾರ್ದನಃ – ಶ್ರೀಕೃಷ್ಣನು, ವಿರೋಧಂ—ಕಲಹವನ್ನು, ನೈವ ಇಚ್ಛತಿ—ಅಪೇಕ್ಷಿಸುವದಿಲ್ಲ, ವೃಕೋದರಃ– ಭೀಮನು, ಸದಾ— ಯಾವಾಗಲೂ, ತದ್ವಚನೇ – ಆ ಶ್ರೀಕೃಷ್ಣನ ಮಾತಿನಂತೆ, ಸ್ಥಿತಃ – ಇರುವವನು, ಯುಧಿಷ್ಠಿರಃ ಶಾಂತಮನಾಃ–ಧರ್ಮರಾಜನು ಶಾಂತಸ್ವಭಾವದವನು, ಯಮೌ ತಥಾ–ಅವಳಿಗಳಾದ ನಕುಲಸಹದೇವರೂ ಕೂಡ ಶಾಂತರು (ಅವರಾರಿಗೂ ಯುದ್ಧ ಬೇಕಿಲ್ಲ ಎಂದು ತಾತ್ಪರ್ಯ.) ತವ ಹಿತಾರ್ಥಂ – ನಿನ್ನ ಹಿತಕ್ಕಾಗಿ, ಈರಿತಂ ಏತತ್ವಾಕ್ಯಂ– ಹೇಳಿದ ಈ ವಾಕ್ಯವನ್ನು, ತ್ವಂ–ನೀನು, ಗೃಹಾಣ – ಸ್ವೀಕರಿಸು, ಹಿ–ಯಾವಕಾರಣದಿಂದ, ಅಹಂ–ನಾನು, ಅವಧ್ಯಃ—ವಧ ವಿಲ್ಲದವನೋ, ಮಮ ಮಾತುಲಃ ಚ – ನನ್ನ ಸೋದರಮಾವನಾದ ಕೃಪಾಚಾರ್ಯರೂ ಕೂಡ ಅವಧ್ಯರಾಗಿರುವರೋ, ತಸ್ಮಾತ್ – ಆ ಕಾರಣದಿಂದ, ತ್ವಂ – ನೀನು, ಮೇ ವಚನಂ – ನನ್ನ ಮಾತನ್ನು, ಭಯಾದುದೀರಿತಂ ಇತಿ – ಮರಣ ಭಯ ದಿಂದ ಹೇಳಲ್ಪಟ್ಟದ್ದು ಎಂದು, ಶಂಕಿತುಂ ನ ಅರ್ಹಸಿ – ಸಂಶಯ ಮಾಡುವದು ಯೋಗ್ಯವಲ್ಲ. ॥೧೭೭॥೧೭೮॥

ಇತೀರಿತಃ ಪ್ರಾಹ ಸುಯೋಧನಸ್ತಂ ದುಶ್ಶಾಸನಸ್ಯಾದ್ಯ ಪಸೌ ಹಿಶೋಣಿತಂ ।
ಶಾರ್ದೂಲ ಚೇಷ್ಟಾನುಕರೋಚ್ಚ ಭೀಮೋನಮೇ ಕಥಂಚಿತ್ತದನೇನ ಸಂಧಿಃ ॥೧೭೯॥

ಇತಿ ಈರಿತಃ ಸುಯೋಧನಃ — ಹೀಗೆ ಹೇಳಿಸಿಕೊಂಡ ದುರ್ಯೋಧನನು, ಹಿ — ಯಾವ ಕಾರಣದಿಂದ, ಭೀಮಃ — ಭೀಮನು, ಅದ್ಯ — ಇಂದು, ದುಶ್ಶಾಸನಸ್ಯ ರಕ್ತಂ — ದುಶ್ಶಾಸನನ ರಕ್ತವನ್ನು, ಪಪ್ತೌ — ಕುಡಿದನೋ, ಚ — ಮತ್ತು, ಶಾರ್ದೂಲ ಚೇಷ್ಟಾಂ ಅಕರೋತ್ — ಹುಲಿಯಂತೆ ಚೇಷ್ಟೆಯನ್ನು (ಕುಣಿತವನ್ನು)ಮಾಡಿದನೋ. ತತ್ — ಆ ಕಾರಣದಿಂದ, ಅನೇನ— ಈ ಭೀಮನಿಂದ, ಸಂಧಿಃ — ಸಂಧಾನವು, ಕಥಂಚಿತ್ ನ (ಸ್ಯಾತ್)–ಯಾವ ರೀತಿಯಿದಲೂ ಆಗಲಾರದು. ಇತಿ— ಎಂದು, ತಂ— ಅಶ್ವತ್ಥಾಮನಿಗೆ, ಪ್ರಾಹ — ಹೇಳಿದನು. ॥೧೭೯॥

ಇತ್ಯುಕ್ತೋದ್ರೌಣಿರಾಸೀತ್ಸ ತೂಷ್ಣೀಂ ಕರ್ಣಧನಂಜಯೌ ।
ಮಹಾಸ್ತ್ರ ಶಸ್ತ್ರವರ್ಷೇಣ ಚಕ್ರತುಃ ಖಂ ನಿರಂತರಂ ॥೧೮೦॥

ಆಗ್ನೇಯ ವಾರುಣ್ಯೈಂದ್ರಾದೀನ್ಯೇತಾನ್ಯನ್ಯೋನ್ಯಮೃತ್ಯವೇ ।
ಬ್ರಹ್ಮಾಸ್ತ್ರಮಪ್ಯುಭೌ ತತ್ರ ಪ್ರಯುಜ್ಯಾನದತಾಂ ರಣೇ ।
ಅನ್ಯೋನ್ಯಾಸ್ತ್ರ ಪ್ರತೀಘಾತಂ ಕೃತ್ವೋಭೌ ಚ ವಿಚೇರತುಃ ॥೧೮೧॥

ಇತಿ ಉಕ್ತಃ ಸಃ–ಹೀಗೆ ಹೇಳಲ್ಪಟ್ಟಂಥ ಅಶ್ವತ್ಥಾಮರು, ತೂಷ್ಣೀಂ ಆಸೀತ್–ಸುಮ್ಮನಾದರು. ಕರ್ಣಧನಂಜಯೌ– ಕರ್ಣಾರ್ಜುನರು, ಖಂ – ಆಕಾಶವನ್ನು, ಮಹಾಸ್ತ್ರಶಸ್ತ್ರವರ್ಷೇಣ — ಪ್ರಬಲ ಶಸ್ತ್ರಾಸ್ತ್ರಗಳ ಸುರಿಮಳೆಯಿಂದ, ನಿರಂತರಂ — ಅವಕಾಶವಿಲ್ಲದ್ದನ್ನಾಗಿ, ಚಕ್ರತುಃ — ಮಾಡಿದರು, ತತ್ರ — ಆ ಯುದ್ಧದಲ್ಲಿ, ಉಭೌ — ಇಬ್ಬರೂ, ಅನ್ಯೋನ್ಯಮೃತ್ಯವೇ– ಪರಸ್ಪರರ ಮರಣಕ್ಕಾಗಿ, ಆಗ್ನೇಯವಾರುಣ್ಯೈಂದ್ರಾದೀನಿ — ಆಗ್ನೇಯಾಸ್ತ್ರ, ವಾರುಣಾಸ್ತ್ರ, ಐಂದ್ರಾಸ್ತ್ರ ಮೊದಲಾದವುಗಳನ್ನು, ಬ್ರಹ್ಮಾಸ್ತ್ರಂಚ — ಬ್ರಹ್ಮಾಸ್ತ್ರವನ್ನೂ ಕೂಡ; ಪ್ರಯುಜ್ಯ — ಪ್ರಯೋಗಿಸಿ, ಅನದತಾಂ — ಗರ್ಜಿಸಿದರು. ಉಭೌ — ಇಬ್ಬರೂ, ಅನ್ಯೋನ್ಯಾಸ್ತ್ರ ಪ್ರತೀಘಾತಂ — ಪರಸ್ಪರರ ಅಸ್ತ್ರಗಳ ಪರಿಹಾರವನ್ನು, ಕೃತ್ವಾ — ಮಾಡಿ, ವಿಚೇರತುಃ — ರಣರಂಗದಲ್ಲಿ ಚಲಿಸಿದರು, ॥೧೮೦॥ ॥೧೮೧॥

ಕ್ರಮೇಣ ವೃದ್ಧೋರುಬಲೇನ ತತ್ರ ಸುರೇಂದ್ರಪುತ್ರೇಣ ವಿರೋಚನಾತ್ಮಜಃ।
ನಿರಾಕೃತೋನಾಗಮಯಂ ಶರೋತ್ತಮಂ ಬ್ರಹ್ಮಾಸ್ತ್ರಯುಕ್ತಂ ವಿಸರ್ಜ ವಾಸವೌ ॥೧೮೨॥

ತತ್ರ — ಆ ಯುದ್ಧದಲ್ಲಿ, ಕ್ರಮೇಣ — ಕ್ರಮವಾಗಿ, ವೃದ್ಧೋರುಬಲೇನ — ಅಭಿವೃದ್ಧವಾದ ಶ್ರೇಷ್ಠಬಲವುಳ್ಳ, ಸುರೇಂದ್ರಪುತ್ರೇಣ— ದೇವೇಂದ್ರಪುತ್ರನಾದ ಅರ್ಜುನನಿಂದ, ನಿರಾಕೃತಃ ವಿರೋಚನಾತ್ಮಜಃ — ಪರಾಜಿತನಾದ ಕರ್ಣನು, ಬ್ರಹ್ಮಾಸ್ತ್ರಯುಕ್ತಂ — ಬ್ರಹ್ಮಾಸ್ತ್ರದಿಂದ ಕೂಡಿದ, ನಾಗಮಯಂ — ನಾಗವುಳ್ಳ, ಶರೋತ್ತಮ — ಶ್ರೇಷ್ಠಬಾಣವನ್ನು, ವಾಸವೌ — ಅರ್ಜುನನ ಮೇಲೆ, ವಿಸಸರ್ಜ — ಪ್ರಯೋಗಿಸಿದನು. ॥೧೮೨॥

ತಂ ವಾಸುದೇವೋ ರಥಮಾನಮಯ್ಯ ಮೋಘಂಚಕಾರಾರ್ಜುನತಃ ಕಿರೀಟಂ ।
ಚೂರ್ಣೀಕೃತಂ ತೇನ ಸುರೇಂದ್ರಸೂನೋರ್ದಿವಂ ಯಯೌ ಬಾಣಗತ ಶ್ಚ ನಾಗಃ ॥೧೮೩॥

ವಾಸುದೇವಃ — ಶ್ರೀಕೃಷ್ಣನು, ರಥಂ — ಅರ್ಜುನನ ರಥವನ್ನು, ಆನಮಯ್ಯ— ಕೆಳಗೆ ಒತ್ತಿ, (ಕೆಳಿಕ್ಕೆ ಬಾಗಿಸಿ), ಅರ್ಜುನತಃ— ಅರ್ಜುನನ ಕಡೆಯಿಂದ, ತಂ — ಆ ನಾಗಾಸ್ತ್ರವನ್ನು, ಮೋಘಂ ಚಕಾರ — ವ್ಯರ್ಥವಮಾಡಿದನು. ತೇನ— ಅದರಿಂದ, ಸುರೇಂದ್ರಸೂನೋಃ— ಅರ್ಜುನನ, ಕಿರೀಟಂ— ಕಿರೀಟವು, ಚೂರ್ಣೀಕೃತಂ— ಪುಡಿಪುಡಿಯಾಗಲ್ಪಟ್ಟಿತು. ಚ— ಮತ್ತು ಬಾಣಗತಃ ನಾಗಃ-ಬಾಣದಲ್ಲಿದ್ದ ನಾಗವು, ದಿವಂ — ಆಕಾಶಕ್ಕೆ, ಯಯೌ — ಹಾರಿತು, ॥೧೮೩॥

ನವಿುತೇ ವಾಸುದೇವೇನ ರಥೇ ಪಂಚಾಂಗುಲಂಭುವಿ ॥
ಅಪಾಂಗದೇಶವುದ್ದಿಶ್ಯ ವುಕ್ತೇನಾಗೇಕಿರೀಟಿನಃ ॥೧೪೪॥

ಭಂಕ್ತ್ವಾಕಿರೀಟಂ ವಿಯತಿ ಗಚ್ಛತಿ ಪ್ರಭುಣೋದಿತಃ ।
ಬಾಣೈಸ್ತಕ್ಷಕಪುತ್ರಂ ತಂ ವಾಸವಿಃ ಪೂರ್ವವೈರಿಣಂ ॥೧೪೫॥

ಹತ್ವಾನಿಪಾತಯಾಮಾಸ ಭೂವೌ ಕರ್ಣಸ್ಯ ಪಶ್ಯತಃ ।
ಬ್ರಹ್ಮಾಸ್ತ್ರಸ್ಯಾತಿವೇಗಿತ್ವಂ ಪ್ರಾಪ್ತಂ ಕರ್ಣೇನ ಭಾರ್ಗವಾತ್ ॥೧೪೬॥

ವಾಸುದೇವೇನ – ಶ್ರೀಕೃಷ್ಣನಿಂದ, ರಥೇ—ರಥವು, ಭುವಿ —ಭೂಮಿಯಲ್ಲಿ, ಪಂಚಾಂಗುಲಂ - ಐದು ಅಂಗುಲ ಪರ್ಯಂತ, ನವಿುತೇಸತಿ— ಕೆಳಗೆ ವಶಾಡಲ್ಪಡುತ್ತಿರಲು, ಕಿರೀಟಿನಃ ಅಪಾಂಗದೇಶಂ ಉದ್ದಿಶ್ಯ—ಅರ್ಜುನನ ಕಣ್ಣುಗಳ ಎರಡು ತುದಿಗಳ ಮಧ್ಯಪ್ರದೇಶಕ್ಕೆ, (ಸಾಧಾರಣ ಲಲಾಟ ಪ್ರದೇಶಕ್ಕೆ), ವುಕ್ತೇ – ಬಿಡಲ್ಪಟ್ಟ, ನಾಗೇ – ನಾಗಬಾಣವು, ಕಿರೀಟಿನಃ ಕಿರೀಟಂ—ಅರ್ಜುನನ ಕಿರೀಟವನ್ನು, ಭಂಕ್ತ್ವಾ – ಕತ್ತರಿಸಿ, ವಿಯತಿ – ಆಕಾಶದಲ್ಲಿ, ಗಚ್ಛತಿಸತಿ – ಹೋಗುತ್ತಿರಲು, ಪ್ರಭುಣಾ – ಸರ್ವೇಶನಾದ ಶ್ರೀಕೃಷ್ಣನಿಂದ, ಉದಿತಃ — ಹೇಳಿಸಿಕೊಂಡ, ವಾಸವಿಃ – ಅರ್ಜುನನು, ಪೂರ್ವವೈರಿಣಂ— ಖಾಂಡವವನ ದಹನ ಸವುಯದಲ್ಲಿ ವೈರಿಯಾದಂಥ, ತಂ ತಕ್ಷಕಪುತ್ರಂ—ಆ ತಕ್ಷಕನ ವುಗನಾದ ಅಶ್ವಸೇನನನ್ನು, ಕರ್ಣಸ್ಯ ಪಶ್ಯತಃಸತಃ – ಕರ್ಣನು ನೋಡುತ್ತಿರುವ ಹಾಗೆಯೇ, ಬಾಣೈಃ – ಬಾಣಗಳಿಂದ, ಹತ್ವಾ – ಕೊಂದು, ಭೂವೌ— ಭೂವಿಯಲ್ಲಿ, ನಿಪಾತಯಾಮಾಸ – ಕೆಡವಿದನು, ಕರ್ಣೇನ —ಕರ್ಣನಿಂದ, ಬ್ರಹ್ಮಾಸ್ತ್ರಸ್ಯ — ಬ್ರಹ್ಮಾಸ್ತ್ರಕ್ಕೆ, ಅತಿವೇಗಿತ್ವಂ — ಪ್ರಯೋಗ ವಶಾಡುವಾಗ ಅತಿವೇಗಯುಕ್ತತ್ವವು, ಭಾರ್ಗವಾತ್ – ಶ್ರೀಪರಶುರಾವುದೇವರ ದೆಶೆಯಿಂದ, ಪ್ರಾಪ್ತಂ — ಹೊಂದಲ್ಪಟ್ಟಿತ್ತು. (ಅತಿ ಅವಸರದಿಂದ ಬಿಟ್ಟದ್ದರಿಂದ ಅಥನ್ನು ಪರಿಹರಿಸಲು ಪ್ರತಿಬ್ರಹ್ಮಾಸ್ತ್ರವನ್ನು ಬಿಡಲು ಅರ್ಜುನನಿಗೆ ಅವಕಾಶವಿರಲಿಲ್ಲ ಎಂದು ಭಾವ.) ॥೧೪೪॥೧೪೫॥೧೪೬॥

ಪುನಶ್ಚ ಪಾರ್ಥೇನ ವುಹಾಸ್ತ್ರಯುದ್ಧಂ ಪ್ರಕುರ್ವತಃಸೂರ್ಯಸುತಸ್ಯ ಚಕ್ರಂ ।
ರಥಸ್ಯ ಭೂವಿರ್ಗ್ರಸತಿಸ್ಮ ಶಾಪಾದಸ್ತ್ರಾಣಿ ದಿವ್ಯಾನಿಚ ವಿಸ್ಮೃತಿಂಯಯುಃ ॥೧೪೭॥

ಪುನಶ್ಚ -ವುತ್ತೆ,ಪಾರ್ಥೇನ-ಅರ್ಜುನನಿಂದಕೂಡಿ, ವುಹಾಸ್ತ್ರಯುದ್ಧಂ– ಶ್ರೇಷ್ಠಅಸ್ತ್ರ ಯುದ್ಧವನ್ನು ಪಕುರ್ವತಃ– ವಾಡತಕ್ಕ, ಸುರ್ಯಸೂತಸ್ಯ – ಕರ್ಣನ, ರಥಸ್ಯ ಚಕ್ರಂ– ರಥದ ಚಕ್ರವನ್ನು, ಶಾಪಾತ್— ವಿಪ್ರಶಾಪದಿಂದ ಭೂವಿಃ— ಭೂವಿಯು ಗ್ರಸತಿಸ್ಮ — ನುಂಗಿತು. ದಿವ್ಯಾನಿ ಅಸ್ತ್ರಾಣಿ ಚ—ಶ್ರೇಷ್ಠ ಅಸ್ತ್ರಗಳೂಕೂಡ, ಶಾಪಾತ್ ಪರುಶರಾವುದೇವರ ಶಾಪದಿಂದ, ವಿಸ್ಮೃತಿಂ ಯಯುಃ — ವಿಸ್ಮೃತಗಳಾದವು. ॥೧೪೭॥

ಉದ್ಧರ್ತುಕಾವೋರಥಚಕ್ರವೇವ ಪಾರ್ಥಂಯಯಾಚೇsವಸರಪ್ರದಾತುಂ ॥
ನೇತ್ಯಾಹಕೃಷ್ಣೋsಂಜಲಿಕಂ ಸುಘೋರಂ ತ್ರಿನೇತ್ರದತ್ತಂಜ ಗೃಹೇಚಪಾರ್ಥಃ ॥೧೪೮॥

ಸತ್ಯೇನಧರ್ವೇಣ ಚಸನ್ನಿಯೋಜ್ಯವುವೋಚ ಕರ್ಣಸ್ಯವಧಾಯ ಬಾಣಂ ॥
ಚಿಚ್ಛೇದ ತೇನೈವ ಚ ತಸ್ಯಶೀರ್ಷಂಸಂಧಿತ್ಸತೋಬಾಣಹಂ ವಸುಘೋರಂ ॥೧೪೯॥

(ಸಃ - ಆ ಕರ್ಣನು,), ರಥಚಕ್ರಂ ಉದ್ಧರ್ತುಕಾವುಃಸನ್ ಏವ – ರಥಚಕ್ರವನ್ನು ಎತ್ತುವ ಇಚ್ಛೆಉಳ್ಳವನಾಗಿಯೇ, ಅವಸರಂ ಪ್ರದಾತುಂ – ಅವಕಾಶವನ್ನು ಕೊಡಲು, ಪಾರ್ಥಂ ಯಯಾಚೇ – ಅರ್ಜುನನನ್ನು, ಪ್ರಾರ್ಥಿಸಿದನು. ಕೃಷ್ಣಃ — ಶ್ರೀಕೃಷ್ಣನು, ನ ಇತ್ಯಾಹ— ಅವಕಾಶಕೊಡಬೇಡ ಎಂದು ಅರ್ಜನನಿಗೆ ಹೇಳಿದನು. ಪಾರ್ಥಃ–ಅರ್ಜುನನು, ತ್ರಿನೇತ್ರದತ್ತಂ– ಶ್ರೀರುದ್ರದೇವರಿಂದ ಕೊಡಲ್ಪಟ್ಟ, ಸುಘೋರಂ – ಭಯಂಕರವಾದ, ಅಂಜಲಿಕಂ – ಅಂಜಲಿಕ ಎಂಬ ವಿಶೇಷ ಶರವನ್ನು, ಜಗೃಹೇ—ಕೈಯಲ್ಲಿ ತೆಗೆದುಕೊಂಡನು. ಸತ್ಯೇನ ಧರ್ವೇಣಚ – ತನ್ನ ಸತ್ಯ ವ್ರತ ಧರ್ವಾಚರಣಗಳ ವಿಶೇಷಶಕ್ತಿಯಿಂದಲೂ

ಬಾಣಂ— ಆ ಅಂಜಲಿಕಬಾಣವನ್ನು, ಸನ್ನಿಯೋಜ್ಯ — ಸಂಯೋಕ್ತವನ್ನಾಗಿಮಾಡಿ, ಕರ್ಣಸ್ಯ ವಧಾಯ — ಕರ್ಣನ ವಧಕ್ಕಾಗಿ ಮುಮೋಚ— ಬಿಟ್ಟನು. ತೇನ — ಅದರಿಂದ, ಸುಘೋರಂ ಬಾಣವರಂ — (ಅಂಜಲಿಕವನ್ನು ಕತ್ತರಿಸಲು) ಭಯಂಕರವಾದ ಶ್ರೇಷ್ಠಬಾಣವನ್ನು, ಸಂಧಿತ್ಸತಃ — ಹೂಡಲಿಚ್ಛಿಸತಕ್ಕ, ತಸ್ಯ— ಆ ಕರ್ಣನ, ಶೀರ್ಷಂ — ತಲೆಯನ್ನು, ಚಿಚ್ಛೇದ— ಕತ್ತರಿಸಿದನು. ॥೧೪೪॥೧೪೯॥

ಅಪರಾಹ್ಣೆsಪರಾಹ್ಣಸ್ಯ ಸೂರ್ಯಜಸ್ಯೇಂದ್ರಸೂನುನಾ ॥
ಛಿನ್ನಮಂಜಲಿಕೇನಾಜೌ ಸೋತ್ಸೇಧಮುಪತಚ್ಛಿರಃ ॥೧೯೦॥
ತಸ್ಮಿನ್ಹತೇ ದೀನಮುಖಃ ಸುಯೋಧನಃ ಯಯೌ ಸಮಾಹೃತ್ಯ ಬಲಂಸಶಲ್ಯಃ ॥
ಯುಧಿಷ್ಠಿರಃ ಕರ್ಣವಧಂ ನಿಶಮ್ಯ ತದಾಸಮಾಗತ್ಯದದರ್ಶ ತತ್ತನುಮ್ ॥೧೯೧॥
ಶಶಂಸಕೃಷ್ಣಂಚ ಧನಂಜಯಂಚ ಭೀಮಂಚ ಯೋsನ್ಯೇಚ ಯುಧಿ ಪ್ರವೀರಾಃ ॥
ಗತ್ವಾಚತೇ ಶಿಬಿರಂ ಮೋದಮಾನಾಃಊಷುಃಸಕೃಷ್ಣಾಸ್ತದನುವ್ರತಾಃಸದಾ ॥೧೯೨॥

ಇತಿ ಶ್ರೀಮದಾನಂದತೀರ್ಥವಿರಚಿತ ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯೇ ಕರ್ಣಪಾತೋನಾಮ ಸಪ್ತವಿಂಶೋಧ್ಯಾಯಃ ॥೨೭॥

ಇಂದ್ರಸೂನುನಾ—ಅರ್ಜುನನಿಂದ, ಅಪರಾಹ್ಣಸ್ಯ — ಕರ್ಣನಯುದ್ಧದ ಎರಡನೆಯದಿನದ, ಅಪರಾಹ್ಣೇ—ಸಾಯಂ ಅಪರಾಹ್ಣಸಮಯದಲ್ಲಿ, ಆಜೌ — ಯುದ್ಧದಲ್ಲಿ, ಅಂಜಲಿಕೇನ — ಅಂಜಲಿಕ ಎಂಬ ಬಾಣದಿಂದ, ಛಿನ್ನಂ — ಕತ್ತರಿಸಲ್ಪಟ್ಟ. ಸೂರ್ಯಜಸ್ಯ — ಕರ್ಣನ, ಶಿರಃ — ತಲೆಯು, ಸೋತ್ಸೇಧಂ— ಮೇಲಕ್ಕೆ ಜಿಗಿಯುವಿಕೆಯಿಂದ ಸಹಿತವಾಗಿ, ಉಪತತ್ — ಕೆಳಗೆ ಬಿದ್ದಿತು, ತಸ್ಮಿನ್ — ಆ ಕರ್ಣನು, ಹತೇ ಸತಿ — ಸಾಯಲಿತ್ತಿರಲು, ದೀನಮುಖಃ—ಬಾಡಿದ ಮುಖವುಳ್ಳ, ಸುಯೋಧನಃ ದುರ್ಯೋಧನನು, ಬಲಂ—ಸೈನ್ಯವನ್ನು, ಸಮಾಹೃತ್ಯ—ಹಿಂದೆಗೆದುಕೊಂಡು, ಸಶಲ್ಯಃಸನ್—ಶಲ್ಯನಿಂದ ಸಹಿತನಾಗಿ, ಯಯೌ— ಶಿಬಿರಕ್ಕೆ ಹೋದನು. ಯುಧಿಷ್ಠಿರಃ—ಧರ್ಮರಾಜನು, ಕರ್ಣವಧಂ— ಕರ್ಣವಧಸುದ್ದಿಯನ್ನು, ನಿಶಮ್ಯ—ಕೇಳಿ, ತದಾ — ಆಗ ಸಮಾಗತ್ಯ— ಬಂದು, ತತ್ತನುಂ — ಕರ್ಣನ ಶರೀರವನ್ನು, ದದರ್ಶ — ನೋಡಿದನು. ಚ—ಮತ್ತು, ಕೃಷ್ಣಂ ಭೀಮಂ, ಧನಂಜಯಂ ಚ—ಶ್ರೀಕೃಷ್ಣನನ್ನು, ಶ್ರೀಭೀಮನನ್ನು, ಅರ್ಜುನನನ್ನು, ಯೇ ಅನ್ಯೇ—ಬೇರೆಯಾರು, ಯುಧಿ ಪ್ರವೀರಾಃ — ಯುದ್ಧದಲ್ಲಿ ವೀರರಾದವರೋ (ಸಾತ್ಯಕಿಮೊದಲಾದವರೋ) ತಾಂಶ್ಚ — ಅವರನ್ನೂಕೂಡ, ಶಶಂಸ — ಪ್ರಶಂಸಿಸಿದನು. ಸಕೃಷ್ಣಾಃ — ಶ್ರೀಕೃಷ್ಣಸಹಿತರಾದ, ಸದಾ ತದನುವ್ರತಾಃ ಯಾವಾಗಲೂ ಶ್ರೀಕೃಷ್ಣನನ್ನು ಅನುಸರಿಸಿ ಇರುವ, ತೇ — ಆ ಪಾಂಡವರು, ಶಿಬಿರಂ ಗತ್ವಾ — ಶಿಬಿರಕ್ಕೆ ಹೋಗಿ, ಮೋದಮಾನಾಃಸಂತಃ —ಸಂತೋಷಪಡುವವರಾಗಿ, ಊಷುಃ — ವಾಸ ಮಾಡಿದರು. ॥೧೯೦॥೧೯೧॥೧೯೨॥

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ವಿರಚಿತವಾದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಕರ್ಣಪಾತವನ್ನು (ಕರ್ಣಪರ್ವಕಥಾವನ್ನು) ನಿರೂಪಿಸುವ ಇಪ್ಪತ್ತೇಳನೆಯ ಅಧ್ಯಾಯದ ಪ್ರತಿಪದಾರ್ಥಚಂದ್ರಿಕೆಯು ಮುಗಿಯಿತು.

ಶ್ರೀಕೃಷ್ಣಾರ್ಪಣಮಸ್ತು, ಶ್ರೀಮಧ್ವೇಶಾರ್ಪಣಮಸ್ತು,

ಭಾ. ಅ. ೧೬೫—೧೯೨ ಅರ್ಜುನನು ಒಂದೇ ಬಾಣದಿಂದ ಕರ್ಣನ ಮಗನನ್ನು ಕೊಂದಾಗ ಕರ್ಣನು ಅವನ ಮೇಲೆ ಏರಿ ಬಂದನು. ಭಯಂಕರ ಯುದ್ಧವಾಯಿತು. ದೇವತೆಗಳು ಅರ್ಜುನನ ಪಕ್ಷಹಿಡಿದರು. ಅಸುರರು ಕರ್ಣನ ಪಕ್ಷವನ್ನು ವಹಿಸಿದರು. ನಾವು ಗೆಲ್ಲುವೆವು ಎಂಬುದಾಗಿ ಪರಸ್ಪರ ಚರ್ಚೆಯೂ ಆಯಿತು. ಆಗ ಶ್ರೀ ರುದ್ರದೇವರು ಶ್ರೀಬ್ರಹ್ಮದೇವರನ್ನು ಕುರಿತು ಸುರಾಸುರರಿಗೆ ಮುಖ್ಯಾಶ್ರಯರು ಕ್ರಮವಾಗಿ ಭೀಮ ಹಾಗೂ ದುರ್ಯೋಧನರು, ಇವರಿಗೆ ಅತಿಪ್ರಿಯರಾದವರು ಅರ್ಜುನ ಕರ್ಣರು. ಇವರಿಬ್ಬರ ಸಲುವಾಗಿ ಯುದ್ಧಮಾಡಲು ಸುರಾಸುರರು ಸಿದ್ಧರಿರುವರು. ಇವರಿಬ್ಬರಲ್ಲಿ ಯಾರೊಬ್ಬರು ಸೋತರೂ ಆ ಪಕ್ಷದವರು ಇನ್ನೊಂದು ಪಕ್ಷದ ಮೇಲೆ ಯುದ್ಧಮಾಡುವರು. ಆಗ ಮಹಾ ಅನರ್ಥವಾಗುವದು. ಆದ್ದರಿಂದ ಇವರಿಬ್ಬರ ಯುದ್ಧವು ಜಯಾಪಜಯ ರಹಿತವಾಗಿಯೇ ಇರಲಿ ಎಂದು ಅಂದರು. ಆಗ ಇಂದ್ರನು ಛೇ! ಆಗದು, ಶ್ರೀಕೃಷ್ಣನೆಲ್ಲಿರುವನೋ ಅಲ್ಲಿ ಜಯವಾಗಲೇಬೇಕು; ಅಲ್ಲಿಯೇ ಜಯವಾಗುವದು. ಶ್ರೀಕೃಷ್ಣನು ಸತ್ಯಸಂಕಲ್ಪನು;

ಅವನ ಸಂಕಲ್ಪ ಅರ್ಜುನನಿಗೆ ಜಯವಾಗಬೇಕೆಂದು ಇದೆ. ಆದ್ದರಿಂದ ಅರ್ಜುನನು ಗೆಲ್ಲಬೇಕು; ಕರ್ಣನ ವಧವಾಗಬೆಕು ಎಂದು ಹೇಳಿ ಬ್ರಹ್ಮದೇವರಿಗೆ ನಮಸ್ಕರಿಸಿದನು. ಬ್ರಹ್ಮದೇವರು ಹಾಗೇ ಆಗಲಿ ಎಂದು ಹೇಳಿ ಎಲ್ಲ ದೇವಾಸುರರಿಗೆ 'ನೀವಾರೂ, ಯಾರ ಪಕ್ಷ ಹಿಡಿದು ಯುದ್ಧ ಮಾಡಬಾರದು; ಕೇವಲ ಪ್ರೇಕ್ಷಕರಾಗಿರಬೇಕು.' ಎಂದು ಹೇಳಿದರು. ಆಗ ಶಾಂತರಾದ ಅವರು ಹಾಗೇ ಮಾಡಿದರು. ಮಹಾಶಸ್ತ್ರಾಸ್ತ್ರಯುದ್ಧವನ್ನು ಅವರಿಬ್ಬರೂ ಮಾಡುತ್ತಿರುವಾಗ ಅರ್ಜುನನನ್ನು ಭೀಮಸೇನದೇವರು, ಸಾತ್ಯಕಿ, ಧೃಷ್ಟದ್ಯುಮ್ನ ಮೊದಲಾದವರು ಸುತ್ತುವರಿದು ರಕ್ಷಿಸುತ್ತಿದ್ದರು. ದುರ್ಯೋಧನ ಅಶ್ವತ್ಥಾಮಾದಿಗಳು ಕರ್ಣನನ್ನು ರಕ್ಷಿಸುತ್ತಿದ್ದರು. ಆ ಯುದ್ಧದಲ್ಲಿ ಕರ್ಣನು ವೈಲ್ಕ್ಯವನ್ನು ಸಾಧಿಸಿ ಅರ್ಜುನನನ್ನು ಪೀಡಿಸಿದಾಗ ಶ್ರೀಭೀಮರು ಅರ್ಜುನನಿಗೆ 'ನಿನ್ನ ಪೂರ್ಣವೀರ್ಯವನ್ನು ಹೊಂದಿ ನೀನಾದರೂ ಈ ಕರ್ಣನನ್ನು ಕೊಲ್ಲು; ಇಲ್ಲವಾದರೆ ನಾನೇ ಗದಾದಿಂದ ಸಂಹರಿಸುತ್ತೇನೆ. ಎಂದರು. ಶ್ರೀಕೃಷ್ಣನು ಹಿಂದಿನಂತೆ ಅರ್ಜುನನ ವೀರಕರ್ಮಗಳನ್ನು ಜ್ಞಾಪಿಸಿ, ಹುರಿದುಂಬಿಸಿ. ನರಾವೇಶವನ್ನೂ ವ್ಯಕ್ತವಾಗುವಂತೆ ಮಾಡಿದನು. ಆಗ ಪೂರ್ಣವೀರ್ಯದಿಂದ ಕೂಡಿದ ಅರ್ಜುನನು ದುರ್ಯೋಧನ, ಅಶ್ವತ್ಥಾಮ, ಕೃಪ, ಕೃತವರ್ಮ ಎಲ್ಲರನ್ನು ಏಕಕಾಲದಲ್ಲಿ ವಿರಥರನ್ನಾಗಿಸಿ, ಅವರಿಗೂ ಬಾಣಗಳಿಂದ ಹೊಡೆದನು; ಅವರು ದೂರಕ್ಕೆ ಹೋಗಿ ಯುದ್ಧವನ್ನು ನೋಡುತ್ತಾ ನಿಂತರು. ಯಾವ ಮನುಷ್ಯರಿಗೂ ಮಾಡಲಸಾಧ್ಯವಾದ, ಆಶ್ಚರ್ಯಕರವಾದ, ಅರ್ಜುನನ ವೀರಕಾರ್ಯವನ್ನು ಕಂಡ ಅಶ್ವತ್ಥಾಮರು ದುರ್ಯೋಧನನಿಗೆ ಅವನ ಕೈ ಹಿಡಿದು ಭೀಮನ ಬಲವನ್ನು ನೋಡಿರುವಿ, ಅರ್ಜುನನ ಬಲವನ್ನೂ ನೋಡುತ್ತಿರುವಿ; ಯುದ್ಧ ಮಾಡಿ ಕ್ಷೇಮವಿಲ್ಲ. ಯುದ್ಧ ಸಾಕು. ನಾನು ತಡೆದರೆ ಅರ್ಜುನನು ಬಿಡುತ್ತಾನೆ. ಶ್ರೀಕೃಷ್ಣನಿಗೆ ಯುದ್ಧದ ಇಚ್ಛೆ ಇಲ್ಲವೇ ಇಲ್ಲ. ಶ್ರೀಕೃಷ್ಣವಚನದಂತೆ ಭೀಮನು ನಡೆಯುವನು; ಧರ್ಮರಾಜ ನಕುಲ ಸಹದೇವರಂತೂ ಶಾಂತಿಪ್ರಿಯರು. ಆದ್ದರಿಂದ ಯುದ್ಧ ನಿಲ್ಲಿಸಬಹುದು; ಹಾಗೆ ಮಾಡು. ನಾನು ಮರಣಭಯದಿಂದ ಹೀಗೆ ಹೇಳುವೆನೆಂದು ತಿಳಿಯಬೇಡ. ನಾನಾಗಲೀ ನನ್ನ ಸೋದರ ಮಾವ ಕೃಪಾಚಾರ್ಯನಾಗಲಿ ಅವಧ್ಯರಿರುತ್ತೇವೆ. ನಿನ್ನ ಹಿತಕ್ಕಾಗಿ ಈ ಮಾತನ್ನು ಹೇಳಿದ್ದೇನೆ' ಎಂದು ಅಂದರು, ಆದರೆ ದುರುಳ ದುರ್ಯೋಧನನು ಇದಕ್ಕೆ ಒಪ್ಪದೆ, ಇಂದು ದುಃಶಾಸನನ ರಕ್ತವನ್ನು ಕುಡಿದು ನಮಗೆಲ್ಲ ಅಣಕಿಸಿ ಹುಲಿಯಂತೆ ಕುಣಿದ ಆ ಭೀಮನ ಜೊತೆಗೆ ಸಂಧಿಯು ಯಾವಕಾಲಕ್ಕೂ ಆಗದು, ಎಂದು ಅಂದನು. ಕರ್ಣಾರ್ಜುನರು ಶಸ್ತ್ರಾಸ್ತ್ರ ವರ್ಷದಿಂದ ಅಂತರಿಕ್ಷವನ್ನು ಮುಚ್ಚಿದರು. ಆಗ್ನೇಯ, ವಾರುಣ, ಐಂದ್ರ ಮೊದಲಾದ ಸಣ್ಣ ಸಣ್ಣ ಅಸ್ತ್ರಗಳಿಂದ ಬ್ರಹ್ಮಾಸ್ತ್ರದವರೆಗೆ ಎಲ್ಲ ಅಸ್ತ್ರಪ್ರಯೋಗ ಮಾಡಿ ಪರಸ್ಪರರ ಅಸ್ತ್ರಗಳನ್ನು ಪರಿಹರಿಸಿದರು. ಗರ್ಜಿಸಿದರು. ಕ್ರಮವಾಗಿ ಕರ್ಣನು ಸೋಲಿನ ಅಂಚಿಗೆ ಬಂದು, ಆಶ್ವಸೇನ ಎಂಬ ನಾಗದಿಂದ ಕೂಡಿದ ಬಾಣವನ್ನು ತೆಗೆದು ಅದರಲ್ಲಿ ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಿದನು. ಅತಿ ವೇಗವಾಗಿ ಬ್ರಹ್ಮಾಸ್ತ್ರ ಪ್ರಯೋಗ ಮಾಡುವದು ಕರ್ಣನಿಗೆ ಶ್ರೀಪರಶುರಾಮದೇವರಿಂದ ತಿಳಿದದ್ದರಿಂದ, ಹಾಗೇ ಮಾಡಿದ್ದರಿಂದ ಅದನ್ನು ಬಿಡುವಾಗ ಅದನ್ನು ತಡೆಯುವಂತೆ ಪ್ರತಿ ಬ್ರಹ್ಮಾಸ್ತ್ರ ಪ್ರಯೋಗ ಮಾಡಲು ಅರ್ಜುನನಿಗೆ ಅವಕಾಶವೇ ಆಗಲಿಲ್ಲ. ಆದ್ದರಿಂದ ಶ್ರೀಕೃಷ್ಣನು ರಥವನ್ನು ಐದು ಅಂಗುಲ ಕೆಳಗಿಳಿಸಿದನು. ನಾಗಾಸ್ತ್ರದ ಗುರಿ ಅರ್ಜುನನ ಹಣೆಗೆ ಇತ್ತು. ಐದು ಅಂಗುಲ ಕೆಳಗಿಳಿದದ್ದರಿಂದ ಅದು ಕಿರೀಟವನ್ನು ಮಾತ್ರ ಹಾರಿಸಿತು. ಅದರಲ್ಲಿದ್ದ ನಾಗವು ಆಕಾಶಕ್ಕೆ ಹಾರಿತು. ಶ್ರೀಕೃಷ್ಣನ ಆಜ್ಞೆಯಂತೆ ಅರ್ಜುನನು ಆ ನಾಗವನ್ನು ಬಾಣದಿಂದ ಹೊಡೆದು ಕೊಂದನು. ಮತ್ತೆ ಯುದ್ಧಮುಂದುವರಿದಾಗ, ಕರ್ಣನ ರಥದಗಾಲಿಯು ಭೂಮಿಯಲ್ಲಿ ಕುಸಿಯಲಾರಂಭಿಸಿತು. ಬ್ರಾಹ್ಮಣನ ಶಾಪವು ಹಾಗೆ ಇತ್ತು. ಶ್ರೀಪರಶುರಾಮದೇವರ ಶಾಪದಿಂದ ದಿವ್ಯಾಸ್ತ್ರಗಳ ವಿಸ್ಮರಣೆಯಾಯಿತು. ಗಾಲಿಯನ್ನು ಎತ್ತಲು ಕಾಲದ ಅವಕಾಶವನ್ನು ಪ್ರಾರ್ಥಿಸಿದಾಗ ಶ್ರೀಕೃಷ್ಣನು ಬೇಡ, ಹೊಡಿ ಎಂದು ಅರ್ಜುನನಿಗೆ ಹೇಳಿದಾಗ, ಶ್ರೀರುದ್ರದೇವರು ಕೊಟ್ಟ ಅಂಜಲಿಕ ಎಂಬ ಬಾಣವಿಶೇಷವನ್ನು ತೆಗೆದು ಅದರಲ್ಲಿ ತನ್ನ ಸತ್ಯ ಧರ್ಮ ಎಲ್ಲ ತಪಃ ಪ್ರಭಾವವನ್ನು ಸಂಯೋಜಿಸಿ ಬಿಟ್ಟನು. ಇದನ್ನು ಕತ್ತರಿಸಲೆಂದು ಬಾಣವನ್ನು ಹೂಡುತ್ತಿರುವ ಕರ್ಣನ ತಲೆಯನ್ನು ಅದು ಕತ್ತರಿಸಿತು. ದುರ್ಯೋಧನನು ದುಃಖದಿಂದ ಶಿಬಿರಕ್ಕೆ ಸೈನ್ಯವನ್ನು ತೆಗೆದುಕೊಂಡು ನಡೆದನು. ಧರ್ಮರಾಜನು ಮೊದಲಾಗಿ ಎಲ್ಲ ಪಾಂಡವರು ಶ್ರೀಕೃಷ್ಣ ಸಮೇತರಾಗಿ ಶಿಬಿರಕ್ಕೆ ಹೋಗಿ ಸಂತೋಷದಿಂದ ವಾಸ ಮಾಡಿದರು.

ಈ ರೀತಿ ಶ್ರೀಮದಾನಂದತೀರ್ಥಭಗವತ್ಪಾದರಿಂದ ರಚಿತ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದ ೨೭ನೆಯ ಅಧ್ಯಾಯದ ಭಾವಾನುವಾದವು ಸಮಾಪ್ತವಾಯಿತು.

ಶ್ರೀಕೃಷ್ಣಾರ್ಪಣಮಸ್ತು, ಶ್ರೀಮಧ್ವೇಶಾರ್ಪಣಮಸ್ತು

॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀ ಮದ್ಧನುಮದ್ಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

ಏಳನೇ ಅಧ್ಯಾಯವು

ಪ್ರಭಾತಾಯಾಂ ತುಶರ್ವರ್ಯಾಂ ಗುರುಪುತ್ರಾನುಮೋದಿತಃ ।
ಶಲ್ಯಂ ಸೇನಾಪತಿಂ ಕೃತ್ವಾ ಯೋದ್ಧುಂ ದುರ್ಯೋಧನೋಽಭ್ಯಯಾತ್ ॥೧॥

ತಮಭ್ಯಯುಃ ಪಾಂಡವಾಶ್ಚ ದೃಷ್ಟ್ವಾಯುದ್ಧಾಯದಂಶಿತಾಃ ।
ತತಾಸೀತ್ಸುಮಹದ್ಯುದ್ಧಂ ಪಾಂಡವಾನಾಂ ಪರೈಃ ಸಹ ॥೨॥

ಅಗ್ರೇಭೀಮಃ ಪಾಂಡವಾನಾಂ ಮಧ್ಯೇರಾಜಾ ಯುಧಿಷ್ಠಿರಃ ।
ಪೃಷ್ಠೇ ಗಾಂಡೀವಧನ್ವಾಸೀದ್ವಾಸುದೇವಾಭಿರಕ್ಷಿತಃ ॥೩॥

ಚಕ್ರರಕ್ಷೌ ಯುವಾಂ ರಾಜ್ಞೋ ಧೃಷ್ಟದ್ಯುಮ್ನಶ್ಚ ಸಾತ್ಯಕಿಃ ।
ನೃಪಸ್ಯ ಪಾರ್ಶ್ವಯೋರಾಸ್ತಾಂ ಅಗ್ರ್ಯೇಽನ್ಯೇಷಾಂ ಗುರೋಃಸುತಃ ॥೪॥

ಮಧ್ಯೇಶಲ್ಯಃ ಪೃಷ್ಠತೋಽಭೂದ್ಭ್ರಾತೃಭಿಶ್ಚ ಸುಯೋಧನಃ ।
ಚಕ್ರರಕ್ಷೌತು ಶಲ್ಯಸ್ಯ ಶಕುನಿಸ್ತತ್ಸುತಸ್ತಥಾ । ಕೃಪಶ್ಚ ಕೃತವರ್ಮಾಚ ಪಾರ್ಶ್ವಯೋ
ಸಮುಪಸ್ಥಿತೌ ॥೫॥

ಶರ್ವರ್ಯಾಂ ಪ್ರಭಾತಾಯಾಂ ತು — ರಾತ್ರಿಯು ಕಳೆಯುತ್ತಿರಲು, ದುರ್ಯೋಧನಃ—ದುರ್ಯೋಧನನು, ಗುರು-ಪುತ್ರಾನುಮೋದಿತಃಸನ್ – ಅಶ್ವತ್ಥಾಮರಿಂದ ಸಮಾಧಾನಪಡಿಸಲ್ಪಟ್ಟವನಾಗಿ, ಶಲ್ಯಂ ಸೇನಾಪತಿಂ ಕೃತ್ವಾ – ಶಲ್ಯನನ್ನು ಸೇನಾಪತಿಯನ್ನಾಗಿ ಮಾಡಿ, ಯೋದ್ಧುಂ–ಯುದ್ಧಮಾಡಲು, ಅಭ್ಯಯಾತ್–ಏರಿಬಂದನು, ಪಾಂಡವಾಶ್ಚ – ಪಾಂಡವರೂ ಕೂಡ, ತಂ – ಅವನನ್ನು, ದೃಷ್ಟ್ವಾ—ನೋಡಿ, ದಂಶಿತಾಃಸಂತಃ—ಕವಚಧರಿಸಿದವರಾಗಿ, ಯುದ್ಧಾಯ—ಯುದ್ಧಕ್ಕಾಗಿ, ಅಭ್ಯಯುಃ – ಏರಿಬಂದರು, ತತ್ರ — ಆ ದಿನದಲ್ಲಿ, ಪಾಂಡವಾನಾಂ – ಪಾಂಡವರಿಗೆ, ಪರೈಃಸಹ— ಕೌರವರಿಂದ ಕೂಡಿ, ಸುಮಹತ್ಯುದ್ಧಂ—ದೊಡ್ಡ ಯುದ್ಧವು, ಆಸೀತ್ —ಆಯಿತು,

ಪಾಂಡವಾನಾಂ – ಪಾಂಡವಸೈನ್ಯದ, ಅಗ್ರೇ — ಮುಂಭಾಗದಲ್ಲಿ, ಭೀಮಃ ಆಸೀತ್– ಶ್ರೀಭೀಮರು ಇದ್ದರು, ಮಧ್ಯೇ – ನಡುವೆ, ರಾಜಾ ಯುಧಿಷ್ಠಿರಃ ಆಸೀತ್ – ಧರ್ಮರಾಜನು ಇದ್ದನು, ಪೃಷ್ಠೇ – ಹಿಂಬದಿಯಲ್ಲಿ, ವಾಸುದೇವಾಭಿರಕ್ಷಿತಃ – ಶ್ರೀಕೃಷ್ಣನಿಂದ ರಕ್ಷಿತನಾದ, ಗಾಂಡೀವಧನ್ವಾ – ಗಾಂಡೀವ ಧನುರ್ಧಾರಿಯಾದ ಅರ್ಜುನನು, ಆಸೀತ್ – ಇದ್ದನು ರಾಜ್ಞಃ–ಧರ್ಮರಾಜನ, ಚಕ್ರರಕ್ಷೌ–ರಥಚಕ್ರಗಳರಕ್ಷಕರು, ಯಮೌ ಆಸ್ತಾಂ– ನಕುಲಸಹದೇವರಾಗಿದ್ದರು, ಧೃಷ್ಟದ್ಯುಮ್ನಃ ಸಾತ್ಯಕಿಶ್ಚ – ಧೃಷ್ಟದ್ಯುಮ್ನ ಸಾತ್ಯಕಿ ಇಬ್ಬರು, ನೃಪಸ್ಯಪಾರ್ಶ್ವಯೋಃ – ಧರ್ಮರಾಜನ ಬದಿಗಳಲ್ಲಿ, ಆಸ್ತಾಂ — ಇದ್ದರು. ಅನ್ಯೇಷಾಂ – ಕೌರವರ, ಅಗ್ರೇ – ಮುಂದೆ, ಗುರೋಃಸುತಃ ಅಭೂತ್—ಅಶ್ವತ್ಥಾಮರಿದ್ದರು, ಮಧ್ಯೇ—ನಡುವೆ, ಶಲ್ಯಃ ಅಭೂತ್–ಶಲ್ಯರಾಜನಿದ್ದನು, ಪೃಷ್ಠತಃ—ಹಿಂಭಾಗದಲ್ಲಿ, ಸುಯೋಧನಃ – ದುರ್ಯೋಧನನು, ಭ್ರಾತೃಭಿಃಸಹ ಅಭೂತ್– ಸಹೋದರರಿಂದ ಸಹಿತನಾಗಿ ಇದ್ದನು. ಶಕುನಿಃ ತಥಾ ತತ್ಸುತಃ,— ಶಕುನಿಯು ಹಾಗು ಅವನ ಮಗನಾದ ಉಲೂಕನು, ಶಲ್ಯಸ್ಯ—ಶಲ್ಯರಾಜನ, ಚಕ್ರರಕ್ಷೌ—ರಥಚಕ್ರ ರಕ್ಷಕರು, ಆಸ್ತಾಂ – ಆಗಿದ್ದರು, ಕೃಪಃ ಕೃತವರ್ಮಾಚ – ಕೃಪಾಚಾರ್ಯ ಮತ್ತು ಕೃತವರ್ಮರು, ಪಾರ್ಶ್ವಯೋಃ— ಬದಿಗಳಲ್ಲಿ, ಸಮೀಪಸ್ಥಿತೌ —ನಿಂತಿದ್ದರು. ॥೧॥೨॥೩॥೪॥೫॥

ತತ್ರಾಭವನ್ಮಹದ್ಯುದ್ಧಂ ಭೀಮಸ್ಯದ್ರೌಣಿನಾ ಸಹ ।
ರಾಜ್ಞಃಶಲ್ಯೇನ ಚತಥಾ ಘೋರರೂಪಂ ಭಯಾನಕಂ ॥೬॥

ತತ್ರನಾತಿ ಪ್ರಯತ್ನೇನ ದ್ರೌಣಿರ್ಭೀಮೇನ ಸಾಯಕೈಃ ।
ವಿರಥೀಕೃತಸ್ತಥಾ ಧರ್ಮಸೂನುಃ ಶಲ್ಯೇನ ತತ್ಕ್ಷಣಾತ್ ॥೭॥

ಆಸಸಾದ ತದಾಶಲ್ಯಂ ಕಪಿಪ್ರವರಕೇತನಃ ।
ತಯೋರಾಸೀನ್ಮಹದ್ಯುದ್ಧಮದ್ಭುತಂ ರೋಮಹರ್ಷಣಂ ॥೮॥

ರಥಮನ್ಯಂ ಸಮಾಸ್ಥಾಯ ದ್ರೌಣಿರ್ಭೀಮಂ ಸಮಭ್ಯಯಾತ್ ।
ದುರ್ಯೋಧನಶ್ಚ ಭೀಮಸ್ಯ ಶರೈರಾವಾರಯದ್ದಿಶಃ ॥೯॥

ತಾವುಭೌ ಶರವರ್ಷೇಣ ವಾರಯಾಮಾಸ ಮಾರುತಿಃ ।
ತಾಭ್ಯಾಂ ತಸ್ಯಾಭವದ್ಯುದ್ಧಂ ಸುಘೋರಮತಿಮಾನುಷಮ್ ॥೧೦॥

ತತ್ರ – ಆಗ, ಭೀಮಸ್ಯದ್ರೌಣಿನಾ ಸಹ – ಶ್ರೀಭಿಮಸೇನದೇವರಿಗೆ ಅಶ್ವತ್ಥಾಮರಿಂದ ಕೂಡಿಕೊಂಡು, ಮಹತ್‌ಯುದ್ಧಂ – ದೊಡ್ಡಯುದ್ಧವು, ತಥಾ—ಹಾಗು ರಾಜ್ಞಃ — ಧರ್ಮರಾಜನಿಗೆ, ಶಲ್ಯೇನ ಶಲ್ಯನಿಂದ, ಘೋರರೂಪಂ ಭಯಾನಕಂ ಯುದ್ಧಂ – ಕ್ರೂರವೂ, ಭಯಂಕರವೂ ಆದ ಯುದ್ಧವು, ಅಭವತ್—ಆಯಿತು. ತತ್ರ—ಆ ಯುದ್ಧದಲ್ಲಿ, ದ್ರೌಣಿಃ – ಅಶ್ವತ್ಥಾಮರು, ಭೀಮೇನ – ಶ್ರೀಭೀಮರಿಂದ, ನಾತಿಪ್ರಯತ್ನೇನ – ಅನಾಯಾಸವಾಗಿ, ಸಾಯಕೈಃ — ಬಾಣಗಳಿಂದ, ವೀರಥೀಕೃತಃ— ರಥಹೀನರಾಗಿ ಮಾಡಲ್ಪಟ್ಟರು, ತಥಾ — ಹಾಗೆ, ಧರ್ಮಸೂನುಃ – ಧರ್ಮರಾಜನು, ತತ್ಕ್ಷಣಾತ್ - ಕೂಡಲೇ, ಶಲ್ಯೇನ – ಶಲ್ಯರಾಜನಿಂದ, ವಿರಥೀಕೃತಃ—ರಥರಹಿತನಾಗಿಸಲ್ಪಟ್ಟನು, ತದಾ – ಆಗ, ಶಲ್ಯಂ ಶಲ್ಯನ ಹತ್ತಿರಕ್ಕೆ, ಕಪಿಪ್ರವರಕೇತನಃ – ಹನುಮಂದ್ವಜನಾದ ಅರ್ಜುನನು, ಆಸಸಾದ – ಬಂದನು. ತಯೋಃ – ಅವರಿಗೆ, ಅದ್ಭುತಂ ರೋಮಹರ್ಷಣಂ ಮಹತ್‌ಯುದ್ಧಂ — ಆಶ್ಚರ್ಯಕರವಾದ, ರೋಮಾಂಚಕರವಾದ, ಶ್ರೇಷ್ಠಯುದ್ಧವು, ಆಸೀತ್ - ಆಯಿತು, ದ್ರೌಣಿಃ—ಅಶ್ವತ್ಥಾಮರು, ಅನ್ಯಂರಥಂ—ಇನ್ನೊಂದು ರಥವನ್ನು, ಸಮಾಸ್ಥಾಯ - ಏರಿ, ಭೀಮಂ– ಶ್ರೀಭೀಮರನ್ನು ಕುರಿತು, ಸಮಭ್ಯಯಾತ್ – ಏರಿಬಂದರು, ದುರ್ಯೋಧನಶ್ಚ–ದುರ್ಯೋಧನನೂ ಕೂಡ (ಅಲ್ಲಿಗೇ ಬಂದು), ಶರೈಃ–ಬಾಣಗಳಿಂದ, ಭೀಮಸ್ಯ–ಭೀಮರ, ದಿಶಃ–ದಿಕ್ಕುಗಳನ್ನು, ಆವಾರಯತ್–ಮುತ್ತಿದನು. ಮಾರುತಿಃ- ಶ್ರೀಭೀಮರು,

ಶರವರ್ಷೇಣ – ಬಾಣಗಳ ಸುರಿಮಳೆಯಿಂದ, ತೌ ಉಭೌ —ಅವರಿಬ್ಬರನ್ನೂ, ವಾರಯಾಮಾಸ - ತಡೆದರು, ತಾಭ್ಯಾಂ– ಅವರಿಬ್ಬರಿಂದ, ತಸ್ಯ – ಆ ಭೀಮರಿಗೆ, ಸುಘೋರಂ – ಅತಿ ಭಯಂಕರವಾದ, ಅತಿ ಮಾನುಷಂ – ಮನುಷ್ಯರಿಗೆ ಅಸಾಧ್ಯವಾದ, (ದೇವಾಸುರ ಯುದ್ಧ ಸದೃಶವಾದ) ಯುದ್ಧಂ – ಯುದ್ಧವು, ಅಭವತ್ – ಆಯಿತು. ॥೬॥೭॥೮॥೯॥೧೦॥

ದುರ್ಯೋಧನಸ್ಯಾವರಜಾನ್ ದ್ರೌಪದೇಯಾ ಯುಯುಧುಸ್ಸಹ ।
ಶಿಖಂಡ್ಯಾದ್ಯೈಶ್ಚ ಮಾತುಲ್ಯೈಶ್ಚ ಸಹಸರ್ವಾನ್ ನ್ಯವಾರಯನ್ ॥೧೧॥

ಸಹದೇವಸ್ತು ಶಕುನಿಮುಲೂಕಂ ನಕುಲಸ್ತಥಾ ।
ಧೃಷ್ಟದ್ಯುಮ್ನಶ್ಚ ಹಾರ್ದಿಕ್ಯಂ ಸಾತ್ಯಕಿಃಕೃಪಮೇವಚ ॥೧೨॥

ತೇಷಾಂ ತದಭವದ್ಯುದ್ಧಂ ಚಿತ್ರಂ ಲಘುಚ ಸುಷ್ಠುಚ ।
ಶಲ್ಯಸ್ತು ಶರಸಂಘಾತೈಃ ಪಾರ್ಥಸ್ಯಾವಾರಯದ್ದಿಶಃ ॥೧೩॥

ಸೋಽಪಿ ವಿವ್ಯಾಧ ವಿಶಿಖೈಃಶಲ್ಯಮಾಹವಶೋಭಿನಮ್ ।
ತಯೋಸ್ತು ಸಮಮೇವಾಸೀಚ್ಚಿರಂದೇವಾಸುರೋಪಮಮ್ ॥೧೪॥

ತತಃಶರಂ ವಜ್ರನಿಭಂ ಮದ್ರರಾಜಃಸಮಾದದೇ ॥
ತೇನವಿವ್ಯಾಧಬೀಭತ್ಸುಂ ಹೃದಯೇ ಸಮುಮೋಹಚ ॥೧೫॥

ಉಪಲಭ್ಯ ಪುನಃಸಂಜ್ಞಾಂ ವಾಸವಿಃಶತ್ರುತಾಪನಃ ।
ಚಿಚ್ಛೇದ ಕಾರ್ಮುಕಂ ಸಂಖ್ಯೇ ಮದ್ರರಾಜಸ್ಯಧೀಮತಃ ॥೧೬॥

ದ್ರೌಪದೇಯಾಃ—ದ್ರೌಪದೀಪುತ್ರರು, ಯುಯುಧುಸ್ಸಹ—ಧೃತರಾಷ್ಟ್ರನಿಗೆ ವೈಶ್ಯಪತ್ನಿಯಲ್ಲಿ ಹುಟ್ಟಿದ ಮಗನಾದ ಯುಯುತ್ಸುವಿನಿಂದ, ಚ – ಮತ್ತು, ಶಿಖಂಡ್ಯಾದ್ಯೈಃಮಾತುಲ್ಯೈಃ – ಶಿಖಂಡಿಯೇ ಮೊದಲಾದ ಸೋದರಮಾವಂದಿರಿಂದ, ಸಹ – ಕೂಡಿಕೊಂಡು, ಸರ್ವಾನ್ ದುರ್ಯೋಧನಸ್ಯ ಅವರಜಾನ್—ದುರ್ಯೋಧನನ ಎಲ್ಲ ತಮ್ಮಂದಿರನ್ನು, ನ್ಯವಾರಯನ್– ತಡೆದರು, ಸಹದೇವಃ – ಸಹದೇವನು, ಶಕುನಿಂ – ಶಕುನಿಯನ್ನು, ನಕುಲಃ – ನಕುಲನು, ಉಲೂಕಂ – ಶಕುನಿಪುತ್ರ ಉಲೂಕನನ್ನು, ತಥಾ – ಹಾಗೂ, ಧೃಷ್ಟದ್ಯುಮ್ನಃ—ಧೃಷ್ಟದ್ಯುಮ್ನನು, ಹಾರ್ದಿಕ್ಯಂ – ಕೃತವರ್ಮನನ್ನು, ಸಾತ್ಯಕಿಃ – ಸಾತ್ಯಕಿಯು, ಕೃಪಂ – ಕೃಪಾಚಾರ್ಯರನ್ನು, ನ್ಯವಾರಯನ್ – ತಡೆದರು. ತೇಷಾಂ – ಅವರ, ತತ್ ಯುದ್ಧಂ — ಆ ಯುದ್ಧವು, ಚಿತ್ರಂ—ಆಶ್ಚರ್ಯಕರವಾದದ್ದು, ಲಘು—ಚಾಕಚಾಕ್ಯದಿಂದ (ಕೈಚಳಕದಿಂದ) ಕೂಡಿದ್ದು, ಸುಷ್ಠು—ನೋಡುವವರಿಗೆ ಮನೋಹರವಾದದ್ದು, ಅಭವತ್—ಆಗಿತ್ತು, ಶಲ್ಯಃ – ಶಲ್ಯರಾಜನು, ಶರಸಂಘಾತೈಃ – ಬಾಣಸಮೂಹಗಳಿಂದ, ಪಾರ್ಥಸ್ಯ, ದಿಶಃ—ಅರ್ಜುನನ ದಿಕ್ಕುಗಳನ್ನು, ತು—ವಿಶೇಷವಾಗಿ, ಅವಾರಯತ್ – ಮುಚ್ಚಿದನು, ಸಃಅಪಿ — ಆ ಅರ್ಜುನನಾದರೂ, ವಿಶಿಖೈಃ–ಬಾಣಗಳಿಂದ, ಆಹವಶೋಭಿನಂ ಶಲ್ಯಂ – ಯುದ್ಧದಲ್ಲಿ ಶೋಭಿಸುತಕ್ಕ ಶಲ್ಯನನ್ನು, ವಿವ್ಯಾಧ– ಪೀಡಿಸಿದನು, ತು—ಆದರೆ, ದೇವಾಸುರೋಪಮಂ—ದೇವಾಸುರರ ಯುದ್ಧಸದೃಶವಾದ, ತಯೋಃಯುದ್ಧಂ – ಅವರಿಬ್ಬರ ಯುದ್ಧವು, ಚಿರಂ – ಬಹು ಸಮಯದ ವರೆಗೆ, ಸಮಮೇವ ಅಸೀತ್—ಸಮವಾದದ್ದೇ, (ಜಯಾಪಜಯ ರಹಿತವಾದದ್ದೇ) ಆಗಿತ್ತು. ತತಃ – ನಂತರ, ಮದ್ರರಾಜಃ—ಶಲ್ಯನು, ವಜ್ರನಿಭಂ ಶರಂ – ವಜ್ರಾಯುಧ ಸದೃಶವಾದ ಬಾಣವನ್ನು, ಆದದೇ – ತೆಗೆದುಕೊಂಡನು, ಚ— ಮತ್ತು, ತೇನ – ಆ ಬಾಣದಿಂದ, ಬೀಭತ್ಸುಂ – ಅರ್ಜುನನನ್ನು, ಹೃದಯೇ – ಎದೆಯಲ್ಲಿ, ವಿವ್ಯಾಧ—ಹೊಡೆದನು, ಸಃ— ಆ ಅರ್ಜುನನು, ಮುಮೋಹ — ಮೂರ್ಛೆ ಹೊಂದಿದನು, ಶತ್ರುತಾಪನಃ— ಶತ್ರುಗಳಿಗೆ ತಾಪವನ್ನುಂಟು ಮಾಡುವ, ವಾಸವಿಃ–ಅರ್ಜುನನು, ಪುನಃ–ಮತ್ತೆ, ಸಂಜ್ಞಾಂ–ಎಚ್ಚರವನ್ನು, ಉಪಲಭ್ಯ–ಹೊಂದಿ ಸಂಖ್ಯೇ – ಯುದ್ಧದಲ್ಲಿ, ಧೀಮತಃ ಮದ್ರರಾಜಸ್ಯ – ಬುದ್ಧಿವಂತನಾದ ಶಲ್ಯನ, ಕಾರ್ಮುಕಂ – ಬಿಲ್ಲನ್ನು, ಚಿಚ್ಛೇದ – ಕತ್ತರಿಸಿದನು, ॥೧೧॥೧೨॥೧೩॥೧೪॥೧೫॥೧೬॥

ಭಾ. ಅ. ೧-೧೬. ಕರ್ಣನು ಯುದ್ಧದಲ್ಲಿ ಮೃತನಾದ ಮರುದಿನ ಪ್ರಾತಃಕಾಲಕ್ಕೆ, ಅಶ್ವತ್ಥಾಮರಿಂದ ಸಮಾಧಾನ ಮಾಡಿಸಿಕೊಂಡ ದುರ್ಯೋಧನನು ಶಲ್ಯನನ್ನು ಸೇನಾಪತಿಯನ್ನಾಗಿ ಮಾಡಿ ಯುದ್ಧಕ್ಕೆ ಹೊರಟನು. ಪಾಂಡವರೂ ಕವಚಧಾರಿಗಳಾಗಿ ಬಂದರು. ಪಾಂಡವ ಸೈನ್ಯದ ಮುಂಭಾಗದಲ್ಲಿ ಶ್ರೀಭೀಮಸೇನದೇವರು, ಮುಖ್ಯದಲ್ಲಿ ಧರ್ಮರಾಜನು, ಹಿಂಬದಿಯಲ್ಲಿ (ಶ್ರೀಕೃಷ್ಣ ರಕ್ಷಿತನಾದ, ಗಾಂಡೀವಧನುರ್ಧಾರಿ) ಅರ್ಜುನನು ಇದ್ದನು; ಧರ್ಮರಾಜನ ರಥಚಕ್ರ ರಕ್ಷಕರಾಗಿ ನಕುಲ ಸಹದೇವರಿದ್ದರೆ, ಧೃಷ್ಟದ್ಯುಮ್ನ, ಸಾತ್ಯಕಿ ಈ ಇಬ್ಬರು ರಾಜನ ಎರಡು ಬದಿಗಳಲ್ಲಿದ್ದರು. ಕೌರವ ಸೈನ್ಯದ ಮುಂದೆ ಅಶ್ವತ್ಥಾಮರು, ನಡುವೆ ಶಲ್ಯನು; ಹಿಂಬದಿಯಲ್ಲಿ ತಮ್ಮಂದಿರಿಂದ ಕೂಡಿದ ದುರ್ಯೋಧನನು ಇದ್ದನು. ಶಲ್ಯನ ರಥಚಕ್ರಗಳನ್ನು ಶಕುನಿ ಹಾಗು ಅವನ ಮಗ ಉಲೂಕ ರಕ್ಷಿಸುತ್ತಿದ್ದರು. ಕೃಪಾಚಾರ್ಯ ಕೃತವರ್ಮರು ಬದಿಗಳಲ್ಲಿದ್ದರು. ಅವರಲ್ಲಿ ಶ್ರೀಭೀಮರಿಗೆ ಅಶ್ವತ್ಥಾಮರ ಜೊತೆಗೆ, ಧರ್ಮರಾಜನಿಗೆ ಶಲ್ಯನಿಂದ ಕೂಡಿಕೊಂಡು ಯುದ್ಧ ನಡೆದಾಗ, ಅಶ್ವತ್ಥಾಮ ಹಾಗು ಧರ್ಮರಾಜರು ರಥಹೀನರಾದರು. ಆಗ ಅರ್ಜುನನು ಶಲ್ಯನ ಜೊತೆಗೆ ಯುದ್ಧವನ್ನು ಮಾಡಿದನು. ಅದು ರೋಮಾಂಚಕವಾಗಿತ್ತು. ಅಶ್ವತ್ಥಾಮರು ಮತ್ತೊಂದು ರಥವನ್ನು ಏರಿ ಶ್ರೀಭೀಮರನ್ನು ಎದುರುಗೊಂಡರು. ದುರ್ಯೋಧನನೂ ಬಂದು ಶ್ರೀಭೀಮರ ಸುತ್ತಲೂ ಬಾಣಗಳನ್ನು ಬಿಟ್ಟನು. ಅವರಿಬ್ಬರ ಜೊತೆಗೆ ಶ್ರೀಭೀಮರು ಮಾಡಿದ ಯುದ್ಧ ಮನುಷ್ಯಶಕ್ತಿಯನ್ನು ಮೀರಿದ್ದಾಗಿತ್ತು. ದ್ರೌಪದೀದೇವಿಯ ಮಕ್ಕಳು ಯುಯುತ್ಸು (ಕೌರವ ಪಕ್ಷದಿಂದ ಪಾಂಡವ ಪಕ್ಷಕ್ಕೆ ಬಂದ ಧೃತರಾಷ್ಟ್ರ ಪುತ್ರ), ಶಿಖಂಡಿ ಮೊದಲಾದವರಿಂದ ಕೂಡಿಕೊಂಡು ದುರ್ಯೋಧನನ ಎಲ್ಲ ತಮ್ಮಂದಿರ ಜೊತೆಗೆ ಯುದ್ಧಮಾಡಿದರು. ಸಹದೇವ ಶಕುನಿಯರಿಗೆ, ಉಲೂಕ ನಕುಲರಿಗೆ, ಧೃಷ್ಟದ್ಯುಮ್ನ ಕೃತವರ್ಮರಿಗೆ, ಸಾತ್ಯಕಿ ಕೃಪರಿಗೆ ಯುದ್ಧಗಳು ಆದವು. ಶಲ್ಯನು ಅರ್ಜುನನ ಸುತ್ತಲೂ ಬಾಣಗಳನ್ನು ಬಿಡುತ್ತಿದ್ದನು. ಅರ್ಜುನನೂ ಶಲ್ಯನ ಮೇಲೆ ಬಾಣಗಳಿಂದ ಸುರಿಮಳೆಮಾಡಿದನು. ದೇವಾಸುರರ ಯುದ್ಧದಂತಿದ್ದ ಆ ಯುದ್ಧ ಎಷ್ಟೋಹೊತ್ತು ಜಯಾಪಜಯ ರಹಿತವಾಗಿ ನಡೆಯಿತು. ಆಗ ಶಲ್ಯನು ಪ್ರಚಂಡವಾದ ಬಾಣವನ್ನು ಅರ್ಜುನನಿಗೆ ಬಿಟ್ಟನು. ಅದು ಬಡಿದಾಗ ಅರ್ಜುನನು ಮೂರ್ಛಿತನಾದನು. ಸ್ವಲ್ಪ ಸಮಯದ ನಂತರ ಎಚ್ಚರಪಡೆದು ಎದ್ದ ಶಲ್ಯನ ಧನುಸ್ಸನ್ನು ಕತ್ತರಿಸಿದನು.

ಸೋऽನ್ಯತ್ಕಾರ್ಮುಕಮಾದಾಯ ಮುಮೋಚಾಸ್ತ್ರಾಣಿ ಫಲ್ಗುನೇ ॥
ಸೌರಂಯಾಮ್ಯಂಚ ಪಾರ್ಜನ್ಯಂ ತಾನ್ಯೈಂದ್ರೇಣ ಜಘಾನ ಸಃ ॥೧೬॥

ಪುನರ್ಯತ್ಕೃಂತತ್ತ ಚ್ಚಾಪಮಿಂದ್ರಸೂನು ರಮರ್ಷಿತಃ ॥
ಶಲ್ಯೋऽಪಿ ಗದಾಂಸಮಾದಾಯ ಚಿಕ್ಷೇಪಾರ್ಜುನವಕ್ಷಸಿ ॥೧೭॥

ತದಾ ಮುಮೋಹ ಬೀಭತ್ಸುಸ್ತತ ಉಚ್ಚುಕ್ರುಶುಃ ಪರೇ ॥
ಪ್ರಾಪ್ಯ ಸಂಜ್ಞಾಂ ಪುನಃ ಪಾರ್ಥಃ ಶಲ್ಯಂ ವಿವ್ಯಾಧವಕ್ಷಸಿ ॥೧೯॥

ಸ ವಿಹ್ವಲಿತಸರ್ವಾಂಗಃಶಿಶ್ರಿಯೇ ಧ್ವಜಮುತ್ತಮಮ್ ॥
ಸಮಾಶ್ವಸ್ತಃ ಪುನರ್ಬಾಣಂ ಯಮದಂಡನಿಭಂ ರಣೇ ॥೨೦॥

ಮುಮೋಚ ಪಾರ್ಥಸ್ಯ ಸಚ ನಿರ್ಬಿಭೇದ ಸ್ತನಾಂತರಂ ॥
ತೇನ ವಿಹ್ವಲಿತಃ ಪಾರ್ಥಃಧ್ವಜಯಷ್ಟಿಂ ಸಮಾಶ್ರಿತಃ ॥೨೧॥

ಸಮಾಶ್ವಸ್ತಃ ಪ್ರಚಿಚ್ಛೇದ ಮುದ್ರರಾಜಸ್ಯ ಕಾರ್ಮುಕಮ್ ॥
ಛತ್ರಂ ಧ್ವಜಂಚ ತರಸಾಸಾರಥಿಂಚ ನ್ಯಪಾತಯತ್ ॥೨೨॥

ಸಃ – ಆ ಶಲ್ಯನು, ಅನ್ಯತ್ ಕಾರ್ಮುಕಂ – ಇನ್ನೊಂದು ಧನುಸ್ಸನ್ನು, ಆದಾಯ— ತೆಗೆದುಕೊಂಡು, ಸೌರಂ, ಯಾವ್ಯಂಚ ಪಾರ್ಜನ್ಯಂ (ಇತ್ಯಾದೀನಿ) – ಸೌರ, ಪಾರ್ಜನ್ಯ, ಯಾಮ್ಯ ಇತ್ಯಾದಿ, ಅಸ್ತ್ರಾಣಿ —ಅಸ್ತ್ರಗಳನ್ನು, ಫಲ್ಗುನೇ —

ಅರ್ಜುನನಮೇಲೆ, ಮುಮೋಚ— ಬಿಟ್ಟನು. ಸಃ- ಆ ಅರ್ಜುನನು, ತಾನಿ- ಆ ಅಸ್ತ್ರಗಳನ್ನು, ಐಂದ್ರೇಣ — ಐಂದ್ರಾಸ್ತ್ರದಿಂದ, ಜಘಾನ – ನಾಶಮಾಡಿದನು. ಇಂದ್ರಸೂನುಃ – ಅರ್ಜುನನು, ಅಮರ್ಷಿತಃ ಸನ್ – ಸಿಟ್ಟಿಗೆದ್ದವನಾಗಿ, ತಚ್ಚಾಪಂ- ಶಲ್ಯನ ಧನುಸ್ಸನ್ನು, ಪುನಃ ನ್ಯಕೃಂತತ್ – ಮತ್ತೆ ಕತ್ತರಿಸಿದನು. ಶಲ್ಯಃ – ಶಲ್ಯನು, ಗದಾಂ ಸಮಾದಾಯ — ಗದೆಯನ್ನು ತೆಗೆದುಕೊಂಡು, ಅರ್ಜುನ ವಕ್ಷಸಿ – ಅರ್ಜುನನ ಎದೆಗೆ, ಚಿಕ್ಷೇಪ – ಒಗೆದನು. ತದಾ – ಆಗ, ಬೀಭತ್ಸುಃ—ಅರ್ಜುನನು, ಮುಮೋಹ – ಮೂರ್ಛೆಹೊಂದಿದನು. ತತಃ – ಅನಂತರ, ಪರೇ – ದುರ್ಯೋಧನ ಮೊದಲಾದವರು, ಉಚ್ಚುಕ್ರುಶುಃ— ಜೋರಾಗಿ ಹರ್ಷದಿಂದ ಕೂಗಿದರು. ಪಾರ್ಥಃ—ಅರ್ಜುನನು, ಪುನಃ ಸಂಜ್ಞಾಂಪ್ರಾಪ್ಯ – ಮತ್ತೆ ಎಚ್ಚರಿಕೆಯನ್ನು ಹೊಂದಿ, ಶಲ್ಯಂ—ಶಲ್ಯನನ್ನು, ವಕ್ಷಸಿ—ವಕ್ಷಸ್ಥಲದಲ್ಲಿ, ವಿವ್ಯಾಧ – ಹೊಡೆದನು. ವಿಹ್ವಲಿತಸರ್ವಾಂಗಃ – ಚಂಚಲವಾದ ಅವಯವಗಳುಳ್ಳ ಆ ಶಲ್ಯನು, ಉತ್ತಮಂ ಧ್ವಜಂ ಶಿಶ್ರಿಯೇ - ಶ್ರೇಷ್ಠವಾದ ಧ್ವಜವನ್ನು ಆಶ್ರಯಿಸಿದನು. ಪುನಃ ಸಮಾಶ್ವಸ್ತಃಸನ್— ಮತ್ತೆ ಅರ್ಜುನ ಎಚ್ಚರಹೊಂದಿದವನಾಗಿ, ಯಮದಂಡನಿಭಂ ಬಾಣಂ – ಯಮದಂಡ ಸದೃಶವಾದ ಬಾಣವನ್ನು, ರಣೇ- ಯುದ್ಧದಲ್ಲಿ, ಮುಮೋಚ – ಪ್ರಯೋಗಿಸಿದನು. ಸಚ – ಅದು, ಅರ್ಜುನಸ್ಯ— ಅರ್ಜುನನ, ಸ್ತನಾಂತರಂ— ಎದೆಯನ್ನು, ನಿರ್ಬಿಭೇದ— ಘಾತಿಸಿತು. ತೇನ— ಅದರಿಂದ, ವಿಹ್ವಲಿತಃ ಪಾರ್ಥಃ – ಪೀಡಿತನಾದ ಅರ್ಜುನನು, ಧ್ವಜಯಷ್ಟಿಂ – ಧ್ವಜದ ಬಡಿಗೆಯನ್ನು, ಸಮಾಶ್ರಿತಃ – ಆಶ್ರಯಿಸಿದನು. (ಹಿಡಿದುಕೊಂಡು ನಿಂತನು.)ಸಮಾಶ್ವಸ್ತಃ ಸನ್ ವಿಶ್ರಮಿಸಿಕೊಂಡವನಾಗಿ, ಮದ್ರರಾಜಸ್ಯ ಕಾರ್ಮುಕಂ, ಛತ್ರಂ ಧ್ವಜಂ ಚ-ಶಲ್ಯನ ಬಿಲ್ಲನ್ನು, ಛತ್ರವನ್ನು, ಧ್ವಜವನ್ನು, ಚಿಚ್ಛೇದ – ಕತ್ತರಿಸಿದನು. ಚ-ಮತ್ತು, ತರಸಾ – ವೇಗದಿಂದ, ಸಾರಥಿಂ ನ್ಯಪಾತಯತ್—ಸಾರಥಿಯನ್ನೂ ಕೆಡವಿದನು. ॥೧೭॥೧೮॥೧೯॥೨೦ ॥೨೧॥೨೨॥

ತದಾನ್ಯಂ ರಥಮಾಸ್ಥಾಯ ಧರ್ಮರಾಜಃಶರೋತ್ತಮೈಃ ।
ಚತುರ್ಭಿಶ್ಚತುರೋ ವಾಹಾಂಶ್ಚಲ್ಯಸ್ಯನಿಜಘಾನಹ ॥೨೩॥
ಶಲ್ಯೋಽನ್ಯಂ ರಥಮಾಸ್ಥಾಯ ಸರ್ವಾಂಸ್ತಾಂಶ್ಚರವೃಷ್ಟಿಭಿಃ ।
ಛಾದಯಾಮಾಸ ರಾಜಾನಂ ವಿರಥಂಚ ಚಕಾರಹ ॥೨೪॥

ನಿಹತ್ಯಾಶ್ವಾನ್ ಸಾತ್ಯಕೇಶ್ಚ ಧೃಷ್ಟದ್ಯುಮ್ನಸ್ಯಚಾಬಿಭೂಃ ॥
ಚಾಪೇಛಿತ್ವಾಚ ಯಮಯೋಃದಧ್ಮೌ ಶಂಖಂಮಹಾಸ್ವನಂ ॥೨೫॥

ತದಾ – ಆಗ, ಧರ್ಮರಾಜಃ— ಧರ್ಮರಾಜನು, ಅನ್ಯಂ ರಥಂ – ಇನ್ನೊಂದು ರಥವನ್ನು, ಆಸ್ಥಾಯ—ಏರಿ, ಚತುರ್ಭಿಃಶರೋತ್ತಮೈಃ – ನಾಲ್ಕು ಶ್ರೇಷ್ಠಬಾಣಗಳಿಂದ, ಶಲ್ಯಸ್ಯ — ಶಲ್ಯನ, ಚತುರಃವಾಹಾನ್ — ನಾಲ್ಕು ಕುದುರೆಗಳನ್ನು, ನಿಜಘಾನ ಹ—ಕೊಂದನು, ಶಲ್ಯಃ – ಶಲ್ಯನು. ಅನ್ಯಂ ರಥಂ ಆಸ್ಥಾಯ–ಇನ್ನೊಂದು ರಥವನ್ನೇರಿ, ಶರವೃಷ್ಟಿಭಿಃ- ಬಾಣಸಮೂಹಗಳ ಸುರಿಮಳೆಗಳಿಂದ, ತಾನ್ ಸರ್ವಾನ್ - ಆ ಎಲ್ಲರನ್ನೂ, ಛಾದಯಾಮಾಸ - ಮುಚ್ಚಿದನು, ಚ – ಮತ್ತು, ರಾಜಾನಂ – ಧರ್ಮರಾಜನನ್ನು, ವಿರಥಂ ಚಕಾರ ಹ – ವಿರಥನನ್ನಾಗಿ ಮಾಡಿದನು, ಅಭಿಭೂಃ – ಎಲ್ಲರನ್ನು ಸೋಲಿಸತಕ್ಕ, ಆ ಶಲ್ಯನು, ಸಾತ್ಯಕೇಃ ಚ ಧೃಷ್ಟದ್ಯುಮ್ನಸ್ಯ ಅಶ್ವಾನ್ – ಸಾತ್ಯಕಿಯ, ಮತ್ತು ಧೃಷ್ಟದ್ಯುಮ್ನನ ಕುದುರೆಗಳನ್ನು, ನಿಹತ್ಯ— ಕೊಂದು, ಚ – ಮತ್ತು, ಯಮಯೋಃ – ನಕುಲಸಹದೇವರ, ಚಾಪೇ – ಧನುಸ್ಸುಗಳನ್ನು, ಛಿತ್ವಾ–ಕತ್ತರಿಸಿ, ಮಹಾಸ್ವನಂ ಶಂಖಂ–ಬಹುಧ್ವನಿಯುಳ್ಳ ಶಂಖವನ್ನು, ದಧ್ಮೌ – ಊದಿದನು. ॥೨೩॥೨೪॥೨೫॥

ತತಸ್ತು ಶಲ್ಯಂ ಸಮುದೀರ್ಯಮಾಣಂ ದೃಷ್ಟ್ವಾರಣೇ ಭೀಮಸೇನಸ್ತರಸ್ವೀ ।
ನ್ಯವಾರಯದ್ಬಾಣವರೈರನೇಕೈಶ್ಚಕಾರಚೈನಂ ವಿರಥಂ ಕ್ಷಣೇನ ॥೨೬॥

ತತಃ – ಅನಂತರ, ತರಸ್ವೀ ಭೀಮಸೇನಃ – ಪರಾಕ್ರಮಿಗಳಾದ ಶ್ರೀಭೀಮಸೇನದೇವರು, ರಣೇ— ಯುದ್ಧದಲ್ಲಿ, ಶಲ್ಯಂ – ಶಲ್ಯನನ್ನು, ಸಮುದೀರ್ಯಮಾಣಂ ದೃಷ್ಟ್ವಾ—ಉತ್ಕೃಷ್ಟನಾಗಿರುವದನ್ನು ನೋಡಿ, ಅನೇಕೈಃ ಬಾಣವರೈಃ – ಅನೇಕ

ಶ್ರೇಷ್ಠ ಬಾಣಗಳಿಂದ, ನ್ಯವಾರಯತ್ – ತಡೆದನು. ಚ – ಮತ್ತು, ಕ್ಷಣೇನ – ಅಲ್ಪಸಮಯದಲ್ಲಿ, ಏನಂ – ಈ ಶಲ್ಯನನ್ನು, ವಿರಥಂ ಚಕಾರ – ರಥವಿಲ್ಲದವನನ್ನಾಗಿ ಮಾಡಿದನು. ॥೨೬॥

ಆಸ್ಥಾಯಚಾನ್ಯಂ ರಥಮಾಪತಂತಂ ಪುನಶ್ಚ ಶಲ್ಯಂ ಭೃಶಮೇವಮರ್ಮಸು ॥
ನಿರ್ಭಿದ್ಯ ಬಾಣೈರ್ವಿರಥಂ ಚಕಾರ ಪುನಸ್ತೃತೀಯಂ ರಥಮಾರುರೋಜ ॥೨೭॥

ಅನ್ಯಂ ರಥಂ— ಬೇರೆ ರಥವನ್ನು, ಆಸ್ಥಾಯ – ಏರಿ, ಪುನಃ—ಮತ್ತೆ, ಆಪತಂತಂ– ಏರಿ ಬರುತ್ತಿದ್ದ, ಶಲ್ಯಂ– ಶಲ್ಯನನ್ನು, ಬಾಣೈಃ— ಬಾಣಗಳಿಂದ, ಮರ್ಮಸು – ಮರ್ಮಸ್ಥಾನಗಳಲ್ಲಿ, ಭೃಶಂ – ಗಟ್ಟಿಯಾಗಿ, ನಿರ್ಭಿದ್ಯ – ಹೊಡೆದು, ವಿರಥಂ ಚಕಾರ — ರಥವಿಲ್ಲದವನನ್ನಾಗಿಸಿದನು. ಪುನಃ – ಮತ್ತೆ, ತೃತೀಯಂ ರಥಂ ಶಲ್ಯನೇರಿ ಬಂದ ಮೂರನೆಯ ರಥವನ್ನೂ ಕೂಡ, ಆರುರೋಜ – ನಾಶಪಡಿಸಿದರು, ॥೨೭॥

ಆತ್ತಾನ್ಯಾತ್ತಾನ್ಯಾಯುಧಾನ್ಯಸ್ಯ ಭೀಮಃ ಸರ್ವಾಣಿ ಚಿಚ್ಛೇದ ಬಿಭೇದಚಾಸ್ಯ ।
ಮರ್ಮಾಣಿ ಬಾಣೈರ್ನಿತರಾಂ ಪುನಶ್ಚ ಸಮುಷ್ಟಿಮುದ್ಯಮ್ಯ ಜಗಾಮ ಧರ್ಮಜಂ ॥೨೮॥

ಭೀಮಃ – ಶ್ರೀಭೀಮಸೇನದೇವರು, ಆತ್ತಾನಿ ಆತ್ತಾನಿ – ಪ್ರತಿಸಲವೂ ತರಲ್ಪಟ್ಟ, ಅಸ್ಯ—ಈ ಶಲ್ಯನ, ಸರ್ವಾಣಿ ಆಯುಧಾನಿ – ಎಲ್ಲ ಆಯುಧಗಳನ್ನು, ಚಿಚ್ಛೇದ – ಕತ್ತರಿಸಿದರು. ಚ – ಮತ್ತು, ಅಸ್ಯ – ಈ ಶಲ್ಯನ, ಮರ್ಮಾಣಿ–ಮರ್ಮಸ್ಥಾನಗಳನ್ನು ಬಾಣೈಃ—ಬಾಣಗಳಿಂದ, ನಿತರಾಂ ಬಿಭೇದ – ಚೆನ್ನಾಗಿ ಹೊಡೆದರು. ಪುನಶ್ಚ—ಮತ್ತೂ ಕೂಡ, ಸಃ—ಆ ಶಲ್ಯನು, ಮುಷ್ಟಿಂ ಉದ್ಯಮ್ಯ – ಮುಷ್ಟಿಯನ್ನು ಎತ್ತಿ, ಧರ್ಮಜಂ–ಧರ್ಮರಾಜನ ಕಡೆಗೆ, ಜಗಾಮ– ಹೋದನು. ॥೨೮॥

~~ತಂ ಭೀಮಭಿನ್ನಮರ್ಮಾಣಂ ವಿವರ್ಮಾಣಂ ನಿರಾಯುಧಂ ॥~~
ಶ್ವಾಸಮಾತ್ರಾವಶಿಷ್ಟಂ ಚ ಮರಣಾಯೈವ ಕೇವಲಂ ॥೨೯॥

ಆತ್ಮಾನಮಭಿಗಚ್ಛಂತಂ ದೃಷ್ಟ್ವಾನ್ಯಂ ರಥಮಾಸ್ಥಿತಃ ॥
ಹಂತುಕಾಮೋರಣೇ ವೀರಮಮೋಘಾಂ ಶಕ್ತಿಮಾದದೇ ॥೩೦॥

ದಿವ್ಯಾಸ್ತ್ರೈ ರಭಿಸಂಯೋಜ್ಯತಾಂ ತದಾ ಧರ್ಮನಂದನಃ ॥
ಸತ್ಯಧರ್ಮಫಲೈಶ್ಚೈವ ಚಿಕ್ಷೇಪಾಸ್ಯ ಹೃದಿತ್ವರನ್ ॥೩೧॥

ಸಭಿನ್ನಹೃದಯೋ ಭೂಮೌ ಪಪಾತಾಭಿಮುಖೋ ನೃಪಂ ॥
ಸತ್ಯಧರ್ಮರತಃ ಶಲ್ಯ ಇಂದ್ರಸ್ಯಾತಿಥಿತಾಮಗಾತ್ ॥೩೨॥

ಭೀಮಭಿನ್ನಮರ್ಮಾಣಂ – ಭೀಮಸೇನದೇವರಿಂದ ಪೀಡಿತವಾದ ಮರ್ಮಸ್ಥಾನಗಳುಳ್ಳ, ವಿವರ್ಮಾಣಂ – ಕವಚ ರಹಿತನಾದ, ನಿರಾಯುಧಂ – ಆಯುಧಹೀನನಾದ, ಶ್ವಾಸಮಾತ್ರಾವಶಿಷ್ಟಂ – ಕೇವಲ ಶ್ವಾಸೋಚ್ಛ್ವಾಸಮಾತ್ರ ಉಳಿದಿರುವ, ಕೇವಲಂ ಮರಣಾಯೈವ ಆತ್ಮಾನಂ ಅಭಿಗಚ್ಛಂತಂ – ಕೇವಲ ಮರಣಕ್ಕಾಗಿಯೇ ತನ್ನಕಡೆಗೆ ಬರುತ್ತಿದ್ದಂಥ,ತಂ–ಆ ಶಲ್ಯನನ್ನು ದೃಷ್ಟ್ವಾ – ನೋಡಿ, ತದಾ–ಆಗ, ಅನ್ಯಂ ರಥಂ ಆಸ್ಥಿತಃ – ಇನ್ನೊಂದು ರಥವನ್ನೇರಿದಂಥ, ತಂ ವೀರಂ – ಆ ಪರಾಕ್ರಮಿಯಾದ ಶಲ್ಯನನ್ನು, ರಣೇ ಹಂತುಕಾಮಃ–ಯುದ್ಧದಲ್ಲಿ ಕೊಲ್ಲುವ ಇಚ್ಛೆಯುಳ್ಳ, ಧರ್ಮನಂದನಃ-ಧರ್ಮರಾಜನು,ಅಮೋಘಾಂ ಶಕ್ತಿಂ ಆದದೇ—ವ್ಯರ್ಥವಾಗದಿರುವ ಶಕ್ತಿಎಂಬ ಆಯುಧವನ್ನು ತೆಗೆದುಕೊಂಡನು. ತಾಂ—ಅದನ್ನು ದಿವ್ಯಾಸ್ತ್ರೈಃ—ಶ್ರೇಷ್ಠ

ಮಂತ್ರಗಳಿಂದ, ಚ – ಮತ್ತು, ಸತ್ಯಧರ್ಮಫಲೈಶ್ಚ – ತನ್ನ ಸತ್ಯವ್ರತ, ಧರ್ಮಾಚರಣ ಇವೆಲ್ಲವುಗಳ ಫಲಗಳಿಂದಲೂ, ಅಭಿಸಂಯೋಜ್ಯ – ಕೂಡಿದ್ದನ್ನಾಗಿಮಾಡಿ, ತ್ವರನ್ – ವೇಗವುಳ್ಳವನಾಗಿ, ಅಸ್ಯ ಹೃದಿ – ಈ ಶಲ್ಯರಾಜನ ಹೃದಯದಲ್ಲಿ, ಚಿಕ್ಷೇಪ – ಒಗೆದನು. ಭಿನ್ನಹೃದಯಃ – (ಆದರಿಂದ) ಸೀಳಲ್ಪಟ್ಟ ಹೃದಯವುಳ್ಳ, ಸಃ – ಆಶಲ್ಯನು, ನೃಪಂ ಅಭಿಮುಖಃ ಸನ್ ಭೂಮೌ ಪಪಾತ — ಧರ್ಮರಾಜನಿಗೆ ಎದುರಾಗಿಯೇ ಭೂಮಿಯಲ್ಲಿ ಬಿದ್ದನು. ಸತ್ಯಧರ್ಮ ರತಃ – ಸತ್ಯವ್ರತ ಧರ್ಮಕಾರ್ಯಗಳಲ್ಲಿ ಆಸಕ್ತನಾದ, ಶಲ್ಯಃ – ಶಲ್ಯನು, ಇಂದ್ರಸ್ಯ – ಇಂದ್ರದೇವರ, ಅತಿಥಿತಾಂ ಅಗಾತ್ ಆತಿಥ್ಯವನ್ನು ಹೊಂದಿದನು. (ಸ್ವರ್ಗಕ್ಕೆ ಹೋದನು.) ॥೧೬॥

ಭಾ. ಅ. ೧೭—೩೨ ಶಲ್ಯರಾಜನು ಮತ್ತೊಂದು ಧನುಸ್ಸನ್ನು ಧರಿಸಿ ಬಂದು,ಸೂರ್ಯ, ಯಮ, ವರುಣದೇವತಾಕ ಅಸ್ತ್ರಗಳನ್ನು, ಅರ್ಜುನನ ಮೇಲೆ ಪ್ರಯೋಗಿಸಿದನು,ಅವುಗಳನ್ನೆಲ್ಲ ಅರ್ಜುನನು ಇಂದ್ರದೇವತಾಕ ಅಸ್ತ್ರದಿಂದ ನಾಶಮಾಡಿದನು; ಪುನಃ ಧನುಸ್ಸನ್ನು ಕತ್ತರಿಸಿದನು. ಆಗ ಅವನು ಗದಾವನ್ನು ತೆಗೆದುಕೊಂಡು ಅರ್ಜುನನ ಎದೆಗೆ ಒಗೆದನು. ಅದರ ಪೆಟ್ಟಿನಿಂದ ಮೂರ್ಛಿತನಾಗಿ ಅರ್ಜುನನು ಬಿದ್ದನು, ದುರ್ಯೋಧನಾದಿಗಳು ಸಂತೋಷದಿಂದ ಕೂಗಾಡಿದರು. ಮತ್ತೆ ಎಚ್ಚರ ಹೊಂದಿ ಶಲ್ಯನ ಎದೆಗೆ ಹೊಡೆದನು. ಎಲ್ಲ ಅವಯವಗಳಲ್ಲಿ ವ್ಯಥೆಯುಂಟಾಗಿದೆ; ನಿಲ್ಲಲಾಗುತ್ತಿಲ್ಲ; ಬೀಳುವವನು ಆದರೂ ಹೇಗೋ ಧ್ವಜವನ್ನು ಹಿಡಿದುಕೊಂಡು ನಿಂತನು. ಸುಧಾರಿಸಿಕೊಂಡು ಮತ್ತೊಂದು ಪ್ರಬಲ ಬಾಣವನ್ನು ಅರ್ಜುನನ ಮೇಲೆ ಬಿಟ್ಟನು. ಅದರಿಂದ ಮತ್ತೆ ಅರ್ಜುನನ ಎದೆಗೆ ಪೆಟ್ಟಾಗಿ ವ್ಯಥಿತನಾಗಿ, ಬೀಳುವ ಹಂತದಲ್ಲಿದ್ದವನು ಧ್ವಜದ ಕೋಲನ್ನು ಹಿಡಿದು ನಿಂತನು. ತಾನೂ ವಿಶ್ರಾಂತಿ ಪಡೆದು, ಶಲ್ಯನ ಧನುಸ್ಸು, ಛತ್ರ, ಧ್ವಜಗಳನ್ನು ಕತ್ತರಿಸಿ, ಕೂಡಲೇ ಸಾರಥಿಯನ್ನೂ ಕೂಡ ಸಂಹರಿಸಿದನು. ಆ ಸಮಯದಲ್ಲಿಯೇ ಧರ್ಮರಾಜನು ಇನ್ನೊಂದು ರಥವನ್ನೇರಿ ಬಂದು ನಾಲ್ಕು ಬಾಣಗಳಿಂದ ಶಲ್ಯನ ಕುದುರೆಗಳನ್ನು ಕೊಂದನು. ಶಲ್ಯನು ಇನ್ನೊಂದು ರಥದಲ್ಲಿ ಬಂದು ಪಲ್ಲರ ಮೇಲೂ ಬಾಣವೃಷ್ಟಿಯನ್ನು ಮಾಡಿದನು. ಧರ್ಮರಾಜನ ರಥವನ್ನು ನಾಶಮಾಡಿದನು. ಸಾತ್ಯಕಿಯ ಹಾಗು ಧೃಷ್ಟದ್ಯುಮ್ನನ ಕುದುರೆಗಳನ್ನು ಕೊಂದು, ನಕುಲ ಸಹದೇವರ ಧನುಸ್ಸುಗಳನ್ನೂ ಕತ್ತರಿಸಿ ಶಂಖನಾದವನ್ನು ಮಾಡಿದನು. ಹೀಗೆ ಶಲ್ಯನು ಯುದ್ಧದಲ್ಲಿ ಮೇಲುಗೈ ಸಾಧಿಸಿದ್ದನ್ನು ಕಂಡ ಶ್ರೀಭೀಮರು ಅವನನ್ನು ಕೂಡಲೇ ತಡೆದು ಅವನು ತಂದ ಎಲ್ಲ ಆಯುಧಗಳನ್ನು ನಾಶಪಡಿಸಿದರು. ಮಂಥರಸಲ ಅವನ ರಥನಾಶಮಾಡಿದರು; ಮರ್ಮಸ್ಥಾನಗಳಲ್ಲಿ ಹೊಡೆದು ಹಣ್ಣು ಹಣ್ಣು ಮಾಡಿದರು. ಹಾಗಿದ್ದರೂ ಅವನು ಮುಷ್ಟಿಯನ್ನು ಎತ್ತಿ ಧರ್ಮರಾಜನ ಕಡೆಗೆ ಹೋದನು. ಅದನ್ನು ಕಂಡ ಧರ್ಮರಾಜನು ಭೀಮರಿಂದ ಎಲ್ಲ ಮುಗಿದಿರುವ, ಕೇವಲ ಶ್ವಾಸೋಚ್ಛ್ವಾಸ ಮಾತ್ರ ಮಾಡುತ್ತಿದ್ದ ಅವನನ್ನು ಕೊಂದುಬಿಡಬೇಕೆಂದು ಶಕ್ತ್ಯಾಯುಧವನ್ನು ತೆಗೆದು ಶ್ರೇಷ್ಠ ಮಂತ್ರಗಳನ್ನು ಅಭಿಮಂತ್ರಿಸಿ, ತಾನು ನಡಿಸಿಕೊಂಡು ಬಂದಿರುವ ಸತ್ಯ, ಧರ್ಮ, ತಪಸ್ಸುಗಳ ಫಲವನ್ನೂ, ಆ ಆಯುಧದಲ್ಲಿ ಹಾಕಿ (ನಾನು ಇವನ್ನೆಲ್ಲ ಆಚರಿಸಿಕೊಂಡು ಬಂದಿದ್ದರೆ ಅವುಗಳ ಫಲವಾಗಿ ಈ ಆಯುಧವು ಇವನನ್ನು ಸಂಹರಿಸಲಿ ಎಂದು ಸಂಕಲ್ಪಿಸಿ)ಶಲ್ಯನ ಹೃದಯದಲ್ಲಿ ಬೇಗನೇ ಬಿಟ್ಟನು. ಅದರಿಂದ ಹೃದಯ ಸೀಳಿ ಧರ್ಮರಾಜನ ಎದುರೇ ಭೂಮಿಯಲ್ಲಿ ಬಿದ್ದನು. ಧರ್ಮರತನಾಗಿದ್ದರಿಂದ, ಯುದ್ಧದಲ್ಲಿ ಮರಣ ಹೊಂದಿದ್ದರಿಂದ ವೀರಸ್ವರ್ಗವನ್ನು ಹೊಂದಿ ಇಂದ್ರದೇವರ ಅತಿಥಿಯಾದನು.

ಮದ್ರರಾಜೇಹತೇ ವೀರೇ ಸುಶರ್ಮಾರ್ಜುನಮಭ್ಯಯಾತ್ ॥
ಸಂಶಪ್ತಕಾವಶಿಷ್ಟೈಸ್ತಮನಯನ್ಮೃತ್ಯವೇSರ್ಜುನಃ ॥೩೩॥

ದುರ್ಯೋಧನಸ್ಯಾವರಜಾನವಶಿಷ್ಟಾನ್ ವೃಕೋದರಃ ॥
ಸರ್ವಾನ್ ಜಘಾನ ಸೇನಾಂಚ ನಿಶ್ಶೇಷಾಮಕರೋದ್ರಣೇ ॥೩೪॥

ಉಲೂಕಂ ಸಹದೇವೋSಥ ಶಕುನಿಂಚಾತಿಪಾಪಿನಂ ॥
ಜಘಾನ ದ್ರೌಣಿಹಾರ್ದಿಕ್ಯಕೃಪಾನ್ ಭೀಮಾರ್ಜುನೌ ತತಃ ॥೩೫॥

ಬಹುಶೋವಿರಥೀಕೃತ್ಯ ಪೀಡಯಿತ್ವಾ ಪುನಃ ಪುನಃ ॥
ದ್ರಾವಯಾಮಾಸತುಸ್ತೇತು ಭೀಷಿತಾ ವಿವಿಶುರ್ವನಮ್ ॥೩೬॥

ಶೈನೇಯೇನ ಗೃಹೀತೋಽಥ ಸಂಜಯೋಽನಂತಶಕ್ತಿನಾ ॥
ವ್ಯಾಸೇನ ಮೋಚಿತೋಽಥೈಕಃ ಪಾರ್ಥಾನ್ದುರ್ಯೋಧನೋಽಭ್ಯಗಾತ್ ॥೩೭॥

ವೀರೇ – ಪರಾಕ್ರಮಿಯಾದ, ಮದ್ರರಾಜೇ – ಶಲ್ಯರಾಜನು, ಹತೇ ಸತಿ— ಸಾಯುತ್ತಿರಲು, ಸುಶರ್ಮಾ— ಸುಶರ್ಮನು, ಸಂಶಪ್ತಕಾವಶಿಷ್ಟೈಃ-ಉಳಿದ ಸಂಶಪ್ತಕರಿಂದ ಕೂಡಿಕೊಂಡು, ಅರ್ಜುನಂ–ಅರ್ಜುನನ ಮೇಲೆ ಅಭ್ಯಯಾತ್– ಏರಿಬಂದನು. ಅರ್ಜುನಃ — ಅರ್ಜುನನು, ತಂ— ಆ ಸುಶರ್ಮನನ್ನು, ಮೃತ್ಯವೇ ಅನಯತ್ — ಮೃತ್ಯುವಿಗೆ ಕಳಿಸಿದನು (ಕೊಂದನು.) ವೃಕೋದರಃ – ಭೀಮಸೇನದೇವರು,ಅವಶಿಷ್ಟಾನ್ – ಉಳಿದಿರುವ, ದುರ್ಯೋಧನಸ್ಯ ಸರ್ವಾನ್ ಅವರಜಾನ್– ದುರ್ಯೋಧನನ ಎಲ್ಲ ತಮ್ಮಂದಿರನ್ನು, ಜಘಾನ – ಕೊಂದರು, ರಣೇ – ಆ ಯುದ್ಧದಲ್ಲಿ, ಸೇನಾಂ ಸೈನ್ಯವನ್ನು, ನಿಶ್ಶೇಷಾಂ ಅಕರೋತ್ — ಏನೂ ಉಳಿಯದಂತೆ ಮಾಡಿದರು. ಸಹದೇವಃ– ಸಹದೇವನು, ಉಲೂಕಂ—(ಮೊದಲು) ಉಲೂಕನನ್ನು, ಅಥ— ಉಲೂಕನನಂತರ, ಅತಿಪಾಪಿನಂ ಶಕುನಿಂ ಚ–ಅತಿಪಾಪಿಷ್ಠನಾದ ಶಕುನಿಯನ್ನೂ ಕೂಡ,ಜಘಾನ— ಕೊಂದನು. ತತಃ – ನಂತರ, ಭೀಮಾರ್ಜುನೌ – ಭೀಮಾರ್ಜುನರಿಬ್ಬರೂ, ದ್ರೌಣಿಹಾರ್ದಿಕ್ಯಕೃಪಾನ್ – ಅಶ್ವತ್ಥಾಮ, ಕೃತವರ್ಮ, ಕೃಪರನ್ನು, ಬಹುಶಃ – ಬಹುಸಲ, ವಿರಥೀಕೃತ್ಯ – ರಥರಹಿತರನ್ನಾಗಿಸಿ, ಪುನಃ ಪುನಃ ಪೀಡಯಿತ್ವಾ–ಮೇಲಿಂದ ಮೇಲೆ ಪೀಡಿಸಿ, ದ್ರಾವಯಾಮಾಸತುಃ– ಓಡಿಸಿದರು, ತೇತು—ಅವರಾದರೂ, ಭೀಷಿತಾಃ ಸಂತಃ – ಹೆದರಿದವರಾಗಿ, ವನಂ ವಿವಿಶುಃ— ಅಡವಿಯನ್ನು ಪ್ರವೇಶಿಸಿದರು. ಶೈನೇಯೇನ – ಸಾತ್ಯಕಿಯಿಂದ, ಗೃಹೀತಃ ಹಿಡಿಯಲ್ಪಟ್ಟ, ಸಂಜಯಃ – ಸಂಜಯನು, ಅನಂತಶಕ್ತಿನಾ ವ್ಯಾಸೇನ— ಅಪರಿಮಿತಶಕ್ತಿಪೂರ್ಣರಾದ ಶ್ರೀವೇದವ್ಯಾಸದೇವರಿಂದ ಮೋಚಿತಃ – ಬಿಡಿಸಲ್ಪಟ್ಟನು. ಅಥ— ಅನಂತರ, ಏಕಃ ದುರ್ಯೋಧನಃ – ದುರ್ಯೋಧನನೊಬ್ಬನೇ, ಪಾರ್ಥಾನ್ – ಪಾಂಡವರ ಮೇಲೆ, ಅಭ್ಯಗಾತ್— ಏರಿಬಂದನು. ॥೩೫॥೩೬॥೩೭॥೩೮॥೩೯॥

ತೇಷಾಮಭೂತ್ತಸ್ಯ ಚ ಘೋರರೂಪಂ ಯುದ್ಧಂ ಸ ಬಾಣೈರ್ಬಹುಶೋಽರ್ಜುನಂ ಚ ॥
ಚಕಾರ ಮೂರ್ಛಾಭಿಗತಂ ಯುಧಿಷ್ಠಿರಂ ಯಮೌ ಅಯತ್ನಾದ್ವಿರಥಾಂಶ್ಚಕಾರ ॥೪೦॥

ತಸ್ಯ— ಆ ದುರ್ಯೋಧನನಿಗೆ, ಚ–ಮತ್ತು ತೇಷಾಂ– ಆ ಪಾಂಡವರಿಗೆ, ಘೋರರೂಪಂ ಯುದ್ಧಂ– ಭಯಂಕರವಾದ ಯುದ್ಧವು, ಅಭೂತ್ — ಆಯಿತು. ಸಃ– ಆ ದುರ್ಯೋಧನನು, ಅರ್ಜುನಂ ಚ— ಅರ್ಜುನನನ್ನೂ ಕೂಡ, ಬಾಣೈಃ– ಬಾಣಗಳಿಂದ, ಮೂರ್ಛಾಭಿಗತಂ— ಮೂರ್ಛೆಯನ್ನು ಹೊಂದಿದವನನ್ನಾಗಿ, ಚಕಾರ — ಮಾಡಿದನು. ಚ– ಮತ್ತು, ಯುಧಿಷ್ಠಿರಂ ಯಮೌ — ಧರ್ಮರಾಜನನ್ನು ನಕುಲಸಹದೇವರನ್ನು, ವಿರಥಾನ್– ರಥಹೀನರನ್ನಾಗಿ, ಅಯತ್ನಾತ್ — ಶ್ರಮವಿಲ್ಲದೇ, ಚಕಾರ– ಮಾಡಿದನು. ॥೩೮॥

ತಂ ಭೀಮಸೇನೋ ವಿರಥಂ ಚಕಾರ ಗಜಂ ಸಮಾರುಹ್ಯ ಪುನಃ ಸಮಭ್ಯಯಾತ್ ।
ಪುನಶ್ಚ ಶೈನೇಯ ಶಿಖಂಡಿ ಪಾರ್ಷತಾನ್ಯಮೌ ನೃಪಂ ಚ ವ್ಯದಧಾನ್ನಿರಾಯುಧಾನ್ ।೩೯॥

ಭೀಮಃ– ಶ್ರೀಭೀಮರು ತಂ – ಆ ದುರ್ಯೋಧನನನ್ನು, ವಿರಥಂ ಚಕಾರ — ರಥ ಹೀನನನ್ನಾಗಿ ಮಾಡಿದರು. (ಸಃ — ದುರ್ಯೋಧನನು) ಪುನಃ— ಮತ್ತೆ, ಗಜಂ ಸಮಾರುಹ್ಯ— ಆನೆಯನ್ನು ಏರಿ, ಸಮಭ್ಯಯಾತ್— ಏರಿ ಬಂದನು. ಪುನಶ್ಚ - ಮತ್ತೆ ಯೂ, ಕೂಡ, ಶೈನೇಯಂಶಿಖಂಡಿಪಾರ್ಷತಾನ್ – ಸಾತ್ಯಕಿ, ಶಿಖಂಡಿ, ಧೃಷ್ಟದ್ಯುಮ್ನರನ್ನು, ಯಮೌ — ನಕುಲ ಸಹದೇವರನ್ನು, ನೃಪಂ ಚ – ರಾಜನಾದ ಧರ್ಮರಾಜನನ್ನೂ ಕೂಡ, ಪುನಃ ನಿರಾಯುಧಾನ್ ವ್ಯದಧಾತ್—ಮತ್ತೆ ಆಯುಧರಹಿತನ್ನಾಗಿ – ಮಾಡಿದನು. ॥೩೯॥

ಗಜೇಚ ಭೀಮೇನ ಶರೈರ್ನಿಪಾತಿತೇ ಸಮಾರುಹದ್ವಾಜಿನರಂ ಸುನಿರ್ಭಯಃ ।
ಸತೇನ ಚಪ್ರಾಸಕರೋ ರಣೇಽರಿಹಾ ಚಕಾರ ಶೈನೇಯಮತಾಡಯಚ್ಚ ॥೪೦॥

ಗಜೇ – ಆನೆಯು, ಭೀಮೇನ – ಶ್ರೀಭೀಮರಿಂದ, ಶರೈಃ – ಬಾಣಗಳಿಂದ, ನಿಪಾತಿತೇ ಸತಿ – ಬೀಳಿಸಲ್ಪಡುತ್ತಿರಲು, ಸುನಿರ್ಭಯಃ ಸಃ-ಭಯರಹಿತನಾದ, ದುರ್ಯೋಧನನು, ವಾಜಿವರಂ— ಶ್ರೇಷ್ಠ ಕುದುರೆಯನ್ನು, ಸವಶಾರುಹತ್—ಏರಿದನು. ಪ್ರಾಸಕರಃ – ಕೈಯಲ್ಲಿ ಪ್ರಾಸಾಯುಧವುಳ್ಳ, ಸಃ – ಅವನು, ತೇನ— ಆ ಕುದುರೆಯಿಂದ, ರಣೇ – ಯುದ್ಧದಲ್ಲಿ, ಚಚಾರ – ಸಂಚರಿಸಿದನು. ಚ ಮತ್ತು, ಶೈನೇಯಂ— ಸಾತ್ಯಕಿಯನ್ನು, ಅತಾಡಯತ್– ಹೊಡೆದನು. ॥೪೦॥

ಮುಮೋಹ ತೇನಾಭಿಹತಃ ಸಸಾತ್ಯಕಿರ್ಯುಮಾವಪಿ ಪ್ರಾಸನಿಪೀಡಿತೌ ರಥೇ ।
ನಿಷೀದತುರ್ಧರ್ಮಸುತಂ ಪ್ರಯಾಂತಂ ಸಮೀಕ್ಷ್ಯ ಭೀಮೋಽಸ್ಯ ಜಘಾನವಾಜಿನಂ ॥೪೧॥

ತೇನ – ಆ ದುರ್ಯೋಧನನಿಂದ, ಅಭಿಹತಃ ಸಃ ಸಾತ್ಯಕಿಃ – ಹೊಡಿಸಿಕೊಂಡ ಆ ಸಾತ್ಯಕಿಯು, ಮುಮೋಹ— ಮೂರ್ಛಿತನಾದನು. ಪ್ರಾಸನಿಪೀಡಿತೌ — (ದುರ್ಯೋಧನನಿಂದ) ಪ್ರಾಸಾಯುಧದಿಂದ ತಾಡಿತರಾದ, ಯುಮಾವಪಿ— ನಕುಲ ಸಹದೇವರೂ ಕೂಡ, ರಥೇ—ರಥದಲ್ಲಿ, ನಿಷೀದತುಃ—ಕುಳಿತರು. (ತಂ—ಆ ದುರ್ಯೋಧನನನ್ನು). ಧರ್ಮಸುತಂ —ಧರ್ಮರಾಜನ ಕಡೆಗೆ, ಪ್ರಯಾಂತಂ – ಹೋದವನನ್ನಾಗಿ, ಸಮೀಕ್ಷ್ಯ– ನೋಡಿ, ಭೀಮಃ – ಶ್ರೀಭೀಮಸೇನದೇವರು, ಅಸ್ಯ– ಈ ದುರ್ಯೋಧನನ, ವಾಜಿನಂ– ಕುದುರೆಯನ್ನು, ಜಘಾನ–ಕೊಂದರು. ॥೪೧॥

ಪ್ರಾಸೇ ನಿಕೃಂತೇತು ವೃಕೋದರೇಣ ವಿವಾಹನಃ ಸೋಽಪಿಯಯೌ ಸುಯೋಧನಃ ।
ಆದಾಯಗುರ್ವೀಂ ಚಗದಾಂ ಪ್ರಯಾತೋ ದ್ವೈಪಾಯನಸ್ಯೋರು ಸರೋವಿವೇಶ ॥೪೨॥

ವೃಕೋದರೇಣ – ಶ್ರೀಭೀಮಸೇನದೇವರಿಂದ, ಪ್ರಾಸೇ ನಿಕೃಂತೇಸತಿ – ಪ್ರಾಸಾಯುಧವು ಕತ್ತರಿಸಲ್ಪಡುತ್ತಿರಲು, ವಿವಾಹನಃ ಸಃ ಸುಯೋಧನಃಅಪಿ–ವಾಹನ ವಿಲ್ಲದ ಆ ದುರ್ಯೋಧನನೂ ಕೂಡ, ಗುರ್ವೀಂ ಗದಾಂ – ದೊಡ್ಡ ಗದೆಯನ್ನು, ಆದಾಯ – ತೆಗೆದುಕೊಂಡು, ಯಯೌ—ಹೋದನು. ಪ್ರಯಾತಃ ಸನ್ – ಹೊರಟವನಾಗಿ, ದ್ವೈಪಾಯನಸ್ಯ ಉರುಸರಃ– ~~ದೊಡ್ಡದಾದ ದ್ವೈಪಾಯನ ಸರೋವರವನ್ನು~~, ವಿವೇಶ— ಪ್ರವೇಶಿಸಿದನು. ॥೪೨॥

ಭಾ. ಅ. ೩೩ – ೪೨, ಶಲ್ಯರಾಜನು ಮೃತನಾದಾಗ, ಸುಶರ್ಮನೆಂಬರಾಜನು, ಸಂಶಪ್ತಕಗಣದಲ್ಲಿ ಉಳಿದ ರಾಕ್ಷಸರಿಂದ ಕೂಡಿಕೊಂಡು ಅರ್ಜುನನ ಹತ್ತಿರ ಯುದ್ಧಕ್ಕೆ ಬಂದನು. ಅವನನ್ನು ಮತ್ತು ಸಂಶಪ್ತಕರನ್ನು ಅರ್ಜುನನು ಸಂಹರಿಸಿದನು. ಶ್ರೀಭೀಮರು ಉಳಿದಂಥ ಎಲ್ಲ ಕೌರವರನ್ನು (ಧೃತರಾಷ್ಟ್ರನ ಮಕ್ಕಳನ್ನು) ಹಾಗೂ ಎಲ್ಲ ಸೇನೆಯನ್ನೂ ಸಂಹರಿಸಿ ಏನೂ ಉಳಿಯದಂತೆ ಮಾಡಿದರು. ಸಹದೇವನು ಮೊದಲು ಉಲೂಕನನ್ನು ಸಂಹರಿಸಿದನು. ನಂತರ ಅವನ ತಂದೆಯಾದ, ನೀಚ ಶಕುನಿಯನ್ನು ಸಂಹರಿಸಿದನು. (ಹಿಂದೆ ದ್ಯೂತ ಸಭೆಯಲ್ಲಿ ವನಕ್ಕೆ ಹೊರಡುವಾಗ ಸಹದೇವನು ಶಕುನಿಯನ್ನು ಸಂಹರಿಸುವದಾಗಿ, ಶಕುನಿ ಪುತ್ರನನ್ನು ನಕುಲನು ಸಂಹರಿಸುವದಾಗಿ ಪ್ರತಿಜ್ಞೆ ಮಾಡಿದ್ದಾರೆ. ಶಕುನಿ ಪುತ್ರ ಎಂದರೆ ಉಲೂಕ ಎಂದು ಅರ್ಥ ಮಾಡಿಕೊಂಡರೆ, ಅವನ ವಧವನ್ನು ಸಹದೇವನಿಂದ ಮಾಡಿಸುವ ತಾತ್ಪರ್ಯ ಅವನಿಗಿದ್ದದ್ದನ್ನು ಇಟ್ಟುಕೊಳ್ಳಬೇಕು. ಅಥವಾ ಶಕುನಿ ಪುತ್ರ ಎಂದರೆ ಉಲೂಕ ಎಂದು ಅರ್ಥೈಸದೇ ಒಬ್ಬ ಶಕುನಿ ಪುತ್ರ ಎಂದು ಇಟ್ಟುಕೊಂಡು ಒಬ್ಬನನ್ನು ನಕುಲನು ಸಂಹರಿಸಿದ್ದಾನೆ ಎಂದು ತಿಳಿಯಬೇಕು) ಆಮೇಲೆ ಭೀಮಾರ್ಜುನರು ಅಶ್ವತ್ಥಾಮ, ಕೃತವರ್ಮ, ಕೃಪರನ್ನು ಪುನಃ ಪುನಃ ವಿರಥರನ್ನಾಗಿ ಮಾಡಿ, ಪೀಡಿಸಿ ಓಡಿಸಿದರು. ಅವರು ಹೆದರಿ ವನಪ್ರವೇಶ ಮಾಡಿದರು. ದುರ್ಯೋಧನನ ಸುದ್ದಿಯನ್ನು ತಿಳಿದು ಬರಲು ಧೃತರಾಷ್ಟ್ರನ ಆಜ್ಞೆಯಂತೆ ಬಂದ ಸಂಜಯನನ್ನು ಸಾತ್ಯಕಿಯು ಬಂಧಿಸಿದನು. ಶ್ರೀವೇದವ್ಯಾಸದೇವರೇ ಬಿಡಿಸಿದರು. ಈಗ ಅಸಹಾಯಕನಾದ ದುರ್ಯೋಧನನೊಬ್ಬನೇ ಪಾಂಡವರಮೇಲೆ ಯುದ್ಧಕ್ಕೆ ಬಂದನು. ಬಹು ಘೋರ ಯುದ್ಧವಾಯಿತು. ಅರ್ಜುನನನ್ನೂ ಕೂಡ ಮೂರ್ಛೆಗೊಳಿಸಿದನು. ಧರ್ಮ ನಕುಲ ಸಹದೇವರನ್ನು ವಿರಥರನ್ನಾಗಿ ಮಾಡಿದನು. ಆಗ ಶ್ರೀಭೀಮಸೇನದೇವರು ಬಂದು ಅವನ ರಥನಾಶ ಮಾಡಿದರು. ಆವನು ಆನೆಯನ್ನೇರಿ ಬಂದನು. ಸಾತ್ಯಕಿ, ಶಿಖಂಡಿ, ಧೃಷ್ಟದ್ಯುಮ್ನ, ನಕುಲ ಸಹದೇವ, ಧರ್ಮ ಎಲ್ಲರನ್ನು ನಿರಾಯುಧರನ್ನಾಗಿ ಮಾಡಿದನು. ಆಗ ಶ್ರೀಭೀಮರು ಅವನ ಆನೆಯನ್ನು ಬಾಣದಿಂದ ಸಂಹರಿಸಿದಾಗ, ಕುದುರೆಯನ್ನೇರಿ ಪ್ರಾಸಾಯುಧವನ್ನು ಹಿಡಿದುಬಂದನು.

ಪ್ರಾಸದಿಂದ ಸಾತ್ಯಕಿಗೆ ನಕುಲಸಹದೇವರಿಗೆ ಹೊಡೆದನು. ಸಾತ್ಯಕಿಯು ಮೂರ್ಛಿತನಾದನು. ನಕುಲಸಹದೇವರು ರಥದಲ್ಲೇ ಕುಳಿತರು. ಧರ್ಮರಾಜನ ಕಡೆಗೆ ದುರ್ಯೋಧನನು ಹೊರಟದ್ದನ್ನು ನೋಡಿದ ಶ್ರೀಭೀಮರು ಅಪನ ಕುದುರೆಯನ್ನು ಕೊಂದರು. ಪ್ರಾಸಾಯುಧವನ್ನೂ ಕತ್ತರಿಸಿದರು. ಆಗ ದುರ್ಯೋಧನನು ಯುದ್ಧ ಬಿಟ್ಟುಹೋಗಿ, ದೊಡ್ಡ ಗದೆಯೊಂದನ್ನು ತೆಗೆದುಕೊಂಡು ದ್ವೈಪಾಯನ ಸರೋವರವನ್ನು ಪ್ರವೇಶಿಸಿದನು.

ಏವಮಕ್ಷೌ ಹಿಣೀಷಟ್ಕಂಭೀಮೇನ ನಿಹತಂ ರಣೇ ॥
ಪಂಚಪಾರ್ಥೇನನಿಹತಾ ಅರ್ಧಂಕಾಳಿಂಗಕಾನೃತೇ ॥೪೩॥

ಏಕಾದಶಾಕ್ಷೌ ಹಿಣೀಭ್ಯಃ ಶಿಷ್ಟಮನ್ಯೈರ್ನಿಷೂದಿತಂ ॥
ಅಕ್ಷೌ ಹಿಣೀಚತುಷ್ಕಂಚ ಪಾರ್ಥಾನಾಂ ದ್ರೌಣಿನಾ ಹತಂ ॥೪೪॥

ಏವಂ – ಈರೀತಿಯಾಗಿ, ರಣೇ– ಯುದ್ಧದಲ್ಲಿ, ಭೀಮೇನ– ಭೀಮನಿಂದ, ಅಕ್ಷೌಹಿಣೀಷಟ್ಕಂ– ಆರು ಅಕ್ಷೌಹಿಣೀ ಸೈನ್ಯವು, ನಿಹತಂ–ಕೊಲ್ಲಲ್ಪಟ್ಟಿತು. ಪಂಚ–ಐದು ಅಕ್ಷೌಹಿಣಿಗಳು, ಪಾರ್ಥೇನ. – ಅರ್ಜುನನಿಂದ, ನಿಹತಾಃ– ಕೊಲ್ಲಲ್ಪಟ್ಟವು. ಹನ್ನೊಂದು ಅಕ್ಷೌಹಿಣೀಸಂಖ್ಯೆಯುಳ್ಳ ಕೌರವರ ಸೈನ್ಯದಲ್ಲಿ ಅರ್ಧಭಾಗವು ಭೀಮನಿಂದಲೂ ಅರ್ಧಭಾಗವು ಅರ್ಜುನನಿಂದಲೂ ಕೊಲ್ಲಲ್ಪಟ್ಟಿತು ಎಂಬ ಗ್ರಂಥಾಂತರದ ಮಾತನ್ನು ಸರಿಪಡಿಸುತ್ತಾರೆ. (ಭೀಮನಿಂದ ಕೊಲ್ಲಲ್ಪಟ್ಟ) ಕಾಂಲಿಗಕಾನ್ – ಒಂದು ಅಕ್ಷೌಹಿಣೀಸಂಖ್ಯಾಕರಾದ ಕಲಿಂಗದೇಶದವರನ್ನು, ಋತೇ – ಹೊರತು, ಏಕಾದಶಾಕ್ಷೌ ಹಿಣೀಭ್ಯಃ–ಹನ್ನೊಂದು ಅಂದರೆ ಹತ್ತು ಅಕ್ಷೌಹಿಣೀ ಸೈನ್ಯಗಳಲ್ಲಿ, ಅರ್ಧಂ – ಅರ್ಧಭಾಗ ಭೀಮನಿಂದ ಅರ್ಧಭಾಗ ಅರ್ಜುನನಿಂದ ಕೊಲ್ಲಲ್ಪಟ್ಟಿತು ಎಂಬುದಾಗಿ ಗ್ರಂಥಾಂತರದ ಅಭಿಪ್ರಾಯವು. ಕಾಲಿಂಗಕರ ಒಂದು ಅಕ್ಷೌಹಿಣಿಯನ್ನು ಸೇರಿಸಿದರೆ ಭೀಮನು ಆರು, ಅರ್ಜುನನು ಐದು ಅಕ್ಷೌಹಿಣೀ ಸೈನ್ಯವನ್ನು ಕೊಂದರು. ಭೀಮಾರ್ಜುನರಿಂದ ಕೊಲ್ಲಲ್ಪಡತಕ್ಕ ಹನ್ನೊಂದು ಅಕ್ಷೌಹಿಣಿಗಳಲ್ಲಿ ಶಿಷ್ಟಂ–ಮೊದಲು ಉಳಿಸಿರುವ ಅಂದರೆ ಭೀಮಾರ್ಜುನರಿಂದ ಅಭಿಮನ್ಯುಮೊದಲಾದವರಿಗೋಸ್ಕರವೇ ಉಳಿಸಿರುವ ಯಾವ ಸೈನ್ಯವೋ, ತತ್— ಆ ಸೈನ್ಯವು, ಅನ್ಯೈಃ–ಅಭಿಮನ್ಯುಮೊದಲಾದವರಿಂದ, ನಿಷೂದಿತಂ–ಕೊಲ್ಲಲ್ಪಟ್ಟಿತು. ಅದು ಅಲ್ಪವಾದ್ದರಿಂದ ಪ್ರತ್ಯೇಕವಾಗಿ ಹೇಳಲಿಲ್ಲ. ಪಾರ್ಥಾನಾಂ— ಪಾಂಡವರ, ಅಕ್ಷೌಹಿಣೀ ಚತುಷ್ಕಂ– ನಾಲ್ಕು ಅಕ್ಷೌಹಿಣೀ ಸೈನ್ಯವು, ದ್ರೌಣಿನಾ– ಅಶ್ವತ್ಥಾಮನಿಂದ, ಹತಂ – ಕೊಲ್ಲಲ್ಪಟ್ಟಿತು. ॥೪೩॥೪೪॥

ಅನ್ಯೈರನ್ಯಾಸ್ಸಮಸ್ತೈಶ್ಚ ದ್ರೋಣಕರ್ಣಮಹಾವ್ರತಾಃ ॥
ದುರ್ಯೋಧನೋಭೌಮಸೂನುಃ ಸಾಯುಃಸೇನಾಹನಃಕ್ರಮಾತ್ ॥೪೫॥

ಅನ್ಯೈಃ—ಇತರರಾದ, ಸಮಸ್ತೈಃ– ದ್ರೋಣಕರ್ಣಾದಿಗಳಿಂದ, ಅನ್ಯಾಃ–ಮಿಕ್ಕಿರುವಅಕ್ಷೌಹಿಣಿಗಳು, ನಿಷೂದಿತಾಃ– ಕೊಲ್ಲಲ್ಪಟ್ಟವು. ಇತರರಲ್ಲಿಯೂ ಹನನತಾರತಮ್ಯವನ್ನು ಹೇಳುತ್ತಾ ದ್ರೋಣಕರ್ಣಮಹಾವ್ರತಾಃ – ದ್ರೋಣರು, ಕರ್ಣನು, ಭೀಷ್ಮಾಚಾರ್ಯರು, ದುರ್ಯೋಧನಃ–ದುರ್ಯೋಧನನು, ಭೌಮಸೂನುಃ –ಭೂಮಿಪುತ್ರ ನರಕಾಸುರನ ಮಗನಾದ ಭಗದತ್ತನು, ಪ್ರಾಯಃ— ಹೆಚ್ಚಾಗಿ, ಕ್ರಮಾತ್ – ಕ್ರಮದಿಂದ, ಸೇನಾಹನಃ— ಸೈನ್ಯವನ್ನು ಕೊಂದವರು. ಅಂದರೆ ದ್ರೋಣಾಚಾರ್ಯರು ಎಷ್ಟು ಸೈನ್ಯವನ್ನು ಕೊಂದರೋ ಅವರಿಗಿಂತ ಕಡಿಮೆ ಸೈನ್ಯವನ್ನು ಸಂಹರಿಸಿದವನು ಕರ್ಣನು, ಕರ್ಣನಿಗಿಂತ ಕಡಿಮೆ ಸೈನ್ಯನಾಶಮಾಡಿದವರು ಭೀಷ್ಮರು ಈರೀತಿಯಾ ಕ್ರಮವು.

ಜಯಂಲಬ್ಧ್ವನದತ್ಸ್ವಚ್ಚೈಃಪಾಂಡವೇಷು ಮಹಾತ್ಮಸು ॥
ದುರ್ಯೋಧನೋಜಲಸ್ತಂ ಭಂಕೃತ್ವಾಮಂತ್ರಾನ್ಜಜಾಪಹ ॥೪೬॥

ಮಹಾತ್ಮಸು – ಮಹಾತ್ಮರಾದ, ಪಾಂಡವೇಷು – ಪಾಂಡವರು, ಜಯಂ – ಜಯವನ್ನು, ಲಬ್ಧ್ವ – ಹೊಂದಿ, ಉಚ್ಚೈಃ—ಚೆನ್ನಾಗಿ, ನದತ್ಸು–ಗರ್ಜಿಸುತ್ತಿರುಲಾ ದುರ್ಯೋಧನಃ–ದುರ್ಯೋಧನನು, ಜಲಸ್ತಂಭಂ ಜಲನಿರೋಧವನ್ನು, ಕೃತ್ವಾ – ಮಾಡಿ, ಮಂತ್ರಾನ್— ಮಂತ್ರಗಳನ್ನು, ಜಜಾಪ – ಜಪಿಸಿದನು. ॥೪೬॥

ಅವಃ – ಮಂತ್ರವನ್ನು ಕೊಟ್ಟವರು ಯಾರು ? ಅದರ ಫಲವೇನು ಎಂಬುದನ್ನು ಹೇಳುತ್ತಾರೆ—

ಮಂತ್ರಾದೂರ್ವಾಸಸಾದತ್ತಾ ಮೃತಸಂಜೀವನಪ್ರದಾಃ ॥
ಜಲೇಸ್ಥಿತ್ವಾಜಪನ್ಸಪ್ತದಿನೈಃ ಸರ್ವಾನ್ಮೃತಾನಪಿ ॥೪೭॥

ಉದ್ಧರೇದ್ಧಾರ್ತರಾಷ್ಟ್ರೋಽಯಂಸ್ಯುರವಧ್ಯಾಶ್ಚತೇಪುನಃ ॥
ಇತಿ ವಿದ್ಯಾಬಲಂ ತಸ್ಯಜ್ಞಾತ್ವಾಪಾಂಡುಸುತಾಸ್ತತಃ ॥೪೮॥

ಅನ್ವಿಷ್ಯಂತಃ ಶಶ್ರುವುಶ್ಚವ್ಯಾಧೇಭ್ಯಸ್ತಂ ಜಲೇಸ್ಥಿತಂ ॥೪೯॥

ಮಂತ್ರಾಃ- ಮಂತ್ರಗಳು, ದೂರ್ವಾಸಸಾ- ದೂರ್ವಾಸರಿಂದ, ದತ್ತಾಃ- ಕೊಡಲ್ಪಟ್ಟವುಗಳು, ಮೃತಸಂಜೀವನ ಪ್ರದಾಃ- ಸತ್ತವರಿಗೆ ಜೀವನವನ್ನು ಕೊಡತಕ್ಕವುಗಳು. ಜಲೇ – ನೀರಿನಲ್ಲಿ. ಸ್ಥಿತ್ವಾ – ಇದ್ದು, ಸಪ್ತದಿನೈಃ – ಏಳುದಿನಗಳಿಂದ, ಜಪನ್— ಜಪಿಸತಕ್ಕ, ಅಯಂ ಧಾರ್ತರಾಷ್ಟ್ರಃ— ಈ ದುರ್ಯೋಧನನು, ಸರ್ವಾನ್ ಮೃತಾನಪಿ – ಯುದ್ಧದಲ್ಲಿ ಸತ್ತವರೆಲ್ಲರನ್ನು ಉದ್ಧರೇತ್—ಬದುಕಿಸಿಯಾನು. ತೇ–ಬದುಕಿರುವ ಆ ಕೌರವಾದಿಗಳು, ಪುನಃ–ಮತ್ತೆ, ಅವಧ್ಯಾಃ—ಕೊಲ್ಲಲು ಅಯೋಗ್ಯರು, ಸ್ಯುಃ- ಆಗುವರು. ಇತಿ— ಈರೀತಿಯಾಗಿ, ತಸ್ಯ— ಆ ದುರ್ಯೋಧನನ, ವಿದ್ಯಾಬಲಂ—ವಿದ್ಯೆಯು ಸಾಮರ್ಥ್ಯವನ್ನು, ಜ್ಞಾತ್ವಾ—ವಿಚಾರಮಾಡಿ, ತತಃ-ಆ ಕಾರಣದಿಂದಲೇ, ಅನ್ವಿಷ್ಯಂತಃ – ಹುಡುಕತಕ್ಕ, ಪಾಂಡುಸುತಾಃ – ಪಾಂಡವರು, ಜಲೇ- ನೀರಿನಲ್ಲಿ, ಸ್ಥಿತಂ—ಇರತಕ್ಕ, ತಂ–ಆ ದುರ್ಯೋಧನನನ್ನು,ವ್ಯಾಧೇಭ್ಯಃ – ಬೇಡರಿಂದ, ಶುಶ್ರುವುಃ – ಕೇಳಿದರು. ॥೪೭॥೪೮॥೪೯॥

ಆಗಚ್ಛಂಶ್ಚ ತತಸ್ತತ್ರ ಪುರಸ್ಕೃತ್ಯಜನಾರ್ದನಂ ॥
ತದಾಜಲಾತ್ಸಮುನ್ಮಜ್ಯತ್ರಿಭಿರ್ದ್ರೌಣಿ ಪುರಸ್ಸರೈಃ ॥

ಮಂತ್ರಯಂತಂ ಸ್ಮದದೃಶುಸ್ತಾನ್ದೃಷ್ಟ್ವತೇಪ್ರದುದ್ರುವುಃ ॥೫೦॥

ತತಃ – ಕೇಳಿದ ನಂತರ, (ಪಾಂಡವರು), ಜನಾರ್ದನಂ - ಶ್ರೀಕೃಷ್ಣನನ್ನು, ಪುರಸ್ಕೃತ್ಯ—ಮುಂದೆ ಮಾಡಿಕೊಂಡು, ತತ್ರ – ದ್ವೈಪಾಯನ ಸರೋವರಕ್ಕೆ, ಆಗಚ್ಛನ್ – ಬಂದರು. ತದಾ—ಆಗ, ಜಲಾತ್– ನೀರಿನಿಂದ, ಸಮುನ್ಮಜ್ಯ– ಮೇಲಕ್ಕೆ ಬಂದು, ದ್ರೌಣಿಪುರಸ್ಸರೈಃ – ಅಶ್ವತ್ಥಾಮರೇ ಪ್ರಧಾನರಾಗಿ ಉಳ್ಳ, ತ್ರಿಭಿಃ – ಅಶ್ವತ್ಥಾಮ, ಕೃಪಾಚಾರ್ಯ, ಕೃತವರ್ಮ ಈ ಮೂವರಿಂದ, ಮಂತ್ರಯಂತಂ–ವಿಚಾರ ಮಾಡುತ್ತಿದ್ದ ದುರ್ಯೋಧನನನ್ನು, ದದೃಶುಃ– ಕಂಡರು, ತೇ–ಅಶ್ವತ್ಥಾಮಾದಿ ಮೂವರು, ತಾನ್— ಆ ಪಾಂಡವರನ್ನು, ದೃಷ್ಟ್ವಾ – ನೋಡಿ, ಪ್ರದುದ್ರುವುಃ – ಓಡಿ ಹೋದರು. ॥೫೦॥

ದುರ್ಯೋಧನೋಽವಿಶತ್ತೋಯಂ ದೃಷ್ಟ್ವಾತಂ ಕೇಶವಾಜ್ಞಯಾ ॥
ಯುಧಿಷ್ಠಿರಃ ಸುಪರುಷೈರ್ವಾಕ್ಯೈರೇನಮುಥಾಹ್ವಯತ್ ॥೫೧॥

ದುರ್ಯೋಧನಃ —ದುರ್ಯೋಧನನು, ತೋಯಂ—ನೀರನ್ನು, ಅವಿಶತ್ – ಪ್ರವೇಶಿಸಿದನು. ಅಥ – ಆನಂತರ, ಯುಧಿಷ್ಠಿರಃ—ಧರ್ಮರಾಜನು, ತಂ–ಆ ದುರ್ಯೋಧನನನ್ನು, ದೃಷ್ಟ್ವಾ – ನೋಡಿ, ಕೇಶವಾಜ್ಞಯಾ – ಶ್ರೀಕೃಷ್ಣನ ಅಪ್ಪಣೆಯಿಂದ, ಸುಪರುಷೈಃ—ಅತಿ ನಿಷ್ಠುರಗಳಾದ, ವಾಕ್ಯೈಃ – ಮಾತುಗಳಿಂದ, ಏನಂ—ಈ ದುರ್ಯೋಧನನನ್ನು, ಆಹ್ವಯತ್– ಕರೆದನು. ॥೫೧॥

ಅಮರ್ಷಿತೋಽಸೌ ಧೃತರಾಷ್ಟ್ರಪುತ್ರಃಶ್ವಸಂಸ್ತದಾ ದಂಡಹತೋ ಯಥಾಽಹಿಃ ।
ಉವಾಚ ಶಾಠ್ಯಾತ್ತಪಸೇವನಾಯ ಯಾಯಾಂ ಭವಾನ್ಮಾಸತು ಸರ್ವಪೃಥ್ವೀಂ ॥೫೨॥

ಅಮರ್ಷಿತಃ – ಸಹಿಸದೇ ಇರುವ, ಧೃತರಾಷ್ಟ್ರಪುತ್ರಃ–ಧೃತರಾಷ್ಟ್ರನ ಮಗನಾದ, ಅಸೌ – ಈ ದುರ್ಯೋಧನನು, ತದಾ – ಆಗ, ದಂಡಹತಃ – ಕೋಲಿನಿಂದ ಹೊಡೆಯಲ್ಪಟ್ಟ, ಅಹಿಃ–ಸರ್ಪವು, ಯಥಾ—ಹೇಗೋ, ತಥಾ – ಹಾಗೆಯೇ, ಶ್ವಸನ್‌ಸನ್—ಶ್ವಾಸ ಬಿಡುವವನಾಗಿ, ಶಾಠ್ಯಾತ್ – ಕಪಟದಿಂದ, ಉವಾಚ— ಹೇಳಿದನು. ಅಹಂ— ನಾನು, ತಪಸೇ – ತಪಸ್ಸಿಗಾಗಿ, ವನಾಯ – ಕಾಡಿಗೋಸ್ಕರ, ಯಾಯಾಂ – ಹೋಗುವೆನು. ಭವಾನ್ – ನೀನು, ಸರ್ವಪೃಥ್ವೀಂ —ಎಲ್ಲಾ ಭೂಮಿಯನ್ನೂ, ಶಾಸತು—ರಕ್ಷಿಸು. ॥೫೨॥

ತಮಾಹಧರ್ಮಜೋರಾಜಾ ಯಸ್ತ್ವಂ ಕೃಷ್ಣೇ ಸಮಾಗತೇ ।
ಸೂಚ್ಯಗ್ರವೇಧ್ಯಾಂ ಪೃಥಿವೀಂ ದಾತುಂ ನೈಚ್ಛಃ ಕಥಂಚನ ॥೫೩॥

ರಾಜಾ – ರಾಜನಾದ, ಧರ್ಮಜಃ–ಧರ್ಮರಾಜನು, ತಂ – ಆ ದುರ್ಯೋಧನನನ್ನು ಕುರಿತು, ಆಹ – ಹೇಳಿದನು ಯಸ್ತ್ವಂ – ಯಾವ ನೀನು, ಕೃಷ್ಣೇ – ಕೃಷ್ಣನು, ಸಮಾಗತೇಸತಿ – ಬರುತ್ತಿರಲು, ಸೂಚ್ಯಗ್ರವೇಧ್ಯಾಂ — ಸೂಜಿಯ ಅಗ್ರಭಾಗದಿಂದ ಸಂಬದ್ಧವಾದ ಅಂದರೆ ಸೂಜಿಯ ತುದಿಯಿಂದ ಹತ್ತುವಷ್ಟು. ಪೃಥಿವೀಂ–ಭೂಮಿಯನ್ನೂ ಕೂಡ, ದಾತುಂ– ಕೊಡಲು. ಕಥಂಚನ – ಯಾವ ರೀತಿಯಿಂದಲೂ, ನೈಚ್ಛಃ – ಇಚ್ಛಿಸಲಿಲ್ಲ. ॥೫೩॥

ಘಾತಯಿತ್ವಾ ಸರ್ವಪೃಥ್ವೀಂ ಭೀಷ್ಮದ್ರೋಣ ಮುಖಾನಪಿ ।
ದಾತುಮಿಚ್ಛಸಿ ಸರ್ವಾಂತ್ವಂ ಪೃಥ್ವೀಂನಾದ್ಯವಯಂ ಪುನಃ ॥೫೪॥

ಅಹತ್ವಾ ಪ್ರತಿಗೃಹ್ಣೀವೋ ಏಹಿ ಯುದ್ಧೇಸ್ಥಿರೋಭವ ।
ನಕುರೂಣಾಂಕುಲೇಜಾತೋ ಯುಸ್ತ್ವಂ ಭೀತೋಹ್ಯಪೋsವಿಶಃ ॥೫೫॥

ಸರ್ವಪೃಥ್ವೀಂ – ಎಲ್ಲಾ ಭೂಮಿಯನ್ನೂ, ಭೀಷ್ಮದ್ರೋಣಮುಖಾನಪಿ – ಭೀಷ್ಮ ದ್ರೋಣರೇ ಪ್ರಧಾನರಾಗಿ ಉಳ್ಳವರನ್ನೂ, ಘಾತಯಿತ್ವಾ – ಕೊಂದು, ಪುನಃ—ಮತ್ತೂ, ತ್ವಂ— ನೀನು, ಸರ್ವಾಂ ಪೃಥ್ವೀಂ–ಎಲ್ಲಾ ಭೂಮಿಯನ್ನು, ದಾತುಂ – ಕೊಡಲು, ಇಚ್ಛಸಿ—ಇಚ್ಛಿಸುತ್ತಿರುವಿ, ವಯಂ – ನಾವಾದರೂ, ಅದ್ಯ – ಈಗ, ಅಹತ್ವಾ–ನಿನ್ನನ್ನು ಕೊಲ್ಲದೆ, ನ ಪ್ರತಿಗೃಹ್ಣೀವಃ – ಭೂಮಿಯನ್ನು ಸ್ವೀಕರಿಸಲಾರೆವು, ಏಹಿ – ಬಾ. ಯುದ್ಧೇ – ಯುದ್ಧದಲ್ಲಿ, ಸ್ಥಿರೋಭವ – ಸ್ಥಿರನಾಗು, ಹಿ – ಯಾವ ಕಾರಣದಿಂದ, ಯುಸ್ತ್ವಂ – ಯಾವ ನೀನು, ಭೀತಸ್ಸನ್ – ಹೆದರಿದವನಾಗಿ, ಅಪಃ—ನೀರನ್ನು, ಅವಿಶಃ– ಪ್ರವೇಶಿಸಿದೆಯೋ, ತತಃ – ಆದ್ದರಿಂದ, ತ್ವಂ—ನೀನು, ಕುರೂಣಾಂ – ಕುರುಗಳ, ಕುಲೇ – ವಂಶದಲ್ಲಿ, ಜಾತಃ—ಹುಟ್ಟಿದವನು, ನ—ಅಲ್ಲ. ಕುರುಕುಲದಲ್ಲಿ ಹುಟ್ಟಿದವರು ಯುದ್ಧದಲ್ಲಿ ಉತ್ಸಾಹವುಳ್ಳವರು. ನಿನ್ನಂತೆ ಹೆದರಿದವರು ಯಾರೂ ಇರುವುದಿಲ್ಲ. ॥೫೪॥೫೫॥

ಇತ್ಯಾದಿರೂಕ್ಷವಚನಂ ಶ್ರುತ್ವಾದುರ್ಯೋಧನೋರುಷಾ ।।
ಜಲಸ್ತಂಭಾತ್ಸಮುತ್ತಸ್ಥೌ ಶ್ವಸನ್ನಾಶೀವಿಷೋ ಯಥಾ ॥೫೬॥

ಇತ್ಯಾದಿರೂಕ್ಷವಚನಂ – ಇವೇ ಮೊದಲಾದ ಕ್ರೂರವಾತುಗಳನ್ನು, ದುರ್ಯೋಧನಃ — ದುರ್ಯೋಧನನು, ಶ್ರುತ್ವಾ – ಕೇಳಿ, ರುಷಾ – ಕೋಪದಿಂದ, ಆಶೀವಿಷಃ – ಸರ್ಪವು, ಯಥಾ – ಹೇಗೆ ಬುಸುಗುಟ್ಟುತ್ತದೋ, ತಥಾ – ಹಾಗೆ ಶ್ವಸನ್‌ಸನ್ – ಶ್ವಾಸಬಿಡುವವನಾಗಿ, ಜಲಸ್ತಂಭಾತ್—ಜಲಸ್ತಂಭದಿಂದ, ಸಮುತ್ತಸ್ಥೌ—ಎದ್ದುಬಂದನು. ॥೫೬॥

ಉವಾಚಪಿಕ ಏವಾಹಮುಕರೀಟೋವಿವರ್ಮಕಃ ।
ಭವಂತೋಬಹವೋವರ್ಮಶಿರಸ್ತ್ರಾಣಯುತಾ ಅಪಿ ॥೫೭॥

ಯುದ್ಧೇವಮಪಿ ಮೇ ಯುದ್ಧಂ ಭವದ್ಭಿರ್ಮನ್ಯಸೇಸಮಂ ॥
ಸರ್ವೈರೇಕೇನವಾಯುದ್ಧಂಕರಿಷ್ಯೇನಚಭೀರ್ಮಮ ॥೫೮॥

ಅಹಂ—ನಾನು, ಏಕಏವ – ಒಬ್ಬನೇ, ಅಕಿರೀಟಃ — ಕಿರೀಟವಿಲ್ಲದವನು, ವಿವರ್ಮಕಃ – ಕವಚವಿಲ್ಲದವನು, ಭವಂತಃ - ನೀವು, ಬಹವಃ – ಬಹುಮಂದಿಗಳು, ಸವರ್ಮಶಿರಸ್ತ್ರಾಣಯುತಾಃ – ಕವಚ ಉಷ್ಣೀಷ(ರುಮಾಲು) ಇವುಗಳಿಂದ ಕೂಡಿದವರು, ಏವಮಪಿ – ಈರೀತಿಯಾಗಿ ವೈಷಮ್ಯವಿದ್ದರೂ ಕೂಡ, ಭವದ್ಭಿಃಸಹ—ನಿಮ್ಮಿಂದ ಕೂಡಿಕೊಂಡು, ಮೇ – ನನಗೆ, ಯುದ್ಧಂ – ಸಮರವನ್ನು, ಸಮಂ – ಸಮಾನವನ್ನಾಗಿ, ಮನ್ಯಸೇಯದಿ–ತಿಳಿಯುವದಾದರೆ, ಸರ್ವೈಃ – ಎಲ್ಲರಿಂದ ರಾಗಲಿ, ಏಕೇನವಾ—ಒಬ್ಬನಿಂದಾಗಲೀ, ಯುದ್ಧಂ – ಯುದ್ಧವನ್ನು, ಕರಿಷ್ಯೇ—ಮಾಡುವೆನು, ಮಮ – ನನಗೆ, ಭೀಃ– ಹೆದರಿಕೆಯು, ನಚ—ಇರುವದಿಲ್ಲ, ಇತಿ – ಎಂದು, ಉವಾಚ—ಹೇಳಿದನು. ॥೫೭॥೫೮॥

ಇತ್ಯುಕ್ತ ಆಹಧರ್ಮಾತ್ಮಾ ವರ್ಮಾದ್ಯಂ ಚ ದದಾಮಿತೇ ॥
ವೃಣೀಷ್ವ ಪ್ರತಿಯೋದ್ಧಾರಂ ಪಂಚಾನಾಂ ತ್ವಂ ಯಮಿಚ್ಛಸಿ ॥೫೯॥

ಇತಿ – ಈ ರೀತಿಯಾಗಿ, ಉಕ್ತಃ—ಹೇಳಿಸಿಕೊಳ್ಳಲ್ಪಟ್ಟ, ಧರ್ಮಾತ್ಮಾ – ಧರ್ಮರಾಜನು, ಆಹ— ಹೇಳಿದನು, ತೇ – ನಿನಗೆ, ವರ್ಮಾದ್ಯಂ – ಕವಚವೇ ಮೊದಲಾದದ್ದನ್ನು, ದದಾಮಿ—ಕೊಡುತ್ತೇನೆ, ತ್ವಂ —ನೀನು, ಪಂಚಾನಾಂ – ಐವರ ಮಧ್ಯದಲ್ಲಿ, ಯಂ – ಯಾವನನ್ನು, ಪ್ರತಿಯೋದ್ಧಾರಂ—ಯುದ್ಧಮಾಡತಕ್ಕವನನ್ನಾಗಿ, ಇಚ್ಛಸಿ—ಇಚ್ಛಿಸುತ್ತೀಯೋ ತಂ—ಅಂತಹನನ್ನು, ವೃಣೀಷ್ವ—ಸ್ವೀಕರಿಸು. ॥೫೯॥

ಹತ್ವೈಕಂ ಭುಂಕ್ಷ್ವರಾಜ್ಯಂ ತ್ವನುನ್ಯೇಯಾನುವನಂ ವಯಂ ।
ಹತೇವಾತ್ವಯಿತೇನೈವ ಭುಂಜೀಮಹ್ಯಾಖಿಲಾ ಭುವಂ ॥
ಆದತ್ಸ್ವಚಾಯುಧಂ ಯೇನ ಜೇತುಮಿಚ್ಛಸಿಶಾತ್ರವಾನ್ ॥೬೦॥

ತ್ವಂ– ನೀನು, ಏಕಂ — ನಮ್ಮಮಧ್ಯದಲ್ಲಿ ಒಬ್ಬನನ್ನು, ಹತ್ವಾ–ಕೊಂದು, ರಾಜ್ಯಂ – ರಾಜ್ಯವನ್ನು, ಭುಂಕ್ಷ್ವ- ಅನುಭವಿಸು, ಅನ್ಯೇ–ಇತರರಾದ, ವಯಂ—ನಾವು, ವನಂ— ಕಾಡನ್ನು, ಪುರಿತಃ, ಯಾಮಃ — ಹೋಗುತ್ತೇವೆ: ತ್ವಯಿ— ನೀನು, ಹತೇ ಸತಿ— ಸಾಯುತ್ತಿರಲು, ತೇನೈವ— ನೀನು ಯಾರನ್ನು ಆರಿಸಿದೆಯೋ ಆ ಪ್ರತಿವೀರನಿಂದ ಕೂಡಿಕೊಂಡು, ಅಖಿಲಾಂ ಭೂವಿಂ— ಎಲ್ಲಾ ಭೂಮಿಯನ್ನು, ಭುಂಜೀಮಹಿ— ಅನುಭವಿಸುತ್ತೇವೆ. ಯೇನ—ಯಾವ ಆಯುಧದಿಂದ, ಶಾತ್ರವಾನ್ – ಶತ್ರುಗಳನ್ನು, ಜೇತುಂ— ಗೆಲ್ಲಲು, ಇಚ್ಛಸಿ— ಇಚ್ಛಿಸುತ್ತೀಯೋ, ತದಾಯುಧಂ – ಅಂತಹ ಆಯುಧ ವನ್ನು, ಆದತ್ಸ್ವ—ಸ್ವೀಕರಿಸು. ॥೬೦॥

ಇತ್ಯುಕ್ತಉಚೇನಹಿ ದುರ್ಬಲೈರಹಂ ಯೋತ್ಸ್ಯೇಚತುರ್ಭಿರ್ಭವದರ್ಜುನಾದಿಭಿಃ ॥
ಭೀಮೇನಯೋತ್ಸ್ಯೇಗದಯಾ ಸದಾಹಿಮೇಪ್ರಿಯಾಗದಾನಾನ್ಯದಥಾಯುಧಂಸ್ಪೃಶೇ ॥೬೧॥

ಇತಿ – ಈ ರೀತಿಯಾಗಿ,ಉಕ್ತಃ–ಹೇಳಿಸಿಕೊಳ್ಳಲ್ಪಟ್ಟ ದುರ್ಯೋಧನನು, ಅಹಂ–ನಾನು, ದುರ್ಬಲೈಃ—ಸಾಮರ್ಥ್ಯ ಹೀನರಾದ, ಭವದರ್ಜುನಾದಿಭಿಃ—ನೀನು, ಅರ್ಜುನನೇ ಮೊದಲಾಗಿ ಉಳ್ಳ, ಚತುರ್ಭಿಃ—ನಾಲ್ವರಿಂದ, ನ ಯೋತ್ಸ್ಯೇ— ಯುದ್ಧ ಮಾಡಲಾರೆನು. ಹಿ—ಯಾವ ಕಾರಣದಿಂದ, ಮೇ– ನನಗೆ, ಸದಾ– ಯಾವಾಗಲೂ ಗದಾ—ಗದೆಯು, ಪ್ರಿಯಾ– ಪ್ರಿಯವಾದದ್ದೋ, ತಸ್ಮಾತ್—ಆ ಕಾರಣದಿಂದ, ಗದಯಾ—ಗದೆಯಿಂದ,ಭೀಮೇನ – ಭೀಮನಿಂದ, ಯೋತ್ಸ್ಯೇ—ಯುದ್ಧ ಮಾಡುವೆನು. ಅಥ—ಆದ್ದರಿಂದ, ಅನ್ಯದಾಯುಧಂ—ಬೇರೆ ಆಯುಧವನ್ನು, ನಸ್ಪೃಶೇ—ಮುಟ್ಟಲಾರೆನು, ಇತಿ—ಎಂದು, ಊಚೇ—ಹೇಳಿದನು. ॥೬೧॥

ಶ್ರುತ್ವಾಽಸ್ಯ ವಾಕ್ಯಂ ರಭಸಾವೃಕೋದರೋ ಗದಾಂ ತದಾಧ್ಯರ್ಧಭರಾಧಿಕಾಂಮುದಾ ॥
ರಾಜ್ಞೋ ಗದಾಯಾಃ ಪ್ರತಿಗೃಹ್ಯವೀರಃ ಸಮುತ್ಥಿತೋ ಯುದ್ಧಮನಾಃ ಸಮುನ್ನದನ್ ॥೬೨॥

ವೀರಃ — ಪರಾಕ್ರಮಿಯಾದ, ವೃಕೋದರಃ—ಭೀಮನು, ಅಸ್ಯ—ಈ ದುರ್ಯೋಧನನ, ವಾಕ್ಯಂ — ಮಾತನ್ನು, ಶ್ರುತ್ವಾ – ಕೇಳಿ, ರಭಸಾ–ವೇಗದಿಂದ, ರಾಜ್ಞಃ–ರಾಜನಾದ ದುರ್ಯೋಧನನ, ಗದಾಯಾಃ – ಗದೆಯ ದೆಸೆಯಿಂದ, ಅಧ್ಯರ್ಧ ಭರಾಧಿಕಾಂ—ಅರ್ಧದಿಂದ ಅಧಿಕವಾದ ಭಾರದಿಂದ ಶ್ರೇಷ್ಠವಾದ. ಗದಾಂ — ಗದೆಯನ್ನು. ಮುದಾ — ಸಂತೋಷದಿಂದ, ಪ್ರತಿಗೃಹ್ಯ – ಹಿಡಿದುಕೊಂಡು. ಯುದ್ಧಮನಾಃ ಸನ್— ಯುದ್ಧದಲ್ಲಿ ಮನಸ್ಸುಳ್ಳವನಾಗಿ, ಸಮುನ್ನದನ್ ಸನ್— ಚೆನ್ನಾಗಿ ಸಿಂಹನಾದವನ್ನು ಮಾಡುವವನಾಗಿ, ಸಮುತ್ಥಿತಃ—ಎದ್ದುನಿಂತನು. ॥೬೨॥

ಭಾ. ಅ. ೪೩—೬೨ ಈ ಮಹಾಭಾರತ ಯುದ್ಧದಲ್ಲಿ ಕೌರವರ ಹನ್ನೊಂದು ಅಕ್ಷೌಹಿಣೀ ಸೈನ್ಯದಲ್ಲಿ ಆರನ್ನು ಶ್ರೀ ಭೀಮಸೇನ ದೇವರು ಐದನ್ನು ಅರ್ಜುನನು ಸಂಹರಿಸಿದ್ದಾರೆ. ಭೀಮರು ಸಂಹರಿಸಿದ ಆರರಲ್ಲಿ ಒಂದು ಅಕ್ಷೌಹಿಣೀ ಕಾಲಿಂಗಸೈನ್ಯವಿತ್ತು. ಅದನ್ನು ಬಿಟ್ಟರೆ ೧೦ ಅಕ್ಷೌಹಿಣೀಗಳಲ್ಲಿ ಐದನ್ನು ಶ್ರೀಅರ್ಜುನ ಸಂಹರಿಸಿದ್ದರಿಂದ, ಭೀಮಾರ್ಜುನರು ಅರ್ಧ ಅರ್ಧ ಸೈನ್ಯವನ್ನು ಸಂಹರಿಸಿದ್ದಾರೆ ಎಂದು ಕೆಲವು ಗ್ರಂಥಗಳಲ್ಲಿ ಇದೆ, ಹೊರತು ಒಟ್ಟು ಸೈನ್ಯದಲ್ಲಿ ಅರ್ಧ ಅರ್ಧ ಎಂಬ ಅಭಿಪ್ರಾಯದಿಂದಲ್ಲ. ಹನ್ನೊಂದು ಅಕ್ಷೌಹಿಣಿಗಳಿಗಿಂತ ಮೇಲಿನ ಸ್ವಲ್ಪ ಸೈನ್ಯವನ್ನು ಅಭಿಮನ್ಯು ಧೃಷ್ಟದ್ಯುಮ್ನ ಮೊದಲಾವ ಉಳಿದೆಲ್ಲ ವೀರರು ಸಂಹರಿಸಿದ್ದಾರೆ. ಆ ಸೈನ್ಯವು ಅಲ್ಪವಾದ್ದರಿಂದ ಹನ್ನೊಂದೇ ಎಂದು ಹೇಳುತ್ತಾ ಬಂದದ್ದು. ಹಾಗೇ ಪಾಂಡವರ ಏಳುಅಕ್ಷೌಹಿಣೀಗಳಲ್ಲಿ, ನಾಲ್ಕನ್ನು ಅಶ್ವತ್ಥಾಮಾಚಾರ್ಯರು ಸಂಹರಿಸಿದರೆ, ಉಳಿದ ಮೂರನ್ನೂ ದ್ರೋಣ ಕರ್ಣ, ಭೀಷ್ಮ ದುರ್ಯೋಧನ, ನರಕಾಸುರನ ಪುತ್ರನಾದ ಭಗದತ್ತ ಇವರೆಲ್ಲ ಸೇರಿಕೊಂದರು. ಹೇಳಿದ ಕ್ರಮದಂತೆ ಪೂರ್ವಪೂರ್ವರು ಹೆಚ್ಚು ಸೈನ್ಯವನ್ನು ಸಂಹರಿಸಿದವರು. ಹೀಗೆ ಪಾಂಡವರು ಜಯವನ್ನು ಪಡೆದು ಸಂತೋಷದಿಂದ ಗರ್ಜಿಸುತ್ತಿರಲು, ದುರ್ಯೋಧನನು ದ್ವೈಪಾಯನಸರದಲ್ಲಿ ಜಲಸ್ತಂಭನ ಮಾಡಿಕೊಂಡು, ದುರ್ವಾಸರಿಂದ ಹಿಂದೆಯೇ ತನಗೆ ಉಪದಿಷ್ಟವಾದ, ಸತ್ಯವರನ್ನು ಬದಂಕಿಸಬಲ್ಲ ಮಂತ್ರಗಳನ್ನು ಜಪಿಸತ್ತಿದ್ದನು. ಒಂದು ವೇಳೆ ಅವನು ಅವುಗಳನ್ನು ಏಳುದಿನ ಪೂರ್ಣ ಜಪಿಸಿದ್ದರೆ ಅವನ ಸೈನ್ಯವೆಲ್ಲ ಪುನಃ ಬದಂಕಿ ಪುನಃ ಸಾಯದಂತೆ ಆಗುತಿತ್ತು. ಇದನ್ನು ತಿಳಿದ ಪಾಂಡವರು ಅದನನ್ನೇ ಹುಡುಕುತ್ತಿರುವಾಗ ವ್ಯಾಧಜನರ ಮುಖದಿಂದ ಅವನು ಆ ದ್ವೈಪಾಯನ ಸರೋವರದಲ್ಲಿರುವದನ್ನು ತಿಳಿದು ಆ ಕಡೆಗೆ ಶ್ರೀಕೃಷ್ಣನನ್ನು ಮುಂದಿಟ್ಟು ಬರುತ್ತಿರುವಾಗ, ಸರೋವರದಿಂದ ಎದ್ದು ಬಂದು, ಕೃತವರ್ಮ, ಅಶ್ವತ್ಥಾಮಾಚಾರ್ಯ, ಕೃಪಾಚಾರ್ಯರೊಡನೆ ವಿಚಾರಮಾಡುತ್ತಿದ್ದ ದುರ್ಯೋಧನನನ್ನು ನೋಡಿದರು. ಪಾಂಡವರನ್ನು ನೋಡಿದ ಅವರು ಮೂವರು ಓಡಿಹೋದರು; ದುರ್ಯೋಧನನು ಪುನಃ ನೀರಿನೊಳಗೆ ಪ್ರವೇಶಿಸಿದನು. ಆಗ ಶ್ರೀಕೃಷ್ಣನು ಅವನನ್ನು ಕ್ರೂರಮಾತುಗಳಿಂದ ಕರೆಯಲು ಧರ್ಮರಾಜನಿಗೆ ಆಜ್ಞಾಪಿಸಲು, ಧರ್ಮರಾಜನು ಹಾಗೆ ಮಾಡಿದಾಗ, ಅದನ್ನು ಕೇಳಿ ದುರ್ಯೋಧನನು ತುಂಬಾ ಸಿಟ್ಟಿನಿಂದ ಬಡಿಗಿಯಿಂದ ಹೊಡಿಸಿಕೊಂಡ ಹಾವಿನಂತೆ ಜೋರಾಗಿ ಉಸಿರಾಡುವವನಾಗಿ, ಕಪಟಬುದ್ಧಿಯಿಂದ 'ನೀನು ಎಲ್ಲ ರಾಜ್ಯವನ್ನು ಆಳು' ಎಂದು ಧರ್ಮರಾಜನಿಗೆ ಹೇಳಿದನು. ಆಗ ಧರ್ಮರಾಜನು ಅವನಿಗೆ ಶ್ರೀಕೃಷ್ಣ ಸ್ವಯಂಬಂದಾಗ ಸೂಜಿಯ ತುದಿಗೆ ಹತ್ತುವಷ್ಟು ಮಣ್ಣಿನ ಕಣವನ್ನೂ ಕೂಡ ಕೊಡಲಿಚ್ಛಿಸದ ನೀನು ನಿನ್ನ ಸ್ವಾರ್ಥಕ್ಕಾಗಿ ಎಲ್ಲ ಪೃಥ್ವೀಯನ್ನು ಹಾಳುಗೆಡವಿ, ಭೀಷ್ಮಾದಿಗಳನ್ನು ಬಲಿಕೊಟ್ಟು ಈಗ ಎಲ್ಲ ಭೂಮಿಯನ್ನು ಆಳು ಎಂದು ಹೇಳಿದರೆ ನಾವು ಒಪ್ಪುವೆವೆಂದು ತಿಳಿದಿಯಾ ? ನಿನನ್ನು ಸಂಹರಿಸದೇ ರಾಜ್ಯವನ್ನು ಸ್ವೀಕರಿಸುವದಿಲ್ಲ; ಬಾ ಯುದ್ಧಕ್ಕೆ; ಸ್ಥಿರವಾಗಿ ನಿಲ್ಲು. ಈ ರೀತಿ ಹೆದರಿ ನೀರಿನಲ್ಲಿ ಮುಣುಗಿರುವ ನೀನು ಕುರುಕುಲದಲ್ಲಿ ಹುಟ್ಟಿದವನಲ್ಲ' ಎಂದು ಹೇಳಿದಾಗ, ಆ ಕ್ರೂರಮಾತುಗಳನ್ನು ಕೇಳಿದ ದುರುಳ ದುರ್ಯೋಧನನು ಸಿಟ್ಟಿನಿಂದ, ಜಲಸ್ತಂಭನ ಬಿಟ್ಟು ನೀರಿನಿಂದ ಹೊರಗೆ ಬಂದು ಜೋರಾಗಿ ಹಾವಿನಂತೆ ಉಸಿರಾಡಿಸುತ್ತಾ, "ನಾನು ಒಬ್ಬನು; ಕಿರೀಟ, ಕವಚ, ಆಯುಧರಹಿತನಾಗಿರವೆನು. ನೀವು ಬಹು ಜನರು, ಕವಚಾದಿಗಳಿಂದ ಸಹಿತರು. ಹೀಗಿದ್ದರೂ ನನಗೂ ನಿಮಗೂ ಯುದ್ಧವು ಯೋಗ್ಯ ಎಂದು ನಿಮಗೆನಿಸುವದಾದರೆ, ಆಗಲಿ. ನನಗೇನೂ ಭಯವಿಲ್ಲ. ಎಲ್ಲರೊಡನೆಯೂ ಯುದ್ಧ ಮಾಡಬಲ್ಲೆ; ಒಬ್ಬನೊಡನೆಯೂ ಮಾಡಬಲ್ಲೆ.' ಎಂದು ಹೇಳಿದನು. ಆಗ ಧರ್ಮದಲ್ಲೇ ಸದಾ ಮನಸ್ಸು ಇರುವ ಧರ್ಮರಾಜನು 'ನಿನಗೆ ಕವಚ ಮೊದಲಾದ ಎಲ್ಲ ಸಾಮಗ್ರಿಗಳನ್ನು

ಕೊಡುವೆ; ನೀನು ನಮ್ಮೈವರಲ್ಲಿ ಒಬ್ಬರನ್ನು ನಿನ್ನ ಇಚ್ಛೆಯಂತೆ ಆರಿಸು. ಆ ಒಬ್ಬನನ್ನು ನೀನು ಸಂಹರಿಸಿ ನೀನು ರಾಜ್ಯವನ್ನು ಹೊಂದು; ಉಳಿದ ನಾವು ವನಕ್ಕೆ ಹೋಗುವೆವು. ಆಥವಾ ನೀನು ಸಂಹೃತನಾದರೆ ನಾವೆಲ್ಲರೂ ರಾಜ್ಯವನ್ನು ಆಳುವೆವು. ಆರಿಸಿಕೊ ಒಬ್ಬನನ್ನು; ಆರಿಸಿಕೊ ಬೇಕಾದ ಆಯುಧವನ್ನು' ಎಂದು ಹೇಳಿದನು. ಆಗ ದುರ್ಯೋಧನನು ದುರ್ಬಲರಾದ ಅರ್ಜುನ, ನೀನು ಹಾಗು ಯಮಳರಿಂದ ಕೂಡಿ ಯುದ್ಧಮಾಡಲು ಸಿದ್ಧನಿಲ್ಲ. ಭೀಮನ ಜೊತೆಗೆ ಯುದ್ಧಮಾಡುವೆನು. ನನಗೆ ಗದಾಯುಧವೇ ಪ್ರಿಯವಾದದ್ದು. ಅದನ್ನೇ ತೆಗೆದುಕೊಳ್ಳುವೆನು' ಎಂದು ಹೇಳಿದನು. ಇವನ ಮಾತನ್ನು ಕೇಳಿದ ಶ್ರೀಭೀಮಸೇನದೇವರು ಆಗ ದುರ್ಯೋಧನನ ಗದೆಗಿಂತಒಂದುವರೆ ಪಟ್ಟು ಭಾರವಾಗಿರುವ ಗದೆಯನ್ನು ತೆಗೆದುಕೊಂಡು ಸಂತೋಷದಿಂದ ಯುದ್ಧಕ್ಕೆ ಸಿದ್ಧರಾಗಿ ಸಿಂಹನಾದವನ್ನು ಮಾಡುತ್ತಾ ಎದ್ದು ನಿಂತರು.

ವಿಶೇಷಾಂಶ– ಶ್ರೀಭೀಮರ ಬಲದ ಬಗ್ಗೆ ಈ ಹಿಂದೆ ಶ್ರೀಕೃಷ್ಣ, ಧರ್ಮ, ಅರ್ಜುನಾದಿಗಳ ಮುಖದಿಂದ ಬಂದದ್ದನ್ನು ಹಾಗು ವೈರಿ ಜರಾಸಂಧನ ಮುಖದಿಂದ ಬಂದದ್ದನ್ನು ಕಂಡಿದ್ದೇವೆ. ಈಗ ಅವರ ಕಡುವೈರಿ ದುರ್ಯೋಧನನ ಮುಖದಿಂದ ಪುನಃ ಬಂದಿದೆ. ವಿರಾಟ ಪರ್ವದಲ್ಲಿಯೂ ಪ್ರಶಂಸೆ ಮಾಡಿದ್ದಾನೆ. ಇದರಿಂದ 'ಭೀಮಸೇನ ಸಮೋನಾಸ್ತಿ' ಸೇನಯೋ ಭಯೋರುಪಿ ಪಾಂಡಿತ್ಯೇ ಎಂಬುದು ಸಿದ್ಧವಾಗುವದು.

ಅಥಾಹ ನಾರಾಯಣ ಆದಿದೇವೋಯುಧಿಷ್ಠಿರಂ ಕಷ್ಟಮಿದಂ ಕೃತಂತ್ವಯಾ
ನಹ್ಯೇಷರಾಜಾ ಗದಯಾರಣೇ ಚರನ್ ಶಕ್ಯೋವಿಜೇತುಂ ನಿಖಿಲೈಃ ಸುರಾಸುರೈಃ ॥೬೩॥

ಅಥ– ಅನಂತರ, ಆದಿದೇವಃ— ಆದಿದೇವನಾದ, ನಾರಾಯಣಃ — ಶ್ರೀಕೃಷ್ಣನು, ಯುಧಿಷ್ಠಿರಂ — ಧರ್ಮರಾಜನನ್ನು ಕುರಿತು, ಆಹ—ಹೇಳಿದನು. ಎಲೋ ಯುಧಿಷ್ಠಿರನೇ, ತ್ವಯಾ – ನಿನ್ನಿಂದ. ಇದಂ – ಐವರ ಮಧ್ಯದಲ್ಲಿ ಒಬ್ಬನನ್ನು ಸ್ವೀಕರಿಸು ಎಂಬ ಮಾತು ಹೇಳುವದರಿಂದ. ಕಷ್ಟಂ ಕೃತಂ – ಕಷ್ಟವು ಮಾಡಲ್ಪಟ್ಟಿತು; ಗದಯಾ – ಗದೆಯಿಂದ, ರಣೇ — ಯುದ್ಧದಲ್ಲಿ, ಚರನ್ – ಸಂಚರಿಸುವ, ರಾಜಾ—ರಾಜನಾದ, ಏಷಃ – ಈ ದುರ್ಯೋಧನನು, ನಿಖಿಲೈಃ – ಎಲ್ಲಾ, ಸುರಾ–ಸುರೈಃ— ದೇವದೈತ್ಯದಿಂದ, ವಿಜೇತುಂ— ಜಯಿಸಲು, ನ ಶಕ್ಯಃ – ಶಕ್ಯನು ಆಗಲಾರನು. ॥೬೩॥

ಸನಿಶ್ಚಯಾದ್ವಶ್ಚತುರೋ ನಿಹನ್ಯಾತ್ಸಹಾರ್ಜುನಾನ್ಭೀಮಸೇನಃ ಕಥಂಚಿತ್ ॥
ಹಂತೈನಮಾಜೌ ನಹಿ ಭೀಮತುಲ್ಯೋಬಲೇಕ್ವಚಿದ್ಧಾರ್ತರಾಷ್ಟ್ರಃ ಕೃತೀಚ ॥೬೪॥

ಸಃ— ಆ ದುರ್ಯೋಧನನು, ನಿಶ್ಚಯಾತ್ – ಖಂಡಿತವಾಗಿಯೂ, ಸಹಾರ್ಜುನಾನ್–ಅರ್ಜುನನಿಂದ ಸಹಿತರಾದ, ಚತುರಃ ವಃ— ನಾಲ್ವರಾದ ನಿಮ್ಮನ್ನು, ನಿಹನ್ಯಾತ್ – ಕೊಲ್ಲುವನು. ಭೀಮಸೇನಃ – ಭೀಮಸೇನನು, ಏನಂ – ಈ ದುರ್ಯೋಧನನನ್ನು, ಕಥಂಚಿತ್ – ಯಾವದಾದರೂ ಒಂದು ಉಪಾಯದಿಂದ, ಆಜೌ —ಯುದ್ಧದಲ್ಲಿ, ಹಂತಾ – ಕೊಲ್ಲುವನು. ಬಲೇ – ಸಾಮರ್ಥ್ಯ ವಿಷಯದಲ್ಲಿ, ಭೀಮತುಲ್ಯಃ–ಭೀಮನಿಗೆ ಸದೃಶನು, ಕ್ವಚಿತ್ —ಎಲ್ಲಿಯೂ ಕೂಡ, ನಹಿ—ಇರುವದಿಲ್ಲ. ಧಾರ್ತರಾಷ್ಟ್ರಃಚ – ದುರ್ಯೋಧನನೂ, ಕೃತೀ – ಗದಾಶಿಕ್ಷೆಯಲ್ಲಿ ನಿಪುಣನು. ॥೬೪॥

ಅವಃ – (೧)– ಭೀಮನು ದುರ್ಯೋಧನನನ್ನು (ಕಥಂಚನ)ಯಾವುದಾದರೂ ಒಂದು ಉಪಾಯದಿಂದ ಕೊಲ್ಲುವನು ಎಂದು ಹೇಳಿದ್ದರಿಂದ ಭೀಮನಿಗೆ ದೌರ್ಬಲ್ಯವು ಪ್ರಾಪ್ತವಾಯಿತು. ಬಲದಲ್ಲಿ ಭೀಮನಿಗೆ ಸದೃಶನು ಇಲ್ಲವೆಂದು ಹೇಳಿದ್ದು ಹೇಗೆ ಸಮಂಜಸವಾಗುವುದು ಎಂಬುದಕ್ಕೆ ಸಮಾಧಾನವನ್ನು ಹೇಳುತ್ತಾರೆ.

ಊರೂ ಭೀಮೇನ ಭೇತ್ತವ್ಯೌ ಪ್ರತಿಜ್ಞಾಂ ರಕ್ಷತಾರಿಪೋಃ ।
ನಾಭೇರಧಸ್ತಾದ್ಧನನಂ ಜನಾ ಆಹುರ್ಗದಾಮೃಧೇ ॥೬೫॥

ಅಧರ್ಮ ಇತಿ ತತ್ಕೃಷ್ಣೋ ಲೋಕನಿಂದಾನಿವೃತ್ತಯೇ ।
ಅಪದ್ಧರ್ಮಂ ದರ್ಶಯಿತುಂ ಕಿಂಚಿದ್ವ್ಯಾಜೇನ ಸಂಯುತಃ ॥೬೬॥

ಭೀಮೋಹನ್ಯಾದ್ಧಾರ್ತರಾಷ್ಟ್ರಮಿತ್ಯುಚೇಯದ್ಯಪಿ ಸ್ಫುಟಂ ।
ಅವ್ಯಾಜೇನಾಪಿ ಶಕ್ತೋಽಸೌ ಬಲಂ ನಿಸ್ಸೀಮಮಾಹಚ ॥೬೭॥

ಅಶಿಕ್ಷಾಮುಪ್ಯನೂನಾಂ ಯತ್ನಂ ದುರ್ಯೋಧನೇಽಧಿಕಂ ।
ನಹಿ ಭೀಮೋಽತಿಪ್ರಯತ್ನಂ ಕುರ್ಯಾದಿತಿ ಗುಣೋಹ್ಯಯಂ ॥೬೮॥

('ತವೋರು ಮೇನಂ ಗದಾಯೋರುವೇಗಯಾ ಬಿಭೇತ್ಸ್ಯೇ' ಎಂಬ) ಪ್ರತಿಜ್ಞಾಂ – ಮೊದಲು ಮಾಡಿದ ಪ್ರತಿಜ್ಞೆಯನ್ನು, ರಕ್ಷತಾ – ಪಾಲಿಸತಕ್ಕ ಭೀಮೇನ – ಭೀಮನಿಂದ, ರಿಪೋಃ – ಶತ್ರುವಾದ ದುರ್ಯೋಧನನ ಊರೂ-ತೊಡೆಗಳು, ಭೇತ್ತವ್ಯೌ— ಭೇದಿಸಲ್ಪಡಬೇಕು. ತೊಡಗಳನ್ನು ಭೇದಿಸದಿದ್ದರೆ ಪ್ರತಿಜ್ಞಾತಪರಿತ್ಯಾಗದಿಂದ ಅಧರ್ಮವು ಬರುವುದು. ಜನಾಃ – ಜನರು, ಗದಾಮೃಧೇ— ಗದಾಯುದ್ಧದಲ್ಲಿ, ನಾಭೇಃ— ಹೊಕ್ಕಳಿನ, ಅಧಸ್ತಾತ್ – ಕೆಳಗೆ, ಹನನಂ— ಹೊಡೆಯುವುದು ಅಧರ್ಮಃಇತಿ – ಅಧರ್ಮವೆಂದು, ಆಹುಃ – ಹೇಳುತ್ತಾರೆ. ತತ್ – ಹಿಂದೆ ಹೇಳಿದರೀತಿಯಿಂದ, ಎರಡುಪಕ್ಷದಲ್ಲಿಯೂ ಅನುಪಪತ್ತಿ ಇರುವದರಿಂದ, ಕೃಷ್ಣಃ – ಶ್ರೀಕೃಷ್ಣನು, ಲೋಕನಿಂದಾನಿವೃತ್ತಯೇ –ಭೀಮನು ಕೆಟ್ಟಕೆಲಸವನ್ನು ಮಾಡಿದನೆಂದು ಜನರ ನಿಂದೆಯನ್ನು ಪರಿಹರಿಸುವದಕ್ಕಾಗಿ,ಅಪದ್ಧರ್ಮಂ ದರ್ಶಯಿತುಂ – ಪ್ರತಿಜ್ಞಾತವನ್ನು ಮಾಡದಿದ್ದರೂ ರಾಜನಿಗೆ ಅಧರ್ಮವು, ಗದಾಯುದ್ಧದ ಧರ್ಮವನ್ನು ಅತಿಕ್ರಮಿಸಿದರೂ ಅಧರ್ಮವು ಹೀಗೆ ಎರಡುರೀತಿಯಿಂದಲೂ ಧರ್ಮಾತಿಕ್ರಮರೂಪವಾದ ಆಪತ್ತು ಪ್ರಾಪ್ತವಾಗುತ್ತಿರಲು, ಅಲ್ಪವಾದ ಅಧರ್ಮವನ್ನು ಸಹನೆಮಾಡಿ ಮಹತ್ತಾದ ಧರ್ಮವನ್ನು ರಕ್ಷಿಸಬೇಕು ಎಂಬ ಧರ್ಮವನ್ನು ತೋರಿಸುವದಕ್ಕಾಗಿ, ಕಿಂಚಿದ್ವ್ಯಾಜೇನ – ಅಲ್ಪಧರ್ಮಾತಿಕ್ರಮ ರೂಪವಾದ ಅಲ್ಪನೆಪದಿಂದ ಅಲ್ಪಧರ್ಮಪ್ರತಿಪಾದಕ ಸತ್ಯವಾಕ್ಯ ತ್ಯಾಗರೂಪವಾದ್ದರಿಂದ ವ್ಯಾಜದಂತಿರುವ ಅಲ್ಪಅಧರ್ಮದಿಂದ,ಸಂಯುತಃ– ಕೂಡಿದ, ಭೀಮಃ – ಭೀಮನು, ಧಾರ್ತರಾಷ್ಟ್ರಂ – ದುರ್ಯೋಧನನನ್ನು, ಹನ್ಯಾತ್ – ಕೊಲ್ಲುವನು, ಇತಿ– ಎಂದು, ಊಚೇ – ಹೇಳಿದನು. ಹೇಗೆ ಹುಲಿಯು ಗೋವನ್ನು ಕೊಲ್ಲುವಾಗ ಸಮರ್ಥನಾದ ಕ್ಷತ್ರಿಯನು ಅದನ್ನು ಉಪೇಕ್ಷೆಮಾಡಿದರೂ ಅಧರ್ಮವುಬರುವುದು, 'ನಹಿಂಸ್ಯಾತ' ಎಂಬ ಶ್ರುತಿಯಿಂದ ಹುಲಿಯನ್ನು ಕೊಲ್ಲುವುದೂ ಅಧರ್ಮವು. ಹೀಗೆ ಎರಡುರೀತಿಯಿಂದಲೂ ಅಧರ್ಮವು ಬರುತ್ತಿರಲು 'ಮೋದೇತಸಾಧುರಪಿ ವೃಶ್ಚಿಕಸರ್ಪಹತ್ಯಾಂ' ಎಂಬ ವಚನದಿಂದ ಕೆಟ್ಟಪ್ರಾಣಿಯು ಸಂಹಾರರೂಪವಾದ್ದರಿಂದ ಅಲ್ಪವಾದ ಹುಲಿಯನಾಶ ರೂಪವಾದ ಅಧರ್ಮವನ್ನು ಸಹಿಸಿಯಾದರೂ ಹುಲಿಯನ್ನುಕೊಂದು, ಯಾಗಕ್ಕೆ ಉಪಯುಕ್ತವಾದ ಹಾಲನ್ನು ಕೊಡುವ ಗೋರಕ್ಷಣರೂಪವಾದ ಧರ್ಮವನ್ನೇ ಕ್ಷತ್ರಿಯನು ಪಾಲಿಸಬೇಕೋ ಹಾಗೆಯೇ ದುಷ್ಟನಾದ ದುರ್ಯೋಧನನ ನಾಶಕ್ಕಾಗಿ ಗದಾಯುದ್ಧದ ಧರ್ಮಾತಿಕ್ರಮ ರೂಪವಾದ ಅಲ್ಪವಾದ ಅಧರ್ಮವನ್ನು ಸಹಿಸಿಯಾದರೂ "ಸತ್ಯಂವದ" ಸತ್ಯವನ್ನು ಹೇಳು ಎಂದು ಶ್ರುತಿಇರುವದರಿಂದ ಸತ್ಯತ್ಯಾಗ ರೂಪವಾದ ತನ್ನ ಪ್ರತಿಜ್ಞೋಲ್ಲಂಘನ ರೂಪವಾದ ಮಹತ್ತಾದ ಅಧರ್ಮವನ್ನು ಪರಿಹರಿಸಿಕೊಳ್ಳತಕ್ಕದ್ದು. ಯದ್ಯಪಿ ಅಸೌ – ಯದ್ಯಪಿ ಈ ಭೀಮನು, ಸ್ಫುಟಂ – ಸ್ಪಷ್ಟವಾಗಿಯೂ, ಅವ್ಯಾಜೇನಾಪಿ – ನೆಪವಿಲ್ಲದೇನೇ, ಶಕ್ತಃ–ನಾಭಿಯ ಮೇಲೆ ಹೊಡೆದು ಕೊಲ್ಲುವುದರಲ್ಲಿ ಸಮರ್ಥನು. ತಥಾಪಿ – ಹಾಗಾದರೂ ಪ್ರತಿಜ್ಞಾರಕ್ಷಣೆಯೆಂಬ ಧರ್ಮವನ್ನು ಪಾಲಿಸುವದಕ್ಕಾಗಿ ಭೀಮನು ತೊಡೆಗಳನ್ನು ಭೇದಿಸಬೇಕು. ಭೀಮನಿಗೆ ಅಶಕ್ತಿಯು ಇಲ್ಲವೆಂಬುದನ್ನು ಹೇಳುತ್ತಾರೆ. ನಿಸ್ಸೀಮಂ ಬಲಂಆಹ– ಶ್ರೀಕೃಷ್ಣನು ಜರಾಸಂಧನನ್ನು ಅಮರ್ಮಸ್ಥಾನದಲ್ಲಿ ಭೇದಿಸತಕ್ಕ, ಬಹು ಅಕ್ಷೌಹಿಣೀ ಸೈನ್ಯವನ್ನು ಕೊಲ್ಲತಕ್ಕ ಭೀಮನಿಗೆ ನಿರವಧಿಕಬಲವಿದೆಯೆಂದು ಹೇಳಿರುವನು. ಆದ್ದರಿಂದ ಅಶಕ್ತಿಯಿಂದ ಈ ಕೆಲಸವನ್ನು ಮಾಡಲಿಲ್ಲ, 'ಧಾರ್ತರಾಷ್ಟ್ರಃ ಕೃತೀ' ದುರ್ಯೋಧನನು ನಿಪುಣನು ಎಂದು ಕೃಷ್ಣನು ಹೇಳಿದ್ದರಿಂದ ಭೀಮನಿಗೆ ಶಿಕ್ಷಾಕುಶಲತೆಯು ಇಲ್ಲವೆಂದು ದೋಷವು ಪ್ರಾಪ್ತವಾಗುವದೆಂದರೆ ಶ್ರೀಕೃಷ್ಣನವಾಕ್ಯದ ಅಭಿಪ್ರಾಯವನ್ನು ಹೇಳುತ್ತಾರೆ. ಭೀಮನಿಗೆ ಶ್ರೀಕೃಷ್ಣನು ಶಿಕ್ಷಾಮುಪ್ಯನೂನಾಂ — ಪೂರ್ಣವಾದ ಶಿಕ್ಷೆಯನ್ನೂ ದುರ್ಯೋಧನನಿಗೆ ಅಧಿಕವಾದ ಪ್ರಯತ್ನವನ್ನೂ ಹೇಳಿರುತ್ತಾನೆ. ದುರ್ಯೋಧನನ ಗುರುವಾದ ಬಲರಾಮನಿಂದಲೂ

ಗದಾಪಾಣಿಯಾದ ತನ್ನಿಂದಲೂ ಯಾವ ಭೀಮನಿಗೆ ಗದಾಭ್ಯಾಸವೋ ಅಂತಹ ಭೀಮನಿಗೆ ಗದಾಭ್ಯಾಸದಲ್ಲಿ ನಿಪುಣತೆ ಇಲ್ಲ ವೆಂದು ಕೃಷ್ಣನು ಹೇಗೆ ಹೇಳಿಯಾನು ? ಆದ್ದರಿಂದ ಧಾರ್ತರಾಷ್ಟ್ರಃ ಕೃತೀ ಎಂಬುದಕ್ಕೆ ದುರ್ಯೋಧನನು ಕುಶಲನು ಎಂದೂ ಅರ್ಥವಲ್ಲ. ಕೃತಿ ಪ್ರಯತ್ನೇ ಎಂಬ ಧಾತುವಿನಿಂದ ಯತ್ನಂ ದುರ್ಯೋಧನೇಽಧಿಕಂ— ದುರ್ಯೋಧನನಲ್ಲಿ ಅಧಿಕಪ್ರಯತ್ನ ವನ್ನು ಕೃತೀಪದದಿಂದ ಹೇಳಿರುವನು. ನಿಪುಣತೆಯನ್ನು ಹೇಳಲಿಲ್ಲ. ಹಾಗಾದರೆ ಭೀಮನಿಗೆ ಪ್ರಯತ್ನವಿಲ್ಲವೆಂಬ ದೋಷವು ಬರುವುದೆಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ. ಭೀಮಃ — ಭೀಮನು, ಅತಿಪ್ರಯತ್ನಂ-ಅಲ್ಪಕಾರ್ಯದಲ್ಲಿ ಮಹಾ ಪ್ರಯತ್ನವನ್ನು, ನ ಕುರ್ಯಾತ್ — ಮಾಡಲಿಲ್ಲವೆಂಬ, ಅಯಂ — ಈ ಸ್ವಭಾವವು, ಗುಣೋಹಿ — ಭೀಮನಿಗೆ ಗುಣವೇ ಆಗಿದೆ. ಹಿಶಬ್ದದಿಂದ ಪ್ರಬಲವಾದ ಸಿಂಹವು ದುರ್ಬಲಜಿಂಕೆಯನ್ನು ಕೊಲ್ಲಲು ತನ್ನ ಕಠೋರ ಉಗುರುಗಳಿಂದ ಪ್ರಯತ್ನ ಮಾಡುವುದಿಲ್ಲವೆಂಬ ಪ್ರಸಿದ್ಧಿಯನ್ನು ಸೂಚಿಸುತ್ತಾರೆ. ॥೬೫॥೬೬॥೬೭॥೬೮॥

ಆವ--ಭೀಮನು ಸಮರ್ಥನಾಗಿದ್ದರೆ ವ್ಯಾಜದಿಂದ ಹನನವೇಕೆ ಎಂಬ ಶಂಕೆಗೆ ಕೃಷ್ಣ ಭೀಮರ ಅಭಿಪ್ರಾಯವನ್ನು ಗ್ರಂಥಕಾರರು ಸ್ಪಷ್ಟಪಡಿಸುತ್ತಾರೆ.

ಪ್ರತಿಜ್ಞಾಪಾಲನಂ ಧರ್ಮೋದುಷ್ಪೇಷು ತುವಿಶೇಷತಃ ।
ಇತಿಧರ್ಮರಹಸ್ಯಂತುವಿತ್ತಃ ಕೃಷ್ಣವೃಕೋದರೌ ॥೬೯॥

ನಾನ್ಯಸ್ತತೋಲೋಕನಿಂದಾಂ ವ್ಯಪನೇತುಮುಭಾವಪಿ ।
ಅನಾಪದ್ಯಾಪದಿವಚ ದರ್ಶಯೇತಾಂ ಜನಸ್ಯತು ॥೭೦॥

ತು – ವಿಶೇಷಾಕಾರವಾಗಿ, ದುಷ್ಪೇಷಂ – ದುಷ್ಟರಲ್ಲಿ, ಪ್ರತಿಜ್ಞಾಪಾಲನಂ – ಪ್ರತಿಜ್ಞೆಯ ರಕ್ಷಣೆಯು, ವಿಶೇಷತಃ ಧರ್ಮಃ – ವಿಶೇಷವಾದ ಧರ್ಮವು. ಇತಿ – ಎಂಬ, ಧರ್ಮರಹಸ್ಯಂತು– ಗೋಪ್ಯವಾದ ಧರ್ಮವನ್ನಾದರೂ, ಕೃಷ್ಣವೃಕೋದರೌ — ಶ್ರೀಕೃಷ್ಣಭೀಮರು, ವಿತ್ತಃ — ತಿಳಿದಿರುತ್ತಾರೆ, ನಾನ್ಯಃ – ಇನ್ನೊಬ್ಬನು ತಿಳಿದಿರುವುದಿಲ್ಲ, ತತಃ—ಆದ್ದರಿಂದ, ಉಭಾವಪಿ - ಕೃಷ್ಣಭೀಮರು, ಅನಾಪದಿಚ – ಹಿಂದೆಹೇಳಿದ ರೀತಿಯಿಂದ ಆಪತ್ತು ಇಲ್ಲದಿದ್ದರೂ ಕೂಡ, ಆಪದಿವ — ಆಪತ್ತಿನಂತೆ, ಲೋಕನಿಂದಾಂ-ಜನರ ನಿಂದೆಯನ್ನು, ವ್ಯಪನೇತುಂ-ಪರಿಹರಿಸುವದಕ್ಕಾಗಿ, ಜನಸ್ಯ–ಜನರಿಗೆ, ದರ್ಶಯೇತಾಂ– ತೋರಿಸುವರು. ॥೬೯॥೭೦॥

ಭಾ. ಅ. ೬೩—೭೦. ಇದರ ನಂತರ ಶ್ರೀಕೃಷ್ಣನು ಧರ್ಮರಾಜನಿಗೆ 'ನೀನು ದುರ್ಯೋಧನನಿಗೆ ಹಾಗೆ ಹೇಳಿ ತಪ್ಪು ಮಾಡಿದಿ. ಇವನು ಗದಾವನ್ನು ಹಿಡಿದು ಯುದ್ಧಕ್ಕೆ ನಿಂತರೆ ಸುರಾಸುರರಿಗೂ ಇವನನ್ನು ಗೆಲ್ಲಲು ಸಾಧ್ಯವಿಲ್ಲ. ಅವನು ಖಂಡಿತ ನಿಮ್ಮನ್ನು ನಾಲ್ವರನ್ನೂ ಸಂಹರಿಸಬಲ್ಲ. ಭೀಮನು ಯುದ್ಧದಲ್ಲಿ ಹೇಗೋ ಇವನನ್ನು ಸಂಹರಿಸಿಯಾನು, ದುರ್ಯೋಧನನ್ನು ಗದಾಯುದ್ಧದಲ್ಲಿ (ಕೃತಿಯೇ) ನಿಪುಣನು.' ಎಂದು ಹೇಳಿದನು. ೧) ಶ್ರೀಭೀಮರು ಹೇಗೋ ಸಂಹರಿಸಿ ಯಾರು ಎಂದು ಹೇಳಿದರೆ ಅವರಿಗೂ ಸಂಹಾರ ಮಾಡಲು ಶಕ್ಯವಾಗಲಿಕ್ಕಿಲ್ಲ ಕಷ್ಟಪಟ್ಟು ಸಂಹರಿಸಬಹುದು ಎಂದೂ ಅರ್ಥವಾಗಿ ಶ್ರೀಭೀಮರಲ್ಲಿ ದೌರ್ಬಲ್ಯ ಉಂಟು ಎಂಬ ಅಭಿಪ್ರಾಯ ಬರುತ್ತದೆ. ೨) ದುರ್ಯೋಧನನು ನಿಪುಣನು ಎಂದೂ ಹೇಳಿದಾಗ ಭೀಮರು ನಿಪುಣರಲ್ಲ ಎಂದು ಅಭಿಪ್ರಾಯ ಪಟ್ಟಂತೆ ಆಗುವದು. ಆದ್ದರಿಂದ ಶ್ರೀಕೃಷ್ಣನ ಮಾತಿನ ಅಭಿಪ್ರಾಯವನ್ನು ಸಜ್ಜನ ಕೃಪಾಳುಗಳಾದ ಶ್ರೀಮದಾಚಾರ್ಯರು ಇಲ್ಲಿ ಆರು ಶ್ಲೋಕಗಳಲ್ಲಿ ನಿರ್ಣಯಿಸಿ ಬರೆದಿದ್ದಾರೆ. ಅದರ ಸಾರಾಂಶ ಹೀಗಿದೆ. ೧) ನಿಮ್ಮನ್ಯಾರನ್ನಾದರೂ ದುರ್ಯೋಧನನು ಆಹ್ವಾನಿಸಿದ್ದರೆ, ನೀವು ಇಷ್ಟೆಲ್ಲ ಶ್ರಮ ಪಟ್ಟದ್ದು ವ್ಯರ್ಥವೇ ಆಗುತ್ತಿತ್ತು. ಏಕೆಂದರೆ ನಿಮ್ಮನ್ನು ಖಂಡಿತ ಸಂಹರಿಸುವನು. ಆದ್ದರಿಂದ ನೀನು ಹಾಗೆ ಹೇಳಿದ್ದು ತಪ್ಪೇ. ಎಂದು ಹೇಳಿ, ಸಂಪೂರ್ಣ ಧರ್ಮರತರಾದ ಶ್ರೀಭೀಮರಿಗೂ ಸ್ವಲ್ಪ ಕೂಡ ಧರ್ಮಲೋಪವಾಗದಂತೆ ಅವನನ್ನು ಸಂಹರಿಸಲು ಶಕ್ಯವಿಲ್ಲ. ಪರಿಸ್ಥಿತಿ ಹೀಗಿದೆ. ಅದೇನೆಂದರೆ ಅವನ ತೊಡೆಗಳನ್ನು ಮುರಿಯುವದಾಗಿ ಭೀಮನು ಪ್ರತಿಜ್ಞಾ ಮಾಡಿದ್ದಾನೆ. ಪ್ರತಿಜ್ಞಾದಂತೆ ನಡೆಯಬೇಕಾದದ್ದು ಕ್ಷತ್ರಿಯನಿಗೆ ಕರ್ತವ್ಯವು. ಗದಾಯುದ್ಧದಲ್ಲಿ ನಾಭಿಯ ಕೆಳಗೆ ಹೊಡೆಯಕೂಡದು ಎಂದು ನಿಯಮ

ವಿವೆ. ನಿಯಮವನ್ನು ನಡೆಸುವದು ಧರ್ಮವು. ಬಿಡುವದು, ಅಧರ್ಮವು. ಹೀಗಾಗಿ ತೊಡೆಯನ್ನು ಹೊಡೆದರೂ ಅಧರ್ಮ ವಿದೆ. ಹೊಡೆಯದಿದ್ದರೂ ಅಧರ್ಮವಿದೆ. ಆದ್ದರಿಂದ ದೊಡ್ಡ ಧರ್ಮಯಾವದು, ಸಣ್ಣ ಧರ್ಮ ಯಾವದು ನೋಡಿ, ದೊಡ್ಡ ಧರ್ಮವನ್ನು ಕೈ ಬಿಡದಂತೆ ಮಾಡಿಕೊಳ್ಳಬೇಕು. ದೊಡ್ಡ ಧರ್ಮದ ತ್ಯಾಗವು ದೊಡ್ಡ ಅಧರ್ಮ ಘಟನೆಯಾಗುವದು. ಅಲ್ಪ ಧರ್ಮತ್ಯಾಗವು ಅಲ್ಪ ಅಧರ್ಮವಾಗುವದು. ಅಲ್ಪ ಅಧರ್ಮದ ಘಟನೆಯನ್ನು ಸಹಿಸಿಕೊಂಡು ಮಹಾ ಧರ್ಮವನ್ನು ಬಿಡದಂತೆ ನಡೆಯಬೇಕು. ಈಗ ಇವೆಡರಲ್ಲಿ ಪ್ರತಿಜ್ಞಾ ರಕ್ಷಣವು ಮಹಾ ಧರ್ಮವು. ಗದಾಯುದ್ಧದ ನಿಯಮ ದಂತೆ ನಡೆಯುವದು ಅಲ್ಪ ಧರ್ಮವು. ಈ ಅಲ್ಪ ಧರ್ಮತ್ಯಾಗವನ್ನು ಮಾಡಿ ಪ್ರತಿಜ್ಞಾರಕ್ಷಣ ರೂಪ ಮಹಾಧರ್ಮರಕ್ಷಣ ವನ್ನು ಭೀಮನು ಮಾಡುವ ಪ್ರಸಂಗವಿದೆ. ಇಂಥ ಉಭಯ ಸಂಕಟ ಬರುವ ಸಂದರ್ಭಗಳಲ್ಲಿ ಆಪದ್ಧರ್ಮವಾಗಿ ಹೀಗೆ ಆಚರಿಸಬೇಕಾಗುತ್ತದೆ. ಭೀಮನೂ ಈಗ ಹಾಗೆ ಮಾಡಬೇಕು ಹೊರತು ಬೇರೆ ಮಾರ್ಗವಿಲ್ಲ ಎಂಬ ಅರ್ಥದಲ್ಲಿಕಥಂಚಿತ್— ಹೇಗೋ ಎಂಬ ಮಾತನ್ನು ಹೇಳಿದ್ದು ಹೊರತು ಭೀಮರಿಗೆ ಸಾಮರ್ಥ್ಯವಿಲ್ಲ ಎಂಬ ಅರ್ಥದಲ್ಲಿ ಅಲ್ಲ. ಶ್ರೀಭೀಮರು ತೊಡೆಯಲ್ಲಿ ಹೊಡೆಯುವೇ ಮೇಲ್ಬಾಗದಲ್ಲಿಯೇ ಹೊಡೆದು ಕೊಲ್ಲಲೂ ಕೂಡ ಸಮರ್ಥರು. ಆದರೆ ಪ್ರತಿಜ್ಞಾರಕ್ಷಣ ಆಗುವ ದಿಲ್ಲವಾದ್ದರಿಂದ ಹೊಡೆಯುವಂತಿಲ್ಲ. ಶ್ರೀಭೀಮರಿಗೆ ಅಗಾಧ ಸಾಮರ್ಥ್ಯ ಉಂಟು ಎಂಬುದನ್ನು ಶ್ರೀಕೃಷ್ಣನೇ ಎಷ್ಟೋಸಲ ಹೇಳಿದ್ದಾನೆ. ಜರಾಸಂಧನನ್ನು, ಕೀಚಕನನ್ನು, ಕಿರ್ಮೀರ, ಹಿಡಿಂಬ ಬಕಾದಿಗಳನ್ನು ಸಂಹರಿಸಿದ ಭೀಮರಿಗೆ ಈ ದುರ್ಯೋಧನ ನನ್ನು ಸಂಹರಿಸುವಲ್ಲಿ ಏನು ಕಷ್ಟ ? ಆದ್ದರಿಂದ ದೌರ್ಬಲ್ಯದ ಶಂಕೆ ಇಲ್ಲ ೨) ಗದಾಯುದ್ಧ ನೈಪುಣ್ಯ ದುರ್ಯೋಧನನಲ್ಲಿದೆ ಎಂದು 'ಕೃತೀ' ಎಂಬ ಪದದಿಂದ ಹೇಳಿದ್ದಲ್ಲ. ಕೇವಲ ಬಲರಾಮನಿಂದ ಗದಾಯುದ್ಧಾಭ್ಯಾಸ ಮಾಡಿದ ದುರ್ಯೋಧನನಲ್ಲಿ ನೈಪುಣ್ಯವನ್ನು ಹೇಳುವದಾದರೆ, ಬಲರಾಮನಲ್ಲಿಯೂ ತನ್ನಲ್ಲಿ (ಶ್ರೀಕೃಷ್ಣನಲ್ಲಿ)ಯೂ ಗದಾಭ್ಯಾಸ ಮಾಡಿದ ಭೀಮರಲ್ಲಿ ಗದಾ ಯುದ್ಧ ನೈಪುಣ್ಯವಿಲ್ಲ ಎಂದು ಶ್ರೀಕೃಷ್ಣನು ಹೇಗೆ ಹೇಳಲು ಶಕ್ಯ ? ಆದ್ದರಿಂದ ಅದು ಅರ್ಥವಲ್ಲ, ನಿಜವಾದ ಅರ್ಥವೆಂದರೆ ದುರ್ಯೋಧನನು ಮಹಾಪ್ರಯತ್ನ ಶಾಲಿಯು ಎಂಬ ಅರ್ಥದಲ್ಲಿ 'ಕೃತೀ' ಎಂಬ ಶಬ್ದ ಹೇಳಿದ್ದು. ಹಾಗಾದರೆ, ಶ್ರೀಭೀಮರಲ್ಲಿ ಮಹಾಪ್ರಯತ್ನವಿಲ್ಲ ಎಂದು ಹೇಳಿದಂತೆ ಆಯಿತು ಎಂಬ ಶಂಕೆ ಬಂದರೆ, ಅಹುದು ಭೀಮನಲ್ಲಿ ಮಹಾಪ್ರಯತ್ನವಿಲ್ಲಎಂದೇ ಶ್ರೀಕೃಷ್ಣನ ಅಭಿಪ್ರಾಯ. ಅಲ್ಪ ಕಾರ್ಯದಲ್ಲಿ ಮಹಾಪ್ರಯತ್ನ ಮಾಡುವದು ಬುದ್ಧಿವಂತಿಕೆಯಲ್ಲ. ಹಾಗೆ ಮಹಾಪ್ರಯತ್ನ ಮಾಡುದಿರುವದು ಗುಣವೇ. (ಈ ಎಲ್ಲ ವಿಷಯಗಳ ಬಗ್ಗೆ ಪ್ರತಿಪದಾರ್ಥ ಬರೆಯುವಾಗ ಬರೆದ ದೃಷ್ಟಾಂತಗಳನ್ನು ಇಟ್ಟು ಕೊಳ್ಳಬೇಕು.) ಈ ಎಲ್ಲ ಧರ್ಮ ಸೂಕ್ಷ್ಮವನ್ನು ತಿಳಿದವರು ಶ್ರೀಕೃಷ್ಣ ಶ್ರೀಭೀಮರು. ಜನರಿಗೆ ಈ ಧರ್ಮಸೂಕ್ಷ್ಮವನ್ನು ತಿಳಿಸುವದಕ್ಕಾಗಿ ಆಪತ್ತಿಲ್ಲದಿದ್ದರೂ ಆಪತ್ತು ಇದ್ದವರಂತೆ ತೋರಿಸುತ್ತಾರೆ. ಆಗ ಮಾಡಬೇಕಾದ ಧರ್ಮವನ್ನು ಆಚರಿಸಿ ತೋರುತ್ತಾರೆ.

ತತೋಭೀಮಃ ಸರ್ವಲೋಕಸ್ಯ ಧರ್ಮಂ ಪ್ರಕಾಶಯನ್ನಾತ್ಮನಿದಂ ಜಗಾದ ।
ಊರೂತವಾಹಂ ಹಿ ಯಥಾಪ್ರತಿಜ್ಞಂ ಭೇತ್ತಾಸ್ಮಿನೈವಾತ್ರ ವಿಚಾರಣೀಯಂ ॥೭೧॥

ತತಃ — ಅನಂತರ, ಭೀಮಃ—ಭೀಮನು, ಸರ್ವಲೋಕಸ್ಯ—ಎಲ್ಲಾ ಜನರಿಗೆ, ಧರ್ಮಂ — ಧರ್ಮವನ್ನು, ಪ್ರಕಾಶಯನ್ — ಪ್ರಕಾಶಪಡಿಸತಕ್ಕವನಾಗಿ, ತವ— ನಿನ್ನ, ಊರೂ — ತೊಡೆಗಳನ್ನು, ಅಹಂ — ನಾನು, ಯಥಾ ಪ್ರತಿಜ್ಞಂ — ಪ್ರತಿಜ್ಞೆಗೆ ಅನುಸಾರವಾಗಿ, ಭೇತ್ತಾಸ್ಮಿ—ಭೇದಿಸುವೆನು, ಅತ್ರ—ತೊಡೆಗಳನ್ನು ಭೇದಿಸುವ ವಿಷಯದಲ್ಲಿ, ನವಿಚಾರಣೀಯಂ— ಅಧರ್ಮವನ್ನು ಮಾಡುವನೋ ಇಲ್ಲವೋ ಎಂದು ವಿಚಾರ ಮಾಡುವ ಅಂಶವಿಲ್ಲ, ಇತಿ—ಎಂದಾಗಿ, ಇದಂ ವಾಕ್ಯಂ — ಈ ಮಾತನ್ನು, ಜಗಾದ—ಹೇಳಿದನು. ॥೭೧॥

ಇತಿ ಬ್ರುವಂತಂ ಪ್ರಸಸಾರ ರಾಜಾ ದುರ್ಯೋಧನಸ್ತತ್ರ ಬಭೂವಯುದ್ಧಂ ॥
ಭೀಮಸ್ತದಾಗ್ರ್ಯಪ್ರಕೃತಿಂ ವಿಧಿತ್ಸುರ್ಮಂದಃ ಸ ಆಜೌ ವ್ಯಚರಜ್ಜನಾರ್ದೇ ॥೭೨॥

ಇತಿ — ಈ ರೀತಿಯಾಗಿ, ಬ್ರುವಂತಂ — ಹೇಳತಕ್ಕ ಭೀಮನನ್ನು, ದುರ್ಯೋಧನಃ — ದುರ್ಯೋಧನನು, ಆಜೌ — ಯುದ್ಧದಲ್ಲಿ, ಪ್ರಸಸಾರ — ಹೊಂದಿದನು, ತತ್ರ—ಆ ಕಾಲದಲ್ಲಿ, ಯುದ್ಧಂ—ಯುದ್ಧವು, ಬಭೂವ — ಪ್ರಾರಂಭವಾಯಿತು,

ತದಾ — ಆಗ, ಸಃ ಭೀಮಃ— ಆ ಭೀಮನು, ಜನಾರ್ಥೇ- ಜನರನ್ನು ಶಿಕ್ಷಿಸುವುದಕ್ಕಾಗಿ, ಅಗ್ರ್ಯಪ್ರಕೃತಿಂ — ಉತ್ತಮರು ಕಾರ್ಯಾರಂಭ ಸಮಯದಲ್ಲಿ ಅಲ್ಪಪ್ರಯತ್ನವನ್ನು ಮಾಡುತ್ತಾರೆ. ಅನಂತರ ಕ್ರಮದಿಂದ ಮಹಾಪ್ರಯತ್ನವನ್ನು ಮಾಡಿ ಆರಂಭಿಸಿದ ಕಾರ್ಯವನ್ನು ಪೂರೈಸುತ್ತಾರೆ; ಈ ರೀತಿಯಾದ [ಉತ್ತಮರ ಸ್ವಭಾವವನ್ನು, ವಿಧಿತ್ಸ್ಸನ್ — ತೋರಿಸಲು ಇಚ್ಛೆಯುಳ್ಳವನಾಗಿ, ಆಜೌ — ಯುದ್ಧದಲ್ಲಿ, ಮಂದಃಸನ್ — ಅಲ್ಪ ಪ್ರಯತ್ನಉಳ್ಳವನಾಗಿ, ವ್ಯಚರತ್ — ಸಂಚರಿಸಿದನು. ॥೭೨॥

ದರ್ಶಯಂತೌ ಗದಾಮಾರ್ಗಂ ಚಿತ್ರಂತೌ ಪ್ರವಿಚೇರತುಃ ॥
ಬಲಭದ್ರೋಽಪ್ಯಾಜಗಾಮ ತದಾ ತೌ ಪ್ರತಿವಾರಿತುಂ ॥೭೩॥

ತೌ— ಆ ಭೀಮದುರ್ಯೋಧನರಿಬ್ಬರು, ಚಿತ್ರಂ— ಆಶ್ಚರ್ಯಕರವಾದದ್ದು ಹೇಗೋಹಾಗೆ, ಗದಾಮಾರ್ಗಂ— ಗದಾಶಿಕ್ಷೆಯನ್ನು, ದರ್ಶಯಂತೌ ಸಂತೌ— ಜನರಿಗೆ ತೋರಿಸುವವರಾಗಿ, ಪ್ರವಿಚೇರತುಃ — ಸಂಚರಿಸಿದರು. ತದಾ— ಆಗ, ಬಲಭದ್ರೋಽಪಿ — ತೀರ್ಥಯಾತ್ರೆಮಾಡಿ ಬಂದಿರುವ ಬಲರಾಮನೂ ಕೂಡ, ತೌ — ಆ ಭೀಮದುರ್ಯೋಧನರಿಬ್ಬರನ್ನು, ಪ್ರತಿವಾರಿತುಂ—ತಡೆಯುವುದಕ್ಕೋಸ್ಕರ, ಜಗಾಮ — ಬಂದನು. ॥೭೩॥

ವಾರಿತಾವಪಿ ತೇನೋಭೌ ನೈವಯುದ್ಧಂ ವ್ಯಮುಂಚತಾಂ ॥
ತತೋದದರ್ಶ ತದ್ಯುದ್ಧಂ ಮಾನಿತಃ ಕೃಷ್ಣಪೂರ್ವಕೈಃ ॥೭೪॥

ತೇನ—ಆ ಬಲರಾಮನಿಂದ, ವಾರಿತಾವಪಿ—ತಡೆಯಲ್ಪಟ್ಟರೂ ಕೂಡ, ಉಭೌ— ಭೀಮದುರ್ಯೋಧನರಿಬ್ಬರೂ, ಯುದ್ಧಂ — ಯುದ್ಧವನ್ನು, ನೈವ ವ್ಯಮುಂಚತಾಂ — ಬಿಡಲೇ ಇಲ್ಲ, ತತಃ — ಅನಂತರ, ಕೃಷ್ಣಪೂರ್ವಕೈಃ — ಕೃಷ್ಣನೇ ಮೊದಲಾಗಿಉಳ್ಳವರಿಂದ, ಮಾನಿತಃಸನ್ — ನಮಸ್ಕಾರಾದಿಗಳಿಂದ ಬಹುಮಾನಿತನಾಗಿ, ತದ್ಯುದ್ಧಂ—ಆ ಅವರಿಬ್ಬರ ಯುದ್ಧವನ್ನು, ದದರ್ಶ—ನೋಡಿದನು. ॥೭೪॥

ತೌ ಶಿಕ್ಷಾಬಲಸಂಯುಕ್ತೌ ಮಂಡಲಾನಿ ವಿಚೇರತುಃ ॥
ತತ್ರಭೀಮಂ ವಂಚಯಿತುಂ ಧಾರ್ತರಾಷ್ಟ್ರಃ ಶಿರಃಕ್ಷಿತೌ ॥೭೫॥

ವ್ಯಧಾದುಚ್ಛ್ರಿತ ಸಕ್ಥೀಕಸ್ತದಾ ಕೃಷ್ಣಾಭ್ಯನುಜ್ಞಯಾ ॥
ಪೃಷ್ಠಮೂಲೇಽಹನದ್ಭೀಮೋ ಭಿನ್ನಸಕ್ಥಿಶ್ಚ ಸೋಽಪತತ್ ॥೭೬॥

ಪ್ರತಿಜ್ಞಾಪಾಲನಾರ್ಥಾಯ ನಾಭೇರ್ಮೋಽಪರ್ಯಧಸ್ತದಾ ।
ಗದಾಯುದ್ಧಸ್ಯಮರ್ಯಾದಾಂ ಯಶಶ್ಚಾಪ್ಯಭಿರಕ್ಷಿತುಂ ॥೭೭॥

ನಾಥಸ್ತಾನ್ಹತ್ಯವಾಸೌ ನಿಜಘ್ನೇ ತಂ ವೃಕೋದರಃ ।
ಏವಂ ಪ್ರತಿಜ್ಞಾಯುಗ್ಮಾರ್ಥಂ ಭಗ್ನಸಕ್ಥಿಯುಗಂ ರಣೇ ॥೭೮॥

ದ್ಯೂತೇಕೃಷ್ಣಂ ನಿಧೇಹೀತಿ ಯದವಾದೀತ್ಸುಯೋಧನಃ ॥
ತತ್ಪ್ರತಿಜ್ಞಾನುಸಾರೇಣ ಭೀಮೋಽಮೂರ್ಧಾನಮಕ್ರಮೀತ್ ॥೭೯॥

ಶಿಕ್ಷಾಬಲಸಂಯುಕ್ತೌ— ಗದಾಶಿಕ್ಷಣ, ಬಲಗಳಿಂದ ಯುಕ್ತರಾದ, ತೌ — ಆ ಭೀಮದುರ್ಯೋಧನರು, ಮಂಡಲಾನಿ— ಗದಾಯುದ್ಧದಲ್ಲಿ ನಿಯತಸ್ಥಾನಗಳನ್ನು, ವಿಚೇರತುಃ — ಸಂಚರಿಸಿದರು. ತತ್ರ— ಅದರಲ್ಲಿ, ಧಾರ್ತರಾಷ್ಟ್ರಃ—ದುರ್ಯೋಧನನು,

ಭೀಮಂ—ಭೀಮನನ್ನು, ವಂಚಯಿತುಂ – ವಂಚಿಸುವುದಕ್ಕಾಗಿ, ಉಚ್ಛ್ರಿತ ಸಕ್ಥೀಕಃ— ಮೇಲೆ ಮಾಡಲ್ಪಟ್ಟ ತೊಡೆಗಳ, ಕಟಿ ಪ್ರದೇಶದ ಸಂಧಿಯುಳ್ಳವನಾಗಿ, ಕ್ಷಿತೌ – ಭೂಮಿಯಲ್ಲಿ, ಶಿರಃ–ತಲೆಯನ್ನು, ವ್ಯಧಾತ್ – ಮಾಡಿದನು. ನಾಭಿಯಿಂದ ಕೆಳಗೆ, ಹೊಡೆಯುವುದು ನಿಷಿದ್ಧವಾದ್ದರಿಂದ ಶಿರಸ್ಸನ್ನು ಭೂಮಿಯಲ್ಲಿ ಸ್ಥಾಪವೆ ಮಾಡಿದಾಗ ತಲೆ ಮೊದಲಾದ ಅವಯವಗಳು ಕೆಳಗೆ ಇದ್ದಂತೆ ಆಯಿತು. ಕಟಿಮೊದಲಾದದ್ದು ಸ್ವತಃ ಕೆಳಭಾಗವಾದ್ದರಿಂದ ಯಾವ ಭಾಗವೂ ಹೊಡೆಯಲು ಯೋಗ್ಯವಲ್ಲ ಎಂಬ ಜ್ಞಾನವನ್ನುಂಟು ಮಾಡುವುದೇ ವಂಚನೆಯು, ತದಾ—ಆಗ, ಕೃಷ್ಣಾಭ್ಯನುಜ್ಞಯಾ – ಶ್ರೀಕೃಷ್ಣನ ಅಪ್ಪಣೆಯಿಂದ, ಭೀಮಃ–ಭೀಮನು, ಪೃಷ್ಠಮೂಲೇ – ಬೆನ್ನಿನ ಆಧಾರ ಸ್ಥಾನದಲ್ಲಿ, ಅಹನತ್ – ಹೊಡೆದನು. ಸಃ – ಆ ದುರ್ಯೋಧನನು, ಭಿನ್ನ ಸಕ್ಥಿಶ್ಚ – ಮುರಿದ ಕಟಿಪ್ರದೇಶದಲ್ಲಿದ್ದ ಸಂಧಿಯುಳ್ಳವನಾಗಿ, ಅಪತತ್–ಬಿದ್ದನು ತದಾ–ಆಗ, ಪ್ರತಿಜ್ಞಾಪಾಲನಾರ್ಥಾಯ–ಪ್ರತಿಜ್ಞೆಯನ್ನು ರಕ್ಷಿಸುವುದಕ್ಕಾಗಿ, ನಾಭೇಃಉಪರಿ ನ — ಹೊಕ್ಕಳಿಂದ ಮೇಲೆಯೂ ಅಲ್ಲ, ಅಧಃ ನ— ಕೆಳಗೆಯೂ ಅಲ್ಲ ಹೀಗೆ, ಗದಾಯುದ್ಧಸ್ಯ – ಗದಾಯುದ್ಧದ, ಮರ್ಯಾದಾಂ – ಮರ್ಯಾದೆಯನ್ನು, ಯಶಶ್ಚ – ಕೀರ್ತಿಯನ್ನೂ ಕೂಡ, ಅಭಿರಕ್ಷಿತುಂ —ಪಾಲಿಸುವದಕ್ಕಾಗಿ, ಮಧ್ಯಏವ – ನಾಭಿಯ ಮಧ್ಯದಲ್ಲಿಯೇ, ನಿಜಘ್ನೇ – ಹೊಡೆದನು. ವೃಕೋದರಃ – ಭೀಮನು, ತಂ–ಆ ದುರ್ಯೋಧನನನ್ನು, ಅಧಸ್ಥಾತ್ ನ–ಕೆಳಗೆ ಹೊಡೆಯಲಿಲ್ಲ. ತೊಡೆಗಳ ಹಾಗು ಕಟಿಪ್ರದೇಶದ ಸಂಧಿಯು ತೊಡೆಗಳಿಗೆ ಮೂಲವಾದ್ದರಿಂದಲೂ ನಾಭಿಗೆ ಸವಾನವಾದ್ದರಿಂದಲೂ ಸಂಧಿಗೆ ಹೊಡೆದಾಗ ಅಧರ್ಮವೂ ಆಗಲಿಲ್ಲ. ಪ್ರತಿಜ್ಞೆಯನ್ನೂ ರಕ್ಷಿಸಿದಂತಾಯಿತು. ಏವಂ– ಈ ರೀತಿಯಾಗಿ ಪ್ರತಿಜ್ಞಾಯುಗ್ಮಾರ್ಥಂ–"ತವೋರು ಮೇನಂ ಗದಯೋರು ವೇಗಯಾ ಬಿಭೇತ್ಸ್ಯೇ" ಎಂಬುದಾಗಿ ಒಂದು ಪ್ರತಿಜ್ಞೆಯು, "ಊರುಂತವಾನ್ಯಂಚರಣೇಬಿಭೇತ್ಸ್ಯೇ" ಎಂಬುದು ಇನ್ನೊಂದು ಪ್ರತಿಜ್ಞೆಯು. ಇವೆರಡರ ರಕ್ಷಣೆಗೋಸ್ಕರ, ರಣೇ – ಯುದ್ಧದಲ್ಲಿ, ಭಿನ್ನಸಕ್ಥಿಯುಗಂ – ಮುರಿಯಲ್ಪಟ್ಟ ಸಕ್ಥಿಯುಂಗಲಗಳುಳ್ಳ ದುರ್ಯೋಧನನನ್ನು, ನಿಜಘ್ನೇ ಹೊಡೆದನು. ಯತ್–ಯಾವ ಕಾರಣದಿಂದ, ಸುಯೋಧನಃ–ದುರ್ಯೋಧನನು, ದ್ಯೂತೇ–ಜೂಜಾಟದಲ್ಲಿ, ಕೃಷ್ಣಂ – ಶ್ರೀಕೃಷ್ಣನನ್ನು, ನಿಧೇಹಿ—ಪಣಕ್ಕಾಗಿ ಇಡು, ಇತಿ – ಎಂದು, ಅವಾದೀತ್ — ಹೇಳಿದ್ದನೋ, "ನಿಪಾತ್ಯ ಭೂತಲೇ ಹಿತೇ ಶಿರೋವೃಕೋದರಿಷ್ಯ ಇತ್ಯಲಂ" ಎಂಬ, ತತ್ಪ್ರತಿಜ್ಞಾನುಸಾರೇಣ–ತಾನು ಮಾಡಿದ ಪ್ರತಿಜ್ಞೆಗೆ ಅನುಸಾರವಾಗಿ, ಭೀಮಃ—ಭೀಮನು, ಮೂರ್ಧಾನಂ– ತಲೆಯನ್ನು, ಅಕ್ರಮೀತ್–ಕಾಲಿನಿಂದ ತುಳಿದನು. ॥೭೫॥೭೬॥೭೭॥೭೮॥೭೯॥

ಋಷಭಂ ಮಾ ಸಮಾನಾನಾಮಿತಿ ಸೂಕ್ತಂ ದದರ್ಶಹ ।
ತೇಷಾಂಪುಣ್ಯಾನಿ ವಿದ್ಯಾಶ್ಚ ಸಮಾದಾಯೈವ ಸರ್ವಶಃ ॥
ತಾಂಶ್ಚಕಾರ ತಮೋಗಂತೃಂಸ್ತಸ್ಯಮೂರ್ಧ್ನಿ ಪದಾಕ್ರಮತ್ ॥೮೦॥

ಋಷಭಂ ಮಾ ಸಮಾನಾನಾಮಿತಿ–ಋಷಭಂ ಮಾಸಮಾನಾನಾಂ ಎಂಬ, ಸೂಕ್ತಂ ದದರ್ಶ – ಸೂಕ್ತವನ್ನು ನೋಡಿದನು, ತೇಷಾಂ- ಆ ಪರಿದ್ವೇಷಿಗಳಾದ ದುರ್ಯೋಧನಾದಿಗಳ, ಪುಣ್ಯಾನಿ – ಪುಣ್ಯಗಳನ್ನು, ವಿದ್ಯಾಶ್ಚ — ಜ್ಞಾನಗಳನ್ನೂ, ಜ್ಞಾನಫಲಭೂತವಾದ ಸದ್ಗತಿಯನ್ನೂ, ಸಮಾದಾಯ— ಸ್ವೀಕರಿಸಿ. ಸರ್ವಶಃ—ಎಲ್ಲಾ, ತಾನ್ – ಅಜ್ಞಾನ, ಮಿಥ್ಯಾಜ್ಞಾನ, ಹರಿದ್ವೇಷದಿಂದಕೂಡಿದವರನ್ನು, ತಮೋಗಂತೃನ್ —ಅಂಧಂತಮಸ್ಸನ್ನು ಹೊಂದುವವರನ್ನಾಗಿ, ಚಕಾರ – ಮಾಡಿದನು, ತಸ್ಯ—ಆದು ಯ್ಯೋಧನನ, ಮೂರ್ಧ್ನಿ—ತಲೆಯಲ್ಲಿ, ಪದಾ—ಕಾಲಿನಿಂದ, ಆಕ್ರಮತ್ – ಹೊಡೆದನು. ॥೮೦॥

ಸ್ಮಾರಯಾಮಾಸ ಕರ್ಮಾಣಿಯಾನಿತಸ್ಯಕೃತಾನಿಚ ॥
ಕೃಷ್ಣಬಂಧೇಕೃತೋ ಮಂತ್ರ ಇತಿ ಮೂರ್ಧ್ನಿಪದಾs ಹನತ್ ॥೮೧॥

ಯಾನಿ ಕರ್ಮಾಣಿ—ಯಾವ ಕರ್ಮಗಳು, ಕೃತಾನಿ— ದುರ್ಯೋಧನನಿಂದ ಮಾಡಲ್ಪಟ್ಟವೆಯೋ, ತಾನಿ–ಆ ಕರ್ಮಗಳನ್ನು, ತಸ್ಯ – ಆ ದುರ್ಯೋಧನನಿಗೆ, ಸ್ಮಾರಯಾಮಾಸ—ಸ್ಮರಣೆಗೆ ಬರುವಂತೆ ಮಾಡಿದನು, ಕೃಷ್ಣಬಂಧೇ—ಶ್ರೀಕೃಷ್ಣನನ್ನು ಕಟ್ಟುವ ವಿಷಯದಲ್ಲಿ, ಮಂತ್ರಃ – ಆಲೋಚನೆಯು, ಕೃತಃ – ನಿನ್ನಿಂದ ಮಾಡಲ್ಪಟ್ಟಿದೆ, ಇತಿ – ಈ ರೀತಿಯಾಗಿ ಹೇಳಿ, ಪದಾ – ಕಾಲಿನಿಂದ, ಮೂರ್ಧ್ನಿ—ತಲೆಯಲ್ಲಿ, ಅಹನತ್—ಹೊಡೆದನು. ॥೮೧॥

ಪುನಃಪುನಶ್ಚ ತದ್ವೀಕ್ಷ್ಯ ಚುಕ್ರೋಧಮುಸಲಾಯುಧಃ ॥
ಚುಕ್ರೋಶನೈವಧರ್ಮೋಽಯಮಿತ್ಯಸಾವೂರ್ಧ್ವಬಾಹುಕಃ ॥೮೨॥

ಪುನಃಕ್ರೋಧಾತಿತಾಮ್ರಾಕ್ಷ ಆದಾಯಮುಸಲಂ ಹಲಂ ॥
ಅಭಿದುದ್ರಾವ ಭೀಮಂ ತಂ ನ ಚಚಾಲವೃಕೋದರಃ ॥೮೩॥

ಮುಸಲಾಯುಧಃ- ಒನಕೆಯು ಆಯುಧವಾಗಿ ಉಳ್ಳ ಬಲರಾಮನು, ಪುನಃಪುನಃ—ಮತ್ತೂ ಮತ್ತೂ, ತತ್ – ಆ ಭೀಮನ ಪಾದತಾಡನಾದಿಗಳನ್ನು, ವೀಕ್ಷ್ಯ – ನೋಡಿ, ಚುಕ್ರೋಧ – ಕುಪಿತನಾದನು, ಊರ್ಧ್ವಬಾಹುಕಃ ಅಸೌ — ಮೇಲಕ್ಕೆ ಎತ್ತಲ್ಪಟ್ಟ ಭುಜಗಳುಳ್ಳ ಬಲರಾಮನು, ಅಯಂ – ಇದು, ಧರ್ಮಃ — ಧರ್ಮವು, ನೈವ – ಅಲ್ಲವೇ ಅಲ್ಲ, ಇತಿ-- ಎಂದು, ಚುಕ್ರೋಶ— ಕೂಗಿದನು, ಪುನಃ— ಆನಂತರ, ಕ್ರೋಧಾತಿತಾಮ್ರಾಕ್ಷಃ — ಸಿಟ್ಟಿನಿಂದ ಅತಿ ಕೆಂಪಾದ ಕಣ್ಣುಗಳುಳ್ಳ ಬಲರಾಮನು, ಹಲಂ—ನೇಗಿಲನ್ನು, ಮುಸಲಂ ಚ - ಒನಕೆಯನ್ನೂ ಕೂಡ, ಆದಾಯ—ಹಿಡಿದು ಕೊಂಡು, ತಂ ಭೀಮಂ – ಆ ಭೀಮನನ್ನು ಕುರಿತು, ಅಭಿದುದ್ರಾವ-- ಎದುರಾಗಿ ಬಂದನು, ವೃಕೋದರಃ — ಭೀಮನು, ನ ಚಚಾಲ—ಹಿಂದಾಡಲಿಲ್ಲ. ॥೮೨॥ ॥೮೩॥

ಅಭಯೇ ಸಂಸ್ಥಿತೇ ಭೀಮೇ ರಾಮಂ ಜಗ್ರಾಹ ಕೇಶವಃ ॥
ಆಹಧರ್ಮೇಣನಿಹತೋ ಭೀಮೇನಾಯಂ ಸುಯೋಧನಃ ॥೮೪॥

ಭೀಮೇ – ಭೀಮನು, ಅಭಯೇ ಸಂಸ್ಥಿತೇಸತಿ—ಭಯರಹಿತನಾಗಿರುತ್ತಿರಲು, ಕೇಶವಃ-ಶ್ರೀಕೃಷ್ಣನು, ರಾಮಂ– ಬಲರಾಮನನ್ನು, ಜಗ್ರಾಹ – ಹಿಡಿದನು, ಅಯಂ ಸುಯೋಧನಃ— ಈ ದುರ್ಯೋಧನನು, ಭೀಮೇನ – ಭೀಮನಿಂದ, ಧರ್ಮೇಣ – ಧರ್ಮದಿಂದ, ನಿಹತಃ – ಕೊಲ್ಲಲ್ಪಟ್ಟನು, ಇತಿ—ಎಂದು, ಆಹ – ಹೇಳಿದನು. ॥೮೪॥

ಭಾ. ಅ. ೨೧ — ೪೪ ನಂತರದಲ್ಲಿ ಶ್ರೀಭೀಮರು ಸಮಸ್ತ ಜಗತ್ತಿಗೆ ಧರ್ಮವನ್ನು ಪ್ರಕಟಪಡಿಸುವವರಾಗಿ ದುರ್ಯೋಧನನಿಗೆ – 'ನಿನ್ನ ತೊಡೆಯನ್ನು, ನನ್ನ ಪ್ರತಿಜ್ಞಾನುಗುಣವಾಗಿ ಮುರಿದೇ ಮುರಿಯುತ್ತೇನೆ. ಸಂಶಯ ವಿಲ್ಲ.' ಎಂಬುದಾಗಿ ಹೇಳಿದರು. ಆಗ ದುರ್ಯೋಧನನು ಅವರನ್ನು ಕುರಿತು ಯುದ್ಧಕ್ಕೆ ಏರಿಹೋದನು. ಉತ್ತಮರ ನೀತಿಯನ್ನು ಅನುಸರಿಸುವ ಶ್ರೀಭೀಮರು ಪ್ರಾರಂಭದಲ್ಲಿ ಮೆಲ್ಲನೇ ಯುದ್ಧವನ್ನು ಮಾಡುತ್ತಿದ್ದರು. (ಉತ್ತಮರು ಪ್ರಾರಂಭದಲ್ಲಿ ಅಲ್ಪ ಪ್ರಯತ್ನ ಮಾಡುತ್ತಾ ಕ್ರಮದಿಂದ ಹೆಚ್ಚು ಹೆಚ್ಚು ಪ್ರಯತ್ನ ಮಾಡುತ್ತಾ ಕಾರ್ಯ ಮುಗಿಸುವರು.) ಗದಾ ಯುದ್ಧದ ಶ್ರೇಷ್ಠ ನೈಪುಣ್ಯವನ್ನು ಇಬ್ಬರೂ ತೋರಿಸುತ್ತಿದ್ದರು. ಆ ಸಮಯದಲ್ಲಿ ಶ್ರೀಬಲರಾಮದೇವರೂ ಬಂದರು. ಯುದ್ಧವನ್ನು ತಡೆಯಲು ಪ್ರಯತ್ನಿಸಿದರು. ಆದರೂ ಅವರಿಬ್ಬರೂ ಯುದ್ಧವನ್ನು ಬಿಡಲಿಲ್ಲ. ಶ್ರೀಕೃಷ್ಣಾದಿಗಳೆಲ್ಲರೂ ಬಲರಾಮರ ಸತ್ಕಾರವನ್ನು ಮಾಡಿದರು. ಅವರೆಲ್ಲರ ಜೊತೆಗೆ ತಾವೂ ಕೂಡ ಯುದ್ಧವನ್ನು ನೋಡುತ್ತಾ ನಿಂತರು. ಪರಸ್ಪರ ಗದಾಪ್ರಘಾತಗಳನ್ನು ಮಾಡುತ್ತಾ ರಣಭೂಮಿಯ ಸುತ್ತಲೂ ತಿರುಗುತ್ತಿದ್ದ ನೀಚ ದುರ್ಯೋಧನ ಹಾಗೂ ಶ್ರೀಭೀಮಸೇನ ಇಬ್ಬರೂ ಭಾರೀ ಯುದ್ಧ ಮಗ್ನರಾಗಿರುವಾಗ ಕಪಟಿ ದುರ್ಯೋಧನನು ವಂಚಿಸುವದಕ್ಕಾಗಿ ತಲೆಕೆಳಗೆ ಮಾಡಿನಿಂತನು. ಕಾಲುಮೇಲಾಗಿವೆ. ಆ ಸಮಯದಲ್ಲಿ ಶ್ರೀಕೃಷ್ಣನ ಅಪ್ಪಣೆಯಂತೆ ಶ್ರೀಭೀಮರು ನಾಭಿ ಸಮಾನವಾದ ಬೆನ್ನಿನ ಮೂಲ ಸ್ಥಳದಲ್ಲಿ ಗದಾದಿಂದ ಹೊಡೆದರು. ಆಗ ಅವನು ಕಾಲುಗಳ ಮೂಲ ಪ್ರದೇಶವಾದ ಕಟಿಯು ಮುರಿದು ಕೆಳಬಿದ್ದನು, ಎರಡು ಸಲ ಒಂದೊಂದು ತೊಡೆ ಮುರಿಯುವ ಪ್ರತಿಜ್ಞೆ ಇದ್ದದ್ದರಿಂದ ಎರಡೂ ಪ್ರತಿಜ್ಞೆಗಳ ರಕ್ಷಣೆಗಾಗಿ ಎರಡೂ ಕಾಲುಗಳ ಮೂಲಗಳಿಗೆ ಹೊಡೆದರು. ಎರಡೂ ಮುರಿದವು. ಹೀಗೆ ಪೃಷ್ಠ ಮೂಲಕ್ಕೆ ಹೊಡೆದದ್ದರಿಂದ, ಅದು ನಾಭಿಗೆ ಸಮ (ನಾಭಿಯ ಮೇಲೂ ಅಲ್ಲ: ಕೆಳಗೂ ಅಲ್ಲ.), ಆದ್ದರಿಂದ ಪ್ರತಿಜ್ಞಾ ರಕ್ಷಣೆಯೂ ಆಯ್ತು, ಗದಾಯುದ್ಧದ ನಿಯಮಕ್ಕೆ ವಿರುದ್ಧವೂ ಆಗಲಿಲ್ಲ. ಹೀಗೆ ಶ್ರೀಭೀಮಸೇನರು ಎರಡನ್ನೂ ಸಾಧಿಸಿದರು, ಶ್ರೀಕೃಷ್ಣನನ್ನು ದ್ಯೂತಕ್ಕಿಡು ಎಂದು ದುರುಳ ದುರ್ಯೋಧನನು ಅಂದಾಗ ನಿನ್ನ ತಲೆಯನ್ನೇ ತುಳಿಯುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದರು. ಆ ಪ್ರಕಾರ ಶ್ರೀಭೀಮರು ಈಗ ಅವನ ತಲೆಯ ಮೇಲೆ

ಕುಳಿನ್ನಿಟ್ಟಿದ್ದಾರೆ. ತುಳಿಯುತ್ತಿದ್ದಾರೆ. ಋಷಭ ಸೂಕ್ತವನ್ನು ಸ್ಮರಿಸುತ್ತಾ ತದುಕ್ತ ಗುಣವುಳ್ಳವನನ್ನಾಗಿ ಶ್ರೀಹರಿಯನ್ನು ಧ್ಯಾನಿಸುತ್ತಾ, ತದುಕ್ತವಾದ ತಮ್ಮ ಮಹಿಮೆಯನ್ನೂ ಅನುಸಂಧಾನ ಮಾಡುತ್ತಾ ದುರ್ಯೋಧನಾದಿ ಭಗವದ್ದ್ವೇಷಿಗಳ ಪುಣ್ಯ ಫಲಗಳೇನಾದರೂ ಇದ್ದವೋ ಅವನ್ನೆಲ್ಲ ಕಸಿದು ಅಂಧತಮಸ್ಸಿಗೆ ಹೋಗಲು ಅರ್ಹರನ್ನಾಗಿ ಮಾಡಿದರು. ಈ ನೀಚ ದುರ್ಯೋಧನನಿಗೆ ಅವನು ಹಿಂದೆ ಮಾಡಿದ ದುಷ್ಕೃತ್ಯಗಳನ್ನೆಲ್ಲ ನೆನಪಿಸಿಕೊಟ್ಟರು. ಶ್ರೀಕೃಷ್ಣನನ್ನು ಕಟ್ಟಲು ದುರ್ವಿಚಾರ ಮಾಡಿದ್ದಿಯಲ್ಲವೇ:? ತೆಗೆದುಕೋ ಅದರ ಶಿಕ್ಷೆಯನ್ನು ಎಂದು ಅನ್ನುತ್ತಾ ತಲೆಯಲ್ಲಿ ವದ್ದರು. ಮೇಲಿಂದ ಮೇಲೆ ವದಿಯುವ ದನ್ನುನೋಡಿದ ಬಲರಾಮದೇವರು ಸಿಟ್ಟಿಗೆದ್ದು ಬಾಹುಗಳನ್ನೆತ್ತಿ ಇದು ಧರ್ಮವಲ್ಲ ಎಂದು ಕೂಗಿಕೊಂಡರು; ಮುಸಲ (ಒನಕೆ),ಹಲ (ರೆಂಟೆ)ಗಳನ್ನು ಎತ್ತಿಕೊಂಡು ಶ್ರೀಭೀಮರ ಕಡೆಗೆ ಒಡಿದರು ಆದರೆ ಶ್ರೀಭೀಮರು ಸ್ವಲ್ಪಕೂಡ ಅಲುಗಾಡಲಿಲ್ಲ. ನಿರ್ಭೀತರಾಗಿ ನಿಂತಿದ್ದರು. ಆಗ ಶ್ರೀಕೃಷ್ಣನೇ ಬಲರಾಮನನ್ನು ಹಿಡಿದುಕೊಂಡನು. ಮತ್ತು ಧರ್ಮದಿಂದಲೇ ದುರ್ಯೋಧನನ ಸಂಹಾರವನ್ನು ಭೀಮನು ಮಾಡಿದ್ದಾನೆ ಎಂದು ಹೇಳಿದನು.

ಅವ – ಪ್ರಕಾರಾಂತರದಿಂದಲೂ ಭೀಮನಿಗೆ ಅಧರ್ಮವು ಪ್ರಾಪ್ತವಾಗಲಿಲ್ಲವೆಂದು ಹೇಳುತ್ತಾರೆ.

ನಮುಂಡಲೇsಭಿಸಾರೇವಾ ನಾಪಸಾರೇಚನಾಭಿತಃ ॥
ಅಧೋಹನ್ಯಾದ್ವಂಚಯುಂತ ಮುಧೊಹತ್ವಾನ ದುಷ್ಯತಿ ॥೮೫॥

ಮುಂಡಲೇ – ಮುಂಡಲದಂತೆ ಪರಿಭ್ರಮಣದಲ್ಲಿ, ಅಭಿಸಾರೇ ವಾ – ಎದುರಾಗಿ ಬರುತ್ತಿರಲು, ಅಪಸಾರೇ–ಹಿಂತಿರುಗಿ ಹೋಗುತ್ತಿರುವಲ್ಲಿ, ನಾಭಿತಃ – ಹೊಕ್ಕಳಿಂದ, ಅಧಃ—ಕೆಳಭಾಗದಲ್ಲಿ, ನಹನ್ಯಾತ್ – ಹೊಡೆಯಬಾರದು, ವಂಚಯುಂತಂ — ವಂಚಿಸತಕ್ಕವನನ್ನು, ಅಧಃ – ನಾಭಿಯಕೆಳಗೆ, ಹತ್ವಾ – ಕೊಂದು, ನ ದುಷ್ಯತಿ – ಕೊಲ್ಲತಕ್ಕವನು ದೋಷಉಳ್ಳವನಾಗುವ ದಿಲ್ಲ. ದುರ್ಯೋಧನನು ತಲೆಯನ್ನು ಕೆಳಗೆ ಮಾಡಿ ವಂಚಿಸಿದನು. ಆದ್ದರಿಂದ ನಾಭಿಯಕೆಳಗೆ ಭೀಮನು ಹೊಡೆದದ್ದು ದೋಷವನ್ನುಂಟುಮಾಡಲಿಲ್ಲ. ॥೮೫॥

ಅವ— ರೀತ್ಯಂತರದಿಂದ ಅಧರ್ಮವಾಗಲಿಲ್ಲವೆಂದು ಹೇಳುತ್ತಾರೆ.

ಕೃತಾಪ್ರತಿಜ್ಞಾಚ ವೃಕೋದರೇಣಭೇತ್ಸ್ಯೇತವೋರೂ ಇತಿಯುಕ್ತಿಪೂರ್ವಕಂ ॥
ಸಂಶ್ರಾವಯಾನೇನ ತದೇಷ ಧರ್ಮತೋ ಜಘಾನ ದುರ್ಯೋಧನಮುಗ್ರ್ಯಕರ್ಮಾ ॥೮೬॥

ತವ – ನಿನ್ನ, ಊರೂ – ತೊಡೆಗಳನ್ನು, ಭೇತ್ಸ್ಯೇ – ಮುರಿಯುವೆನು, ಇತಿ – ಎಂದು, ವೃಕೋದರೇಣ – ಭೀಮನಿಂದ, ಪ್ರತಿಜ್ಞಾ – ಪ್ರತಿಜ್ಞೆಯು, ಕೃತಾ – ಮಾಡಲ್ಪಟ್ಟಿದೆ. ಮೊದಲು ಪ್ರತಿಜ್ಞಾತವಾದ ನಿನ್ನ ಊರು ಭೇದನವು ಅವಶ್ಯವಾಗಿ ನನ್ನಿಂದ ಕರ್ತವ್ಯವು ಎಂದು ಯುಕ್ತಿಪೂರ್ವಕಂ–ಯುಕ್ತಿಪೂರ್ವಕವಾದದ್ದು ಹೇಗೆಆದೀತೋ ಹಾಗೆ, ಸಂಶ್ರಾವ–ಯಾನೇನ— ಪರಸ್ತ್ರೀಯರಿಗೆ ತೊಡೆಯನ್ನು ತೋರಿಸಿದರೆ ತೊಡೆಯನ್ನು ಸೀಳಬೇಕುಎಂಬ ಧರ್ಮವನ್ನು ಕೇಳಿಸತಕ್ಕ ಭೀಮಸೇನನಿಂದ 'ಊರೂತವಾಹಂಹಿಯಥಾಪ್ರತಿಜ್ಞಂ' ಎಂದು ಹಿಂದೆಮಾಡಿದ ಪ್ರತಿಜ್ಞೆಗೆ ಅನುಸಾರವಾಗಿ ಈಗಲೂ ಪ್ರತಿಜ್ಞೆಯುಮಾಡಲ್ಪಟ್ಟಿತು. ತತ್ – ಆದ್ದರಿಂದ, ಅಗ್ರ್ಯಕರ್ಮಾ – ಶ್ರೇಷ್ಠವಾದ ಕರ್ಮಗಳುಳ್ಳ, ಏಷಃ — ಈ ಭೀಮನು ಧರ್ಮತಃ— ಧರ್ಮದಿಂದಲೇ, ಜಘಾನ – ಕೊಂದನು. ॥೮೬॥

ವಾಸುದೇವವಚಃ ಶ್ರುತ್ವಾಧರ್ಮಚ್ಛಲಮಿತಿಬ್ರುವನ್ ॥
ರೌಹಿಣೇಯೋ ಜಗಾಮಾಶು ಸ್ವಪುರೀಮೇವಸಾನುಗಃ ॥೮೭॥

ವಾಸುದೇವವಚಃ – ಶ್ರೀಕೃಷ್ಣನ ಮಾತುಗಳನ್ನು, ಶ್ರುತ್ವಾ—ಕೇಳಿ, ಧರ್ಮಚ್ಛಲಂ – ಧರ್ಮಾಭಾಸವು, ಇತಿ— ಎಂದು, ಬ್ರುವನ್ ಹೇಳತಕ್ಕ, ರೌಹಿಣೇಯಃ— ಬಲರಾಮನು, ಆಶು – ಕೂಡಲೇ, ಸಾನುಗಸ್ಸನ್ – ಭೃತ್ಯರಿಂದ ಕೂಡಿದವನಾಗಿ, ಸ್ವಪುರಿಮೇವ— ತನ್ನಪಟ್ಟಣವನ್ನೇ ಕುರಿತು, ಜಗಾಮ— ಹೋದನು. ॥೮೭॥

ತಸ್ಮಿನ್ಗತೇ ವಾಸುದೇವಂ ಸಮುಪೃಚ್ಛದ್ಯುಧಿಷ್ಠಿರಃ ॥
ಧರ್ಮ್ಯೋಽಯಮುತವಾಽಧರ್ಮ ಇತಿ ತಂ ಪ್ರಾಹ ಕೇಶವಃ ॥೮೮॥

ತಸ್ಮಿನ್—ಆ ಬಲರಾಮನು, ಗತೇಸತಿ—ಹೋಗುತ್ತಿರಲು, ಯುಧಿಷ್ಠಿರಃ — ಧರ್ಮರಾಜನು, ಅಯಂ — ಈ ದುರ್ಯೋಧನನ ವಧವು, ಧರ್ಮಃ —ಧರ್ಮವೋ, ಉತವಾ ಅಧರ್ಮಃ — ಅಧರ್ಮವೋ, ಇತಿ — ಎಂದು, ವಾಸುದೇವಂ— ಶ್ರೀಕೃಷ್ಣನನ್ನು ಕುರಿತು, ಸಮುಪೃಚ್ಛತ್ — ಕೇಳಿದನು, ಕೇಶವಃ — ಶ್ರೀಕೃಷ್ಣನು, ತಂ— ಆ ಧರ್ಮರಾಜನನ್ನು ಕುರಿತು, ಪ್ರಾಹ— ಹೇಳಿದನು, ॥೮೮॥

ಅವ - ಪ್ರಕಾರಾಂತರದಿಂದಲೂ ಅಧರ್ಮವಲ್ಲ ವೆನ್ನುತ್ತಾರೆ.

ನಸಾಕ್ಷಾದ್ಧರ್ಮತೋವಧ್ಯಾಯೇಚ ಪಾಪತಮಾನರಾಃ ॥
ದೇವೈರ್ಹಿವಂಚಯಿತ್ವೈವ ಹತಾಃ ಪೂರ್ವಂ ಸುರಾರಯಃ ॥೮೯॥

ಅತೋಽಯಮುಪ್ಯಧರ್ಮೇಣ ಹತೋನಾತ್ರಾಸ್ತಿದೂಷಣಂ ॥
ಭೀಷ್ಮದ್ರೋಣೌ ಚ ಕರ್ಣಶ್ಚಯದ್ದೈವೋಪಾಧಿನಾ ಹತಾಃ ॥೯೦॥

ಕೋನುದುರ್ಯೋಧನೇ ಪಾಪೇ ಹತೇದೋಷಃ ಕಥಂಚನ ॥
ಪ್ರತಿಜ್ಞಾಪಾಲನಾಯಾಪಿ ಬಿಭೇದೋರೂ ವೃಕೋದರಃ ॥೯೧॥

ಯೇ – ಯಾರು, ಪಾಪತಮಾಃ – ಅತ್ಯಂತ ಪಾಪಿಷ್ಠರಾದ, ನರಾಃ—ಮನುಷ್ಯರೋ, ತೇ – ಅವರು, ಸಾಕ್ಷಾತ್—ಧರ್ಮತಃ – ಕೇವಲ ಧರ್ಮದಿಂದ, ನ ವಧ್ಯಾಃ – ಕೊಲ್ಲಲು ಯೋಗ್ಯರಲ್ಲ. ಪೂರ್ವಂ—ಹಿಂದೆ, ದೇವೈಃ – ದೇವತೆಗಳಿಂದ, ವಂಚಯಿತ್ವೈವ – ಮೋಸಮಾಡಿಯೇ, ಸುರಾರಯಃ— ದೇವತೆಗಳ ಶತ್ರುಗಳಾದ ದೈತ್ಯರು, ಹತಾಃ— ಕೊಲ್ಲಲ್ಪಟ್ಟರು. ಅತಃ – ಕೇವಲ ಧರ್ಮದಿಂದ ಪಾಪಿಷ್ಠರು ಕೊಲ್ಲಲು ಯೋಗ್ಯರಲ್ಲವಾದ್ದರಿಂದ, ಅಯಮುಪಿ — ಈ ಪಾಪಿಷ್ಠನಾದ ದುರ್ಯೋಧನನೂ ಕೂಡ, ಅಧರ್ಮೇಣ—ಅಧರ್ಮದಿಂದ, ಹತಃ— ಕೊಲ್ಲಲ್ಪಟ್ಟನು, ಅತ್ರ – ಈ ದುರ್ಯೋಧನನ ವಧ ವಿಷಯದಲ್ಲಿ,ದೂಷಣಂ — ಪಾಪವು, ನಾಸ್ತಿ—ಇರುವದಿಲ್ಲ. ಯದ್ಯಪಿ ಭೀಷ್ಮದ್ರೋಣೌ—ಭೀಷ್ಮ ಮತ್ತು ದ್ರೋಣರು, ಕರ್ಣಶ್ಚ— ಕರ್ಣನೂ ಕೂಡ, ಉಪಾಧಿನೈವ – ವ್ಯಾಜದಿಂದಲೇ ಹತಾಃ—,ಕೊಲ್ಲಲ್ಪಟ್ಟರು. ತಥಾಪಿ — ಹಾಗಾದರೂ, ಯದಾ – ಯಾವ ಕಾರಣದಿಂದ ದುರ್ಯೋಧನನ ಸಂಬಂಧಿಗಳಾದ ದ್ರೋಣಾದಿಗಳ ಹನನವನ್ನು ಕಪಟದಿಂದ ಮಾಡಿದ್ದೂ ದೋಷವಲ್ಲವೋ, ತಸ್ಮಾತ್ – ಆದ್ದರಿಂದ, ಕಥಂಚನ – ಯಾವದಾದರೊಂದು ಉಪಾಧಿಯಿಂದ, ಪಾಪೇ ದುರ್ಯೋಧನೇ-ಪಾಪಿಷ್ಠ ನಾದ ದುರ್ಯೋಧನನು, ಹತೇಸತಿ–ಕೊಲ್ಲಲ್ಪಡುತ್ತಿರಲು, ಕೋನು ದೋಷಃ–ಏನು ದೋಷವು? ಯಾವದೊಂದೂ ದೋಷವಿಲ್ಲ. ಪ್ರತಿಜ್ಞಾಪಾಲನಾಯಾಪಿ – ಪ್ರತಿಜ್ಞೆಯನ್ನು ರಕ್ಷಿಸುವದಕ್ಕಾಗಿಯೇ, ವೃಕೋದರಃ - ಭೀಮನು,ಊರೂ – ತೊಡೆಗಳನ್ನು, ಬಿಭೇದ – ಮುರಿದನು. ॥೮೯॥ ॥೯೦॥ ॥೯೧॥

ಅವ – ಗದಾಯುದ್ಧದಲ್ಲಿ ನಾಭಿಯಿಂದಕೆಳಗೆ ಹೊಡೆಯುವುದು ಅಧರ್ಮವಾದ್ದರಿಂದ 'ತವೋರುಂ' ಎಂದು ಮೊದಲು ಭೀಮನು ಹೇಗೆ ಪ್ರತಿಜ್ಞೆಮಾಡಿದನು ಎಂಬಶಂಕೆಗೆ ಸಮಾಧಾನವನ್ನು ಹೇಳುತ್ತಾರೆ

ಧರ್ಮತಶ್ಚಪ್ರತಿಜ್ಞೇಯಂಕೃತಾಽನೇನಾನುರೂಪತಃ ॥
ಲೋಕತೋಽಪಿನಧರ್ಮಸ್ಯ ಹಾನಿರತ್ರ ಕಥಂಚನ ॥೯೨॥

ಯೇಭೀಮುಸ್ಯಾಪ್ರಭಾವಜ್ಞಾ ಆಪದ್ಧರ್ಮಂಚಮನ್ಯತೇ ॥
ಅವಧ್ಯತ್ವೇ ಶಿವವರಾದ್ಗದಾಶಿಕ್ಷಾಬಲಾದಪಿ ॥
ಜರಾಸಂಧೋಪಮೋ ಯುಸ್ಮಾದ್ಧಾರ್ತರಾಷ್ಟ್ರಃಸುವಿಶ್ರುತಃ ॥೯೩॥

ಅನೇನ— ಈ ಭೀಮನಿಂದ, ಇಯಂ ಪ್ರತಿಜ್ಞಾ – ಗದೆಯಿಂದ ತೊಡೆಗಳನ್ನು ಮುರಿಯುವೆನು ಎಂಬ ಪ್ರತಿಜ್ಞೆಯು, ಧರ್ಮತಶ್ಚ— ಧರ್ಮದಿಂದಲೇ, ಕೃತಾ – ಮಾಡಲ್ಪಟ್ಟಿತು, ಹೇಗೆಂದರೆ ಅನುರೂಪತಃ — ಪಾಪಿಗಳನ್ನು ಅಧರ್ಮದಿಂದ ಕೊಲ್ಲುವುದು ಧರ್ಮವಾದ್ದರಿಂದ, ಅತ್ರ – ದುರ್ಯೋಧನನ ಸಂಹಾರ ವಿಷಯದಲ್ಲಿ, ಲೋಕತೋಽಪಿ – ಅಜ್ಞಜನರ ದೃಷ್ಟಿಯಿಂದಲೂ, ಕಥಂಚನ – ಯಾವರೀತಿಯಿಂದಲೂ, ಧರ್ಮಸ್ಯ— ಧರ್ಮದ, ಹಾನಿಃ— ಹಾನಿಯು, ನ–ಇರುವುದಿಲ್ಲ. ಧರ್ಮದ ಹಾನಿಯು ಏಕೆ ಇಲ್ಲವೆಂಬುದನ್ನು ಹೇಳುತ್ತಾರೆ. ಯೇ–ಯಾರು, ಭೀಮಸ್ಯ— ಭೀಮನ, ಅಪ್ರಭಾವಜ್ಞಾಃ— ಸಾಮರ್ಥ್ಯವನ್ನು ತಿಳಿಯದೇ ಇರತಕ್ಕವರೋ, ತೇಚ – ಅವರೂ ಕೂಡ, ಆಪದ್ಧರ್ಮಂ – ಆಪದ್ಧರ್ಮವನ್ನಾಗಿ ಅಂದರೆ ಪ್ರಾಣಹೋಗುವಸಮಯದಲ್ಲಿ ಯಾವರೀತಿಯಿಂದಲಾದರೂ ಪ್ರಾಣವನ್ನು ರಕ್ಷಿಸಿಕೊಳ್ಳತಕ್ಕದ್ದು ಎಂದು, ಮನ್ಯತೇ – ತಿಳಿಯುತ್ತಾರೆ. ಭೀಮನ ಸಾಮರ್ಥ್ಯವನ್ನು ತಿಳಿದಿರುವ ಜನರ ದೃಷ್ಟಿಯಿಂದಲೂ ಧರ್ಮಹಾನಿ ಇಲ್ಲವೆನ್ನುತ್ತಾರೆ. ಯಸ್ಮಾತ್— ಯಾವಕಾರಣದಿಂದ, ಅವಧ್ಯತ್ವೇ— ಸಾಯದಿರುವ ವಿಷಯದಲ್ಲಿ, ಶಿವವರಾತ್ – ರುದ್ರನವರದಿಂದಲೂ ಗದಾಶಿಕ್ಷಾಬಲಾದಪಿ – ಗದಾಭ್ಯಾಸದ ಸಾಮರ್ಥ್ಯದಿಂದಲೂ, ಧಾರ್ತರಾಷ್ಟ್ರಃ – ದುರ್ಯೋಧನನು, ಜರಾಸಂಧೋಪಮಃ – ಜರಾಸಂಧನಿಗೆ ಸದೃಶನೆಂದು, ಸುವಿಶ್ರುತಃ–ಪ್ರಸಿದ್ಧನಾಗಿರುವನೋ, ತಸ್ಮಾತ್–ಆ ಕಾರಣದಿಂದಲೂ, ಭೀಮನ ಸಾಮರ್ಥ್ಯವನ್ನುತಿಳಿದವರೂ ಕೂಡ, ಪ್ರತಿಜ್ಞಾಪಾಲನ ರೂಪವಾದ ಆಪದ್ಧರ್ಮವನ್ನಾಗಿ ತಿಳಿಯುತ್ತಾರೆ. ॥೯೨॥೯೩॥

ಅವ – ಹಿಂದೆ ಹೇಳಿದ ಅರ್ಥವನ್ನು ಉಪಸಂಹಾರ ಮಾಡುತ್ತಾರೆ.

ತಸ್ಮಾತ್ತ್ವಧರ್ಮಏವಾಯಂ ಭೀಮಚೀರ್ಣಇತಿಬ್ರುವನ್ ॥
ಅಪಿಸಂಶಯಿನಂ ಚಕ್ರೇಧರ್ಮರಾಜಂಜಗತ್ಪತಿಃ ॥೯೪॥

ತಸ್ಮಾತ್ – ಆದ್ದರಿಂದ, ಭೀಮಚೀರ್ಣಃ – ಭೀಮನಿಂದ ಮಾಡಲ್ಪಟ್ಟ; ಅಯಂ – ಈ ದುರ್ಯೋಧನನ ವಧವು ಧರ್ಮಏವ— ಧರ್ಮವೇ, ಇತಿ— ಎಂದು, ಜಗತ್ಪತಿಃ– ಲೋಕದೊಡೆಯನಾದ, ಸಃ– ಆ ಶ್ರೀಕೃಷ್ಣನು, ಬ್ರುವನ್ನಪಿ— ಹೇಳತಕ್ಕವನಾದರೂ ಕೂಡ, ಧರ್ಮರಾಜಂ – ಧರ್ಮರಾಜನನ್ನು, ಸಂಶಯಿನಂ – ದುರ್ಯೋಧನನ ವಧವು ಧರ್ಮವೋ ಅಥವಾ ಅಧರ್ಮವೋ ಎಂಬು ಸಂದೇಹವುಳ್ಳವನನ್ನಾಗಿ, ಚಕ್ರೇ— ಮಾಡಿದನು. ॥೯೪॥

ಅವ – ಶ್ರೀಕೃಷ್ಣನು ಧರ್ಮರಾಜನನ್ನು ಸಂಶಯವುಳ್ಳವನನ್ನಾಗಿಮಾಡಲು ಕಾರಣವನ್ನು ಹೇಳುತ್ತಾರೆ.

ಭೂಭಾರಕ್ಷತಿಜೋಧರ್ಮೋ ಮುಚ್ಛುಶ್ರೂಷಾತ್ಮಕಶ್ಚಯಃ ॥
ಭೀಮಸ್ಯೈವ ಭವೇತ್ಸಮ್ಯಗಿತಿಬುಧ್ಯಾ ಪರಃಪ್ರಭುಃ ॥೯೫॥

ಮುಚ್ಛುಶ್ರೂಷಾತ್ಮಕಃ – ನನ್ನ ಸೇವಾರೂಪವಾದ, ಭೂಭಾರಕ್ಷತಿಜಃ – ಭೂಮಿಗೆ ಭಾರಭೂತರಾದ ದೈತ್ಯರ ಸಂಹಾರದಿಂದ ಉಂಟಾಗುವ, ಯಃ ಧರ್ಮಃ–ಯಾವಧರ್ಮವೋ, ಸಃ–ಆ ಧರ್ಮವು ಸಮ್ಯಕ್–ಪೂರ್ಣವಾಗಿ,ಭೀಮಸ್ಯೈವ–ಭೀಮನಿಗೇನೇ, ಭವೇತ್— ಆಗಲಿ, ಇತಿ – ಎಂದು, ಬುದ್ಧ್ಯಾ—ಅಭಿಪ್ರಾಯದಿಂದ, ಪ್ರಭುಃ—ಸಮರ್ಥನಾದ, ಪರಃ – ಸರ್ವೋತ್ತಮನಾದ, ಶ್ರೀಕೃಷ್ಣನು, ಧರ್ಮರಾಜನನ್ನು ಸಂಶಯವುಳ್ಳವನನ್ನಾಗಿ ಮಾಡಿದನು. ॥೯೫॥

ಸ್ವೇನೈವ ಬಲಭದ್ರಾಯ ಜನಾಯಚ ಪುನಃ ಪುನಃ ॥
ಶ್ರುತ್ವಾಪ್ಯುಕ್ತಂ ನತತ್ಯಾಜ ಸಂಶಯಂ ಧರ್ಮಜೋಯತಃ ॥೯೬॥

ತತೋಽಪ್ಯಸಂಶಯಂಕೃಷ್ಣೋ ನ ಚಕಾರ ಯುಧಿಷ್ಠಿರಂ ॥
ಮುಖ್ಯಧರ್ಮಂಹಿಭಗವಾನ್ಬಲಾಯಾಹ ಜನಾಯಚ ॥೯೭॥

ಸ್ವೈನೈವ – ತನ್ನಿಂದಲೇ, ಬಲಭದ್ರಾಯ — ಬಲರಾಮನಿಗೋಸ್ಕರವೂ, ಜನಾಯಚ – ಅಲ್ಲಿರತಕ್ಕ ಲೋಕದವರಿಗೂ ಕೂಡ, ಉಕ್ತಂ— ದುರ್ಯೋಧನಾದಿಗಳು ಧರ್ಮದಿಂದಲೇ ಕೊಲ್ಲಲ್ಪಟ್ಟರು ಎಂದು ಹೇಳಲ್ಪಟ್ಟಮಾತನ್ನು, ಧರ್ಮಜಃ – ಧರ್ಮರಾಜನು, ಪುನಃ ಪುನಃ – ಮತ್ತೂ ಮತ್ತೂ, ಶ್ರುತ್ವಾಪಿ – ಕೇಳಿಯೂ ಕೂಡ, ಯತಃ— ಯಾವ ಕಾರಣದಿಂದ, ಸಂಶಯಂ – ಸಂಶಯವನ್ನು, ನ ತತ್ಯಾಜ – ಬಿಡಲಿಲ್ಲವೋ, ತತೋಪಿ – ಆ ಕಾರಣದಿಂದಲೂ ಕೂಡ, ಕೃಷ್ಣಃ – ಶ್ರೀಕೃಷ್ಣನು, ಯುಧಿಷ್ಠಿರಂ – ಧರ್ಮಜನನ್ನು, ಅಸಂಶಯಂ–ಸಂಶಯರಹಿತನನ್ನಾಗಿ, ನ ಚಕಾರ– ಮಾಡಲಿಲ್ಲ. ಭಗವಾನ್ —ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣನು, ಬಲಾಯ – ಬಲರಾಮನಿಗೂ, ಜನಾಯಚ– ಲೋಕಕ್ಕೂಕೂಡ, ಮುಖ್ಯಧರ್ಮಂ – ಧರ್ಮದಿಂದಲೇ ಕೊಲ್ಲಲ್ಪಟ್ಟನು. ಎಂಬ ಈರೀತಿಯಾದ ಸವಿೂಚೀನವಾದ ಧರ್ಮವನ್ನು ಆಹ – ಹೇಳಿದನು. ॥೯೬॥ ॥೯೭॥

ಧರ್ಮೇಣೈವಹತೋರಾಜಾ ಧಾರ್ತರಾಷ್ಟ್ರಃ ಸುಯೋಧನಃ ॥
ಇತಿಯದ್ವಕ್ಷ್ಯತಿ ಪುನರ್ನಿಶ್ಚಯಾರ್ಥೇಽರ್ಜುನಾಯಚ ॥೯೮॥

ಧಾರ್ತರಾಷ್ಟ್ರಃ—ಧೃತರಾಷ್ಟ್ರನ ಮಗನಾದ, ರಾಜಾ–ರಾಜನಾದ, ಸುಯೋಧನಃ–ದುರ್ಯೋಧನನು, ಧರ್ಮೇಣೈವ– ಧರ್ಮದಿಂದಲೇ, ಹತಃ— ಕೊಲ್ಲಲ್ಪಟನು, ಇತಿ – ಎಂದು, ಯತ್ – ಯಾವದನ್ನು, ಪುನಃ – ಮತ್ತೂ ಮತ್ತೂ, ವಕ್ಷ್ಯತಿ – ಹೇಳುವನೋ, ತತ್ – ಅದು, ಅರ್ಜುನಾಯ – ಅರ್ಜುನನಿಗೆ, ನಿಶ್ಚಯಾರ್ಥೇ—ತತ್ವಜ್ಞಾನಕ್ಕೋಸ್ಕರವು. ॥೯೮॥

ಪುನಃಪುನರ್ಧರ್ಮತ ಏವ ಭೀಮೋ ಜಘಾನ ರಾಜಾನಮಿತಿ ಬ್ರುವಂತಂ ॥

ಜಗಾದಕೃಷ್ಣಂ ಸ್ಫುರಿತಾಧರೋಷ್ಮಃ ಕ್ರೋಧಾತ್ಸುಪಾಪೋ ಧೃತರಾಷ್ಟ್ರಸೂನುಃ ॥೯೯॥

ಪುನಃ ಪುನಃ – ಮತ್ತೂ ಮತ್ತೂ, ಭೀಮಃ – ಭೀಮನು, ಧರ್ಮತ ಏವ – ಧರ್ಮದಿಂದಲೇ, ರಾಜಾನಂ – ದುರ್ಯೋಧನನನ್ನು, ಜಘಾನ – ಕೊಂದನು. ಇತಿ—ಎಂದು, ಬ್ರುವಂತಂ – ಹೇಳತಕ್ಕ, ಕೃಷ್ಣಂ– ಶ್ರೀಕೃಷ್ಣನನ್ನು, ಕುರಿತು, ಸುಪಾಪಃ – ಅತಿಪಾಪಿಷ್ಠನಾದ, ಧೃತರಾಷ್ಟ್ರಸೂನುಃ – ಧೃತರಾಷ್ಟ್ರನ ಮಗನಾದ ದುರ್ಯೋಧನನು, ಕ್ರೋಧಾತ್ – ಕೋಪದಿಂದ, ಸ್ಫುರಿತಾಧರೋಷ್ಮಃ ಸನ್—ಚಂಚಲವಾದ ಕೆಳತುಟಿಉಳ್ಳವನಾಗಿ, ಜಗಾದ – ಹೇಳಿದನು. ॥೯೯॥

ತ್ವಯೈವಪಾಪೇ ನಿಹಿತಾಹಿ ಪಾರ್ಥಾಃ ಪಾಪಾಧಿಕಸ್ತ್ವಂಹಿ ಸದೈಕಏವ ॥
ಇತ್ಯೂಚಿವಾಂಸಂ ಪ್ರಜಗಾದ ಕೃಷ್ಣೋ ನ ತ್ವತ್ಸಮಃ ಪಾಪತಮಃ ಕದಾಚಿತ್ ॥೧೦೦॥

ತ್ವಯೈವ – ನಿನ್ನಿಂದಲೇ, ಪಾರ್ಥಾಃ – ಪಾಂಡವರು, ಪಾಪೇ – ಪಾಪ ಕರ್ಮದಲ್ಲಿ, ನಿಹಿತಾಃ— ಸ್ಥಾಪಿತರಾಗಿರುತ್ತಾರೆ. ತ್ವಂ – ನೀನು, ಏಕ ಏವ—ಒಬ್ಬನೇ, ಸದಾ – ಯಾವಾಗಲೂ, ಪಾಪಾಧಿಕಃ— ಅಧಿಕ ಪಾಪವುಳ್ಳವನು. ಇತಿ– ಈ ರೀತಿಯಾಗಿ, ಊಚಿವಾಂಸಂ— ಹೇಳತಕ್ಕ ದುರ್ಯೋಧನನನ್ನು ಕುರಿತು, ಕೃಷ್ಣಃ – ಶ್ರೀಕೃಷ್ಣನು, ತ್ವತ್ಸಮಃ— ನಿನಗೆ ಸದೃಶನಾದ, ಪಾಪತಮಃ – ಅತಿಪಾಪಿಷ್ಠನು, ಕದಾಚಿತ್ – ಎಲ್ಲಿಯೂ, ನ – ಇರುವದಿಲ್ಲ, ಇತಿ — ಎಂದು, ಜಗಾದ – ಹೇಳಿದನು. ॥೧೦೦॥

ಭೀಷ್ಮಾದಿಹತ್ಯಾಪಿ ತವೈವಪಾಪಂ ಯದನ್ವಯುಸ್ತ್ವಾಮಪಿ ಪಾಪನಿಶ್ಚಯಂ ॥
ಪಾಪಂಚ ಪಾಪಾನುಗತಂ ಚ ಹತ್ವಾ ಕಥಂಚನಾಪ್ಯಸ್ತಿನಚೈವ ಪಾಪಂ ॥೧೦೧॥

ಯತ್ — ಯಾವಕಾರಣದಿಂದ, ಭೀಷ್ಮಾದಯಃ — ಭೀಷ್ಮಮೊದಲಾದವರು, ಪಾಪ ನಿಶ್ಚಯಮಪಿ – ಪಾಪ ಕರ್ಮ ನಿಶ್ಚಯವುಳ್ಳ, ತ್ವಾಂ – ನಿನ್ನನ್ನು, ಅನ್ವಯುಃ–ಅನುಸರಿಸಿರುವರೋ. ಯತಃ– ಯಾವಕಾರಣದಿಂದ, ನಿನ್ನನ್ನು ಅನಸರಿಸಿರುವ ನಿಮಿತ್ತದಿಂದಲೇ ಪಾಂಡವರಿಂದ ಕೊಲ್ಲಲ್ಪಟರೋ ತಸ್ಮಾತ್–ಆದ್ದರಿಂದ, ಭೀಷ್ಮಾದಿಹತ್ಯಾಪಿ–ಭೀಷ್ಮಾದಿಗಳ ಹನನವೂಕೂಡ, ತವೈವ — ನಿನಗೇನೇ ಪಾಪಂ— ಪಾಪವನ್ನುಂಟು ಮಾಡತಕ್ಕದ್ದು. ಆದ್ದರಿಂದ ಪಾಪಂ — ಪಾಪಿಷ್ಠನಾದ ನಿನ್ನನ್ನೂ, ಪಾಪಾನುಗತಂ ಚ – ಪಾಪಿಷ್ಠನಾದ ನಿನ್ನನ್ನು ಅನುಸರಿಸಿಕೊಂಡಿರುವ ಭೀಷ್ಮ ಮೊದಲಾದ ಸಜ್ಜನರನ್ನೂ, ಕೂಡ,ಹತ್ವಾ — ಕೊಂದು, ಕಥಂಚನ – ಯಾವ ರೀತಿಯಿಂದಲೂ, ಪಾಪಂ– ಪಾಪವು ನಾಸ್ತ್ಯೇವ – ಇಲ್ಲವೇ ಇಲ್ಲ. ॥೧೦೧॥

ಭಾ. ಅ. ೪೫—೧೦೧ ಶ್ರೀಭೀಮಸೇನದೇವರು ದುರ್ಯೋಧನನನ್ನು ಕೊಂದದ್ದು ಮಹಾನ್ ಧರ್ಮವೇ ಎಂಬುದಾಗಿ ಶ್ರೀಕೃಷ್ಣನು ಅನೇಕ ರೀತಿಯಿಂದ ಸಮರ್ಥಿಸಿರುತ್ತಾನೆ. ೧) ಮಂಡಲದಂತೆ ತಿರುಗುತ್ತಿರುವಾಗ, ಎದುರು ಬರುತ್ತಿರುವಾಗ, ಹಿಂದಿರುಗಿ ಹೋಗುವಾಗ ಹೊಡೆಯಬಾರದು. ನಾಭಿಯಿಂದ ಕೆಳಭಾಗದಲ್ಲಿ ಹೊಡೆಯಬಾರದು ಎಂಬುದು ಗದಾಯುದ್ಧದ ಸಾಮಾನ್ಯ ನಿಯಮ ನಿಜ. ಆದರೆ ವಂಚಕನನ್ನು ಹೇಗೆ ಹೊಡೆದರೂ ಹೊಡೆದವನಿಗೆ ದೋಷವಿಲ್ಲ ಎಂಬುದು ವಿಶೇಷ ನಿಯಮವು. ದುರ್ಯೋಧನನು ಸರ್ವದಾವಂಚಕನು; ಮತ್ತು ಆ ಯುದ್ಧದ ಸಮಯದಲ್ಲಿ ಕೂಡ ವಂಚಿಸಿದನು. ಆದ್ದರಿಂದ ಶ್ರೀಭೀಮರಿಗೆ ಯಾವ ದೋಷವೂ ಇಲ್ಲ. ೨) ಪರಸ್ತ್ರೀಯರಿಗೆ ತೊಡೆ ತೋರಿಸುವ ದುಷ್ಟನ ತೊಡೆಯನ್ನು ಮುರಿಯುವದು ಧರ್ಮವು ಎಂಬುದನ್ನು ಲೋಕಕ್ಕೆ ತಿಳಿಸುವದಕ್ಕಾಗಿ, ಅಂದಿನ ದ್ಯೂತ ಸಭೆಯಲ್ಲಿ ಪ್ರತಿಜ್ಞೆ ಮಾಡಿದ ಶ್ರೀಭೀಮಸೇನದೇವರು, ಧರ್ಮಜ್ಞಾಪನ ದೃಷ್ಟಿಯಿಂದ ಕೊಂದದ್ದರಿಂದಲೂ ಇದು ಧರ್ಮವೇ ಎಂದು ಶ್ರೀಕೃಷ್ಣನು ಹೇಳಿದಾಗ ಶ್ರೀಬಲರಾಮದೇವರು ಧರ್ಮದ ನಾಟಕವಿದು ಎಂದು ಆಕ್ರೋಶಿಸಿ ತನ್ನ ಅನುಯಾಯಿಗಳಿಂದೊಡಗೂಡಿ ದ್ವಾರಕೆಗೆ ಹೋದರು. ಆಗ ಧರ್ಮರಾಜನು ಸಂಶಯಗೊಂಡು ಇದು ಧರ್ಮವೋ ? ಅಧರ್ಮವೊ ? ಎಂದು ಶ್ರೀಕೃಷ್ಣನನ್ನು ಕೇಳಿದನು, ಆಗ ಶ್ರೀಕೃಷ್ಣನು ತಾನು ಧರ್ಮವೆಂದು ಹೇಳಿದಾಗ್ಯೂ ಕೂಡ ಸಂಶಯ ಮಾಡತಕ್ಕ ಧರ್ಮರಾಜನಿಗೆ ಭೂಭಾರ ಕ್ಷಪಣ (ಸಂಹಾರ)ದ ಪೂರ್ಣಫಲವು ಬರುವ ಅರ್ಹತೆ ಅವನಿಗಿಲ್ಲ; ಅದೆಲ್ಲ ಶ್ರೀಭೀಮರಿಗೇ ಬರಬೇಕು ಎಂಬ ಉದ್ದೇಶದಿಂದ ,ಧರ್ಮರಾಜನಿಗೆ ಮತ್ತಿಷ್ಟು ಸಂಶಯ ಹೆಚ್ಚಾಗುವ ರೀತಿಯಲ್ಲೇ ಮಾತನಾಡಿದನು-—''ಧರ್ಮರಾಜ, ಪಾಪಿಷ್ಠರಾದ ಜನರು ಧರ್ಮದಿಂದ ಸಂಹರಿಸಲ್ಪಡಬಾರದು, ಅವರನ್ನು ವಂಚಿಸಿಯೇ ಕೊಲ್ಲಬೇಕು. ಹಿಂದೆ ದೇವತೆಗಳೂ ದೈತ್ಯರನ್ನು ಹಾಗೆಯೇ ಕೊಂದಿದ್ದಾರೆ. ಆದ್ದರಿಂದ ಇವನನ್ನು ಅಧರ್ಮದಿಂದ ಕೊಂದರೂ ಕೂಡ ಯಾವ ದೊಷವೂ ಇಲ್ಲ. ಅಷ್ಟೇ ಅಲ್ಲ; ಭೀಷ್ಮ ದ್ರೋಣ, ಕರ್ಣರನ್ನೇ (ನೆಪದಿಂದ, ಕಪಟದಿಂದ) ಅಧರ್ಮದಿಂದ ಕೊಂದಿರುವಾಗ, ಈ ಪಾಪಿಷ್ಠ ದುರ್ಯೋಧನನನ್ನು ಸಂಹರಿಸಿದರೆ ಏನು ದೋಷ? ಭೀಮನು ತನ್ನ ಪ್ರತಿಜ್ಞಾ ಪೂರ್ಣಮಾಡುವದಕ್ಕಾಗಿ ಊರುಭೇದನ ಮಾಡಿದ್ದಾನೆ. ಆದ್ದರಿಂದ ಏನು ದೋಷ ? ಅಧರ್ಮಿಗಳನ್ನು ಅಧರ್ಮದಿಂದ ಕೊಲ್ಲುವದು ಧರ್ಮವಾದ್ದರಿಂದ ಧರ್ಮವೇ ಆಗಿದೆ. ಲೋಕ ದೃಷ್ಟಿಯಿಂದಲೂ ಕೂಡ ಇದರಲ್ಲಿ ಯಾವ ಧರ್ಮಹಾನಿಯೂ ಇಲ್ಲ. ಹೇಗೆಂದರೆ, ಯಾವ ಜನರು ಶ್ರೀಭೀಮರ ಸಾಮರ್ಥ್ಯವನ್ನು ತಿಳಿಯದವರೋ ಅವರು ಆಪದ್ಧರ್ಮವಾಗಿ ಭೀಮನು ಹೀಗೆ ಮಾಡಿದ್ದಾನೆ ಎಂದೂ ತಿಳಿಯುತ್ತಾರೆ. ಭೀಮನ ಸಾಮರ್ಥ್ಯವನ್ನು ತಿಳಿದ ಜನರು ಪ್ರತಿಜ್ಞಾಪಾಲನ ರೂಪ ಮುಖ್ಯಧರ್ಮ ಸಂಪಾದನೆಗಾಗಿ ಹೀಗೆ ಮಾಡಿದ್ದಾನೆ ಎಂದೂ ತಿಳಿಯುತ್ತಾರೆ. ಆದ್ದರಿಂದ ಇದು ಧರ್ಮವೇ ಆಗಿದೆ ಎಂಬುದಾಗಿ ಹೇಳಿ ಧರ್ಮರಾಜನನ್ನು ಪುನಃ ಸಂಶಯಉಳ್ಳವನನ್ನಾಗಿಯೇ ಮಾಡಿದನು. ಅರ್ಜುನನಿಗೆ ಮತ್ತು ಬಲರಾಮದೇವರ ಎದುರುಲ್ಲಿ ಜನರೆದುರಲ್ಲಿ ಸರಿಯಾದ ತಿಳಿವಳಿಕೆ ಬರುವಂತೆಯೇ ಧರ್ಮವೇ ಎಂದು ಶ್ರೀಕೃಷ್ಣನು ಹೇಳಿದನು. ಹೀಗೆ ಶ್ರೀಕೃಷ್ಣನು ಮೇಲಿಂದ ಮೇಲೆ ದುರ್ಯೋಧನನ ವಧವನ್ನು ಧರ್ಮ ಎಂದು ಪ್ರತಿಪಾದಿಸಿದಾಗ ಅದನ್ನು ಕೇಳುತ್ತಾಬಿದ್ದಿರುವ ದುರ್ಯೋಧನನು ಸಿಟ್ಟಿನಿಂದ ಹಲ್ಲು ತುಟಿ ನಡುಗಿಸುತ್ತಾ ಶ್ರೀಕೃಷ್ಣನಿಗೆ ನಿನ್ನಿಂದಾಗಿಯೇ ಈ ಪಾಪಕಾರ್ಯದಲ್ಲಿ ಪಾಂಡವರು ತೊಡಗಿದ್ದು. ಆದ್ದರಿಂದ ನೀನು ಬಹು ಪಾಪಿಯು' ಎಂದು ಅಂದನು. ಆಗ ಶ್ರೀಕೃಷ್ಣನು ನಿನಗೆ ಸಮನಾದ ಅತ್ಯಂತ ಪಾಪಿಷ್ಠ ಎಂದೂ ಎಲ್ಲೂ ಇಲ್ಲ. ಭೀಷ್ಮಾದಿಗಳ ಸಂಹಾರ ಪಾಪವೂ ನಿನಗೇ. ನಿನ್ನಂಥ ಪಾಪಿಯನ್ನು ಅನುಸರಿಸಿದ ಅವರನ್ನು ಸಂಹರಿಸಿದ್ದಾರೆ. ಪಾಂಡವರಿಗೆ ಯಾವ ದೋಷವೂ ಇಲ್ಲ ಎಂದು ಹೇಳಿದನು.

ನಪಾಂಡವೇಷ್ವಸ್ತಿ ತತೋಽಹಿಂ ಕಂಚಿತ್ಪಾಪಂ ಪ್ರಯತ್ನಾಚ್ಚ ನಿಸರ್ಗತೋಽಪಿ ॥
ಗುಣಾಧಿಕಾಸ್ತೇಷುದುಪಾಶ್ರಯಾಚ್ಚ ಕೋನಾವುತೇಷ್ವಣ್ವಪಿಪಾಪಮಾಹ ॥೧೦೨॥

ತತಃ-ಆದ್ದರಿಂದ, ಪ್ರಯತ್ನಾತ್-ಯುದ್ಧಾದಿಪ್ರಯತ್ನದಿಂದಲೂ, ನಿಸರ್ಗಾತ್-ಸ್ವಭಾವದಿಂದ ಲೂ, ಪಾಂಡವೇಷು — ಪಾಂಡವರಲ್ಲಿ, ಪಾಪಂ — ಪಾಪವು, ಕಿಂಚಿದಪಿ — ಸ್ವಲ್ಪವೂ ಕೂಡ, ನಾಸ್ತಿ — ಇರುವುದಿಲ್ಲ. ಮದುಪಾಶ್ರಯಾಃ-ನನ್ನನ್ನು ಆಶ್ರಯಿಸಿಕೊಂಡಿರುವ, ತೇ— ಆ ಪಾಂಡವರು, ಗುಣಾಧಿಕಾಃ - ಗುಣಗಳಿಂದ ಅಧಿಕರು, ಕೋನಾಮ - ಯಾವಾತನು, ತೇಷು - ಆ ಪಾಂಡವರಲ್ಲಿ ಅಣು ಪಾಪಮಪಿ - ಸ್ವಲ್ಪಪಾಪವನ್ನೂಕೂಡ, ಆಹ - ಹೇಳಿಯಾನು ? ॥೧೦೨॥

ನಿಸರ್ಗತಃ ಪಾಪತಮುತ್ತ್ವಮನ್ಯಾನ್ಧರ್ಮಸ್ಥಿತಾನ್ಪಾಪಪಥೇನಿಧಾಯ ॥
ಸ್ವಯಂಚ ಪಾಪೇ ನಿರತಃ ಸದೈವ ಪಾಪಾತ್ಪಾಪಾಂಗತಿಮೇವ ಯಾಸಿ ॥೧೦೩॥

ತ್ವಂ - ನೀನು, ನಿಸರ್ಗತಃ - ಸ್ವಭಾವದಿಂದ, ಪಾಪತಮಃ- ಅತಿ ಪಾಪಿಷ್ಠನು, ಧರ್ಮಸ್ಥಿತಾನ್- ಧರ್ಮದಲ್ಲಿರತಕ್ಕ ಅನ್ಯಾನ್-ಭೀಷ್ಮಾದಿಗಳನ್ನು, ಪಾಪಪಥೇ-ಪಾಪ ಮಾರ್ಗದಲ್ಲಿ, ನಿಧಾಯ - ಇಟ್ಟು, ಸದೈವ— ಯಾವಾಗಲೂ, ಸ್ವಯಂ — ತಾನೇ, ಪಾಪೇ—ವಿಷ್ಣು ವೈಷ್ಣವದ್ವೇಷಾತ್ಮಕವಾದ ಮಹತ್ತರ ಪಾಪದಲ್ಲಿ, ನಿರತಸ್ತನ್ - ಆಸಕ್ತನಾಗಿ, ಪಾಪಾತ್- ಪಾಪಿಷ್ಠ ಗತಿಗಿಂತಲೂ, ಸುಪಾಪಾಂ - ಅತಿ ಪಾಪಿಷ್ಠವಾದ, ಗತಿಮೇವ - ಅಧಂತಮಸ್ತನ್ನೇ, ಯಾಸಿ - ಹೊಂದುತ್ತಿ. ॥೧೦೩॥

ಇತಿಬ್ರುವಂತಂ ಪುನರಾಹ ಕೃಷ್ಣಂ ದುರ್ಯೋಧನಃ ಪಾಪಕೃತಾಂ ಪ್ರಧಾನಃ ॥
ಸ್ವಂತೋತ್ತಮೋನಾಮ ಕಶ್ಚಿನ್ನ ಮತ್ತ ಃ ಕೋನಾಮದೋಷೋsಸ್ತಿಮಯಾಕೃತೋsತ್ರ ॥೧೦೪॥

ಇತಿ— ಈ ರೀತಿಯಾಗಿ, ಬ್ರುವಂತಂ - ಹೇಳತಕ್ಕ, ಕೃಷ್ಣಂ— ಕೃಷ್ಣನನ್ನು, ಪಾಪಕೃತಾಂ — ಪಾಪಕೃತ್ಯವನ್ನೇ ಮಾಡತಕ್ಕವರ ಮಧ್ಯದಲ್ಲಿ. ಪ್ರಧಾನಃ—ಶ್ರೇಷ್ಠನಾದ, ದುರ್ಯೋಧನಃ—ದುರ್ಯೋಧನನು, ಪುನಃ—ಮತ್ತೊಮ್ಮೆ, ಆಹ-ಹೇಳಿದನು. ಸ್ವಂತೋತ್ತಮಃ - ಧರ್ಮದಿಂದ ಯುದ್ಧದಲ್ಲಿ ಮರಣ ಹೊಂದಿರುವುದರಿಂದ ಸು - ಶೋಭನವಾದ, ಅಂತ - ಮರಣವುಳ್ಳವರ ಮಧ್ಯದಲ್ಲಿ, ಉತ್ತಮಃ— ಪ್ರಧಾನನಾದವನು, ಅಹಮೇವ - ನಾನೇ, ಮತ್ತಃ ಅನ್ಯಃ - ನನ್ನಿಂದ ಬೇರೆ ಯಾವನು ಶೋಭನಮರಣವುಳ್ಳವನು, ಕಶ್ಚಿನ - ಯಾವನು ? ನ ಕೋಪಿ - ಯಾವನೂ ಇಲ್ಲ, ಇತಿ— ಎಂಬುದು, ನಾಮ- ಪ್ರಸಿದ್ಧವು. ಅತ್ರ—ಈ ಯುದ್ಧ ಸಮಯದಲ್ಲಿ, ಮಯಾ— ನನ್ನಿಂದ, ಕೃತಃ ದೋಷಃ - ಮಾಡಲ್ಪಟ್ಟ ದೋಷವು, ಕಃ ಅಸ್ತಿ? - ಯಾವುದಿದೆ ?ನಕೋಪಿ— ಯಾವದೋಷವೂ ಇಲ್ಲ, ನಾಮ - ಇದೂ ಪ್ರಸಿದ್ಧವು. ॥೧೦೪॥

ಇಷ್ಟಂಚಯಜ್ಞೈಶ್ಚರಿತಂ ಚ ಪೂರ್ತೈಃ ಪದಂರಿಪೂಣಾಂ ನಿಹಿತಂಚ ಮೂರ್ಧ್ನಿ ॥
ಮೃತ್ಯುಶ್ಚ ಸಂಗ್ರಾಮಶಿರಸ್ಯವಾಪ್ತೋರಣೋನ್ಮುಖೇನೈವ ಮಯಾಕಿಮನ್ಯತ್ ॥೧೦೫॥

ಯಜ್ಞೈಃ ಇಷ್ಟಂ - ಯಜ್ಞಗಳು ಮಾಡಲ್ಪಟ್ಟವು; ಪೂರ್ತೈಶ್ಚರಿತಂ - ವಾಪೀ, ಕೂಪ, ತಟಾಕಾದಿಗಳು ನಿರ್ಮಿಸಲ್ಪಟ್ಟವು. ರಿಪೂಣಾಂ — ಶತ್ರುಗಳ, ಮೂರ್ಧ್ನಿ-ತಲೆಯಲ್ಲಿ, ಪದಂ — ಕಾಲು, ನಿಹಿತಂ — ಸ್ಥಾಪಿಸಲ್ಪಟ್ಟಿತು. ರಣೋನ್ಮುಖೇನ— ಯುದ್ಧಕ್ಕೆ ಅಭಿಮುಖನಾದ, ಮಯಾ - ನನ್ನಿಂದ, ಸಂಗ್ರಾಮಶಿರಸಿ - ರಣರಂಗದಲ್ಲಿ, ಮೃತ್ಯುಶ್ಚ — ಮರಣವೂ ಕೂಡ, ಅವಾಪ್ತಃ - ಹೊಂದಲ್ಪಟ್ಟಿತು. ಅನ್ಯತ್ಕಿಂ- ಇನ್ನು ಮುಂದೆ ಅವಶಿಷ್ಟವಾದ ಕರ್ತವ್ಯವು ಏನಿದೊ? ಏನೂ ಇಲ್ಲ. ಎಲ್ಲವೂ ಮಾಡಲ್ಪಟ್ಟಿತು. ॥೧೦೫॥

ಇಷ್ಟಾಭೋಗಾನುಮಯಾಭುಕ್ತಾಃ ಪ್ರಾಪ್ತಾಚ ಪರಮಾಗತಿಃ ॥
ದುಃಖಿನೋದುಃಖಮಾಪ್ನುಂತಿ ಪಾರ್ಥಾಸ್ತೇಕೂಟಯೋಧಿನಃ ॥೧೦೬॥

ಮಯಾ-ನನ್ನಿಂದ, ಇಷ್ಟಾಃ— ಇಚ್ಛೆಗೆ ವಿಷಯಗಳಾದ, ಭೋಗಾಃ—ವಿಷಯ ಭೋಗಗಳು, ಭುಕ್ತಾಃ—ಅನುಭವಿಸಲ್ಪಟ್ಟವು; ಪರಮಾ-ಉತ್ತಮವಾದ, ಗತಿಃ- ವೀರಸ್ವರ್ಗರೂಪವಾದ ಗತಿಯು, ಪ್ರಾಪ್ತಾ- ಹೊಂದಲ್ಪಟ್ಟಂತೆ, ದುಃಖಿನಃ-

ಹುಟ್ಟಿದಂದಿನಿಂದಲೂ ದುಃಖವುಳ್ಳ, ಕೂಟಯೋಧಿನಃ-ಕಪಟವಾದ ಯುದ್ಧವುಳ್ಳ, ತೇಪಾರ್ಥಾಃ-ಆ ಪಾಂಡವರು, ದುಃಖಂ-ದುಃಖವನ್ನು, ಆಪ್ಸ್ಯಂತಿ— ಮುಂದೆಯೂ ಹೊಂದುವರು. ॥೧೦೬॥

ಚಂದ್ರಸೂರ್ಯನಿಭೈಃ ಶೂರೈರ್ಧಾರ್ಮಿಕೈಃ ಸದ್ಭಿರುಜ್ಝಿತಾ ।
ಕೇವಲಾ ರತ್ನಹೀನೇಯಂ ಪಾಂಡವೈರ್ಭುಜ್ಯತಾಂ ಮಹೀ ॥೧೦೭॥

ಚಂದ್ರಸೂರ್ಯನಿಭೈಃ— ಚಂದ್ರ ಸೂರ್ಯರಿಗೆ ಸದೃಶರಾದ, ಧಾರ್ಮಿಕೈಃ—ಧರ್ಮನಿರತರಾದ, ಶೂರೈಃ—ಪರಾಕ್ರಮಿಗಳಿಂದ, ಸದ್ಭಿಃ— ಸಜ್ಜನರಿಂದ, ಉಜ್ಝಿತಾ – ರಹಿತವಾದ, ರತ್ನಹೀನಾ -- ರತ್ನಗಳಿಲ್ಲದ, ಕೇವಲಾ - ಮಣ್ಣು ಮಾತ್ರ ಉಳಿದಿರುವ, ಇಯಂ ಮಹೀ — ಈ ಭೂಮಿಯು, ಪಾಂಡವೈಃ — ಪಾಂಡವರಿಂದ, ಭುಜ್ಯತಾಂ — ಅನುಭವಿಸಲ್ಪಡಲಿ ॥೧೦೭॥

ಇತ್ಯುಕ್ತವತ್ಯೇವ ನೃಪೇಸುರೇಶೈಃ ಪ್ರಸೂನವೃಷ್ಟಿರ್ವಿಹಿತಾಪಪಾತಹ ॥
ತಾಮೇವ ಬುದ್ಧಿಂಧೃತರಾಷ್ಟ್ರಸೂನೋಃ ಕೃತ್ವಾದೃಢಾಂಪಾತಯಿತುಂತಮೋಂsಧೇ ॥೧೦೮॥

ಅವ—ಮರಣ ಕಾಲದಲ್ಲಿ ಭಗವನ್ನಿಂದೆಯನ್ನು ಮಾಡುತ್ತಿರುವ ದುರ್ಯೋಧನನಲ್ಲಿ ಪುಷ್ಪವೃಷ್ಟಿಆಯಿತು ಎಂದು ಪುರಾಣದಲ್ಲಿ ಪ್ರಸಿದ್ಧಿಯಿದೆ, ಅದರ ತಾತ್ಪರ್ಯವನ್ನು ಹೇಳುತ್ತಾರೆ.

ಧೃತರಾಷ್ಟ್ರಸೂನೋಃ-ದುರ್ಯೋಧನನ, ತಾಮೇವ ಬುದ್ಧಿಂ-ಸ್ವಂತೋತ್ತಮೋನಾಮ ಎಂಬುದಾಗಿ ಪೂರ್ವೋಕ್ತವಾದ ಬುದ್ಧಿಯನ್ನೇ, ದೃಢಾಂ — ನಿಶ್ಚಿತವಾದದ್ದನ್ನಾಗಿ, ಕೃತ್ವಾ — ಮಾಡಿ, ತಮೋಽಂಧೇ — ಅಂದಂತಮಸ್ಸಿನಲ್ಲಿ, ಪಾತಯಿತುಂ—ಹಾಕುವುದಕ್ಕೋಸ್ಕರ, ಇತಿ – ಈ ರೀತಿಯಾಗಿ, ಉಕ್ತವತಿ – ಹೇಳುತ್ತಿರುವ, ನೃಪೇ —ದುರ್ಯೋಧನನಲ್ಲಿ, ~~ಸುರೇಶೈಃ — ದೇವಶ್ರೇಷ್ಠರಿಂದ, ವಿಹಿತಾ – ಹಾಕಲ್ಪಟ್ಟ, ಪ್ರಸೂನವೃಷ್ಟಿಃ — ಪುಷ್ಪಗಳ ಮಳೆಯು, ಪಪಾತ—ಬಿದ್ದಿತು.~~ ಹ – ಪ್ರಸಿದ್ಧವು. ॥೧೦೮॥

ಸಂಭಾವಯತ ಆತ್ಮಾನಂ ವಾಸುದೇವಂ ವಿನಿಂದತಃ ॥
ತತ್ಪರಾಂಶ್ಚ ಕಥಂ ನಸ್ಯಾತ್ತಮೋಽಂತೇಚವಿಶೇಷತಃ ॥೧೦೯॥

ವಿಶೇಷತಃ – ವಿಶೇಷಾಕಾರವಾಗಿ, ಅಂತೇ-ಮರಣ ಕಾಲದಲ್ಲಿ, ಆತ್ಮಾನಂ – ತನ್ನನ್ನು, ಸಂಭಾವಯತಃ – ಸ್ತೋತ್ರ ಮಾಡತಕ್ಕ, ವಾಸುದೇವಂ -- ಶ್ರೀಕೃಷ್ಣನನ್ನು, ತತ್ಪರಾಂಶ್ಚ – ಶ್ರೀಕೃಷ್ಣನ ಭಕ್ತರಾದ ಪಾಂಡವರನ್ನೂ ಕೂಡ, ವಿನಿಂದತಃ-ನಿಂದಿಸತಕ್ಕ ದುರ್ಯೋಧನನಿಗೆ, ಅಂತೇ – ಕೊನೆಯಲ್ಲಿ, ತಮಃ-ಅಂಧಂತಮಸ್ಸು, ಕಥಂ ಹೇಗೆ, ನಸ್ಯಾತ್ - ಆಗದಿರದು, ಸ್ಯಾದೇವ – ಆಗಿಯೇ ಆಗುವುದು. ॥೧೦೯॥

ಯದೈಕೈಕಮಲಂ ತತ್ರದುಃಖಾಧಿಕ್ಯಂ ಸಮುಚ್ಚಯಾತ್ ॥
ಇತಿ ತತ್ಕಾರಯಿತ್ವೇಶ ಆಹವೋಘಂ ತವಾಖಿಲಂ ॥೧೧೦॥

ಯದಾ— ಯಾವಾಗ, ತತ್ರ—ಆ ಅಂಧಂತಮಸ್ಸಿನ ಪ್ರಾಪ್ತಿ ಮಾಡಿಕೊಡುವ ವಿಷಯದಲ್ಲಿ, ಏಕೈಕಂ — ವಿಷ್ಣು ನಿಂದಾ, ವೈಷ್ಣವನಿಂದಾ, ಆತ್ಮಪ್ರಶಂಸೆ ಇತ್ಯಾದಿ ಪಾಪಗಳಲ್ಲಿ ಒಂದೊಂದೂ ಕೂಡ, ಅಲಂ – ಸಮರ್ಥವಾದದ್ದೋ, ತದಾ-ಆಗ, ಸಮುಚ್ಚಯಾತ್ – ವಿಷ್ಣು ನಿಂದಾದಿಗಳ ಮೇಲನದಿಂದ, ದುಃಖಾಧಿಕ್ಯಂ—ತಮಸ್ಸಿನಲ್ಲಿ ದುಃಖೋದ್ರೇಕವು, ಭವತಿ-ಆಗುತ್ತದೆ, ಇತಿ — ಈ ಕಾರಣದಿಂದ, ಈಶಃ – ಸ್ವಾಮಿಯಾದ ಶ್ರೀಕೃಷ್ಣನು, ತತ್ – ಆ ವಿಷ್ಣು ನಿಂದಾದಿಗಳನ್ನು,

ಕಾರಯಿತ್ವಾ – ಮಾಡಿಸಿ, ತವ ನಿನ್ನ, ಅಖಿಲಂ – ಇಷ್ಟಪೂರ್ತಾದಿಗಳೆಲ್ಲವೂ, ಮೋಘಂ – ವ್ಯರ್ಥವು, ಫಲಪ್ರದವಾಗುವದಿಲ್ಲ, ಇತಿ ಆಹ—ಎಂದು ಹೇಳಿದನು. ॥೧೧೦॥

ನೃಶಂಸಸ್ಯಕೃತಘ್ನಸ್ಯ ಗುಣ ವದ್ದ್ವೇಷಿಣಸ್ಸದಾ ।
ಯದಿ ಧರ್ಮಫಲಂ ಧ್ವಾಂತಂ ಸೂರ್ಯವತ್ಸ್ಯಾತ್ಪ್ರಕಾಶಕಂ ॥೧೧೧॥

ನೃಶಂಸಸ್ಯ — ವಿಷದಾನಾದಿನಾ ಹಿಂಸಕನಾದ. ಕೃತಘ್ನಸ್ಯ — ಮಾಡಿದ ಉಪಕಾರವನ್ನು ಸ್ಮರಿಸದಿರುವ, ಸದಾ — ಯಾವಾಗಲೂ, ಗುಣವದ್ದ್ವೇಷಿಣಃ – ಗುಣವುಳ್ಳ ಪಾಂಡವರನ್ನು ದ್ವೇಷಿಸುವ, ಇಂತಹನಿನಗೂ, ಧರ್ಮಫಲಂ ಯದಿ ಸ್ಯಾತ್– ಧರ್ಮದ ಫಲವುಪ್ಪಾಪ್ತವಾಗುವುದಾದರೆ, ಧ್ವಾಂತಂ— ಕತ್ತಲೆಯು, ಸೂರ್ಯವತ್ – ಸೂರ್ಯನಂತೆ, ಪ್ರಕಾಶಕಂಸ್ಯಾತ್ – ಬೆಳಕನ್ನುಂಟು ಮಾಡವುದಾಗಲಿ, ॥೧೧೧॥

ವದನ್ವಃಪುನರಿದಂ ಧರ್ಮತೋ ಹತ ಇತ್ಯಪಿ ॥
ಖ್ಯಾಪಯಾಮಾಸ ಭಗವಾನ್ ಜನೇ ನಿಜಜನೇಷ್ಟದಃ ॥೧೧೨॥

ನಿಜಜನೇಷ್ಟದಃ – ತನ್ನ ಭಕ್ತ ಜನರಿಗೆ ಅಭೀಷ್ಟವನ್ನು ಕೊಡತಕ್ಕ, ಭಗವಾನ್ – ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು, ಇದಂ—ಈ ಹಿಂದೆ ಹೇಳದ ಮಾತನ್ನೇ, ಪುನಃ ಪುನಃ – ಮತ್ತೂ, ಮತ್ತೂ, ವದನ್ ಸನ್—ಹೇಳತಕ್ಕವನಾಗಿ, ಧರ್ಮತಃ – ಧರ್ಮದಿಂದಲೇ, ಹತಃ – ಭೀಮನಿಂದ ದುರ್ಯೋಧನನು ಕೊಲ್ಲಲ್ಪಟ್ಟನು, ಇತಿ – ಎಂಬುದಾಗಿ, ಜನೇ – ಭಕ್ತ ಜನರಲ್ಲಿ, ಖ್ಯಾಪಯಾಮಾಸ—ಪ್ರಕಟಪಡಿಸಿದನು. ॥೧೧೨॥

ಪ್ರಖ್ಯಾಪಿತೇವಾಸುದೇವೇನ ಧರ್ಮೇಸತಾಂ ಸರ್ವೇಷಾಂ ಹೃದ್ಯಮಾಸೀತ್ಸಮಸ್ತಂ ।
ಹತಂಚ ಧರ್ಮೇಣ ನೃಪಂ ವ್ಯಜಾನನ್ಪಾಪೋಽಯಮಿತ್ಯೇವ ವಿನಿಶ್ಚಿತಾರ್ಥಾಃ ॥೧೧೩॥

ವಾಸುದೇವೇನ-ಶ್ರೀಕೃಷ್ಣನಿಂದ, ಧರ್ಮೇ–ಧರ್ಮವು, ಪ್ರಖ್ಯಾಪಿತೇ ಸತಿ–ಪ್ರಸಿದ್ಧಿಪಡಿಸಲ್ಪಡುತ್ತಿರಲು, ಸರ್ವೇಷಾಂ ಸತಾಂ – ಎಲ್ಲಾ ಸಜ್ಜನರಿಗೂ, ಸಮಸ್ತಂ– ಎಲ್ಲವೂ, ಹೃದ್ಯಮಾಸೀತ್ —ಹೃದಯಸ್ಪರ್ಶಿಯಾಯಿತು. ಅಯಂ — ಈ ದುರ್ಯೋಧನನು, ಪಾಪ ಏವ – ಪಾಪಿಷ್ಠನೇ, ಇತಿ – ಎಂದು, ವಿನಿಶ್ಚಿತಾರ್ಥಾಃ– ವಿಶೇಷವಾಗಿ ನಿಶ್ಚಿತವಾದ ಅಭಿಪ್ರಾಯವುಳ್ಳ ಸಜ್ಜನರು, ನೃಪಂ – ದುರ್ಯೋಧನನನ್ನು, ಧರ್ಮೇಣ– ಧರ್ಮದಿಂದ, ಹತಂ –ಕೊಲ್ಲಲ್ಪಟ್ಟವನನ್ನಾಗಿ, ವ್ಯಜಾನನ್– ತಿಳಿದರು, ॥೧೧೩॥

ಯುಧಿಷ್ಠಿರೋಽಪಾಪದರ್ಶೀ ಸದೈವ ಸಸಂಶಯೋಽಭೂತ್ಸುಮನೋಭಿವೃಷ್ಟ್ಯಾ ।
ಸ್ನೇಹಾದ್ದ್ರೌಣಿಃ ಸಂಜಯೋ ರೌಹಿಣೇಯೋ ದ್ರೌರ್ಯೋಧನಾತ್ಪಾಪಮಿತ್ಯೇವಚೋಚುಃ ॥೧೧೪॥

ಸುಮನೋಭಿವೃಷ್ಟ್ಯಾ—ದೇವತೆಗಳು ಮಾಡಿದಪುಷ್ಪವೃಷ್ಟಿಯಿಂದ, ಅಪಾಪದರ್ಶೀ–ದುರ್ಯೋಧನನು ಪಾಪಿಷ್ಠನಲ್ಲವೆಂದು ನೋಡತಕ್ಕಯುಧಿಷ್ಠಿರನು, ಸದೈವ– ಯಾವಾಗಲೂ, ಸಸಂಶಯಃ – ಸಂದೇಹದಿಂದ ಯುಕ್ತನು, ಅಭೂತ್ — ಆದನು. ದ್ರೌರ್ಯೋಧನಾತ್–ದುರ್ಯೋಧನನಲ್ಲಿರುವ, ಸ್ನೇಹಾತ್–ಪ್ರೀತಿಯಿಂದ, ದ್ರೌಣಿಃ– ಅಶ್ವತ್ಥಾಮನು,ಸಂಜಯಃ– ಸಂಜಯನು, ರೌಹಿಣೇಯಃ– ಬಲರಾಮನು, ಪಾಪಮಿತ್ಯೇವ— ದುರ್ಯೋಧನವಧವನ್ನು ಅಧರ್ಮವೆಂಬುದಾಗಿಯೇ, ಊಚುಃ– ಹೇಳಿದರು. ॥೧೧೪॥

ತತಃ ಕೃಷ್ಣಃ ಪಾಂಡುಪಾಂಚಾಲಕೈಸ್ತೈರ್ಭೃಶಂ ನದದ್ಭಿರ್ಹರ್ಷಿತೈಃ ಸಮೇತಃ ॥
ಯಯೌ ವಿರಿಂಚೇಶಸುರೇಂದ್ರಮುಖ್ಯೈಃ ಸಂಪೂಜಿತ ಸ್ತೈಶ್ಚರಣಾಂಗಣಾತ್ಸ್ಮಯನ್ ॥೧೧೫॥

ತತಃ – ಅನಂತರ, ಕೃಷ್ಣಃ ಶ್ರೀಕೃಷ್ಣನು, ಹೃಷಿತೈಃ – ಜಯವು ಸಿಕ್ಕಿದ ಕಾರಣ ಸಂತೋಷಗೊಂಡ, ಭೃಶಂ— ಚೆನ್ನಾಗಿ, ನದದ್ಭಿಃ – ಗರ್ಜಿಸುತ್ತಿರುವ, ತೈಃ – ಆದಾವ, ಪಾಂಡುಪಾಂಚಾಲಕೈಃ – ಪಾಂಡವರೂ, ಪಾಂಚಾಲರೂ ಇವರಿಂದ, ಸಮೇತಃಸನ್ – ಕೂಡಿದವನಾಗಿ, ವಿರಿಂಚೇಶ ಸುರೇಂದ್ರ ಮುಖ್ಯೈಃ–ಬ್ರಹ್ಮನು, ರುದ್ರನು ದೇವೇಂದ್ರನೂ–ಇವರೇ ಪ್ರಧಾನ ರಾಗಿ ಉಳ್ಳವರಿಂದ, ತೈಶ್ಚ – ಆ ಪಾಂಡು ಪಾಂಚಾಲಕರಿಂದಲೂ ಕೂಡ, ಸಂಪೂಜಿತಸ್ಸನ್ –ಪೂಜಿಸಿಕೊಳ್ಳಲ್ಪಟ್ಟವನಾಗಿ, ಸ್ಮಯನ್ಸನ್ — ಆಶ್ಚರ್ಯವನ್ನ ಹೊಂದಿಸಿಕೊಡುವವನಾಗಿ, ರಣಾಂಗಣಾತ್ – ಯುದ್ಧ ಭೂಮಿಯಿಂದ, ಯಯೌ– ಹೋದನು. ॥೧೦೫॥

ಭಾ. ಅ. ೧೦೨ — ೧೧೫ ಶ್ರೀಕೃಷ್ಣನು ಮುಂದುವರಿಸುತ್ತಾ ಪಾಂಡವರ ಪ್ರಯತ್ನದಲ್ಲಿ, ಸ್ವಭಾವದಲ್ಲಿ ಯಾವ ದೋಷವೂ ಇಲ್ಲ. ಅವರು ಸ್ವಾಭಾವಿಕವಾಗಿ ಗುಣಗಳಿಂದ ಶ್ರೇಷ್ಠರಾದವರು; ನನ್ನನ್ನು ಆಶ್ರಯಿಸಿದವರು. ಅಂಥ ಪಾಂಡವರಲ್ಲಿ ಕಿಂಚಿತ್ ದೋಷವನ್ನಾದರೂ ಯಾರು ಹೇಳಿಯಾರು ? ಶಕ್ಯವಿಲ್ಲ. ಆದರೆ ಅದಕ್ಕೆ ವಿರುದ್ಧವಾಗಿ, ಸ್ವಾಭಾವಿಕವಾಗಿಯೇ ಪಾಪಿಷ್ಠನಾದ ನೀನು ಸ್ವತಃ ಸದಾ ಪಾಪಕಾರ್ಯಗಳನ್ನು ಮಾಡುವದಲ್ಲದೇ ಧರ್ಮಮಾರ್ಗದಲ್ಲಿರುವ ಭೀಷ್ಮಾದಿಗಳಂಥ ಸಜ್ಜನರನ್ನೂ ಕೂಡ ಪಾಪಕಾರ್ಯ ಪ್ರವೃತ್ತಿಯಲ್ಲಿ ದೂಡಿ, ಅದೆಲ್ಲದರ ಫಲವಾಗಿ ಅತ್ಯಂತ ದುಃಖಿಯುಕ್ತವಾದ ಅಂಧಂ ತಮಸ್ಸನ್ನೇ ಹೊಂದುವಿ ಎಂದು ಅಂದನು. ಆಗ ದುರ್ಯೋಧನನು ನನ್ನಷ್ಟು ಉತ್ತಮ ಮರಣಹೊಂದಿದವನು ಯಾವನಿದ್ದಾನೆ? ನನ್ನ ದೋಷವೇನಿದೆ ? ನಾನು ಉತ್ತಮ ಜೀವನವನ್ನು ನಡಿಸಿರುವೆ. ಬೇಕಾದಷ್ಟು ವಿಷಯಭೋಗಮಾಡಿರುವೆ; ಯಜ್ಞಾದಿ ಸತ್ಕರ್ಮಗಳನ್ನು ಮಾಡಿರುವೆ; ಅನ್ನಛತ್ರ ಅರವಟ್ಟಿಗೆಗಳನ್ನು ಇಡಿಸಿ ಜನರಿಗೆ ಉಪಕಾರ ಮಾಡಿರುವೆ; ವೈರಿಗಳ ತಲೆಗಳನ್ನು ಪೆಟ್ಟಿಮೆರೆದಾಡಿರುವೆ. ಯುದ್ಧಭೂಮಿಯಲ್ಲಿ ಮರಣಹೊಂದುತ್ತಿರುವೆ. ಆದ್ದರಿಂದ ಉತ್ತಮಗತಿಯನ್ನು ಹೊಂದಿದಂತೆಯೇ. ಹೀಗೆ ಜೀವನದಲ್ಲಿ ಏನೇನು ಸಾಧಿಸಬೇಕೋ ಅದೆಲ್ಲವನ್ನೂ ಸಾಧಿಸಿರುವೆ. ಆವರೆ ಮೊವಲಿನಿಂವಲೂ ದುಃಖಿಭಾಗಿಗಳೇ ಆದ ಆ ಪಾಂಡವರು ಕಪಟಯುದ್ಧ ಮಾಡಿದವರು. ಕೊನೆಗೂ ದುಃಖವನ್ನೇ ಹೊಂದುತ್ತಾರೆ. ಚಂದ್ರ–ಸೂರ್ಯರಂತೆ ಹೊಳೆಯುತ್ತಿದ್ದ ಪರಾಕ್ರಮಿಗಳು, ಧಾರ್ಮಿಕರು ಎಂಬ ರತ್ನಗಳು, ಭೌತಿಕ ರತ್ನಗಳು ಸಮೃದ್ಧವಾಗಿದ್ದ ಭೂಮಿಯನ್ನು ನಾನು ಅನುಭೋಗಿಸಿರುವೆ. ಅದೆಲ್ಲದರಿಂದ ಹೀನವಾದ ಕೇವಲ ಮಣ್ಣಿರುವ ಭೂಮಿಯು ಪಾಂಡವರ ಪಾಲಿಗೆ ಇದೆ. ಉಣ್ಣಲಿ ಅವರು' ಎಂದು ಶ್ರೀಕೃಷ್ಣನಿಗೆ ಹೇಳುತ್ತಿರುವಂತೆಯೇ ಅವನ ಈ ದುರ್ಬುದ್ಧಿಯೇ ಅವನಿಗೆ ಸ್ಥಿರವಾಗಿರಲಿ, ಅದರಿಂದ ಅವನು ಅಂಧಂತಮಸ್ಸಿಗೆ ಬೀಳಲಿ ಎಂಬ ದೃಷ್ಟಿಯಿಂದ ದೇವತೆಗಳು ಅವನ ತಲೆಯ ಮೇಲೆ ಪುಷ್ಪವೃಷ್ಟಿಯನ್ನು ಮಾಡಿದರು. ಮರಣಕಾಲದಲ್ಲಿಯೂ ಕೂಡ ತನ್ನನ್ನೇ ಪ್ರಶಂಸಿಸಿಕೊಳ್ಳುವ, ಶ್ರೀಕೃಷ್ಣನನ್ನು, ಶ್ರೀಕೃಷ್ಣಭಕ್ತರಾದ ಪಾಂಡವರನ್ನು ನಿಂದಿಸುವ ದುರುಳನಿಗೆ ಅಂಧಂತಮಸ್ಸು ಆಗಲೇಬೇಕಲ್ಲವೇ. ಅದು ತಪ್ಪಲು ಸಾಧ್ಯವೇ ಇಲ್ಲ. ಮೇಲೆ ಹೇಳಿದ ದೋಷಗಳಲ್ಲಿ ಒಂದೊಂದೂ ತಮಸ್ಸಿಗೆ ಕಾರಣಗಳು. ಅಂದಮೇಲೆ ಎಲ್ಲವೂ ಇರುವಾಗ ತಮಸ್ಸಿನಲ್ಲಿ ಅತ್ಯಧಿಕ ದುಃಖವನ್ನು ತಂದು ಕೊಡುತ್ತವೆ. ಆದ್ದರಿಂದ ಅವು ಸ್ಥಿರವಾಗಿ ಅವನಿಗಿದ್ದು ದುಷ್ಟರಲ್ಲಿ ಶ್ರೇಷ್ಠನಾದ ಕಲಿಯರೂಪನಾದ ಅವನು ಆ ಅಧಿಕದುಃಖವನ್ನು ಹೊಂದುವದಕ್ಕಾಗಿ ಪುಷ್ಪವೃಷ್ಟಿಯನ್ನು ಈಗ, ಹಿಂದೆ ಎಲ್ಲ ದುಷ್ಟಕಾರ್ಯಗಳನ್ನು ಅವನಿಂದ ಭಗವಂತನಾದ ಶ್ರೀಕೃಷ್ಣನು ಮಾಡಿಸಿ ಆ ದುರ್ಯೋಧನನಿಗೆ ನೀನು ಮಾಡಿದ ಸತ್ಕರ್ಮಗಳೇನಾದರೂ ಇದ್ದದ್ದು ಅದೆಲ್ಲವೂ ಫಲಪ್ರದವಲ್ಲ. ನಿನ್ನಂಥ ವಿಷ ಅಗ್ನಿ ಇತ್ಯಾದಿಗಳಿಂದ ಪರಘಾತಕರಾದ, ಉಪಕಾರ ಮಾಡಿದವರನ್ನು ಸ್ಮರಿಸದಿರುವ, ಗುಣಗಳಾದವರಲ್ಲಿ ದ್ವೇಷಿಗಳಾದ ಜನರಿಗೆ ಒಂದು ವೇಳೆ ಧರ್ಮವು ಫಲಪ್ರದವಾಗುವದಾದರೆ ಕತ್ತಲೆಯೂ ಸೂರ್ಯನಂತೆ ಪ್ರಕಾಶಕವಾಗಬೇಕಾದೀತು. (ಕತ್ತಲೆಯು ಹೇಗೆ ಪ್ರಕಾಶಕವಾಗಲು ಶಕ್ಯವಿಲ್ಲವೋ ಆದೇ ರೀತಿ ನಿನ್ನಂಥ ಜನರಿಗೆ ಧರ್ಮವು ಫಲಪ್ರದವಾಗದು) ಎಂದು ಹೇಳಿದನು. ಭೀಮನು ಧರ್ಮದಿಂದಲೇ ದುರ್ಯೋಧನನ ಸಂಹಾರ ಮಾಡಿದ್ದಾನೆ ಎಂದು ಶ್ರೀಕೃಷ್ಣನು ಪುನಃ ಪುನಃ ಹೇಳುತ್ತಾ ಸಾತ್ವಿಕ ಜನರಿಗೆ ತಿಳಿಯಪಡಿಸಿದನು. ಆಗ ಸಜ್ಜನರೆಲ್ಲರೂ ಬಹು ಸಂತೋಷಪಟ್ಟರು ಶ್ರೀಭೀಮರು ಧರ್ಮದಿಂದಲೇ ಸಂಹರಿಸಿ, ದ್ದಾರೆ ಎಂದೂ ದುರ್ಯೋಧನನು ಅತಿ ನೀಚನೆಂಬುದನ್ನೂ ಮನಗಂಡರು. ಧರ್ಮರಾಜನು ಮಾತ್ರ ದುರ್ಯೋಧನನನ್ನು ಪಾಪಿಯೆಂದು ತಿಳಿಯದೇ ಪುಷ್ಪವೃಷ್ಟಿಯಿಂದಲಂತೂ ಬಹು ಸಂಶಯವುಳ್ಳವನಾದನು. ಬಲರಾಮನು, ಅಶ್ವತ್ಥಾಮ ಸಂಜಯರು ಮಾತ್ರ ದುರ್ಯೋಧನನ ಬಗೆಗೆ ಸ್ನೇಹದಿಂದಾಗಿ ಭೀಮರು ಅಧರ್ಮದಿಂದ ಸಂಹರಿಸಿದ್ದು ಎಂದು ಹೇಳುತ್ತಿದ್ದರು. ಶ್ರೀಕೃಷ್ಣನು ಯುದ್ಧದಲ್ಲಿಯೂ ಜಯದಿಂದ ಬಹು ಸಂತೋಷಭರಿತರಾದ ಪಾಂಡವರು, ಪಾಂಚಾಲರು ಇವರಿಂದ ಕೂಡಿಕೊಂಡು ಅವರಿಂದ ಹಾಗು ಬ್ರಹ್ಮರುದ್ರಾದಿ ದೇವತೆಗಳಿಂದ ಪೂಜಿತನಾಗಿ ಯುದ್ಧ ಭೂಮಿಯಿಂದ ಹೊರಟನು.

ತತಃ ಶ್ರುತ್ವಾ ಸಂಜಯಾದ್ದುಃಖತಪ್ತಂ ಸಂಬೋಧಯಿಷ್ಯನ್ಪಿತರಂಯುಯುತ್ಸುಃ ॥
ಕೃಷ್ಣಸ್ಯ ರಾಜ್ಞಶ್ಚ ಮತೇಽನುಯಾತೋ ಜಗಾಮಚಾನ್ವೇವ ಜನಾರ್ದನಶ್ಚ ॥೧೧೬॥

ತತಃ – ಅನಂತರ, ಸಂಜಯಾತ್ – ಸಂಜಯನಿಂದ, ಶ್ರುತ್ವಾ - ಮಗನಪಾತವನ್ನು ಕೇಳಿ, ದುಃಖತಪ್ತಂ— ದುಃಖದಿಂದ ಸಂತಪ್ತನಾದ, ಪಿತರಂ – ತಂದೆಯಾದ ಧೃತರಾಷ್ಟ್ರನನ್ನು, ಯುಯುತ್ಸುಃ– ವೈಶ್ಯಕನ್ಯೆಯಲ್ಲಿ ಧೃತರಾಷ್ಟ್ರನಿಂದ ಹುಟ್ಟಿದ ಯುಯುತ್ಸುಎಂಬವನು, ಸಂಬೋಧಯಿಷ್ಯನ್ – ಬೋಧಿಸಲು ಇಚ್ಛೆಉಳ್ಳವನಾಗಿ, ಕೃಷ್ಣಸ್ಯ— ಶ್ರೀಕೃಷ್ಣನ, ರಾಜ್ಞಶ್ಚ— ಧರ್ಮರಾಜನ, ಮತೇ–ಸಮ್ಮತಿಯಿಂದ, ಅನುಯಾತಃ– ರಣರಂಗದಿಂದ ಹೋಗತಕ್ಕ ದುರ್ಯೋಧನನ ಪತ್ನಿಯರನ್ನನುಸರಿಸಿ ಹಸ್ತಿನಾವತಿಗೆ ಹೋದನು,ಜನಾರ್ದನಶ್ಚ – ಶ್ರೀಕೃಷ್ಣನೂ ಕೂಡ, ಅನ್ವೇವ– ಯುಯುತ್ಸುವನ್ನನುಸರಿಸಿಯೇ, ಜಗಾಮ– ಹೋದನು. ॥೧೧೬॥

ಧರ್ಮಯುಕ್ತೈಶ್ಚತತ್ತ್ವಾರ್ಥೈರ್ಲೋಕವೃತ್ತಾನುದರ್ಶಕೈಃ ॥
ವಾಕ್ಯೈರಾಜಾನಮಾಶ್ವಾಸ್ಯಪಾರ್ಥಾಯಾತ್ಪ್ರಹರ್ಷನ್ಪುನರ್ಹರಿಃ ॥೧೧೭॥

ಧರ್ಮಯುಕ್ತೈಃ – ಧರ್ಮಶಾಸ್ತ್ರೋಕ್ತಗಳಾದ, ತತ್ತ್ವಾರ್ಥೈಃ—ಯಥಾರ್ಥಾಭಿಪ್ರಾಯವುಳ್ಳ, ಲೋಕವೃತ್ತಾನುದರ್ಶಕೈಃ – ಲೋಕದಲ್ಲಿ ಕೆಲವು ಮಕ್ಕಳು ತಂದೆಗಿಂತ ಮೊದಲೇ ಹೋಗುತ್ತಾರೆ, ಕೆಲವರು ಮಂತ್ರೆ ಹೋಗುತ್ತಾರೆ ಎಂಬ ಲೋಕ ಪ್ರವೃತ್ತಿಯನ್ನು ತೋರಿಸತಕ್ಕ, ವಾಕ್ಯೈಃ – ಮಾತುಗಳಿಂದ, ರಾಜಾನಂ-ಧೃತರಾಷ್ಟ್ರನನ್ನು. ಆಶ್ವಾಸ್ಯ—ಸಮಾಧಾನ ಪಡಿಸಿ, ಪುನಃ—ಮತ್ತೆ, ಹರಿಃ–ಶ್ರೀಕೃಷ್ಣನು, ಪಾರ್ಥಾನ್–ಪಾಂಡವರನ್ನು ಕುರಿತು, ಪ್ರಾಯಾತ್ – ಹೋದನು. ॥೧೧೭॥

ಕಾಲಾನುಸಾರತೋದೇವಾಂಶ್ಚೋಪಸಂಹರ್ತುಮಚ್ಯುತಃ ॥
ಯಯೌ ಸಪಾರ್ಥಶ್ಚೈನೇಯಃ ಕುರೂಣಾಂಶಿಬಿರಂನಿಶಿ ॥೧೧೮॥

ಅಚ್ಯುತಃ – ಶ್ರೀಕೃಷ್ಣನು, ಕಾಲಾನುಸಾರತಃ - ಕಲಿಕಾಲವನ್ನನುಸರಿಸಿ', ದೇವಾನ್ —ಭೂಮಿಯಲ್ಲಿ ಹುಟ್ಟಿರುವ ಧೃಷ್ಟದ್ಯುಮ್ನಾದಿ ದೇವತೆಗಳನ್ನು, ಉಪಸಂಹರ್ತುಂ— ಕೊಲ್ಲುವದಕ್ಕಾಗಿ, ಸಪಾರ್ಥಶ್ಚೈನೇಯಸ್ತನ್ – ಅರ್ಜುನ ಮತ್ತು ಸಾತ್ಯಕಿಯಿಂದ ಕೂಡಿದವನಾಗಿ, ಕುರೂಣಾಂ—ಕುರುಗಳ, ಶಿಬಿರಂ–ಸೈನ್ಯದ ವಾಸಸ್ಥಾನವನ್ನು ಕುರಿತು, ನಿಶಿ—ರಾತ್ರಿಯಲ್ಲಿ ಯಯೌ—ಹೋದನು. ॥೧೧೮॥

ತದೈವಹಾರ್ದಿಕ್ಯಕೃಪಾನ್ವಿತೋಽಯಾತ್ಸುಯೋಧನಂ ದ್ರೌಣಿರಮುಂಶಯಾನಂ ॥
ಪ್ರಭಗ್ನಸಕ್ಥಂ ಶ್ವಸೃಗಾಲಭೂತೈಃ ಸಂಭಕ್ಷ್ಯಮಾಣಂ ದದೃಶೇಶ್ವಸಂತಂ ॥೧೧೯॥

ತದೈವ – ಕೃಷ್ಣನು ಕುರುಶಿಬಿರಕ್ಕೆ ಹೋದಾಗಲೇ, ಹಾರ್ದಿಕ್ಯಕೃಪಾನ್ವಿತಃ— ಕೃತವರ್ಮ ಮತ್ತು ಕೃಪಾಚಾರ್ಯರಿಂದ ಕೂಡಿದ, ದ್ರೌಣಿಃ—ಅಶ್ವತ್ಥಾಮನು, ಶಯಾನಂ—ಮಲಗಿರುವ, ಸುಯೋಧನಂ – ದುರ್ಯೋಧನನನ್ನು ಕುರಿತು, ಅಯಾತ್ – ಹೋದನು, ಶ್ವಸೃಗಾಲಭೂತೈಃ – ನಾಯಿಗಳೂ, ನರಿಗಳೂ, ಇತರ ಪ್ರಾಣಿಗಳೂ ಇವುಗಳಿಂದ, ಸಂಭಕ್ಷ್ಯಮಾಣಂ—ಚೆನ್ನಾಗಿ ತಿನ್ನಲ್ಪಡತಕ್ಕ, ಶ್ವಸಂತಂ – ಶ್ವಾಸವನ್ನು ಬಿಡುತ್ತಿರುವ, ಪ್ರಭಗ್ನಸಕ್ಥಂ – ಮುರಿದಿರುವ ಕಟಿಪ್ರದೇಶದ ಸಂಧಿಯುಳ್ಳ ದುರ್ಯೋಧನನನ್ನು, ದದೃಶೇ—ಕಂಡನು. ॥೧೧೯॥

ಸದುಃಖಶೋಕಾಭಿಹತೋವಿನಿಂದ್ಯ ಪಾರ್ಥಾನ್ಮಯಾಭೂಪ ಕಿಮುತ್ರಕಾರ್ಯಂ ॥
ಇತ್ಯಾಹ ನಿಷ್ಪಾಂಡವತಾಂ ಕುರುಷ್ವೇತ್ಯಮುಂ ವ್ಯಧಾತ್ಪಾಂಸ್ವಭಿಷೇಕಿಣಂ ನೃಪಃ ॥೧೨೦॥

ದುಃಖಶೋಕಾಭಿಹತಃ – ದುಃಖಶೋಕಗಳಿಂದ ಸಂತಪ್ತನಾದ, ಸಃ – ಆ ಅಶ್ವತ್ಥಾಮನು, ಪಾರ್ಥಾನ್ ವಿನಿಂದ್ಯ— ಪಾಂಡವರನ್ನು ನಿಂದಿಸಿ, ಹೇಭೂಪ – ಎಲೋ ರಾಜನೇ, ಮಯಾ – ನನ್ನಿಂದ, ಅತ್ರ—ಈ ಸಮಯದಲ್ಲಿ ಕಿಂಕಾರ್ಯಂ – ಏನು ಮಾಡತಕ್ಕದ್ದು ? ಇತಿ – ಎಂದು, ಆಹ – ಹೇಳಿದನು, ನೃಪಃ – ದುರ್ಯೋಧನನು, ನಿಷ್ಪಾಂಡವತಾಂ–ಪಾಂಡವರಿಲ್ಲ ದಿರುವಿಕೆಯನ್ನು, ತ್ವಂ —ನೀನು, ಕುರುಷ್ವ — ಮಾಡು, ಇತಿ – ಈ ಅಭಿಪ್ರಾಯದಿಂದ, ಅಮುಂ – ಈ ಅಶ್ವತ್ಥಾಮ ನನ್ನು, ಪಾಂಸ್ವಭಿಷೇಕಿಣಂ – ಧೂಳಿಗಳಿಂದ ಅಭಿಷಿಕ್ತನನ್ನಾಗಿ, ವ್ಯಧಾತ್ – ಮಾಡಿದನು. ॥೧೨೦॥

ಅವ – ಧೂಳಿಗಳಿಂದ ಅಭಿಷೇಕ ಮಾಡತಕ್ಕ ದುರ್ಯೋಧನನ ಅಭಿಪ್ರಾಯವನ್ನು ಹೇಳುತ್ತಾರೆ.

ಉಚ್ಛಿದ್ಯ ಸಂತತಿಂ ಪಾಂಡೋಃ ಕೃತ್ವಾ ಸ್ವಕ್ಷೇತ್ರ ಸಂತತಿಂ ॥
ತಯಾಭೂರಕ್ಷಣ ಹೃದಾಸೋಽಭಿಷಿಕ್ತಸ್ತ ಥೇತ್ಯಗಾತ್ ॥೧೨೧॥

ಪಾಂಡೋಃ – ಪಾಂಡುರಾಜನ, ಸಂತತಿಂ - ಸಂತಾನವನ್ನು, ಉಚ್ಛಿದ್ಯ – ನಾಶಮಾಡಿ, ಸ್ವಕ್ಷೇತ್ರಸಂತತಿಂ – ತನ್ನ ಹೆಂಡತಿಯಲ್ಲಿ ಸಂತಾನವನ್ನು, ಕೃತ್ವಾ—ಉಂಟು ಮಾಡಿ, ತಯಾ– ಆ ಸಂತತಿಯಿಂದ, ಭೂರಕ್ಷಣಹೃದಾ–ಭೂಮಿಯನ್ನು ರಕ್ಷಿಸುವ ಅಭಿಪ್ರಾಯದಿಂದ, ಸಃ — ಅಶ್ವತ್ಥಾಮನು, ಅಭಿಷಿಕ್ತಸ್ಸನ್ — ಧೂಳಿಗಳಿಂದ ಅಭಿಷಿಕ್ತನಾಗಿ, ತಥೇತಿ—ನಿನ್ನ ಹೆಂಡತಿಯಲ್ಲಿ ಮಗನನ್ನು ಹುಟ್ಟಿಸುವೆನೆಂದು ಹೇಳಿ, ಅಗಾತ್—ಹೋದನು. ॥೧೨೧॥

ಸಕೃಷ್ಣಭೀಮಪಾರ್ಥಾನಾಂ ಭಯಾದೇವ ಪುನರ್ವನಂ ॥
ಕೃಪಸಾತ್ವತಸಂಯುಕ್ತೋ ವಿವೇಶ ಗಹನಂ ರಥೀ ॥೧೨೨॥

ಕೃಪಸಾತ್ವತ ಸಂಯುಕ್ತಃ – ಕೃಪ ಮತ್ತು ಕೃತವರ್ಮರಿಂದ ಕೂಡಿದ, ರಥೀ—ರಥಿಕನಾದ, ಸಃ – ಅಶ್ವತ್ಥಾಮನು, ಕೃಷ್ಣಭೀಮಪಾರ್ಥಾನಾಂ – ಶ್ರೀಕೃಷ್ಣಭೀಮ ಅರ್ಜುನರ, ಭಯಾದೇವ — ಹೆದರಿಕೆಯಿಂದಲೇ ಪುನಃ – ಮತ್ತೆ, ಗಹನಂ – ಗಂಭೀರವಾದ, ವನಂ – ಅರಣ್ಯವನ್ನು, ವಿವೇಶ – ಪ್ರವೇಶಿಸಿದನು. ॥೧೨೨॥

ತಸ್ಯಚಿಂತಯತೋ ದ್ರೋಣವಧಂ ದುರ್ಯೋಧನಸ್ಯಚ ॥
ನಾಗಾನ್ನಿದ್ರಾ ನಿಶೀಥೇಚಧ್ವಾಂಕ್ಷಾನ್ನ್ಯಗ್ರೋಧ ವಾಸಿನಃ ॥೧೨೩॥

ಹತಾನ್ಸುಬಹುಸಾಹಸ್ರಾನೇಕೇನಾತಿ ಬಲೇನತು ॥
ಕೌಶಿಕೇನ ನಿರೀಕ್ಷ್ಯೈವ ಪ್ರಾಹತೌ ಕೃಪಸಾತ್ವತೌ ॥೧೨೪॥

ನಿದರ್ಶನೇನ ಹ್ಯೇತೇನ ಪ್ರೇರಿತಃ ಪರಮಾತ್ಮನಾ ॥
ಯಾವಿಪಾಂಡುಸುತಾನ್ಹಂ ತುಮಿತ್ಯುಕ್ತ್ವಾಽರುರುಹೇರಥಂ
ನಿವಾರಿತೋಽಪಿ ತಾಭ್ಯಾಂ ಸಃಪ್ರಾದ್ರವಚ್ಛಿಬಿರಂಪ್ರತಿ ॥೧೨೫॥

ದ್ರೋಣವಧಂ — ದ್ರೋಣರಸಂಹಾರವನ್ನೂ, ದುರ್ಯೋಧನಸ್ಯಚ–ದುರ್ಯೋಧನನ ಸಂಹಾರವನ್ನೂ, ಚಿಂತಯತಃ– ಆಲೋಚಿಸತಕ್ಕ,ತಸ್ಯ–ಆ ಅಶ್ವತ್ಥಾಮನಿಗೆ, ನಿದ್ರಾ–ನಿದ್ರೆಯು, ನಾಗಾತ್–ಬರಲಿಲ್ಲ, ನಿಶೀಥೇ–ಅರ್ಧರಾತ್ರಿಯಲ್ಲಿ, ಅತಿಬಲೇನ– ಅತ್ಯಂತ ಬಲಿಷ್ಠವಾದ, ಏಕೇನ – ಒಂದು, ಕೌಶಿಕೇನ— ಗೂಗೆಯಿಂದ, ನ್ಯಗ್ರೋಧವಾಸಿನಃ — ಗೋಳಿಮರದಲ್ಲಿ ವಾಸ ವಾಗಿರುವ, ಹತಾನ್ – ಕೊಲ್ಲಲ್ಪಟ್ಟ, ಸುಬಹುಸಾಹಸ್ರಾನ್ – ಅನೇಕ ಸಹಸ್ರಸಂಖ್ಯಾಕಗಳಾದ, ಧ್ವಾಂಕ್ಷಾನ್ – ಕಾಗೆಗಳನ್ನು, ನಿರೀಕ್ಷ್ಯೈವ – ನೋಡಿಯೇ, ತೌ – ಆದಾವ, ಕೃಪಸಾತ್ವತೌ — ಕೃಪಾಚಾರ್ಯರು ಮತ್ತು ಕೃತವರ್ಮನನ್ನು ಕುರಿತು,

ಪ್ರಾಹ—ಹೇಳಿದನು; ಏತೇನ ನಿದರ್ಶನೇನ — ಈ ದೃಷ್ಟಾಂತದಿಂದ, ಪರಮಾತ್ಮನಾ – ಶ್ರೀ ಹರಿಯಿಂದ, ಪ್ರೇರಿತಃ – ಪ್ರೇರಿಸಲ್ಪಟ್ಟ, ಅಹಂ – ನಾನು, ಪಾಂಡುಸುತಾನ್ – ಪಾಂಡವರ ಮಕ್ಕಳನ್ನು, ಹಂತುಂ–ಕೊಲ್ಲಲು, ಯಾಮಿ – ಹೋಗುತ್ತೇನೆ, ಇತ್ಯುಕ್ತ್ವಾ—ಈ ರೀತಿಯಾಗಿ ಹೇಳಿ, ರಥಂ – ರಥವನ್ನು, ಆರುರುಹೇ—ಏರಿದನು, ತಾಭ್ಯಾಂ – ಕೃಪ ಕೃತವರ್ಮರಿಂದ, ಸಃ—ಆ ಅಶ್ವತ್ಥಾಮನು, ನಿವಾರಿತೋಽಪಿ — ತಡೆಯಲ್ಪಟ್ಟರೂ ಕೂಡ, ಶಿಬಿರಂ ಪ್ರತಿ — ಸೈನ್ಯದ ನಿವಾಸಸ್ಥಾನವನ್ನು ಕುರಿತು, ಪ್ರಾದ್ರವತ್—ಓಡಿದನು. ॥೧೨೩॥೧೨೪॥೧೨೫॥

ಅನುಜಗ್ಮತುಸ್ತಾವಪಿತಂ ಶಿಬಿರ ದ್ವಾರಿಚೈಕ್ಷತ ॥
ಉಗ್ರರೂಪಧರಂ ರುದ್ರಂ ಸ್ವಕೀಯಾಂ ತನುಮೇವಸಃ ॥೧೨೬॥

ಪರೀತಂ ವಾಸುದೇವೇನ ಬಹುಕೋಟಿಸ್ವರೂಪಿಣಾ ॥
ದೃಷ್ಟ್ವೈವ ವಾಸುದೇವಂ ತಮತ್ರ ಸದ್ಯೌತಮೀಸುತಃ ॥೧೨೭॥

ತಾವಪಿ – ಆ ಕೃಪ, ಕೃತವರ್ಮರೂ ಕೂಡ, ತಂ—ಆ ಅಶ್ವತ್ಥಾಮನನ್ನು, ಅನುಜಗ್ಮತುಃ–ಅನುಸರಿಸಿ ಹೋದರು, ಶಿಬಿರದ್ವಾರಿ — ಪಾಂಡವರ ಶಿಬಿರದ ಬಾಗಿಲಿನಲ್ಲಿ, ಸಃ – ಆ ಅಶ್ವತ್ಥಾಮನು, ಬಹುಕೋಟಿಸ್ವರೂಪಿಣಾ – ಅನೇಕ ಕೋಟಿ ಸಂಖ್ಯಾಕರೂಪವುಳ್ಳ, ವಾಸುದೇವೇನ – ಶ್ರೀಕೃಷ್ಣನಿಂದ, ಪರೀತಂ – ಆವರಿಸಿಕೊಳ್ಳಲ್ಪಟ್ಟ, ಉಗ್ರರೂಪಧರಂ – ಕ್ರೂರವಾದ ರೂಪವನ್ನು ಧರಿಸಿರುವ, ಸ್ವಕೀಯಾಂತನುಮೇವ – ತನ್ನ ಸ್ವರೂಪನೇ ಆದ, ರುದ್ರಂ—ರುದ್ರನನ್ನು, ಐಕ್ಷತ – ಕಂಡನು, ಗೌತಮೀಸುತಃ – ಅಶ್ವತ್ಥಾಮನು, ತಂ — ಆ ಶ್ರೀಕೃಷ್ಣನನ್ನು, ದೃಷ್ಟ್ವೈವ – ನೋಡಿಯೇ, ಅತ್ರಸತ್ – ಹೆದರಿದನು. ॥೧೨೬॥೧೨೭॥

ವಾಸುದೇವಾಜ್ಞಯೈವಾತ್ರ ಸ್ವಾತ್ಮನಾಪಿಸದಾಶಿವಃ ॥
ಆಯುಧ್ಯದಗ್ರಸಚ್ಚಾಶು ದ್ರೌಣೇಃ ಸರ್ವಾಯುಧಾನ್ಯಪಿ ॥೧೨೮॥

ಅತ್ರ – ಈ ಶಿಬಿರದ್ವಾರದಲ್ಲಿ, ಸದಾಶಿವಃ—ರುದ್ರನು, ವಾಸುದೇವಾಜ್ಞಯೈವ—ಶ್ರೀಕೃಷ್ಣನ ಅಪ್ಪಣೆಯಿಂದಲೇ, ಸ್ವಾತ್ಮನಾಪಿ – ತನ್ನ ಸ್ವರೂಪನೇ ಆದ. ಅಶ್ವತ್ಥಾಮನಿಂದ, ಆಯುಧ್ಯತ್–ಯುದ್ಧ ಮಾಡಿದನು,ದ್ರೌಣೇಃ—ಅಶ್ವತ್ಥಾಮನ, ಸರ್ವಾಯುಧಾನ್ಯಪಿ— ತನ್ನಮೇಲೆ ಪ್ರಯೋಗಿಸಿದ ಎಲ್ಲಾ ಆಯುಧಗಳನ್ನೂ ಕೂಡ, ಅಗ್ರಸತ್ – ಭಕ್ಷಿಸಿದನು. ॥೧೨೮॥

ಅಚಿಂತ್ಯಾ ಹರಿಶಕ್ತಿರ್ಹಿ ದೃಶ್ಯಂತೇತ್ಮಹನೋಽಪಿಹಿ ॥
ಅತಸ್ತಯಾಪ್ರೇರಿತೇನ ಸ್ವಾತ್ಮನೈವಾಖಿಲೇಷ್ವಪಿ ॥೧೨೯॥

ಆಯುಧೇಷುನಿಗೀರ್ಣೇಷುದ್ರೌಣೆರ್ಯಜ್ಞಂತುಮಾನಸಂ ॥
ಚಕ್ರೇಽತ್ಮಾನಂ ಪಶುಂಕೃತ್ವಾಸಾತ್ಮಸ್ಥಾಯೈವ ವಿಷ್ಣವೇ ॥೧೩೦॥

ಹಿ — ಯಾವ ಕಾರಣದಿಂದ, ಆತ್ಮಹನಃ – ತಮ್ಮನ್ನೇ ತಾವು ಸಂಹರಿಸಿಕೊಳ್ಳತಕ್ಕವರು, ದೃಶ್ಯಂತೇ — ಕಾಣಿಸಿಕೊಳ್ಳಲ್ಪಡುತ್ತಾರೋ, ತಸ್ಮಾತ್ — ಆದ್ದರಿಂದ, ಹರಿಶಕ್ತಿಃ— ಪರಮಾತ್ಮನ ಸಾಮಾರ್ಥ್ಯವು, ಅಚಿಂತ್ಯಾ — ಚಿಂತಿಸಲು ಅಶಕ್ಯವಾದದ್ದು.' ತನ್ನ ಅವತಾರನಾದ ಅಶ್ವತ್ಥಾಮನನ್ನು ಕೊಲ್ಲುವ ಇಚ್ಛೆಯು ಮೂಲರೂಪಿಯಾದ ರುದ್ರನಲ್ಲಿ ಕಂಡು ಬಂದದ್ದರಿಂದ, ಆತ್ಮಹನಃ ದೃಶಂತೇ ಎಂದು ಹೇಳಿದರು. ಅತಃ – ಹರಿಯಶಕ್ತಿಯು ಅಚಿಂತ್ಯವಾದ್ದರಿಂದ, ತಯಾ – ಆ ಹರಿಶಕ್ತಿಯಿಂದ, ಪ್ರೇರಿತೇನ–ಪ್ರೇರಿತನಾದ, ಸ್ವಾತ್ಮನೈವ – ತನ್ನ ಸ್ವರೂಪನಾದ ರುದ್ರನಿಂದಲೇ, ಅಖಿಲೇಷು – ಎಲ್ಲಾ,

ಆಯುಧೇಷು — ಆಯುಧಗಳು, ನಿಗೀರ್ಣೇಷುಸತ್ಸು – ನುಂಗಲ್ಪಡುತ್ತಿರಲು, ದ್ರೌಣಿಃ — ಅಶ್ವತ್ಥಾಮನು, ಸ್ವಾತ್ಮಸ್ಥಾಯು– ತನ್ನಲ್ಲಿ ಅಂತರ್ಯಾಮಿಯಾದ, ವಿಷ್ಣವೇ ಏವ — ನರಸಿಂಹನ ಪ್ರೀತಿಗಾಗಿಯೇ, ಆತ್ಮಾನಂ ಪಶುಂಕೃತ್ವಾ — ತನ್ನನ್ನು ಯಜ್ಞಪಶುವನ್ನಾಗಿ ಮಾಡಿ, ಮಾನಸಂ – ಧ್ಯಾನರೂಪವಾದ, ಯಜ್ಞಂ – ಯಜ್ಞವನ್ನು, ಚಕ್ರೇ— ಮಾಡಿದನು. ಅಂದರೆ ನನ್ನ ಮರಣಕಾಲದಲ್ಲಿ ಈ ನನ್ನ ದೇಹವು ವಿಷ್ಣವೇ ಸ್ವಾಹಾ ಎಂದು ನನ್ನಿಂದ ಕೊಡಲ್ಪಡಲು ನಿನ್ನ ಭಕ್ಷಣೆಗೆ ಯೋಗ್ಯವಾಗಿದೆ, ಎಂದು ಸ್ಮರಿಸಿದನು. ಇದೇ ಮಾನಸ ಯಜ್ಞವು. ॥೧೬೯॥ ॥೧೩೮॥

ಯಜ್ಞತುಷ್ಟೇನಹರಿಣಾ ಪ್ರೇರಿತಃ ಶಂಕರಃ ಸ್ವಯಂ ॥
ಆತ್ಮನೇದ್ರೋಣಪುತ್ರಾಯದದೌ ಸರ್ವಾಯುಧಾನಿಚ ॥೧೩೧॥

ಯಜ್ಞತುಷ್ಟೇನ—ಮಾನಸ ಧ್ಯಾನರೂಪ ಯಜ್ಞದಿಂದ ಸಂತುಷ್ಟನಾದ, ಹರಿಣಾ -- ಶ್ರೀಹರಿಯಿಂದ, ಪ್ರೇರಿತಃ – ಪ್ರೇರಿಸಿಕೊಳ್ಳಲ್ಪಟ್ಟ, ಶಂಕರಃ – ರುದ್ರನು, ಸ್ವಯಂ – ತಾನೇ, ಆತ್ಮನೇ - ತನ್ನ ಸ್ವರೂಪನಾದ, ದ್ರೋಣಪುತ್ರಾಯ— ಅಶ್ವತ್ಥಾಮನಿಗೋಸ್ಕರ, ಸರ್ವಾಯುಧಾನಿಚ–ತಾನು ನುಂಗಿದ ಎಲ್ಲಾ ಆಯುಧಗಳನ್ನೂಕೂಡ, ದದೌ–ಕೊಟ್ಟನು. ॥೧೩೧॥

ಉವಾಚ ಚಾಹಮಾದಿಷ್ಟೋ ವಿಷ್ಣುನಾಪ್ರಭವಿಷ್ಣುನಾ ॥
ಅರಕ್ಷಂ ಪಾರ್ಥಶಿಬಿರ ಮಿಯಂತಂ ಕಾಲಮೇವತು ॥೧೩೨॥

ತದಿಚ್ಛಯೈವ ನಿರ್ದಿಷ್ಟೋ ದಾಸ್ಯೇಮಾರ್ಗಂ ತವಾದ್ಯಚ ॥
ಆಯುಧಾನಿಚ ಸರ್ವಾಣಿ ಹಂತುಂ ಸರ್ವಾನಿಮಾನ್ಜನಾನ್ ॥೧೩೩॥

ಪ್ರಭವಿಷ್ಣುನಾ — ಸಾಮರ್ಥ್ಯಶೀಲನಾದ, ವಿಷ್ಣುನಾ - ಪರಮಾತ್ಮನಿಂದ, ಆದಿಷ್ಟಃ –ಆಜ್ಞಾಪಿಸಿಕೊಳ್ಳಲ್ಪಟ್ಟ, ಅಹಂ – ನಾನು, ಇಯಂತಂ ಕಾಲಂ—ಇಷ್ಟಸಮಯದ ತನಕ, ಪಾರ್ಥಶಿಬಿರಂ—ಪಾಂಡವರ ಶಿಬಿರವನ್ನು, ತು ಅರಕ್ಷಂ – ವಿಶೇಷ ಶಕ್ತಿಯಿಂದ ರಕ್ಷಿಸಿದೆನು, ತದಿಚ್ಛಯೈವ — ಆ ವಿಷ್ಣುವಿನ ಇಚ್ಛೆಯಿಂದಲೇ, ನಿರ್ದಿಷ್ಟಃ – ಪ್ರೇರಿತನಾದ ನಾನು, ಅದ್ಯ – ಈಗ, ತವ – ನಿನಗೆ, ಮಾರ್ಗಂ—ಹೋಗಲು ದಾರಿಯನ್ನು, ದಾಸ್ಯೇ—ಕೊಡುವೆನು,ಚನ್– ಮತ್ತು, ಸರ್ವಾನ್– ಎಲ್ಲಾ, ಇಮಾನ್ ಜನಾನ್ – ಈ ಶಿಬಿರದಲ್ಲಿರುವ ಜನರನ್ನು, ಹಂತುಂ – ಕೊಲ್ಲಲು, ಸರ್ವಾಣಿಆಯುಧಾನಿಚ — ಎಲ್ಲಾ ಆಯುಧಗಳನ್ನೂ ಕೂಡ, ದಾಸ್ಯೇ – ಕೊಡುವೆನು, ಇತಿ – ಎಂದು. ಉವಾಚ—ಹೇಳಿದನು. ॥೧೩೨॥೧೩೩॥

ಇತ್ಯುದೀರ್ಯಪ್ರದಾಯಾಶು ಸರ್ವಾಹೇತಿರ್ವೃಷಧ್ವಜಃ ॥
ತತ್ರೈವಾಂತರ್ದಧೇಸೋಪಿ ಪ್ರೋವಾಚಕೃಪಸಾತ್ವತೌ ॥೧೩೪॥

ವೃಷಧ್ವಜಃ – ನಂದಿಯು ಧ್ವಜದಲ್ಲಿ ಉಳ್ಳರುದ್ರನು, ಇತಿ – ಈ ರೀತಿಯಾಗಿ, ಉದೀರ್ಯ–ಹೇಳಿ, ಸರ್ವಾಹೇತೀಃ– ಎಲ್ಲಾ ಆಯುಧಗಳನ್ನು, ಪ್ರದಾಯ—ಕೊಟ್ಟು, ತತ್ರೈವ—ಅಲ್ಲಿಯೇ, ಆಶು—ಕೂಡಲೇ, ಅಂತರ್ಧಧೇ – ಕಣ್ಣಿಗೆ ಕಾಣದವನಾದನು, ಸೋಽಪಿ–ಆ ಅಶ್ವತ್ಥಾಮನಾದರೂ, ಕೃಪಸಾತ್ವತೌ – ಕೃಪ ಮತ್ತು ಕೃತವರ್ಮರನ್ನು ಕುರಿತು, ಪ್ರೋವಾಚ–ಹೇಳಿದನು. ॥೧೩೪॥

ಯೋನಿರ್ಯಾಸ್ಯಂತಿ ಶಿಬಿರಾಜ್ಜಹಿತಂತಾಶ್ಚ ಸರ್ವಶಃ ॥
ಇತ್ಯುಕ್ತ್ವಾಪ್ರವಿವೇಶಾಂತರ್ದನ್ವೀಖಡ್ಗೀಕೃತಾಂತವತ್ ॥೧೩೫॥

ಶಿಬಿರಾತ್ – ಶಿಬಿರದ ದೆಸೆಯಿಂದ, ಯೇ–ಯಾರು, ನಿರ್ಯಾಸ್ಯಂತಿ – ಹೊರಗೆ ಹೋಗುವರೋ, ತಾನ್–ಸರ್ವಶಃ ಅವರೆಲ್ಲರನ್ನೂ, ಯುವಾಂ—ನೀವಿಬ್ಬರು, ಜಹಿತಂ – ಕೊಲ್ಲಿರಿ, ಇತಿ – ಈ ರೀತಿಯಾಗಿ, ಉಕ್ತ್ವಾ—ಹೇಳಿ, ಧನ್ವೀಸನ್–ಧನುಸ್ಸನ್ನು, ಹಿಡಿದುಕೊಂಡವನಾಗಿ, ಖಡ್ಗೀಸನ್—ಖಡ್ಗಧಾರಿಯಾಗಿ, ಕೃತಾಂತವತ್ – ಯಮನಂತೆ, ಅಂತಃ—ಶಿಬಿರದ ಒಳಗೆ, ಪ್ರವಿವೇಶ – ಪ್ರವೇಶಿಸಿದನು. ॥೧೩೫॥

ಪಾರಾವತಾಶ್ವಂ ಸ ತದಾಶಯಾನಮುಪೇತ್ಯಪದ್ಭ್ಯಾಂಸಮುತಾಡಯಚ್ಚ ॥
ವಕ್ಷಸ್ಯಸಾವದದ್ವೀತನಿದ್ರೋ ಜಾನೇಭವಂತಂ ಹಿ ಗುರೋಸ್ತನೂಜಂ ॥೧೩೬॥

ತದಾ – ಶಿಬಿರವನ್ನು ಪ್ರವೇಶಿಸಿದಾಗ, ಸಃ — ಅಶ್ವತ್ಥಾಮನು, ಶಯಾನಂ – ಮಲಗಿರುವ, ಪಾರಾವತಾಶ್ವಂ – ಪಾರಾವತ ಪಕ್ಷಿಯು ತೆ ಚಿತ್ರ ಬಣ್ಣದ ಕುದುರೆಗಳುಳ್ಳ ಧೃಷ್ಟದ್ಯುಮ್ನನನ್ನು, ಉಪೇತ್ಯ–ಹೊಂದಿ, ಪದ್ಭ್ಯಂ–ಕಾಲುಗಳಿಂದ, ವಕ್ಷಸಿ – ಎದೆಯಲ್ಲಿ, ಸಮುತಾಡಯತ್ – ಚೆನ್ನಾಗಿ ಹೊಡೆದನು, ವೀತನಿದ್ರಃ – ಹೋಗಲ್ಪಟ್ಟ ನಿದ್ರೆಯುಳ್ಳ, ಅಸೌ—ಈ ಧೃಷ್ಟದ್ಯುಮ್ನನು, ಭವಂತಂ – ನಿನ್ನನ್ನು, ಗುರೋಃ – ಗುರುಗಳಾದ ದ್ರೋಣರ, ತನೂಜಂ—ಮಗನನ್ನಾಗಿ, ಜಾನೇ – ತಿಳಿಯುತ್ತೇನೆ, ಇತಿ – ಎಂದು, ಅವದತ್—ಹೇಳಿದನು. ॥೧೩೬॥

ಸಮುತ್ಥಿತಂ ಮಾಂ ಜಹಿಶಸ್ತ್ರಪಾಣಿಂ ಶಸ್ತ್ರೇಣ ವೀರೋಽಸಿಸವೀರಧರ್ಮಃ ॥
ಲೋಕಾಶ್ಚಮೇಸಂತ್ವಥ ಶಸ್ತ್ರಪೂತಾ ಇತಿ ಬ್ರುವಾಣಂಸರುಷಾ ಜಗಾದ ॥೧೩೭॥

ಸಮುತ್ಥಿತಂ—ಹಾಸಿಗೆಯಿಂದ ಎದ್ದಿರುವ, ಶಸ್ತ್ರಪಾಣಿಂ – ಶಸ್ತ್ರವು ಕೈಯಲ್ಲಿ ಉಳ್ಳ, ಮಾಂ – ನನ್ನನ್ನು, ಶಸ್ತ್ರೇಣ–ಶಸ್ತ್ರದಿಂದ, ಜಹಿ – ಕೊಲ್ಲು, ತ್ವಂ ವೀರೋಸಿ,— ನೀನು ಪರಾಕ್ರಮಿಯಾಗಿದ್ದಿ, ಸ ವೀರಧರ್ಮಃ— ಶಸ್ತ್ರವನ್ನು ಧರಿಸಿರುವವನ ಸಂಹಾರವು ವೀರರಧರ್ಮವು, ಶಸ್ತ್ರಪೂತಾಃ – ಶಸ್ತ್ರಯುದ್ಧದಿಂದ ಮರಣ ಹೊಂದಿ, ಪವಿತ್ರರಾದವರಿಂದ ಹೊಂದಲು ಯೋಗ್ಯವಾದ, ಲೋಕಾಃ – ಲೋಕಗಳು, ಮೇ—ನನಗೆ, ಸಂತು – ಆಗಲಿ, ಇತಿ – ಈ ರೀತಿಯಾಗಿ, ಬ್ರುವಾಣಂ — ಹೇಳತಕ್ಕ ಧೃಷ್ಟದ್ಯುಮ್ನನನ್ನು ಕುರಿತು, ಅಥ – ಆನಂತರ, ಸಃ—ಆ ಅಶ್ವತ್ಥಾಮನು, ರುಷಾ – ಕೋಪದಿಂದ, ಜಗಾದ–ಹೇಳಿದನು. ॥೧೩೭॥

ನಸಂತಿಹಿಬ್ರಹ್ಮಹಣಾಂ ಸುಲೋಕಾ ವಿಶೇಷತಶ್ಚೈವ ಗುರುದ್ರುಹಾಂಪುನಃ ॥
ನಧರ್ಮಯುದ್ಧೇನ ವಧಾರ್ಹಕಾಶ್ಚಯೇತ್ವದ್ವಿಧಾಃಪಾಪತಮಾಃಸುಪಾಪ ॥೧೩೮॥

ಹೇಸುಪಾಪ—ಎಲೋ ಅತ್ಯಂತ ಪಾಪಿಷ್ಠನೇ, ಬಹ್ಮಹಣಾಂ— ಬ್ರಾಹ್ಮಣರನ್ನು ಕೊಲ್ಲುವವರಿಗೆ, ಸುಲೋಕಾಃ–ಉತ್ತಮ ಲೋಕಗಳು, ನ ಸಂತಿ – ಆಗುವುದಿಲ್ಲ, ವಿಶೇಷತಃ – ವಿಶೇಷವಾಗಿ ಗುರುದ್ರುಹಾಂ–ಗುರುಗಳನ್ನು ಕೊಲ್ಲತಕ್ಕವರಿಗೆ, ನಸಂತೀತಿಕಿಂಪುನಃ – ಉತ್ತಮ ಲೋಕಗಳು ಆಗುವದಿಲ್ಲವೆಂದು ಏನು ಹೇಳತಕ್ಕದ್ದು, ತ್ವದ್ವಿಧಾಃ— ನಿನ್ನಂತೆಯೇ ಇರುವ, ಯೇ—ಯಾವ, ಪಾಪತಮಾಃ—ಅತಿಪಾಪಿಷ್ಠರೋ, ತೇ – ಅವರು, ಧರ್ಮಯುದ್ಧೇನ – ಧರ್ಮಯುದ್ಧದಿಂದ ವಧಾರ್ಹಕಾಃ—ಕೊಲ್ಲಲು ಯೋಗ್ಯರು ನ—ಆಗುವುದಿಲ್ಲ. ॥೧೩೮॥

ಅವಶ್ಯಭಾವಿನಂ ಮೃತ್ಯುಂ ಧೃಷ್ಟದ್ಯುಮ್ನೋವಿಚಿಂತ್ಯತಂ ॥
ತೂಷ್ಣೀಂ ಬಭೂವ ಸ್ವಪ್ನೇಽಪಿ ನಿತ್ಯಂ ಪಶ್ಯತಿ ತಾಂ ಮೃತಿಂ ॥೧೩೯॥

ಅವಶ್ಯಭಾವಿನಂ – ನಿಶ್ಚಯವಾಗಿಯೂ ಆಗತಕ್ಕ ಅಂದರೆ ಅಪರಿಹಾರ್ಯವಾದ, ತಂ ಮೃತ್ಯುಂ – ಆ ಮರಣವನ್ನು ಧೃಷ್ಟದ್ಯುಮ್ನಃ—ಧೃಷ್ಟದ್ಯುಮ್ನನು, ವಿಚಿಂತ್ಯ–ಆಲೋಚಿಸಿ, ತೂಷ್ಣೀಂ ಬಭೂವ–ಸುಮ್ಮನಾದನು, ತಾಂ ಮೃತಿಂ–ಆ ಮರಣ

ವನ್ನು, ನಿತ್ಯಂ-ಯಾವಾಗಲೂ,ಸ್ವಪ್ನೇಪಿ —ಸ್ವಪ್ನದಲ್ಲಿಯೂ ಕೂಡ, ಹಿ – ಯಾವ ಕಾರಣದಿಂದ, ಪಶ್ಯತಿ—ನೋಡುತ್ತಾನೋ, ಆದ್ದರಿಂದ ಸುಮ್ಮನಾದನು. ॥೧೩೯॥

ಅವ-- ಸ್ವಪ್ನದಲ್ಲಿ ಕಂಡದ್ದನ್ನು ವಿವರಿಸುತ್ತಾರೆ.

ಭಾ. ಅ. ೧೧೬—೧೩೯ ಸಂಜಯನ ಮುಖದಿಂದ ದುರ್ಯೋಧನವಧವನ್ನು ಕೇಳಿ ದು:ಖಿತನಾದ ಧೃತರಾಷ್ಟ್ರನನ್ನು ಸಮಾಧಾನ ಪಡಿಸಲು ಯುಯುತ್ಸುವು ಶ್ರೀಕೃಷ್ಣ ಧರ್ಮರಾಜರ ಅಭಿಪ್ರಾಯದಂತೆ ಹೋದನು. ಅವನ ಹಿಂದೆ ಶ್ರೀಕೃಷ್ಣ ಪರವಾತ್ಮನೂ ಹೋದನು.ಶ್ರೀಕೃಷ್ಣನು ಶಾಸ್ತ್ರಾನುಸಾರಿಯಾದ, ಲೋಕಘಟನೆಗಳ ದೃಷ್ಟಾಂತಗಳಿಂದ ಕೂಡಿದ ಮಾತುಗಳಿಂದ ಸಮಾಧಾನಮಾಡಿ ಪುನ: ಪಾಂಡವರ ಸಮೀಪಕ್ಕೆ ಬಂದನು. ಕಲಿಕಾಲವು ಬರುತ್ತಿದ್ದದ್ದರಿಂದ ಅದರ ಧರ್ಮಗಳು ನಡೆಯಬೇಕಾದರೆ ದೇವಾತಾರಿಗಳು ಭೂಮಿಯಲ್ಲಿದ್ದವರು ಇಲ್ಲದಂತಾಗಬೇಕು. ಆದ್ದರಿಂದ ಧೃಷ್ಟದ್ಯುಮ್ನಾದಿ ದೇವಾವತಾರಿಗಳನ್ನು ಸಂಹಾರ ಮಾಡುವ ಪ್ರಸಂಗ ತರುವದಕ್ಕಾಗಿ, ಶ್ರೀಕೃಷ್ಣನು ಸಾತ್ಯಕಿ ಅರ್ಜುನರಿಂದ ಕೂಡಿಕೊಂಡು ರಾತ್ರಿಯಲ್ಲಿ ಕೌರವರ ಶಿಬಿರದ ಕಡೆಗೆ ಹೋಗಿದ್ದನು. ಆಗ ಅಶ್ವತ್ಥಾಮರು ಕೃತವರ್ಮ ಕೃಪಾಚಾರ್ಯರಿಂದ ಕೂಡಿಕೊಂಡು, ಕೆಳಗೆಬಿದ್ದಿರುವ ನಾಯಿನರಿ, ಮೊದಲಾದವುಗಳಿಂದ ತಿನ್ನಲ್ಪಡುತ್ತಿದ್ದ ದುರ್ಯೋಧನನ ಸಮೀಪಕ್ಕೆ ಬಂದರು. ಅವನಲ್ಲಿ ಇನ್ನೂ ಶ್ವಾಸೋಚ್ವಾಸ ವಿದ್ದಿತು. ಅವನ ಅವಸ್ಥೆಯನ್ನು ಕಂಡು ಅಶ್ವತ್ಥಾಮರು ಬಹಳ ದುಃಖಿತರಾಗಿ ಪಾಂಡವರನ್ನು ನಿಂದಿಸಿ ನಾನು ಏನು ಮಾಡಲಿ ಹೇಳು ಎಂದು ಕೇಳಿದಾಗ, ದುರ್ಯೋಧನನು ತನ್ನ ಹೆಂಡತಿಯಲ್ಲಿ ಮಕ್ಕಳನ್ನು ಪಡೆಯಲು, ಪಾಂಡವರ ಸಂತತಿಯನ್ನು ನಾಶಪಡಿಸಿ ತನ್ನ ಹೆಂಡತಿಯಲ್ಲಿ ಅಶ್ವತ್ಥಾಮರಿಂದ ಹುಟ್ಟಿದ ಮಕ್ಕಳನ್ನು ರಾಜರನ್ನಾಗಿ ಮಾಡಲು ತಿಳಿಸಿ ಆ ಕಾರ್ಯ ಮಾಡಲು ದೀಕ್ಷಾಬದ್ಧನನ್ನಾಗಿ ಮಾಡಲು ಧೂಲಿಯಿಂದ ಅಭಿಷೇಕ ಮಾಡಿದನು. ಅಶ್ವತ್ಥಾಮರು ಹಾಗೇ ಆಗಲಿ ಎಂದು ಒಪ್ಪಿಕೊಂಡು ಹೋದರು. ಶ್ರೀಕೃಷ್ಣ ಭೀಮಾರ್ಜುನರ ಭಯದಿಂದ ಕೃಪಕೃತವರ್ಮಸಹಿತರಾಗಿ ವನಕ್ಕೇ ಹೋದರು. ತನ್ನ ತಂದೆಯಾದ ದ್ರೋಣರ ವಧ ಹಾಗು ದುರ್ಯೋಧನನಸಂಹಾರಗಳನ್ನೇ ಯಾವಾಗಲೂ ಸ್ಮರಿಸುತ್ತಿದ್ದ ಅವರಿಗೆ ನಿದ್ರೆಬರಲಿಲ್ಲ. ರಾತ್ರಿಯಲ್ಲಿ ಒಂದು ಗೂಗೆಯು ಬಹುಕಾಗೆಗಳನ್ನು ಕೊಂದದ್ದನ್ನು ಕಂಡು ಅದರಿಂದ ತಾನು ಒಬ್ಬನಾದರೂ ಬಹು ಪಾಂಡವರನ್ನು ಸಂಹರಿಸ ಬಹುದು ಎಂಬ ಭಾವನೆಯನ್ನು ಶ್ರೀಪರಮಾತ್ಮನ ಇಚ್ಛೆಯಂತೆ ಪಡೆದು, ಪಾಂಡುಪುತ್ರರನ್ನು ಸಂಹರಿಸಲೆಂದು ರಥದಲ್ಲಿ ~~ಹೊರಟರು. ಕೃತವರ್ಮ ಕೃಪರು ಬೇಡವೆಂದು ನಿಷೇಧಿಸಿದರೂ ಕೂಡ ಲಕ್ಷಿಸದೇ ಪಾಂಡವರ ಶಿಬಿರದ ಕಡೆಗೇ ಹೋದರು.~~ ಅವರಿಬ್ಬರೂ ಕೂಡ ಬೆನ್ನುಹತ್ತಿರಲು, ಆ ಅಶ್ವತ್ಥಾಮರು, ಶಿಬಿರದ್ವಾರದಲ್ಲಿ ನಿಂತಿರುವ ತನ್ನ ಮೂಲರೂಪ ಶ್ರೀರುದ್ರದೇವರನ್ನು ಕಂಡರು. ಅವರನ್ನು ಬಹು ಕೋಟಿ ವಾಸುದೇವ ರೂಪಗಳಿಂದ ಸುತ್ತುವರಿಯಲ್ಪಟ್ಟದ್ದನ್ನು ನೋಡಿ ಭೀತರಾದರು. ಆ ರುದ್ರನು ತನ್ನ ರೂಪನೇ ಆದ ಅಶ್ವತ್ಥಾಮರಿಂದಲೂ ಕೂಡ ಭಗವದನುಜ್ಞೆಯಂತೆ ಯುದ್ಧ ಮಾಡಿದನು. ಮತ್ತು ಅಶ್ವತ್ಥಾಮರು ಪ್ರಯೋಗಿಸಿದ ಎಲ್ಲ ಆಯುಧಗಳನ್ನು ನುಂಗಿದನು. ತನ್ನೊಂದಿಗೆ ತಾನು ಯುದ್ಧ ಮಾಡುವದು ಹೇಗೆ ಶಕ್ಯ ಎಂಬ ಪ್ರಶ್ನೆ ಬರುವದು. ಅದಕ್ಕೆ ಆಚಾರ್ಯರು ನಿರ್ಣಯವನ್ನು ಹೇಳಿದ್ದಾರೆ. ಆತ್ಮಹತ್ಯಾ ಮಾಡಿಕೊಳ್ಳುವ ಜನರು ಲೋಕದಲ್ಲಿ ಕಾಣುತ್ತಾರೆ. ತನ್ನ ಮೇಲೆ ತುಂಬಾ ಪ್ರೀತಿಯುಳ್ಳ ತಾನು ತನ್ನ ಹತ್ಯೆ ಮಾಡಿಕೊಳ್ಳುವದು ಭಗವಂತನ ಅಚಿಂತ್ಯ ಶಕ್ತಿಯಿಂದ.ಹಾಗೆಯೇ ಇಲ್ಲಿಯೂ ಆ ಶಕ್ತಿಯಿಂದಲೇ ತನ್ನ(ರೂಪದ)ಎದುರು ತಾನೇ ಯುದ್ಧಕ್ಕೆ ನಿಂತನು.ತನ್ನ ಎಲ್ಲ ಆಯುಧಗಳನ್ನು ರುದ್ರನು ನುಂಗಿದಾಗ ಅಶ್ವತ್ಥಾಮರು ಮಾನಸ ಯಜ್ಞವನ್ನು ಅಂತರ್ಯಾಮಿ ಶ್ರೀಹರಿಯ ಪ್ರೀತಿಗಾಗಿ ಮಾಡಿ, ಅದರಲ್ಲಿ ತಮ್ಮನ್ನೇ ಯಜ್ಞಪಶುವನ್ನಾಗಿ ಸಂಕಲ್ಪಿಸಿಕೊಂಡರು. ಯಜ್ಞತುಷ್ಟನಾದ ಶ್ರೀಹರಿಯು ಪ್ರೇರಿಸಿದಂತೆ ರುದ್ರನು ಯುದ್ಧವನ್ನುಬಿಟ್ಟು ತನ್ನರೂಪನಾದ ಅಶ್ವತ್ಥಾಮನಿಗೆ ನುಂಗಿದ ಎಲ್ಲ ಆಯುಧಗಳನ್ನು ತಿರುಗಿ ಕೊಟ್ಟು,ನಾನು ಸರ್ವಸ್ವಾಮಿಯಾದ ಶ್ರೀನಾರಾಯಣನಿಂದ ಆಜ್ಞಾಪ್ತನಾಗಿ ಇಲ್ಲಿಯವರೆಗೆ ಈ ಶಿಬಿರವನ್ನು ರಕ್ಷಿಸಿದೆ. ಈಗ ಅವನ ಆಜ್ಞಾದಂತೆಯೇ ಆಯುಧಗಳನ್ನು, ಮಾರ್ಗವನ್ನು ಒಳಗಿನ ಜನರಸಂಹಾರಕ್ಕಾಗಿ, ಕೊಟ್ಟಿರುವೆನು ಎಂದು ಹೇಳಿ ಅದೃಶ್ಯನಾದನು. ಆಗ ಅಶ್ವತ್ಥಾಮರು ಕೃಪ ಕೃತವರ್ಮರಿಗೆ ಹೊರಗೆ ನಿಲ್ಲಲು ಮತ್ತು ಹೊರಗೆ ಬರುವವರನ್ನು ಕೊಲ್ಲಲು ಹೇಳಿ ತಾನು ಖಡ್ಗಧಾರಿಯಾಗಿ ಯಮನಂತೆ ಒಳಗೆ ಪ್ರವೇಶಿಸಿದರು. ಅಲ್ಲಿ ಮಲಗಿರುವ ಧೃಷ್ಟದ್ಯುಮ್ನನನ್ನು ಕಂಡು ಎದೆಯಲ್ಲಿ ಕಾಲುಗಳಿಂದ ಒದ್ದರು. ಎಚ್ಚರಗೊಂಡ ಧೃಷ್ಟದ್ಯುಮ್ನನು 'ನೀನು ಗುರುಪುತ್ರ ಅಶ್ವತ್ಥಾಮನು ಎಂದು ತಿಳಿಯಿತು, ನಿಲ್ಲು' ನಾನು ಏಳುವೆನು; ಶಸ್ತ್ರವನ್ನು ಕೈಯಲ್ಲಿ ಹಿಡಿಯುತ್ತೇನೆ; ಆಗ ಶಸ್ತ್ರದಿಂದ ಕೊಲ್ಲು. ಅದು ವೀರರ ಧರ್ಮವು; ಹೀಗೆ ಮಲಗಿದವರನ್ನು ಕೊಲ್ಲುವದು ವೀರರ ಕೆಲಸವಲ್ಲ. ನನಗೂ ವೀರ ವಂರಣ ಹೊಂದುವವರಿಗೆ ಆಗುವ ಸದ್ಗತಿಯು ಆಗುವದು, ಎಂದು ಹೇಳಿದನು. ಆಗ

ಅಶ್ವತ್ಥಾಮರು ಬ್ರಹ್ಮಹತ್ಯಾ ಮಾಡಿದವರಿಗೆ ಸದ್ಗತಿ ಎಲ್ಲಿಯದು? ಅಂತಹದು ತತ್ರಾಪಿ ಗುರು ಹತ್ಯಾಮಾಡಿದ ನಿನಗೆ ಎಲ್ಲಿಯದು? ನಿಮ್ಮಂಥ ಪಾಪಿಷ್ಠರನ್ನು ಧರ್ಮ ಯುದ್ಧದಲ್ಲಿ ಕೊಲ್ಲಬಾರದು.' ಎಂದು ಹೇಳಿದರು. ಆ ಧೃಷ್ಟದ್ಯುಮ್ನನು ತಾನು ನಿತ್ಯಸ್ವಪ್ನದಲ್ಲಿ ಕಾಣುತ್ತಿದ್ದ ನಿಶ್ಚಿತವಾದ ಮರಣವನ್ನು ತಿಳಿದು ಸುಮ್ಮನಿದ್ದನು.

ದ್ರೌಣಿಂಚ ಕಾಲರಾತ್ರಿಂಚ ದ್ರೋಣಪಾತಾದನಂತರಂ ॥
ವಿಶಸಂತಂ ಕೃಷಂತೀಂಚ ಸ್ವಪ್ನೇಪಶ್ಯತಿ ಪಾರ್ಷತಃ ॥೧೪೦॥

ಪಾರ್ಷತಃ - ಧೃಷ್ಟದ್ಯುಮ್ನನು, ದ್ರೋಣಪಾತಾತ್ ಅನಂತರಂ-ದ್ರೋಣಾಚಾರ್ಯರು ಮರಣ ಹೊಂದಿದ ನಂತರ, ವಿಶಸಂತಂ - ಕೊಲ್ಲತಕ್ಕ, ದ್ರೌಣಿಂ - ಅಶ್ವತ್ಥಾಮನನ್ನು, ಕೃಷಂತೀಂ - ಸೆಳೆಯಂತಕ್ಕ, ಕಾಲರಾತ್ರಿಂಚ - ಮಹಾಕಾಳೀ ಮೃತ್ಯುದೇವತೆಯನ್ನೂ ಕೂಡ, ಸ್ವಪ್ನೇ - ಸ್ವಪ್ನದಲ್ಲಿ, ಪಶ್ಯತಿ - ನೋಡುತ್ತಿದ್ದನು. ॥೧೪೦॥

ಸಮಾಕ್ಷಿಪದ್ರೌಣಸುತೋಽಸ್ಯ ಕಂಠೇ ನಿಬಧ್ಯ ಮೌರ್ವೀಂ ಧನುಷೋಽಪ್ಯುರಸ್ಥಃ ॥
ಮುಮುಂಥ ಕೃಚ್ಛ್ರೇಣ ವಿಹಾಯ ದೇಹಂ ಯಯೌ ನಿಜಂ ಸ್ಥಾನ ಮಸಾವಹ್ನಿಃ ॥೧೪೧॥

ದ್ರೌಣಸುತಃ - ಅಶ್ವತ್ಥಾಮನು, ಅಸ್ಯ - ಈ ಧೃಷ್ಟದ್ಯುಮ್ನನ, ಕಂಠೇ - ಕುತ್ತಿಗೆಯಲ್ಲಿ, ಧನುಷಃ - ಬಿಲ್ಲಿನ, ಮೌರ್ವೀಂ ಹಗ್ಗವನ್ನು, ಸಮಾಕ್ಷಿಪತ್ - ಎಳೆದನು, ಉರಸ್ಥಃಸನ್ - ಎದೆಯಲ್ಲಿ ಕುಳಿತವನಾಗಿ, ನಿಬಧ್ಯ - ಹಗ್ಗದಿಂದ ಕುತ್ತಿಗೆಯನ್ನು ಸುತ್ತಿ, ಕೃಚ್ಛ್ರೇಣ - ಕಷ್ಟದಿಂದ, ಮುಮುಂಥ - ಮಥನ ಮಾಡಿದನು, ಅಸೌ ವಹ್ನಿಃ - ಈ ಅಗ್ನಿಯ ಅವತಾರ ನಾದ ಧೃಷ್ಟದ್ಯುಮ್ನನು, ಕೃಚ್ಛ್ರೇಣ ಕಷ್ಟದಿಂದ, ದೇಹಂ - ಶರೀರವನ್ನು, ವಿಹಾಯ - ಬಿಟ್ಟು, ನಿಜಂಸ್ಥಾನಂ - ತನ್ನದಾದ ಅಗ್ನಿಲೋಕವನ್ನು ಕುರಿತು, ಯಯೌ - ಹೋದನು. ॥೧೪೧॥

ತತಃ ಶಿಖಂಡಿನಂ ಹತ್ವಾ ಯುಧಾಮನ್ಯೂತ್ತಮೌಜಸೌ ।
ಜನಮೇಜಯಮಪಾಂಚಾಲೀಸುತಾನಭಿಯುಯೌ ಜ್ವಲನ್ ॥೧೪೨॥

ತತಃ - ಅನಂತರ. (ಅಶ್ವತ್ಥಾಮನು) ಶಿಖಂಡಿನಂ - ಶಿಖಂಡಿಯನ್ನು, ಯುಧಾಮನ್ಯೂತ್ತಮೌಜಸೌ - ಯುಧಾ ಮನ್ಯುಮತ್ತು ಉತ್ತಮೌಜರನ್ನು, ಜನಮೇಜಯಮಂಚ-ಜನಮೇಜಯನನ್ನು, ಹೀಗೆ ನಾಲ್ಕು ಮಂದಿ ದ್ರುಪದಪುತ್ರರನ್ನು, ಹತ್ವಾ- ಕೊಂದು, ಜ್ವಲನ್ಸನ್ - ಜ್ವಲಿಸುವವನಾಗಿ, ಪಾಂಚಾಲೀಸುತಾನ್ - ದೌಪದಿಯಮಕ್ಕಳನ್ನುಕುರಿತು, ಅಭಿಯುಯೌ - ಏರಿ ಹೋದನು. ॥೧೪೨॥

ತೈರುತ್ಥಿತೈರಸ್ಯಮಾನಃ ಶರೈಃ ಖಡ್ಗೇನ ಜಘ್ನಿವಾನ್ ॥
ಸರ್ವಾನ್ಸವ್ಯಾಪಸವ್ಯೇನ ತಥಾನ್ಯಾನ್ಪಾಂಡವಾತ್ಮಜಾನ್ ॥೧೪೩॥

ಋತ ಏಕಂ ಭೈಮಸೇನಿಂ ಕಾಶಿರಾಜಾತ್ಮಜಾತ್ಮಜಂ ॥
ತಂ ತದಾಂತರ್ಹಿತಃ ಶರ್ವಃ ಕೈಲಾಸಮನಯತ್ಕ್ಷಣಾತ್ ॥೧೪೪॥

ಉತ್ಥಿತೈಃ- ಹಾಸಿಗೆಯಿಂದ ಎದ್ದಿರುವ, ತೈಃ- ಆ ದ್ರೌಪದಿಯ ಮಕ್ಕಳಿಂದ, ಶರೈಃ - ಬಾಣಗಳಿಂದ, ಅಸ್ಯಮಾನಃ-ನಿರಾಕರಿಸಿಕೊಳ್ಳಲ್ಪಟ್ಟ, ಅಶ್ವತ್ಥಾಮನು, ಸರ್ವಾನ್ - ಎಲ್ಲರನ್ನೂ, ಖಡ್ಗೇನ - ಖಡ್ಗದಿಂದ, ಜಘ್ನಿವಾನ್- ಕೊಂದನು. ತಥಾ- ಹಾಗೆಯೇ, ಕಾಶಿರಾಜಾತ್ಮಜಾತ್ಮಜಂ-ಕಾಶಿರಾಜನ ಮಗಳಾದ ಕಾಳಿಯ ಮಗನಾದ, ಭೈಮಸೇನಿಂ- ಭೀಮಸೇನನ ಮಗನಾದ, ಏಕಂ - ಒಬ್ಬನನ್ನು, ಋತೇ - ಬಿಟ್ಟು, ಅನ್ಯಾನ್ - ಇತರರಾದ, ಪಾಂಡವಾತ್ಮಜಾನ್ - ಪಾಂಡವರ ಮಕ್ಕಳನ್ನು, ಸವ್ಯಾಪಸವ್ಯೇನ- ಎಡ ಬಲ ಕೈಗಳ ತಾಡನೆಯಿಂದ, ಜಘ್ನಿವಾನ್ - ಕೊಂದನು. ತದಾ - ಕೊಲ್ಲುವ ಸಮಯದಲ್ಲಿ, ಅಂತರ್ಹಿತಃ-ಅಂತರ್ಧಾನವನ್ನು ಹೊಂದಿದ, ಶರ್ವಃ-ರುದ್ರನು. ತಂ - ಆ ಭೀಮನಮಗನನ್ನು, ಕ್ಷಣಾತ್- ಕೂಡಲೇ, ಕೈಲಾಸಂ-ಕೈಲಾಸವನ್ನು ಕುರಿತು, ಅನಯತ್ - ಕರೆದುಕೊಂಡು ಹೋದನು. ॥೧೪೩॥೧೪೪॥

ಸಶರ್ವತ್ರಾತನಾಮಾಸೀದತಸ್ತತ್ರೈವಸೋಽವಸತ್ ॥
ಪುರಾರ್ಥಿತಃ ಸ್ವಸ್ರೀದೌಹಿತ್ರಸ್ಯಾಮರತ್ವಾಯ ಶಂಕರಃ ॥
ಕಾಶಿರಾಜೇನ ತೇನಾಸೌ ಜಗೋಪೈನಂ ಕೃಪಾಯುತಃ ॥೧೪೫॥

ಅತಃ – ಆದ್ದರಿಂದ, ಸಃ— ಆ ಭೀಮಪುತ್ರನು, ಶರ್ವತ್ರಾತನಾಮಾ — ರುದ್ರನಿಂದ ರಕ್ಷಿಸಲ್ಪಟ್ಟ ಪ್ರಯುಕ್ತ ಶರ್ವತ್ರಾತನೆಂದು ಹೆಸರುಳ್ಳವನು, ಆಸೀತ್ – ಆದನು. ಸಃ – ಆ ಶರ್ವತ್ರಾತನು, ತತ್ರೈವ — ಆ ಕೈಲಾಸದಲ್ಲಿಯೇ, ಅವಸತ್ – ವಾಸಮಾಡಿದನು. ಪುರಾ—ಹಿಂದೆ, ಕಾಶಿರಾಜೇನ — ಕಾಶಿದೇಶದ ರಾಜನಿಂದ, ಸ್ವಸ್ರೀದೌಹಿತ್ರಸ್ಯ – ತನ್ನ ಮಗಳಾದ ಕಾಳಿಯ ಮಗನಿಗೆ, ಅಮರತ್ವಾಯ – ಅವಧ್ಯತ್ವಕ್ಕೋಸರ, ಶಂಕರಃ – ರುದ್ರನು, ಯತಃ – ಯಾವ ಕಾರಣದಿಂದ, ಅರ್ಥಿತಃ – ಪ್ರಾರ್ಥಿಸಿಕೊಳ್ಳಲ್ಪಟ್ಟನೋ, ತೇನ— ಆ ಕಾರಣದಿಂದ, ಕೃಪಾಯುತಃ – ದಯೆಯಿಂದ ಕೂಡಿದ, ಅಸೌ — ಈ ರುದ್ರನು, ಏನಂ—ಈ ಭೀಮನ ಮಗನನ್ನು, ಜುಗೋಪ - ರಕ್ಷಿಸಿದನು. ॥೧೪೫॥

ಅವ—ಈ ಭೀಮ ಪುತ್ರನು ಭೂಲೋಕಕ್ಕೆ ಬಾರದಿರಲು ಕಾರಣವನ್ನು ಹೇಳುತ್ತಾರೆ.

ವಾಸುದೇವಮತಂ ಜ್ಞಾತ್ವಾಸಾಮ್ರಾಜ್ಯಾಯಪರೀಕ್ಷಿತಃ ॥
ವಾರಯಾಮಾಸ ಭೂಲೋಕಂ ನೈವಯಾಹೀತ್ಯಮುಂ ಶಿವಃ ॥೧೪೬॥

ಶಿವಃ – ರುದ್ರನು, ಪರೀಕ್ಷಿತಃ – ಪರೀಕ್ಷಿನ್ನಾಮಕನಾದ ಅಭಿಮನ್ಯುಪುತ್ರನಿಗೆ, ಸಾಮ್ರಾಜ್ಯಾಯ – ಪಟ್ಟಾಭಿಷೇಕಕ್ಕೋಸ್ಕರ, ವಾಸುದೇವಮತಂ—ಶ್ರೀ ಕೃಷ್ಣನ ಅಭಿಪ್ರಾಯವನ್ನು, ಜ್ಞಾತ್ವಾ—ತಿಳಿದು, ಅಮುಂ—ಈ ಶರ್ವತ್ರಾತನನ್ನು ಭೂಲೋಕಂ—ಭೂಲೋಕವನ್ನು ಕುರಿತು, ನೈವ ಯಾಹಿ—ಹೋಗಲೇ ಬೇಡ, ಇತಿ – ಎಂದು, ವಾರಯಾಮಾಸ–ತಡೆದನು. ॥೧೪೬॥.

ಸಾಮಾನ್ಯತೋಽಪಾಂಡವಾಯ ದ್ರೌಣಿನಾಪ್ಯಭಿಸಂಧಿತಂ ॥
ತದ್ರೂಪೇಣೈವ ರುದ್ರೇಣ ವಿನೈನಮಿತಿಚಿಂತಿತಂ ॥೧೪೭॥

ಅಸ್ತ್ರಂ ಬ್ರಹ್ಮಶಿರಶ್ಚೈನಂ ನಜಘಾನೈಕ್ಯತಸ್ತಯೋಃ ॥
ಚೇಕಿತಾನಾದಿಕಾಂಶ್ಚೈವ ಜಘಾನಾನ್ಯಾಂಶ್ಚ ಸರ್ವಶಃ ॥೧೪೮॥

ಸಾಮಾನ್ಯತಃ—ವಿಶೇಷವಾಗಿ ಹೆಸರನ್ನು ಹೇಳದೇ, ಸಾಮಾನ್ಯಾಕಾರವಾಗಿ, ಅಪಾಂಡವಾಯ – ಪಾಂಡವರ ನಾಶಕ್ಕೋಸ್ಕರ, ದ್ರೌಣಿನಾ–ಅಶ್ವತ್ಥಾಮನಿಂದ, ಅಭಿಸಂಧಿತಂ– ಪ್ರಯೋಗಿಸಲ್ಪಟ್ಟ ಅಸ್ತ್ರವು, ತದ್ರೂಪೇಣೈವ–ಆ ಅಶ್ವತ್ಥಾಮನ ಸ್ವರೂಪನೇ ಆದ, ರುದ್ರೇಣ— ರುದ್ರನಿಂದ, ಏನಂ – ಈ ಭೀಮಪುತ್ರನನ್ನು, ವಿನಾ, ಹೊರತು, ಇತಿ – ಎಂಬುದಾಗಿ ಚಿಂತಿತಂ – ಆಲೋಚಿಸಲ್ಪಟ್ಟಿತು. ಅತಃ—ಆದ್ದರಿಂದ ಅಸ್ತ್ರಂ ಬ್ರಹ್ಮಶಿರಃ – ಪಾಂಡವರ ನಾಶಕ್ಕೋಸ್ಕರ ಅಶ್ವತ್ಥಾಮನಿಂದ ಪ್ರಯೋಗಿಸಲ್ಪಟ್ಟ ಬ್ರಹ್ಮಾಸ್ತ್ರವು, ತಯೋಃ—ಆ ರುದ್ರ ಮತ್ತು ಅಶ್ವತ್ಥಾಮರಿಗೆ, ಐಕ್ಯತಃ – ಅಭೇದವಿರುವದರಿಂದ ಏನಂ – ಈಶರ್ವತ್ರಾತನನ್ನು, ನ ಜಘಾನ–ಕೊಲ್ಲಲಿಲ್ಲ, ಚೇಕಿತಾನಾದಿಕಾನ್—ಚೇಕಿತಾನನೇ ಮೊದಲಾಗಿಉಳ್ಳ, ಸರ್ವಶಃ—ಬೇರೆ ಎಲ್ಲರನ್ನೂ ಕೂಡ, ಜಘಾನ—ಕೊಂದಿತು. ॥೧೪೭॥೧೪೮॥

ಸ ಚೇದಿಪಾಂಚಾಲ ಕರೂಶಕಾಶೀನನ್ಯಾಂಶ್ಚ ಸರ್ವಾನ್ವಿನಿಹತ್ಯ ವೀರಃ ।
ಶಿಶೂಂಸ್ತ್ರಿಯಶ್ಚೈವ ನಿಹಂತುಮುಗ್ರಃಪ್ರಾಜ್ವಾಲಯತ್ತಚ್ಛಿಬಿರಂ ಸಮುಂತಾತ್ ॥೧೪೯॥

ಉಗ್ರಃ – ಕ್ರೂರನಾದ, ವೀರಃ—ಪರಾಕ್ರಮಿಯಾದ, ಸಃ – ಆ ಅಶ್ವತ್ಥಾಮನು, ಚೇದಿಪಾಂಚಾಲಕರೂಶಕಾಶೀನ್ — ಚೇದಿ, ಪಾಂಚಾಲ, ಕರೂಶ, ಕಾಶೀದೇಶದವರನ್ನೂ, ಅನ್ಯಾನ್ ಸರ್ವಾಂಶ್ಚ – ಇತರರೆಲ್ಲರನ್ನೂ ಕೂಡ, ನಿಹತ್ಯ – ಕೊಂದು; ಶಿಶೂನ್ – ಮಕ್ಕಳನ್ನೂ, ಸ್ತ್ರಿಯಶ್ಚ – ಸ್ತ್ರೀಯರನ್ನೂ ಕೂಡ, ನಿಹಂತುಂ – ಕೊಲ್ಲಲು, ತತ್ ಶಿಬಿರಂ–ಆ ಸೇನೆಯ ವಾಸ ಸ್ಥಾನವನ್ನು, ಸಮಂತಾತ್ – ಸುತ್ತಮುತ್ತಲೂ, ಪ್ರಾಜ್ವಾಲಯತ್ – ಸುಟ್ಟನು. ॥೧೪೯॥

ಜಿಜೀವಿಷೂಂಸ್ತತ್ರ ಪಲಾಯಮಾನಾನ್ದ್ವಾರಿಸ್ಥಿತೌ ಗೌತಮಸಾತ್ವತೌ ಚ ॥
ನಿಜಘ್ನತುಃ ಸರ್ವತಃ ಪಾರ್ಷತಸ್ಯಸೂತಸ್ತ್ವೇಕಃ ಶೇಷಿತೋದೈವಯೋಗಾತ್ ॥೧೫೦॥

ತತ್ರ – ಆ ಕೊಲ್ಲಲ್ಪಡುವವರ ಮಧ್ಯದಲ್ಲಿ. ಜಿಜೀವಿಷೂನ್ – ಬದುಕಲು ಇಚ್ಛೆಯುಳ್ಳ, ಪಲಾಯಮಾನಾನ್ ಸರ್ವತಃ – ಓಡಿ ಹೋಗತಕ್ಕವರೆಲ್ಲರನ್ನು, ದ್ವಾರಿ – ಬಾಗಿಲಿನಲ್ಲಿ, ಸ್ಥಿತೌ – ಇರತಕ್ಕ, ಗೌತಮಸಾತ್ವತೌ - ಕೃಪ ಮತ್ತು ಕೃತವರ್ಮರು, ನಿಜಘ್ನತುಃ – ಕೊಂದರು, ಪಾರ್ಷತಸ್ಯ—ಧೃಷ್ಟದ್ಯುಮ್ನನ, ಸೂತಸ್ತ್ವೇಕಃ – ಸೂತನೊಬ್ಬನು, ದೈವ ಯೋಗಾತ್—ಜೀವನಕ್ಕೆ ಕಾರಣವಾದ ಅದೃಷ್ಟದಿಂದ, ಶೇಷಿತಃ—ಸಾಯುವೇ ಉಳಿದನು, ॥೧೫೦॥

ಖಡ್ಗೇನ ಪ್ರಹೃತಂ ದೃಷ್ಟ್ವಾ ಹಾರ್ದಿಕ್ಯೇನಪಪಾತಹ ॥
ಭೂಮೌ ಪ್ರಾಗೇವ ಸಂಸ್ಪರ್ಶಾನ್ನ ಜ್ಞಾತಸ್ತಮಸಾsಮುನಾ ॥೧೫೧॥

ಹಾರ್ದಿಕ್ಯೇನ—ಕೃತವರ್ಮನಿಂದ, ಖಡ್ಗೇನ – ಖಡ್ಗದಿಂದ, ಪ್ರಹೃತಂ – ಪ್ರಹಾರವನ್ನು, ದೃಷ್ಟ್ವಾ – ನೋಡಿ, ಪ್ರಾಗೇವ – ಖಡ್ಗದ ಸ್ಪರ್ಶವಾಗುವ ಮೊದಲೇ, (ಸೂತನು) ಭೂಮೌ —ಭೂಮಿಯಲ್ಲಿ, ಪಪಾತ—ಬಿದ್ದನು. ಅಮುನಾ–ಈ ಕೃತವರ್ಮನಿಂದ, ತಮಸಾ – ಕತ್ತಲೆಯಿಂದ, ನ ಜ್ಞಾತಃ – ಅವನು ಬಿದ್ದದ್ದು ತಿಳಿಯಲ್ಪಡಲಿಲ್ಲ. ॥೧೫೧॥

ಅನ್ಯಾಸಕ್ತೇಸಮುತ್ಥಾಯಪ್ರಾದ್ರವದ್ಯತ್ರಪಾರ್ಷತೀ ॥
ತಸ್ಯಾ ಅಕಥಯತ್ಸರ್ವಂ ಸಾ ಭೀಮಾಯಾಹ ದುಃಖಿತಾ ॥
ಪ್ರಾದ್ರವದ್ರಥಮಾರುಹ್ಯ ಸ ಧನ್ವೀ ಗೌತಮೀಸುತಂ ॥೧೫೨॥

ಅನ್ಯಾಸಕ್ತೇಸತಿ—ಕೃತವರ್ಮನು ಬೇರೆಯವರನ್ನು ಕೊಲ್ಲಲು ಆಸಕ್ತನಾಗುತ್ತಿರಲು, ಸಮುತ್ಥಾಯ – (ಸೂತನು) ಎದ್ದು, ಯತ್ರ – ಯಾವ ಉಪಪ್ಲಾವ್ಯ ನಗರದಲ್ಲಿ, ಪಾರ್ಷತೀ – ದ್ರೌಪದಿಯಿದ್ದಳೋ, ತತ್ರ – ಅಲ್ಲಿಗೆ, ಪ್ರಾದ್ರವತ್ – ಓಡಿದನು. ತಸ್ಯಾಃ – ಆ ದ್ರೌಪದಿಗೆ, ಸರ್ವಂ – ಎಲ್ಲಾ ವೃತ್ತಾಂತವನ್ನು, ಅಕಥಯತ್—ಹೇಳಿದನು. ದುಃಖಿತಾ–ಪುತ್ರ ಮರಣದಿಂದ ದುಃಖಿತಳಾದ, ಸಾ—ಆವಳು ಭೀಮಾಯ—ಭೀಮನಿಗೆ, ಆಹ – ಕೌರವರ ಶಿಬಿರಕ್ಕೆ ಬಂದು ಹೇಳಿದಳು. ಧನ್ವೀ – ಧನುರ್ಧಾರಿಯಾದ, ಸಃ—ಆ ಭೀಮನು, ರಥಂ – ರಥವನ್ನು, ಆರುಹ್ಯ – ಏರಿ, ಗೌತಮೀಸುತಂ – ಅಶ್ವತ್ಥಾಮನನ್ನು ಕುರಿತು, ಪ್ರಾದ್ರವತ್—ಓಡಿಹೋದನು. ॥೧೫೨॥

ತದಂತರೇ ದ್ರೌಣಿರಪಿಪ್ರಯಾತಃ ಕೃಷ್ಣಾಸುತಾನಾಂ ಮುದಿತಃಶಿರಾಂಸಿ ॥
ಆದಾಯ ಹಾರ್ದಿಕ್ಯಕೃಪಾನುಯಾತೋ ದುರ್ಯೋಧನಂ ಸನ್ನಿಕೃಷ್ಟಪ್ರಯಾಣಂ ॥೧೫೩॥

ತದಂತರೇ – ಶಿಬಿರದಿಂದ ಸೂತನು ಹೋಗುವುದು ಶಿಬಿರಕ್ಕೆ ಭೀಮನು ಬರುವುದು ಈ ಗಮನಾಗಮನಗಳ ಕಾಲದಲ್ಲಿ. ಮುದಿತಃ— ಸಂತುಷ್ಟನಾದ, ಹಾರ್ದಿಕ್ಯಕೃಪಾನುಯಾತಃ – ಕೃತವರ್ಮ ಮತ್ತು ಕೃಪನಿಂದ ಹಿಂಬಾಲಿಸಲ್ಪಟ್ಟ, ದ್ರೌಣಿರಪಿ—ಅಶ್ವತ್ಥಾಮನೂ ಕೂಡ, ಕೃಷ್ಣಾಸುತಾನಾಂ – ದ್ರೌಪದಿಯ ಮಕ್ಕಳ, ಶಿರಾಂಸಿ – ರುಂಡಗಳನ್ನು, ಆದಾಯ –

ಹಿಡಿದುಕೊಂಡು, ಸನ್ನಿಕೃಷ್ಟಪ್ರಯಾಣಂ - ಸಮೀಪಿಸಿದ ಮರಣವುಳ್ಳ, ದುರ್ಯೋಧನಂ-ದುರ್ಯೋಧನನನ್ನು, ಪ್ರಯಾತಃ-ಹೊಂದಿದನು. ॥೧೫೩॥

ದೃಷ್ಟ್ವಾತದುಕ್ತಂಚನಿ ್ಯಪಾಪಸ್ತುಷ್ಟೋsತ್ಯಜತ್ಸಾಧ್ವಿತಿ ದೇಹಮಾಶು ॥
ಭೀಮಾರ್ಜುನಾಭ್ಯಾಮುಥಕೇಶವಾಚ್ಚ ಭೀತಾಃ ಪೃಥಕ್ದ್ರೌಣಿಮುಖಾಃ ಪ್ರಯಾತಾಃ ॥೧೫೪॥

ಪಾಪಃ—ಪಾಪಿಷ್ಠನಾದ ದುರ್ಯೋಧನನು, ದೃಷ್ಟ್ವಾ – ದ್ರೌಪದಿಯ ಮಕ್ಕಳ ಶಿರಸ್ಸುಗಳನ್ನು ನೋಡಿ, ತದುಕ್ತಂ.ಚ – ಅಶ್ವತ್ಥಾಮನು ಹೇಳಿದ್ದನ್ನೂ ಕೂಡ, ನಿಶಮ್ಯ – ಕೇಳಿ, ಸಾಧ್ವಿತಿ—ಒಳ್ಳೇ ಕೆಲಸವನ್ನು ಮಾಡಿದಿ ಎಂದು, ಉಕ್ತ್ವಾ – ಹೇಳಿ, ತುಷ್ಟಃಸನ್—ಸಂತುಷ್ಟನಾಗಿ, ಆಶು—ಕೂಡಲೇ, ದೇಹಂ—ಶರೀರವನ್ನು, ಅತ್ಯಜತ್ – ಬಿಟ್ಟನು; ಭೀಮಾರ್ಜುನಾಭ್ಯಾಂ – ಭೀಮಾರ್ಜುನರಿಂದ, ಕೇಶವಾಚ್ಚ –ಶ್ರೀ ಕೃಷ್ಣನಿಂದಲೂ ಕೂಡ, ಭೀತಾಃ–ಹೆದರಿದ, ದ್ರೌಣಿಮುಖಾಃ–ಅಶ್ವತ್ಥಾಮನೇ ಪ್ರಧಾನನಾಗಿ ಉಳ್ಳ, ತೇ – ಮೂವರು, ಪೃಥಕ್ – ಬೇರೆ ಬೇರೆ ಕಡೆಗೆ, ಪ್ರಯಾತಾಃ – ಹೊರಟು ಹೋದರು. ॥೧೫೪॥

ತತ್ರೈಕಲಂ ದ್ರೋಣಸುತಂ ರಥೇನ ಯಾಂತಂರಥೀ ಮಾರುತಿರನ್ವಧಾವತ್ ॥
ತಮಾದ್ರವಂತಂಪ್ರಸಮೀಕ್ಷ್ಯಭೀತಃ ಪರಾದ್ರವದ್ರೌಣಿರತಿದ್ರುತಾಶ್ವೈಃ ॥೧೫೫॥

ತತ್ರ-ಆ ಮೂವರ ಮಧ್ಯದಲ್ಲಿ, ರಥೇನ-ರಥದಿಂದ, ಯಾಂತಂ—ಹೋಗತಕ್ಕ, ಏಕಲಂ—ಸಹಾಯಕರಿಲ್ಲದ, ದ್ರೋಣಸುತಂ – ಅಶ್ವತ್ಥಾಮನನ್ನು, ರಥೀ – ರಥವುಳ್ಳ, ಮಾರುತಿಃ—ಭೀಮನು, ಅನ್ವಧಾವತ್ – ಅನುಸರಿಸಿ ಹೋದನು. ದ್ರೌಣಿಃ—ಅಶ್ವತ್ಥಾಮನು, ಆದ್ರವಂತಂ - ಓಡಿಬರುತ್ತಿರುವ ತಂ – ಆ ಭೀಮನನ್ನು, ಪ್ರಸಮೀಕ್ಷ್ಯ – ನೋಡಿ, ಭೀತಸ್ಸನ್–ಹೆದರಿದವನಾಗಿ, ಅತಿದ್ರುತಾಶ್ವೈಃ – ಬಹಳ ವೇಗದಿಂದ ಓಡುವ ಸ್ವಭಾವವುಳ್ಳ ಕುದುರೆಗಳಿಂದ ಕೂಡಿದ ರಥದಿಂದ ಪರಾದ್ರವತ್—ಓಡಿಹೋದನು. ॥೧೫೫॥

ಆದ್ರವಂತಂಪುನರ್ದೃಷ್ಟ್ವಾ ಭೀಮುಂದ್ರೋಣಾತ್ಮಜೋರುಷಾ ॥
ಆವೃತ್ಯಯುಧ್ಯನ್ವಿಜಿತೋsಸ್ತ್ರಂಬ್ರಹ್ಮಶಿರ ಆದದೇ ॥೧೫೬॥

ದ್ರೋಣಾತ್ಮಜಃ – ದ್ರೋಣರ ಮಗನಾದ ಅಶ್ವತ್ಥಾಮನು, ಪುನಃ—ಮತ್ತು, ಆದ್ರವಂತಂ - ಓಡಿಕೊಂಡು ಬರುತ್ತಿರುವ, ಭೀಮಂ–ಭೀಮನನ್ನು, ದೃಷ್ಟ್ವಾ–ನೋಡಿ, ರುಷಾ – ಸಿಟ್ಟಿನಿಂದ, ಆವೃತ್ಯ—ಹಿಂತಿರುಗಿ, ಯುಧ್ಯನ್ಸನ್–ಯುದ್ಧ ಮಾಡುವವನಾಗಿ, ವಿಜಿತಃ ಸನ್–ಪರಾಜಿತನಾಗಿ, ಬ್ರಹ್ಮಶಿರೋsಸ್ತ್ರಂ–ಬ್ರಹ್ಮಾಸ್ತ್ರವನ್ನು, ಆದದೇ–ತೆಗೆದುಕೊಂಡನು.॥೧೫೬॥

ಏತಸ್ಮಿನ್ನಂತರೇಕೃಷ್ಣೋಧರ್ಮಜೇನಾರ್ಜುನೇನಚ ॥
ತತ್ರಾಗಮತ್ತದಸ್ತ್ರಂಚ ಭೀಮುಂಚಾವ್ಯರ್ಥತಾಂ ನಯನ್ ॥೧೫೭॥

ಏತಸ್ಮಿನ್ನಂತರೇ – ಭೀಮನನ್ನು ಕೊಲ್ಲಲು ಬ್ರಹ್ಮಾಸ್ತ್ರವನ್ನು ತೆಗೆದ ಸಮಯದಲ್ಲಿ, ಕೃಷ್ಣಃ—ಶ್ರೀ ಕೃಷ್ಣನು ಧರ್ಮಜೇನ-ಧರ್ಮರಾಜನಿಂದಲೂ, ಆರ್ಜುನೇನಚ-ಅರ್ಜುನನಿಂದಲೂ ಕೂಡ ಕೂಡಿಕೊಂಡು, ಅಸ್ತ್ರಂ–ಬ್ರಹ್ಮಾಸ್ತ್ರವನ್ನು, ಅವ್ಯರ್ಥತಾಂ ನಯನ್–ವ್ಯರ್ಥವಲ್ಲದ್ದನ್ನಾಗಿ ಮಾಡಲು, ಭೀಮಂಚ—ಭೀಮನನ್ನೂ ಕೂಡ, ಅವ್ಯರ್ಥತಾಂ ನಯನ್—ವಧ್ಯನಲ್ಲದವನನ್ನಾಗಿ ಮಾಡಲು, ತತ್ರ—ಆ ಯಂದ್ದ ಸ್ಥಳಕ್ಕೆ, ಆಗಮತ್ – ಬಂದನು. ॥೧೫೭॥

ಅವಧ್ಯೋಭೀಮಸೇನಸ್ತದಸ್ತ್ರಂಚಾಮೋಘಮೇವಯತ್ ॥
ವಿಷ್ಣುನೈವೋಭಯಂಯಸ್ಮಾತ್ಕೃಪ್ತಂ ಭೀಮೋsಸ್ತ್ರಮೇವತತ್ ॥೧೫೮॥

ಗಾಯತ್ರೀ ತತ್ರಮಂತ್ರೋಯದ್ಬ್ರಹ್ಮಾ ತದ್ಧ್ಯಾನದೇವತಾ ॥
ಧ್ಯೇಯೋ ನಾರಾಯಣೋ ದೇವೋಜಗತ್ಪ್ರಸವಿತಾ ಸ್ವಯಂ ॥೧೫೯॥

ಯಸ್ಮಾತ್ – ಯಾವ ಕಾರಣದಿಂದ, ಉಭಯಂ— ಭೀಮನಿಗೆ ಅವಧ್ಯತ್ವವು ಅಸ್ತ್ರಕ್ಕೆ ಅಮೋಘತ್ವವೆಂಬ ಎರಡೂ, ವಿಷ್ಣುನೈವ – ಪರಮಾತ್ಮನಿಂದಲೇ, ಕ್ಲೃಪ್ತಂ – ಸಂಕಲ್ಪಿತವಾದದ್ದೋ, ತತ್ – ಆ ಕಾರಣದಿಂದ, ಭೀಮಃ – ಭೀಮನು, ಅವಧ್ಯ ಏವ – ಕೊಲ್ಲಲು ಯೋಗ್ಯನಲ್ಲದವನೇ, ತದಸ್ತ್ರಂ—ಆ ಬ್ರಹ್ಮಾಸ್ತ್ರವೂ, ಅಮೋಘಮೇವ – ವ್ಯರ್ಥವಲ್ಲದ್ದೇ. ಭೀಮನಿಗೆ ಪ್ರಕಾರಾಂತರದಿಂದ ಅವಧ್ಯತ್ವವನ್ನು ಹೇಳುತ್ತಾರೆ, ಯತ್- ಯಾವ ಕಾರಣದಿಂದ, ತತ್ರ – ಆ ಬ್ರಹ್ಮಾಸ್ತ್ರದಲ್ಲಿ, ಗಾಯತ್ರೀ– ಗಾಯತ್ರಿಯು, ಮಂತ್ರಃ – ಮಂತ್ರವೋ, ಬ್ರಹ್ಮಾ —ಚತುರ್ಮುಖ ಬ್ರಹ್ಮನು, ತದ್ಧ್ಯಾನದೇವತಾ— ಗಾಯತ್ರಿಯನ್ನು ಧ್ಯಾನಮಾಡತಕ್ಕ ದೇವತೆಯೋ.(ಮಂತ್ರದಋಷಿಯು ಮಂತ್ರವನ್ನು ಸಾಧಿಸತಕ್ಕ ದೇವತೆಯಾದ್ದರಿಂದ)ಮಂತ್ರಾಭಿಮಾನಿಯೂ ಅವನೇ, ತತ್ – ಆದ್ದರಿಂದ, ಭೀಮಃ—ಭೀಮನು, ಅಸ್ತ್ರಮೇವ —ಅಸ್ತ್ರಾತ್ಮಕನು, ಅಂದರೆ ಅಸ್ತ್ರಕ್ಕೆ ಅಭಿಮಾನಿಯು. ಜಗತ್ಪ್ರಸವಿತಾ—ಬ್ರಹ್ಮಾದಿ ಜಗತ್ತನ್ನು ಸೃಷ್ಟಿಮಾಡುವ, ದೇವಃ – ಕ್ರೀಡಾದಿಗುಣವಿಶಿಷ್ಟನಾದ, ಸ್ವಯಂ ನಾರಾಯಣಃ – ಸಾಕ್ಷಾತ್‌ನಾರಾಯಣನು, ಧ್ಯೇಯಃ – ಧ್ಯಾನಮಾಡಿಸಿಕೊಳ್ಳಲ್ಪಡುವವನು. ॥೧೫೮॥೧೫೯॥

ಭಾ.ಅ. ೧೪೦-೧೫೯ ಧೃಷ್ಟದ್ಯುಮ್ನನು ಸ್ವಪ್ನದಲ್ಲಿ ನಿತ್ಯವು ತನ್ನ ಮರಣಸಾಮೀಪ್ಯವನ್ನು ಕಾಣುತ್ತಿದ್ದದ್ದರಿಂದಲೂ ಅಶ್ವತ್ಥಾಮರು ಹಾಗೆ ಮಾತಾಡಿದಾಗ ಸುಮ್ಮನೇ ಇದ್ದನು. ದ್ರೋಣರ ವಧದನಂತರ ಸ್ವಪ್ನದಲ್ಲಿ ಅಶ್ವತ್ಥಾಮನು ತನ್ನನ್ನು ಕೊಲ್ಲುವಂತೆಯೂ ಮೃತ್ಯು ದೇವತೆಯು ತನ್ನನ್ನು ಎಳೆಯುತ್ತಿರುವಂತೆಯೂ ನಿತ್ಯದಲ್ಲಿ ಧೃಷ್ಟದ್ಯುಮ್ನನು ಕಾಣುತ್ತಿದ್ದನು. ಅಶ್ವತ್ಥಾಮರು ಅವನ ಕೊರಳಲ್ಲಿ ಜ್ಯಾವನ್ನು ಹಾಕಿ, ಅವನ ಎದೆಯಲ್ಲಿ ಕುಳಿತು ಹಗ್ಗವನ್ನು ಬಿಗಿಯಾಗುವಂತೆ ಜೋರಾಗಿ ಜಗ್ಗಿದರು. ಆಗ ಧೃಷ್ಟದ್ಯುಮ್ನನು ಆ ದೇಹವನ್ನು ತ್ಯಜಿಸಿ ತನ್ನ ಮೂಲರೂಪ ಅಗ್ನಿಯ ಸ್ಥಾನವನ್ನು ಹೊಂದಿದನು ಅಶ್ವತ್ಥಾಮರು ಹೀಗೆ ಧೃಷ್ಟದ್ಯುಮ್ನನನ್ನು ಕೊಂದು ಅವನ ನಾಲ್ಕು ಸಹೋದರರಾದ ಶಿಖಂಡಿ, ಯುಧಾಮನ್ಯು ಉತ್ತಮೌಜಸ್, ಜನಮೇಜಯರನ್ನು ಕೊಂದು ದ್ರೌಪದಿಯ ಮಕ್ಕಳ ಸಮೀಪಕ್ಕೆ ಹೋದರು. ಅವರು ಎಚ್ಚತ್ತು ಪ್ರತಿ-

---

ರೋಧಿಸಿದಾಗ ಖಡ್ಗವನ್ನು ಎಡ ಒಲಗಳಲ್ಲಿ ಬೀಸಿ ಕೊಂದರು. ಹಾಗೆ ಉಳಿದ ಎಲ್ಲ ಪಾಂಡವರ ಪುತ್ರರನ್ನು ಶ್ರೀಭೀಮಸೇನರಿಗೆ ಕಾಳಿದೇವಿಯಲ್ಲಿ ಹುಟ್ಟಿದ ಮಗನೊಬ್ಬನನ್ನು ಬಿಟ್ಟು ಸಂಹರಿಸಿದರು. ಅವನನ್ನು ಶ್ರೀರುದ್ರದೇವರು ತಮ್ಮ ಕೈಲಾಸಕ್ಕೆ ಕರೆದೊಯ್ದರು, ಅಲ್ಲಿ ರಕ್ಷಿಸಿದರು. ಹೀಗಾಗಿ ಅವನು ಶರ್ವತ್ರಾತ (ರುದ್ರರಿಂದ ರಕ್ಷಿತ) ಎಂಬ ಹೆಸರುಳ್ಳವನಾದನು. ಈ ಶರ್ವತ್ರಾತನ(ಅಜ್ಜ–ತಾಯಿಯತಂದೆ, ಮಾತಾಮಹ)ನಾದ ಕಾಶೀರಾಜನು ತನ್ನ ಮಗಳ ಮಗನು(ಅಮರ) ಮರಣರಹಿತನಾಗ ಬೇಕೆಂದು ಶ್ರೀರುದ್ರದೇವರನ್ನು ಪ್ರಾರ್ಥಿಸಿದ್ದರಿಂದ ರುದ್ರದೇವರು ರಕ್ಷಿಸಿದರು ಪರೀಕ್ಷಿತನಿಗೆ ರಾಜ್ಯ ಸಿಗಬೇಕೆಂದು ಶ್ರೀಕೃಷ್ಣಪರಮಾತ್ಮನ ಸಂಕಲ್ಪವನ್ನು ತಿಳಿದ ಶ್ರೀರುದ್ರದೇವರು ಆ ಶರ್ವತ್ರಾತನನ್ನು ಭೂಲೋಕಕ್ಕೆ ಕಳಿಸಲಿಲ್ಲ. ಮುಂದೆ ಅಶ್ವತ್ಥಾಮರು ಬ್ರಹ್ಮಾಸ್ತ್ರವನ್ನು ಪಾಂಡವ ಸಂತತಿಯು ನಾಶವಾಗಲಿ ಎಂದು ಸಾಪರಾನ್ಯವಾಗಿ ಸಂಕಲ್ಪಿಸಿ ಪ್ರಯೋಗಿಸಿದರೂ ಕೂಡ, ಅವರ ಮೂಲರೂಪರಾದ ಶ್ರೀರುದ್ರದೇವರು ಈ ಶರ್ವತ್ರಾತನನ್ನು ಬಿಟ್ಟು ಉಳಿದವರಿಗೆ ಪರಿಣಾಮವಾಗಲಿ ಎಂದು ವಿಶೇಷ ಸಂಕಲ್ಪ ಮಾಡಿದ್ದರಿಂದ ಆ ಅಸ್ತ್ರವೂ ಕೂಡ, ಈ ಶರ್ವತ್ರಾತನಿಗೆ ಏನನ್ನೂ ಮಾಡಲಿಲ್ಲ. ನಂತರ ಅಶ್ವತ್ಥಾಮರು ಪಾಂಡವ ಪಕ್ಷದಲ್ಲಿರುವ ಚೇಕಿತಾನ ಮೊದಲಾದವರನ್ನೂ, ಚೇದಿ, ಪಾಂಚಾಲ, ಕಾಶೀರಾಜ್ಯಗಳ ಎಲ್ಲ ಜನರನ್ನೂ ಕೊಂದು, ಶಿಶುಗಳನ್ನು, ಸ್ತ್ರೀಯರನ್ನು ಕೊಲ್ಲುವದದಕ್ಕಾಗಿ ಶಿಬಿರಕ್ಕೆ ಬೆಂಕಿಹಚ್ಚಿದರು, ಆಗ ಯಾರು ಯಾರು ಹೆದರಿ ಹೊರಗೆ ಬರುತ್ತಿದ್ದರೋ ಅವರೆಲ್ಲರನ್ನು ದ್ವಾರದಲ್ಲಿ ನಿಂತಿರುವ ಕೃಪಕೃತವರ್ಮರು ಕೊಲ್ಲುತ್ತಿದ್ದರು. ಆದರೆ ಧೃಷ್ಟದ್ಯುಮ್ನನ ಸಾರಥಿಯೊಬ್ಬನು ಓಡಿಬಂದಾಗ ಕೃತವರ್ಮನು ಖಡ್ಗದಿಂದ ಹೊಡೆದನು. ಅವನು ಖಡ್ಗ ಬೀಸಿದ್ದನ್ನು ನೋಡಿದ (ಸಾರಥಿಯು) ಅದು ಬಡಿಯುವ ಮೊದಲೇ ಕೆಳಗೆಬಿದ್ದನು. ಕತ್ತಲೆ ಇದ್ದದ್ದರಿಂದ ಅವನು ಬಿದ್ದದ್ದಾಗಲೀ, ಖಡ್ಗ ಅವನಿಗೆ ಬಡಿದಿಲ್ಲ ವೆಂದಾಗಲೀ, ಕೃತವರ್ಮನಿಗೆ ತಿಳಿಯಲಿಲ್ಲ. ಮುಂದೆ ಕೃತವರ್ಮನು ಬೇರೆಯವರನ್ನು ಕೊಲ್ಲುವದರಲ್ಲಿ ತೊಡಗಿದಾಗ ಈ ಸಾರಥಿಯು ಎದ್ದು, ಓಡಿ ದ್ರೌಪದಿಯ ಸಮೀಪಕ್ಕೆ ಬಂದು ಎಲ್ಲ ವಿಷಯವನ್ನು ತಿಳಿಸಿದನು. ಅವಳು ದುಃಖದಿಂದ ಶ್ರೀಭೀಮರಿಗೆ ಹೇಳಿದಳು. ಅವರು ಧನುರ್ಧಾರಿಗಳಾಗಿ, ರಥವೇರಿ ಹೊರಟರು. ಇಷ್ಟು ಆಗುವ ಸಮಯದೊಳಗೆ

ಅಶ್ವತ್ಥಾಮರು ದ್ರೌಪದೀ ಪುತ್ರರ ಶಿರಸ್ಸುಗಳನ್ನು ಕತ್ತರಿಸಿ ತೆಗೆದುಕೊಂಡು, ಮರಣೋನ್ಮುಖನಾದ ನೀಚ ದುರ್ಯೋಧನನ ಹತ್ತಿರ ಹೋಗಿ ಆಗಿತ್ತು. ದುರ್ಯೋಧನನಿಗೆ ಎಲ್ಲ ಸಮಾಚಾರ ತಿಳಿಸಿ ತಲೆಗಳನ್ನು ತೋರಿಸಿದರು. ದುರ್ಯೋಧನನು ಅದನ್ನೆಲ್ಲ ನೋಡಿ, ಕೇಳಿ ಸಂತೋಷಪಟ್ಟು, ಒಳ್ಳೆಯ ಕೆಲಸಮಾಡಿದಿ ಎಂದು ಹೇಳಿ, ಪ್ರಾಣ ಬಿಟ್ಟನು. ಈ ಕಡೆಗೆ ಅಶ್ವತ್ಥಾಮನು, ಕೃತವರ್ಮಕೃಪ ಇವರು ಶ್ರೀಕೃಷ್ಣಭೀಮಾರ್ಜುನರಿಂದ ಹೆದರಿಕೊಂಡು ಬೇರೆಬೇರೆ ಕಡೆಗೆ ಓಡಿದರು. ರಥದಲ್ಲಿ ಕುಳಿತು ಓಡುತ್ತಿರುವ ಅಶ್ವತ್ಥಾಮನನ್ನು ಬೆನ್ನುಹತ್ತಿ ಶ್ರೀಭೀಮರು ರಥದಿಂದ ಹೋದರು. ಇವರು ಬರುವದನ್ನು ನೋಡಿದ ಅಶ್ವತ್ಥಾಮರು ಇನ್ನೂ ವೇಗದಿಂದ ಕುದುರೆಗಳನ್ನು ಓಡಿಸಿದರು. ಆದರೂ ಶ್ರೀಭೀಮರು ಬೆನ್ನುಹತ್ತಿಬಂದದ್ದನ್ನು ನೋಡಿದ ಅಶ್ವತ್ಥಾಮರು ಇನ್ನೂಓಡಿ ಪ್ರಯೋಜನವಿಲ್ಲ ಎಂದು ತಿಳಿದು ಹಿಂದಿರುಗಿ,ಯುದ್ಧ ಮಾಡಿ ಸೋತು ಬ್ರಹ್ಮಾಸ್ತ್ರವನ್ನು ಬಿಡಲು ಸಿದ್ಧರಾದರು. ಈ ಹೊತ್ತಿಗೆ ಶ್ರೀಕೃಷ್ಣನು ಬ್ರಹ್ಮಾಸ್ತ್ರವು ವ್ಯರ್ಥವಾಗಬಾರದೆಂತಲೂ, ಭೀಮಸೇನರ ಅವಧ್ಯತ್ವವು ರಕ್ಷಿತವಾಗ ಬೇಕೆಂದೂ ಧರ್ಮಾರ್ಜುನಸಹಿತನಾಗಿ ಅಲ್ಲಿಗೆ ಬಂದನು. ಅವೆರಡೂ ತನ್ನಿಂದಲೇ ಸಂಕಲ್ಪಿಸಲ್ಪಟ್ಟದ್ದರಿಂದ ಯಾವದೊಂದು ನಡೆಯದಿದ್ದರೂ ತನ್ನ ಸಂಕಲ್ಪಭಂಗವೇ ಆಗುತ್ತದೆ. ಆ ಬ್ರಹ್ಮಾಸ್ತ್ರಕ್ಕೆ ಗಾಯತ್ರಿ ಮಂತ್ರವು. ಅದರ ಋಷಿ ಹಾಗು ಅಭಿವಮಾನಿಗಳು ಬ್ರಹ್ಮದೇವರಾದ್ದರಿಂದ ಭಾವಿಬ್ರಹ್ಮರಾದ ಭೀಮರೂ ಅಸ್ತ್ರಾಭಿವಮಾನಿಗಳು. ಹೀಗಾಗಿಯೂ ಅವರಿಗೆ ಏನೂ ಮಾಡುವಂತಿಲ್ಲ. ಆದ್ದರಿಂದ ಶ್ರೀಕೃಷ್ಣನು ಬಂದನು.

ಅವ—ಶ್ರೀಕೃಷ್ಣನು ಅಶ್ವತ್ಥಾಮನು ಮಾಡಿದ ಸಾಹಸವನ್ನು ಧರ್ಮಾರ್ಜುನರನ್ನು ಕುರಿತು ಹೇಳಿದ್ದನ್ನು ತಿಳಿಸುತ್ತಾರೆ.

ಊಚೇಚ ಪಾರ್ಥಯೋಃ ಕೃಷ್ಣೋ ಯುಕ್ತಂ ದ್ರೌಣಿನಾಪುರಾ ॥
ಸ್ವಾಯುಧಾನಾಂ ಯಾಚನಂ ಚಾಪ್ಯಶಕ್ತೇನ ತದುದ್ಧೃತೌ ॥೧೬೦॥

ಪೃಷ್ಟೇನೋಕ್ತಂ ತ್ವಯಾಹೀನಾಂ ಕೃತ್ವಾದುರ್ಯೋಧನಾಯಗಾಂ ॥
ದಾತುಂ ತ್ವದಾಯುಧಂ ಮೇಽದ್ಯೇ ತ್ಯೇವಮುಕ್ತೇಽತ್ಮನೋದಿತಂ ॥

ಮೈವಂ ಕಾರ್ಷೀಃಪುನರಿತಿ ಧ್ಯಾಯತಾಽಬ್ಧೇಸ್ತಟೇ ಸ್ವಮು ॥೧೬೧॥

ತದುದ್ಧೃತೌ – ಕೃಷ್ಣನ ಚಕ್ರಾದ್ಯಾಯುಧಗಳನ್ನು ಎತ್ತುವದರಲ್ಲಿ, ಅಶಕ್ತೇನ – ಅಸಮರ್ಥನಾದ, ದ್ರೌಣಿನಾ – ಅಶ್ವತ್ಥಾಮನಿಂದ, ಪುರಾ – ಹಿಂದೆ, ಸ್ವಾಯುಧಾನಾಂ — ಶ್ರೀಕೃಷ್ಣನ ಆಯುಧಗಳ, ಯತ್ — ಯಾವ, ಯಾಚನಂ – ಪ್ರಾರ್ಥನೆಯು, ಕೃತಂ – ಮಾಡಲ್ಪಟ್ಟಿತೋ, ತತ್—ಅದನ್ನೂ, ಚ – ಮತ್ತು, ಪೃಷ್ಟೇನ— ನನ್ನ ಆಯುಧವು ಯಾವ-ದಕ್ಕೋಸ್ಕರವೆಂದು ಕೇಳಲ್ಪಟ್ಟ, ಅಬ್ಧೇಸ್ತಟೇ – ಸಮುದ್ರತೀರದಲ್ಲಿ, ಸ್ವಮು—ತನ್ನನ್ನೇ, ಧ್ಯಾಯತಾ—ಧ್ಯಾನ ಮಾಡತಕ್ಕ, ದ್ರೌಣಿನಾ—ಅಶ್ವತ್ಥಾಮನಿಂದ, ಗಾಂ—ಭೂಮಿಯನ್ನು, ತ್ವಯಾ—ನಿನ್ನಿಂದ, ಹೀನಾಂ—ರಹಿತವಾದದ್ದನ್ನಾಗಿ, ಕೃತ್ವಾ–ಮಾಡಿ, ದುರ್ಯೋಧನಾಯ—ದುರ್ಯೋಧನನಿಗೋಸ್ಕರ, ದಾತುಂ— ಕೊಡಲು, ಅದ್ಯ – ಈಗ, ತ್ವದಾಯುಧಂ— ನಿನ್ನ ಆಯುಧವನ್ನು, ಮೇ – ನನಗೆ, ದೇಹಿ – ಕೊಡು, ಇತಿ—ಎಂದು, ಯದುಕ್ತಂ – ಯಾವುದು ಹೇಳಲ್ಪಟ್ಟಿತೋ, ತಚ್ಚ — ಅದನ್ನೂ, ಏವಮುಕ್ತೇಸತಿ—ಹೀಗೆ ಅಶ್ವತ್ಥಾಮನು ಹೇಳುತ್ತಿರಲು, ತದಾ – ಆಗ, ಆತ್ಮನಾ – ಶ್ರೀಕೃಷ್ಣನಿಂದ, ಏವಂ— ಈ ರೀತಿಯಾಗಿ, ಪುನಃ— ಇನ್ನು ಮೇಲೆ, ಮಾಕಾರ್ಷೀಃ — ಮಾಡಬೇಡ, ಇತಿ – ಎಂದು, ಯದುದಿತಂ — ಯಾವದು ಹೇಳಲ್ಪಟ್ಟಿತೋ, ತಚ್ಚ – ಅದನ್ನೂ ಕೂಡ, ಕೃಷ್ಣಃ—ಶ್ರೀಕೃಷ್ಣನು, ಪಾರ್ಥಯೋಃ—ಧರ್ಮರಾಜ ಅರ್ಜುನರಿಗೆ, ಊಚೇ– ಹೇಳಿದನು. ನನ್ನ ನಾಶಕ್ಕೋಸ್ಕರ ನನ್ನ ಆಯುಧದ ಪ್ರಾರ್ಥನೆಯನ್ನು ಮಾಡತಕ್ಕ ಈ ಅಶ್ವತ್ಥಾಮನು ಅವಿವೇಕಿಯು ಎಂಬ ಅಭಿಪ್ರಾಯವು. ॥೧೬೦॥೧೬೧॥

ತದಸ್ತ್ರಂ ಪ್ರಜ್ವಲದ್ಘೃಷ್ಟ್ವಾಽಪಾಂಡವತ್ವವಿಧಿತ್ಸಯಾ ॥
ಧರಾಯಾಃ ದ್ರೌಣಿನಾಮುಕ್ತಂ ಕೃಷ್ಣೇನ ಪ್ರೇರಿತೋಽರ್ಜುನಃ ॥೧೬೨॥

ಸ್ವಸ್ತ್ಯಸ್ತು ದ್ರೌಣಪುತ್ರಾಯ ಭೂತೇಭ್ಯೋಮಹ್ಯಮೇವಚ ॥
ಇತಿ ಬ್ರುವಂಸ್ತದೇವಾಸ್ತ್ರಮಸ್ತ್ರಶಾಂತ್ಯೈವ್ಯಸರ್ಜಯತ್ ॥೧೬೩॥

ಧರಾಯಾಂ – ಭೂಮಿಯಲ್ಲಿ, ಅಪಾಂಡವತ್ವವಿಧಿತ್ಸಯಾ – ಪಾಂಡುರಾಜನ ಸಂತಾನದ ನಾಶವನ್ನು ಮಾಡುವ ಇಚ್ಛೆಯಿಂದ, ದ್ರೌಣಿನಾ – ಅಶ್ವತ್ಥಾಮನಿಂದ, ಮುಕ್ತಂ—ಬಿಡಲ್ಪಟ್ಟ, ಪ್ರಜ್ವಲತ್ – ಜ್ವಲಿಸುತ್ತಿರುವ, ತದಸ್ತ್ರಂ — ಆ ಬ್ರಹ್ಮಾಸ್ತ್ರವನ್ನು, ದೃಷ್ಟ್ವಾ—ನೋಡಿ, ಕೃಷ್ಣೇನ— ಶ್ರೀಕೃಷ್ಣನಿಂದ, ಪ್ರೇರಿತಃ – ಪ್ರೇರಿಸಿಕೊಳ್ಳಲ್ಪಟ್ಟ, ಅರ್ಜುನಃ – ಅರ್ಜುನನು, ದ್ರೌಣಪುತ್ರಾಯ – ಅಶ್ವತ್ಥಾಮನಿಗೆ, ಸ್ವಸ್ತ್ಯಸ್ತು – ಸ್ವಸ್ತಿಯಾಗಲಿ, ಭೂತೇಭ್ಯಃ — ಪ್ರಾಣಿಗಳಿಗೂ, ಮಹ್ಯಂ—ನನಗೂ, ಸ್ವಸ್ತ್ಯಸ್ತು – ಸ್ವಸ್ತಿಯಾಗಲಿ, ಇತಿ – ಈ ರೀತಿಯಾಗಿ, ಬ್ರುವನ್‌ಸನ್ — ಹೇಳತಕ್ಕವನಾಗಿ, ಅಸ್ತ್ರ-ಶಾಂತ್ಯೈ – ಅಶ್ವತ್ಥಾಮನ ಅಸ್ತ್ರದ ಉಪಶಮನಕ್ಕೋಸ್ಕರ, ತದಸ್ತ್ರಮೇವ – ಆ ಬ್ರಹ್ಮಾಸ್ತ್ರವನ್ನೇ, ವ್ಯಸರ್ಜಯತ್ — ಬಿಟ್ಟನು. ॥೧೬೨॥೧೬೩॥

ಅನಸ್ತ್ರಜ್ಞೇಷು ಮುಕ್ತಂ ತದ್ಧನ್ಯಾದಸ್ತ್ರಮುಚಂ ಯತಃ ॥
ಗುರುಭಕ್ತ್ಯಾತತೋ ದ್ರೌಣೇಃ ಸ್ವಸ್ತ್ಯಸ್ತ್ವಿತ್ಯಾಹ ವಾಸವಿಃ ॥೧೬೪॥

ಅನಸ್ತ್ರಜ್ಞೇಷು – ಧರ್ಮರಾಜ, ನಕುಲ, ಸಹದೇವರಿಗೆ ಬ್ರಹ್ಮಾಸ್ತ್ರಜ್ಞಾನವಿಲ್ಲದ್ದರಿಂದ ಅಸ್ತ್ರಜ್ಞಾನವಿಲ್ಲದವರಲ್ಲಿ, ಮುಕ್ತಂ – ಬಿಡಲ್ಪಟ್ಟ, ತತ್—ಆ ಬ್ರಹ್ಮಾಸ್ತ್ರವು, ಯತಃ—ಯಾವ ಕಾರಣದಿಂದ, ಅಸ್ತ್ರಮುಚಂ—ಅಸ್ತ್ರವನ್ನು ಬಿಡತಕ್ಕವನನ್ನು, ಹನ್ಯಾತ್—ಕೊಲ್ಲುವದೋ, ತತಃ – ಆ ಕಾರಣದಿಂದ, ವಾಸವಿಃ—ಅರ್ಜುನನು, ಗುರುಭಕ್ತ್ಯಾ – ಗುರುಗಳಾದ ದ್ರೋಣಾಚಾರ್ಯರಲ್ಲಿರುವ ಭಕ್ತಿಯಿಂದ ಶತ್ರುಪಕ್ಷದಲ್ಲಿರುವವನಾದರೂ ಹನನವನ್ನು ಇಚ್ಛಿಸದೆ, ದ್ರೌಣೇಃ–ಅಶ್ವತ್ಥಾಮನಿಗೆ, ಸ್ವಸ್ತ್ಯಸ್ತು–ಸ್ವಸ್ತಿಯಾಗಲಿ, ಇತಿ – ಎಂದು, ಆಹ – ಹೇಳಿದನು. ॥೧೬೪॥

ತದಸ್ತ್ರಯೋಸ್ತು ಸಂಯೋಗೇ ಭೂತಾನಾಂ ಸಂಹೃತಿರ್ಭವೇತ್ ॥
ಭೂತಾನಾಂ ಸ್ವಸ್ತಿರಪ್ಯತ್ರ ಕಾಂಕ್ಷಿತಾ ಕರುಣಾತ್ಮನಾ ॥೧೬೫॥

ತದಸ್ತ್ರಯೋಸ್ತು – ಅರ್ಜುನ ಮತ್ತು ಅಶ್ವತ್ಥಾಮನು ಬಿಟ್ಟಿರುವ ಬ್ರಹ್ಮಾಸ್ತ್ರಗಳಿಗೆ, ಸಂಯೋಗೇಸತಿ – ಸಂಮೇಲನವಾಗುತ್ತಿರಲು, ಭೂತಾನಾಂ–ಪ್ರಾಣಿಗಳ, ಸಂಹೃತಿಃ–ನಾಶವು, ಭವೇತ್–ಆಗುವುದೋ, ಅತಃ–ಆದ್ದರಿಂದ, ಕರುಣಾತ್ಮನಾ–ದಯಾಶೀಲನಾದ ಅರ್ಜುನನಿಂದ, ಅತ್ರ – ಅಸ್ತ್ರಸಂಯೋಗಕಾಲದಲ್ಲಿ, ಭೂತಾನಾಮಪಿ – ಪ್ರಾಣಿಗಳಿಗೂ ಕೂಡ, ಸ್ವಸ್ತಿಃ – ಭಯಪರಿಹಾರವು, ಕಾಂಕ್ಷಿತಾ—ಅಪೇಕ್ಷಿಸಲ್ಪಟ್ಟಿತು. ॥೧೬೫॥

ತಥಾಪ್ಯಸ್ತ್ರದ್ವಯಂ ಯುಕ್ತಂ ಭೂತಾನಾಂ ನಾಶಕೃದ್ಧ್ರುವಂ ॥
ನಿಸ್ಸೀಮ ಶಕ್ತಿಃ ಪರಮಃ ಕೃಷ್ಣಃ ಸತ್ಯವತೀಸುತಃ ॥
ತಸ್ಮಾನ್ನಿವಾರಯನ್ಯೋಗಂ ತಯೋರ್ಮಧ್ಯೇsಭವತ್ಕೃಷ್ಣಾತ್ ॥೧೬೬॥

ತಥಾಪಿ–ಭೂತಗಳಿಗೆ ಭಯಪರಿಹಾರವಾಗಲೆಂದು, ಅರ್ಜುನನಿಂದ ಪ್ರಾರ್ಥಿಸಲ್ಪಟರೂ ಕೂಡ, ಯುಕ್ತಂ–ಸಂಬದ್ಧಗಳಾದ, ಅಸ್ತ್ರದ್ವಯಂ – ಅಸ್ತ್ರಗಳ ದ್ವಂದ್ವವು, ಭೂತಾನಾಂ–ಪ್ರಾಣಗಳಿಗೆ, ಧ್ರುವಂ – ನಿಶ್ಚಯವಾಗಿಯೂ, ನಾಶಕೃತ್–ನಾಶವನ್ನುಂಟು ಮಾಡತಕ್ಕದ್ದು, ಭವೇತ್—ಆಗುವುದೋ, ತಸ್ಮಾತ್ – ಆ ಕಾರಣದಿಂದ, ನಿಸ್ಸೀಮಶಕ್ತಿಃ – ಅಪರಿಮಿತ ಸಾಮರ್ಥ್ಯವುಳ್ಳ, ಪರಮಃ–ಸರ್ವೋತ್ತಮರಾದ,ಸತ್ಯವತೀಸುತಃ–ಸತ್ಯವತಿಯ ಪುತ್ರರಾದ, ಕೃಷ್ಣಃ–ಶ್ರೀವೇದವ್ಯಾಸದೇವರು,

ತಯೋಃ – ಆ ಅಸ್ತ್ರಗಳ, ಯೋಗಂ — ಸಂಮೇಲನವನ್ನು, ನಿವಾರಯನ್ ಸನ್ – ತಡೆಯುವವರಾಗಿ, ಕ್ಷಣಾತ್ – ಕೂಡಲೇ ಅಸ್ತ್ರಗಳು ಸಂಬದ್ಧವಾಗುವ ಮೊದಲೇ, ಮಧ್ಯೇ – ಅಸ್ತ್ರಗಳ ಮಧ್ಯದಲ್ಲಿ, ಅಭವತ್ – ಪ್ರಕಟರಾದರು. ॥೧೬೬॥

ಸಂಸ್ಥಾಪ್ಯಾಸ್ತ್ರದ್ವಯಂದೂರೇ ತಾವಾಹ ಪುರುಷೋತ್ತಮಃ ॥೧೬೭॥

ಸಂತಿಹ್ಯಸ್ತ್ರವಿದಃ ಪೂರ್ವಂ ಪ್ರಾಯಶ್ಚೈತನ್ನತೈಃ ಕೃತಂ ॥

ಲೋಕೋಪದ್ರವಕೃತ್ಕರ್ಮ ಸಂತಃ ಕುರ್ಯುರ್ಃ ಕಥಂಕ್ವಚಿತ್ ॥೧೬೮॥

ಪುರುಷೋತ್ತಮಃ – ಕ್ಷರಾಕ್ಷರಪುರುಷರಿಂದ ಶ್ರೇಷ್ಠರಾದ ವೇದವ್ಯಾಸರು, ಅಸ್ತ್ರದ್ವಯಂ – ಅಸ್ತ್ರಗಳ ಯುಗಲವನ್ನು, ದೂರೇ – ದೂರ ಪ್ರದೇಶದಲ್ಲಿ, ಸಂಸ್ಥಾಪ್ಯ – ನಿಲ್ಲಿಸಿ, ತೌ– ಆ ಅರ್ಜುನ ಅಶ್ವತ್ಥಾಮರಿಬ್ಬರಿಗೆ ಆಹ – ಹೇಳಿದರು. ಪೂರ್ವಂ – ಹಿಂದೆಯೂ ಕೂಡ, ಪ್ರಾಯಃ — ಹೆಚ್ಚಾಗಿ, ಅಸ್ತ್ರವಿದಃ – ಅಸ್ತ್ರಜ್ಞಾನಿಗಳು, ಸಂತಿ—ಇರುತ್ತಿದ್ದರು, ಈಗಲೂ ಇದ್ದಾರೆ. ತೈಃ – ಆ ಅಸ್ತ್ರಜ್ಞರಿಂದ, ಏತತ್ – ಲೋಕವನ್ನು ನಾಶಮಾಡತಕ್ಕ ಇಂಥ ಕರ್ಮವು, ನ ಕೃತಂ ಮಾಡಲ್ಪಡಲಿಲ್ಲ. ಸಂತಃ – ಸಜ್ಜನರು, ಕ್ವಚಿತ್ – ಆಪತ್ಕಾಲದಲ್ಲಿಯೂ, ಲೋಕೋಪದ್ರವಕೃತ್ಕರ್ಮ – ಜನರಿಗೆ ಉಪದ್ರವವನ್ನುಂಟು ಮಾಡತಕ್ಕ ಕೆಲಸವನ್ನು, ಕಥಂ— ಹೇಗೆ, ಕುರ್ಯುರ್ಃ–ಮಾಡಿಯಾರು ? ॥೧೬೭॥೧೬೮॥

ಇತ್ಯುಕ್ತೇಫಲ್ಗುನಃಪ್ರಾಹ ಮಯಾಮುಕ್ತಂ ಮಹಾಪದಿ ॥

ಶಾಂತ್ಯರ್ಥಮೇವಚವಿಭೋ ಕ್ಷಂತವ್ಯಂ ಭವತಾತತಃ ॥೧೬೯॥

ದ್ರೌಣಿರಪ್ಯೇವಮೇನಾಹ ತೌ ವೇದಪತಿರಬ್ರವೀತ್ ॥

ನಿವರ್ತ್ಯತಾಮಸ್ತ್ರಮಿತಿ ಶಕ್ರಸೂನುಸ್ತಥಾಽಕರೋತ್ ॥೧೭೦॥

ನಿವರ್ತನಾಪ್ರಭುಂ ದ್ರೌಣಿಂ ವಾಸುದೇವೋಽಪ್ಯಭಾಷತ ॥೧೭೧॥

ಇತಿ – ಈರೀತಿಯಾಗಿ, ಉಕ್ತೇಸತಿ – ಹೇಳಲ್ಪಡುತ್ತಿರಲು, ಫಲ್ಗುನಃ – ಅರ್ಜುನನು, ಹೇವಿಭೋ— ಎಲೋ ವ್ಯಾಪ್ತರಾದ ವ್ಯಾಸರೇ, ಮಹಾಪದಿ ಸತ್ಯಾಂ – ಮಹತ್ತಾದ ವಿಪತ್ತುಪ್ರಾಪ್ತವಾಗುತ್ತಿರಲು, ಮಯಾ – ನನ್ನಿಂದ, ಮುಕ್ತಂ– ಬ್ರಹ್ಮಾಸ್ತ್ರವು ಬಿಡಲ್ಪಟ್ಟಿತು. ತತಃ— ಆ ಕಾರಣದಿಂದ, ಕ್ಷಂತವ್ಯಂ – ಕ್ಷಮಿಸತಕ್ಕದ್ದು, ಇತಿ ಎಂದು, ಪ್ರಾಹ—ಹೇಳಿದನು. ದ್ರೌಣಿರಪಿ – ಅಶ್ವತ್ಥಾಮನೂ ಕೂಡ, ಏವಮೇವ–ಅರ್ಜುನನು ಹೇಳಿದಂತೆಯೇ, ಆಹ–ಹೇಳಿದನು. 'ವೇದಪತಿಃ-ಶ್ರೀವೇದ-ವ್ಯಾಸರು, ತೌ—ಅರ್ಜುನಾಶ್ವತ್ಥಾಮರನ್ನು ಕುರಿತು, ಅಸ್ತ್ರಂ–ಬ್ರಹ್ಮಾಸ್ತ್ರವು, ನಿವರ್ತ್ಯತಾಂ – ಹಿಂದೆ ತೆಗೆದುಕೊಳ್ಳಲ್ಪಡಲಿ, ಇತಿ – ಎಂಬುದಾಗಿ, ಅಬ್ರವೀತ್ – ಹೇಳಿದರು, ಶಕ್ರಸೂನುಃ – ಇಂದ್ರನ ಮಗನಾದ ಅರ್ಜುನನು, ತಥಾ ಅಕರೋತ್ – ವೇದವ್ಯಾಸರು ಹೇಳಿದಂತೆ ಅಸ್ತ್ರವನ್ನು ಹಿಂದೆ ತೆಗೆದುಕೊಂಡನು, ನಿವರ್ತನಾಪ್ರಭುಂ – ಅಸ್ತ್ರವನ್ನು ಹಿಂದೆ ತೆಗೆದುಕೊಳ್ಳುವದರಲ್ಲಿ ಅಸಮರ್ಥನಾದ, ದ್ರೌಣಿಂ – ಅಶ್ವತ್ಥಾಮನನ್ನು ಕುರಿತು, ವಾಸುದೇವಃ – ಶ್ರೀಕೃಷ್ಣನು, ಅಭಾಷತ – ಹೇಳಿದನು. ॥೧೬೯॥೧೭೦॥೧೭೧॥

ಭಾ.ಟಿ ಅ. ೧೬೦ — ೧೭೧ ಶ್ರೀಕೃಷ್ಣನು ಧರ್ಮಾರ್ಜುನರಿಗೆ ಅಶ್ವತ್ಥಾಮನು ಹಿಂದೆ ಸಮುದ್ರತೀರದಲ್ಲಿ ನನ್ನನ್ನು ಧ್ಯಾನಮಾಡುತ್ತಿದ್ದಾಗ 'ಏಕೆ' ಎಂದು ಕೇಳಿದಾಗ, ನನ್ನ ಆಯುಧಗಳನ್ನು ಎತ್ತಲೂ ಕೂಡ ಆಗದ ಅವನು ನನ್ನ ಆಯುಧಗಳನ್ನು ಕೇಳಿದನು. ನನ್ನ ಆಯುಧಗಳೇಕೆ ? ಎಂದು ಕೇಳಿದಾಗ, ನಿನ್ನನ್ನು ಸಂಹರಿಸಿ ದುರ್ಯೋಧನನಿಗೆ ಭೂಮಿಯನ್ನು ಕೊಡುವದಕ್ಕೆ ಎಂದು ಹೇಳಿದನು. ಆಗ ನಾನು ಅವನಿಗೆ ಈ ರೀತಿ ಮಾಡುವದು ನಿನಗೆ ಯೋಗ್ಯವಲ್ಲ ಎಂದೂ ಹೇಳಿದೆನು' ಎಂದು ಹೇಳಿ, ನನ್ನ ಸಂಹಾರಕಾ ಗಿ ನನ್ನ ಆಯುಧಗಳನ್ನೇ ಕೇಳಿದ ಈ ಅಶ್ವತ್ಥಾಮನು ಎಷ್ಟು ಅವಿವೇಕಿಯೂ

ನೋಡಿ ಎಂದು ಅಭಿಪ್ರಾಯತೋರಿಸಿದನು. ಅಶ್ವತ್ಥಾಮನು ಪಾಂಡವ ಸಂತತಿಯಿಲ್ಲದಂತೆ ಮಾಡಲು ಪ್ರಯೋಗಿಸಿದ ಬ್ರಹ್ಮಾಸ್ತ್ರವು ಉರಿಯುತ್ತಿರುವದನ್ನು ಕಂಡ ಅರ್ಜುನನು, ಶ್ರೀಕೃಷ್ಣನಿಂದ ಆಜ್ಞಾಪ್ತನಾಗಿ ಆ ಅಸ್ತ್ರಶಾಂತಿಗಾಗಿ ಬ್ರಹ್ಮಾಸ್ತ್ರವನ್ನು ಗುರುಪುತ್ರನಾದ ಅಶ್ವತ್ಥಾಮರಿಗೆ, ಸಕಲ ಚೇತನರಿಗೆ, ನನಗೂ ಹಿತವಾಗಲಿ ಎಂದು ಸಂಕಲ್ಪಿಸಿ ಪ್ರಯೋಗಿಸಿದನು; ಅಶ್ವತ್ಥಾಮರು ಬ್ರಹ್ಮಾಸ್ತ್ರಜ್ಞಾನವಿಲ್ಲದ ಧರ್ಮ ನಕುಲಸಹದೇವರಂಥವರ ಮೇಲೆ ಪ್ರಯೋಗಿಸಿದ್ದರಿಂದ ಅದು ಅವರನ್ನೇ ಸಂಹರಿಸುತ್ತದೆ. ಅದರ ಸ್ವಭಾವವೇ ಹಾಗೆ. ಆದ್ದರಿಂದ ಅರ್ಜುನನು ಅಶ್ವತ್ಥಾಮರಿಗೆ ಹಿತವಾಗಲಿ ಎಂದು ಸಂಕಲ್ಪಿಸಿದನು. ಎರಡೂ ಅಸ್ತ್ರಗಳ ತಾಕಲಾಟವಾದರೆ ಸಕಲ ಜಗತ್ತಿನ ಸಂಹಾರವಾಗುವದು. ಆದ್ದರಿಂದ ಎಲ್ಲ ಚೇತನರಿಗೂ ಕ್ಷೇಮವಾಗಲಿ ಎಂದು ಸಂಕಲ್ಪಿಸಿದನು. ಕೇವಲ ಅಶ್ವತ್ಥಾಮರ ಅಸ್ತ್ರಶಾಂತಿಯಾಗುವದು ಅರ್ಜುನನ ಅಸ್ತ್ರಪ್ರಯೋಗದ ಉದ್ದೇಶವಾಗಿತ್ತು; ಇಷ್ಟೆಲ್ಲ ಸಂಕಲ್ಪಿಸಿದ್ದರೂ ಕೂಡ ಅವುಗಳ ಸಂಯೋಗವಾದರೆ ಜಗತ್ಸಂಹಾರವಾಗೇ ಬಿಡುತ್ತಿತ್ತು. ಆದ್ದರಿಂದ ಅವುಗಳ ಸಂಯೋಗವನ್ನೇ ತಡೆಯುವವರಾಗಿ ಶ್ರೀವೇದವ್ಯಾಸದೇವರು ಅವೆರಡರ ಮಧ್ಯದಲ್ಲಿ ಪ್ರಕಟರಾದರು. ಎರಡೂ ಅಸ್ತ್ರಗಳನ್ನು ದೂರಮಾಡಿ ಅವರಿಬ್ಬರನ್ನು ಕುರಿತು ಹಿಂದೆಯೂ ಅಸ್ತ್ರಜ್ಞಾನಿಗಳು ಇದ್ದರು. ಆದರೆ ಹೀಗೆ ಲೋಕೋಪದ್ರವಕಾರಿಯಾವ ಕಾರ್ಯವನ್ನೂ ಅವರು ಮಾಡಲಿಲ್ಲ. ಸಜ್ಜನರು ಅಂಥಕಾರ್ಯವನ್ನು ಹೇಗೆ ಮಾಡಿಯಾರು ?' ಎಂದು ಅಂದರು. ಆಗ ಅರ್ಜುನನು ಆಪತ್ತಿನಲ್ಲಿ ನಾನು ಅಸ್ತ್ರವನ್ನು ಬಿಟ್ಟೆನು ಎಂದನು. ಅಶ್ವತ್ಥಾಮರೂ ಹಾಗೆ ಹೇಳಿದರು. ಇಬ್ಬರೂ ನಿಮ್ಮ ನಿಮ್ಮ ಅಸ್ತ್ರಗಳನ್ನು ಹಿಂತೆಗೆದುಕೊಳ್ಳಿರಿ ಎಂದರು. ಆಗ ಅರ್ಜುನನು ಹಿಂತೆಗೆದುಕೊಂಡನು. ಅಶ್ವತ್ಥಾಮರಿಗೆ ಆಗಲಿಲ್ಲ. ಅದನ್ನು ನೋಡಿದ ಶ್ರೀಕೃಷ್ಣನು ಅರ್ಜುನನು ಕ್ಷತ್ರಿಯನಾದರೂ ಬ್ರಹ್ಮಚರ್ಯವನ್ನು ಬಾಲ್ಯದಿಂದ ಉಳಿಸಿಕೊಂಡು ಬಂದದ್ದರಿಂದ ಹಿಂತೆಗೆದುಕೊಳ್ಳಲು ಸಮರ್ಥನಾದನು. ಅಶ್ವತ್ಥಾಮರು ದ್ರೋಣರ ಪುತ್ರನಾದರೂ ಬ್ರಹ್ಮಚರ್ಯ ಹಾನಿಮಾಡಿಕೊಂಡದ್ದರಿಂದ ಶಕ್ತರಾಗಲಿಲ್ಲ ಎಂದು ಹೇಳಿದನು.

ವಿಶೇಷಾಂಶ — ಅರ್ಜುನನು ವಿವಾಹಿತನಾಗಿಯೂ ಶಾಸ್ತ್ರವಿಧಾನದಂತೆ ಗೃಹಸ್ಥಾಶ್ರಮವನ್ನು ನಡಿಸಿದವನು. ಆದ್ದರಿಂದ ಅಂಥವನು ಬ್ರಹ್ಮಚರ್ಯಉಳ್ಳವನಾಗುತ್ತಾನೆ ಎಂದು ಪುರಾಣಕ್ಕೆ ಅನುಸಾರವಾಗಿ ಬ್ರಹ್ಮಚರ್ಯಉಳ್ಳವನಾದನು. ಅಶ್ವತ್ಥಾಮರು ಅವಿವಾಹಿತರಾದರೂ ಕೇವಲ ಮಾತಿನಿಂದ ಪರಪತ್ನೀ (ದುರ್ಯೋಧನನ ಹೆಂಡತಿ) ಯಲ್ಲಿ ಸಂತತಿಯನ್ನು ಹುಟ್ಟಿಸುವದಾಗಿ ಹೇಳಿದ್ದರಿಂದಲೂ ಬ್ರಹ್ಮಚರ್ಯಹೋಯಿತು ಎಂದು ನೋಡಿದರೆ ನಾವು ನಮ್ಮ ಬ್ರಹ್ಮಚರ್ಯ ಕಾಯ್ದಿಕೊಳ್ಳಲು ಯಾವ ಇಂದ್ರಿಯಗಳಿಂದಲೂ ದುಷ್ಟವಿಚಾರಾದಿಗಳನ್ನು ಮಾಡಬಾರದು ಎಂದು ತಿಳಿಯಬೇಕು.

ಕ್ಷತ್ರತೇಜಾ ಬ್ರಹ್ಮಚಾರೀ ಕೌಮಾರಾದಪಿ ಪಾಂಡವಃ ॥
ನಿವರ್ತನೇ ತತಃಶಕ್ತೋನಾಯಂ ದ್ರೋಣಾತ್ಮಜೋಽಪಿಸನ್ ॥೧೭೨॥

ಅಬ್ರಹ್ಮಚರ್ಯಾದಿತ್ಯುಕ್ತೇ ವ್ಯಾಸೋ ದ್ರೌಣಿಮುಭಾಷತ ।
ನಿವರ್ತನಾಸಮರ್ಥಸ್ತ್ವಂ ದೇಹಿ ನೈಸರ್ಗಿಕಂ ಮಣಿಂ ॥
ಜಿತಃಪ್ರಾಗೇವ ಭೀಮೇನ ಭೀಮಾಯೈವ ಮಹಾಪ್ರಭಂ ॥೧೭೩॥

ಪಾಂಡವಃ—ಅರ್ಜುನನು, ಕ್ಷತ್ರತೇಜಾಃ–ಕ್ಷತ್ರಿಯರ ವರ್ಚಸ್ಸುಳ್ಳವನು, (ಮತ್ತು)ಯತಃ – ಯಾವ ಕಾರಣದಿಂದ, ಕೌಮಾರಾದಪಿ—ಬಾಲ್ಯಾವಸ್ಥೆಯಿಂದಲೂ, ಬ್ರಹ್ಮಚಾರೀ – ಬ್ರಹ್ಮಚರ್ಯ ವ್ರತದಲ್ಲಿರುವನೋ, ತತಃ – ಆ ಕಾರಣದಿಂದ, ನಿವರ್ತನೇ —ಅಸ್ತ್ರವನ್ನು ಹಿಂದೆ ತೆಗೆದುಕೊಳ್ಳುವದರಲ್ಲಿ, ಶಕ್ತಃ—ಸಮರ್ಥನು; ಅಯಂ ದ್ರೋಣಾತ್ಮಜೋಽಪಿಸನ್ – ಅಶ್ವತ್ಥಾಮನು ದ್ರೋಣಾಚಾರ್ಯರ ಮಗನಾದರೂ ಕೂಡ, ಅಬ್ರಹ್ಮಚರ್ಯಾತ್ – ದುರ್ಯೋಧನನ ಹೆಂಡತಿಯಲ್ಲಿ ಮಕ್ಕಳನ್ನು ಹುಟ್ಟಿಸುತ್ತೇನೆಂದು ಪ್ರತಿಜ್ಞೆ ಮಾಡಿದ್ದರಿಂದ ಬ್ರಹ್ಮಚರ್ಯ ಹೋಗಿರುವದರಿಂದ, ನ ಶಕ್ತಃ – ಅಸ್ತ್ರವನ್ನು ಹಿಂತೆಗೆದುಕೊಳ್ಳುವದರಲ್ಲಿ ಸಮರ್ಥನಲ್ಲ, ಇತ್ಯುಕ್ತೇಸತಿ–ಈ ರೀತಿಯಾಗಿ ಶ್ರೀಕೃಷ್ಣನು ಹೇಳುತ್ತಿರಲು, ವ್ಯಾಸಃ – ವೇದವ್ಯಾಸದೇವರು, ದ್ರೌಣಿಂ – ಅಶ್ವತ್ಥಾಮನನ್ನು ಕುರಿತು, ಅಭಾಷತ – ಹೇಳಿದರು, ನಿವರ್ತನಾಸಮರ್ಥಃ — ಅಸ್ತ್ರವನ್ನು ಹಿಂದೆ

ತೆಗೆದುಕೊಳ್ಳುವದರಲ್ಲಿ ಅಸಮರ್ಥನಾದ, ತ್ವಂ—ನೀನು, ಪ್ರಾಗೇವ – ಬ್ರಹ್ಮಾಸ್ತ್ರವನ್ನು ಬಿಡುವ ಮೊದಲೇ, ಭೀಮೇನ—ಭೀಮುನಿಂದ, ಯತಃ–ಜಿತಃ ಪರಾಜಿತನಾಗಿರುವಿಯೋ ಅತಃ– ಆದ್ದರಿಂದ ನೈಸರ್ಗಿಕಂ—ಸ್ವಾಭಾವಿಕವಾದ, ಮಹಾಪ್ರಭಂ—ಬಹಳ ಕಾಂತಿಯುಳ್ಳ, ಮಣಿಂ—ರತ್ನವನ್ನು, ಭೀಮಾಯೈವ– ಭೀಮುನಿಗೋಸ್ಕರವೇ ದೇಹಿ – ಕೊಡು. ॥೧೭೨॥೧೭೩॥

ಅಪಿಕೇವಲಯಾವಾಚಾಪಾರ್ಥೇಭ್ಯೋಽಸ್ತ್ರಂ ನಿವರ್ತಯ ॥
ಇತ್ಯುಕ್ತೋಮೂರ್ಧಜಂ ರತ್ನಂ ಜರಾಮರಣನಾಶನಂ ॥೧೭೪॥
ಕ್ಷುತ್ತೃಟ್ ಶ್ರಮಹರಂ ದಿವ್ಯಂ ಗಂಧಧ್ವಾಂತಹರಂ ಶುಭಂ ॥
ಉತ್ಕೃತ್ಯ ಭೀಮಾಯದದೌ ಮುಕ್ತಾಃಪಂಚೈವ ಪಾಂಡವಾಃ ॥೧೭೫॥
ಅಸ್ತ್ರಾದಿತಿ ತತೋವೇದಭರ್ತಾ ವಾಸವಿಮುಬ್ರವೀತ್ ॥೧೭೬॥

ಪಾರ್ಥೇಭ್ಯಃ–ಪಾಂಡವರ ದೆಸೆಯಿಂದ, ಕೇವಲಯಾವಾಚಾ – ವಾಙ್ಮಾತ್ರದಿಂದ, ಅಸ್ತ್ರಂ–ಅಸ್ತ್ರವನ್ನು, ನಿವರ್ತಯ–ಹಿಂದೆ ತೆಗೆದುಕೊಳ್ಳು, ಇತ್ಯುಕ್ತಃ – ಈ ರೀತಿಯಾಗಿ ವ್ಯಾಸರಿಂದ ಹೇಳಿಸಿಕೊಳ್ಳಲ್ಪಟ್ಟ ಅಶ್ವತ್ಥಾಮನು, ಮೂರ್ಧಜಂ – ತಲೆಯಲ್ಲಿ ಉತ್ಪನ್ನವಾದ, ಜರಾಮರಣನಾಶನಂ – ಮುದಿತನ ಮತ್ತು ಮೃತಿಯನ್ನು ಕಳೆಯುತಕ್ಕ ಕ್ಷುತ್ತೃಟ್ ಶ್ರಮಹರಂ—ಹಸಿವೆ, ಬಾಯಾರಿಕೆ, ಆಯಾಸ ಇವುಗಳನ್ನು ಪರಿಹರಿಸತಕ್ಕ, ದಿವ್ಯಂ— ಲೋಕವಿಲಕ್ಷಣವಾದ, ಗಂಧಧ್ವಾಂತಹರಂ—ದುರ್ಗಂಧ ಮತ್ತು ಕತ್ತಲೆಯನ್ನು ನಾಶಮಾಡುವ, ಶುಭಂ— ಮಂಗಲವನ್ನುಂಟು ಮಾಡುವ, ರತ್ನಂ— ಮಣಿಯನ್ನು, ಉತ್ಕೃತ್ಯ – ತಲೆಯಿಂದ ಕಿತ್ತಿ, ಭೀಮಾಯ—ಭೀಮನಿಗೆ, ದದೌ —ಕೊಟ್ಟನು. ಅಸ್ತ್ರಾತ್—ಬ್ರಹ್ಮಾಸ್ತ್ರದಿಂದ, ಪಂಚ ಪಾಂಡವಾ ಏವ – ಐವರು ಪಾಂಡವರು ಮಾತ್ರ, ಮುಕ್ತಾಃ–ಬಿಡಲ್ಪಟ್ಟರು. ತತಃ–ಅನಂತರ, ವೇದಭರ್ತಾ– ವೇದವ್ಯಾಸರು ವಾಸವಿಂ—ಅರ್ಜುನನನ್ನು ಕುರಿತು, ಅಬ್ರವೀತ್ ಹೇಳಿದರು. ॥೧೭೪॥೧೭೫॥೧೭೬॥

~~**ತಾತಮುಕ್ತಂದ್ರೌಣಿನಾಪಿ ತ್ವಮೇವಾಸ್ತ್ರಂನಿವರ್ತಯ ॥**~~
ಇತ್ಯುಕ್ತಸ್ತಂ ಪ್ರಣಮ್ಯಾಶು ಸಂಜಹಾರಾರ್ಜುನೋಽಪಿತತ್ ॥೧೭೭॥

ತಾತ — ಅರ್ಜುನನೇ, ದ್ರೌಣಿನಾ — ಅಶ್ವತ್ಥಾಮನಿಂದ ಮುಕ್ತಂ – ಬಿಡಲ್ಪಟ್ಟ, ಅಸ್ತ್ರಂ ಅಪಿ – ಅಸ್ತ್ರವನ್ನೂ ಕೂಡ, ತ್ವಮೇವ— ನೀನೇ, ನಿವರ್ತಯ— ಹಿಂದೆ ತೆಗೆದುಕೊಳ್ಳು, ಇತ್ಯುಕ್ತಃ– ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ, ಅರ್ಜುನೋಽಪಿ— ಅರ್ಜುನನೂ ಕೂಡ, ತಂ— ಆ ವ್ಯಾಸರನ್ನು, ಪ್ರಣಮ್ಯ— ನಮಸ್ಕರಿಸಿ, ಆಶು—ಕೂಡಲೇ, ಅಸ್ತ್ರಂ— ಬ್ರಹ್ಮಾಸ್ತ್ರವನ್ನು, ಸಂಜಹಾರ— ಹಿಂದೆ ತೆಗೆದುಕೊಂಡನು. ॥೧೭೭॥

ಯಾದವೇಶೋಽಥಗೌತಮ್ಯಾಃಸುತಮಾಹೈಕಸಂತತೇಃ ॥
ವಾಚಾನಿವರ್ತಯಾಸ್ತ್ರಂ ತ್ವಮಿತ್ಯುಕ್ತೇ ದ್ರೌಣಿರಬ್ರವೀತ್ ॥೧೭೮॥

ಅಥ–ಅನಂತರ, ಯಾದವೇಶಃ—ಯಾದವರಿಗೆ ಸ್ವಾಮಿಯಾದ ಶ್ರೀಕೃಷ್ಣನು, ಗೌತಮ್ಯಾಃ–ಕೃಪಿಯ (ಗೌತಮಿಯ) ಸುತಂ – ಮಗನಾದ ಅಶ್ವತ್ಥಾಮನನ್ನು ಕುರಿತು, ಏಕಸಂತತೇಃ – ಪಾಂಡವರ ಒಂದು ಸಂತಾನದ ದೆಸೆಯಿಂದ, ತ್ವಂ—ನೀನು, ವಾಚಾ — ಮಾತಿನಿಂದ, ಅಸ್ತ್ರಂ ಬ್ರಹ್ಮಾಸ್ತ್ರವನ್ನು, ನಿವರ್ತಯ— ಹಿಂದೆ ತೆಗೆದುಕೊ, ಇತಿ – ಎಂದು, ಆಹ— ಹೇಳಿದನು. ಇತಿ – ಈರೀತಿಯಾಗಿ, ಉಕ್ತೇಸತಿ – ಹೇಳಲ್ಪಡುತ್ತಿರಲು, ದ್ರೌಣಿಃ—ಅಶ್ವತ್ಥಾಮನು, ಅಬ್ರವೀತ್—ಹೇಳಿದನು. ॥೧೭೮॥

ಪಕ್ಷಪಾತಾದಿಚ್ಛಸಿತ್ವಂ ಭಾಗಿನೇಯಸ್ಯಸಂತತಿಂ ॥
ತತ್ಪ್ರೇವಪಾತಯಾಮ್ಯಸ್ತ್ರಮುತ್ತರಾಗರ್ಭಕೃಂತನೇ ॥೧೭೯॥

ವಾಸುದೇವಃ ಪುನಃ ಪ್ರಾಹಯದಿಹಂತವ್ಯ ಏವತೇ ।।
ಗರ್ಭಸ್ತಥಾಪಿ ನೈವಾಸ್ತ್ರಂ ಪಾತಯಾಸ್ಮಿನ್ಕಥಂಚನ ॥೧೬೦॥

ತ್ವಂ – ನೀನು, ಪಕ್ಷಪಾತಾತ್–ಸ್ನೇಹವಿಶೇಷದಿಂದ, ಭಾಗಿನೇಯಸ್ಯ–ತಂಗಿ ಸುಭದ್ರೆಯ ಮಗನಾದ ಅಭಿಮನ್ಯುವಿನ, ಸಂತತಿಂ– ಸಂತಾನವನ್ನು, ಇಚ್ಛಸಿ- ಅಪೇಕ್ಷಿಸುವಿ. ತತ್ರೈವ–ಆ ಅಭಿಮನ್ಯುವಿನ ಸಂತಾನದಲ್ಲಿಯೇ, ಉತ್ತರಾಗರ್ಭಕೃಂತನೇ– ಅಭಿಮನ್ಯುವಿನ ಹೆಂಡತಿಯಾದ ಉತ್ತರೆಯ ಗರ್ಭವನ್ನು ನಾಶಮಾಡುವದಕ್ಕಾಗಿ, ಅಸ್ತ್ರಂ–ಬ್ರಹ್ಮಾಸ್ತ್ರವನ್ನು, ಪಾತಯಾಮಿ– ಹಾಕುತ್ತೇನೆ. ವಾಸುದೇವಃ – ಶ್ರೀಕೃಷ್ಣನು, ತದಾ – ಆಗ, ಪುನಃ – ಮತ್ತೆ, ಆಹ — ಹೇಳಿದನು, ತೇ – ನಿನ್ನಿಂದ, ಗರ್ಭಃ–ಗರ್ಭವು, ಯದಿ ಹಂತವ್ಯ ಏವ – ನಾಶಮಾಡಲ್ಪಡಲೇಬೇಕೆಂದು ಇದ್ದಲ್ಲಿ, ತಥಾಪಿ – ಹಾಗಿದ್ದರೂ ಕೂಡ, ಅಸ್ಮಿನ್– ಈ ಉತ್ತರೆಯ ಗರ್ಭದಲ್ಲಿ. ಕಥಂಚನ—ಯಾವರೀತಿಯಿಂದಲೂ, ಅಸ್ತ್ರಂ—ಅಸ್ತ್ರವನ್ನು, ನೈವ ಪಾತಯ – ಹಾಕಲೇ ಬೇಡ. ॥೧೭೯॥೧೬೦॥

ಅಭಿಮನ್ಯೋರ್ಮೃತಸ್ಯೈವ ದೇಹೇಪಾತಯಮಾನದ ॥
ಏವಂ ತ್ವದಸ್ತ್ರನಿಹತಂ ಗರ್ಭಮುಜ್ಜೀವಯಾಮ್ಯಹಂ ।।೧೬೧॥

ಹೇ ಮಾನದ – ಅಸ್ತ್ರಜ್ಞಾನಿಯೆಂಬ ಅಭಿಮಾನಉಳ್ಳ ಅಶ್ವತ್ಥಾಮನೇ, ಮೃತಸ್ಯ – ಸತ್ತಿರುವ, ಅಭಿಮನ್ಯೋಃ— ಅಭಿಮನ್ಯುವಿನ, ದೇಹೇಏವ—ಶರೀರದಲ್ಲಿಯೇ, ಪಾತಯಂ—ಅಸ್ತ್ರವನ್ನು ಹಾಕು, ಮೃತದೇಹಕ್ಕೆ ಅಸ್ತ್ರ ಬಿಡುವದು ಹೇಗೆ ವ್ಯರ್ಥವೋ ಹಾಗೆ ಗರ್ಭಕ್ಕೆ ಅಸ್ತ್ರಬಿಡುವದೂ ವ್ಯರ್ಥವು, ಏವಂ – ಈ ರೀತಿಯಾಗಿ, ತ್ವದಸ್ತ್ರನಿಹತಂ – ನಿನ್ನ ಅಸ್ತ್ರದಿಂದ ಕೊಲ್ಲಲ್ಪಟ್ಟ, ಗರ್ಭಂ – ಗರ್ಭವನ್ನು, ಅಹಂ – ನಾನು, ಉಜ್ಜೀವಯಾಮಿ – ಬದುಕಿಸುತ್ತೇನೆ ॥೧೬೧॥

ಪಾತಯೇಗರ್ಭಮಿತ್ಯಾಹವಿಭೂಚೇ ಗೌತಮೀಸುತಃ ॥

ಅಥಾಹವಾಸುದೇವಸ್ತಮೀಷತ್ಕ್ರುದ್ಧಇವ ಪ್ರಭುಃ ॥೧೬೨॥

ಗೌತಮೀಸುತಃ – ಅಶ್ವತ್ಥಾಮನು, ಅಹಂ — ನಾನು, ಗರ್ಭಮಿವ – ಗರ್ಭದಲ್ಲಿಯೇ, ಪಾತಯೇ – ಅಸ್ತ್ರವನ್ನು ಹಾಕುವೆನು, ಇತಿ – ಎಂದು, ಊಚೇ – ಹೇಳಿದನು, ಅಥ — ಅನಂತರ, ಪ್ರಭುಃ— ಸಮರ್ಥನಾದ, ವಾಸುದೇವಃ – ಶ್ರೀಕೃಷ್ಣನು, ಈಷತ್ಕ್ರುದ್ಧಇವ — ಭಕ್ತನಾದ್ದರಿಂದ ಸ್ವಲ್ಪ ಕೋಪಉಳ್ಳವನಂತೆ, ತಂ – ಅಶ್ವತ್ಥಾಮನಿಗೆ, ಆಹ — ಹೇಳಿದನು. ॥೧೬೨॥

ದುರ್ಮತೇ ಪಶ್ಯಮೇವೀರ್ಯಂ ಯತ್ತೇಶಕ್ಯಂ ಕುರುಷ್ವತತ್ ।।
ಉಜ್ಜೀವಯಾಮ್ಯಹಂ ಗರ್ಭಂ ಯತತಃಶಕ್ತಿತೋಪಿತೇ ॥೧೬೩॥

ಹೇ ದುರ್ಮತೇ— ಎಲೋ ದುಷ್ಟಬುದ್ಧಿಉಳ್ಳವನೇ, ಮೇ — ನನ್ನ, ವೀರ್ಯಂ — ಸಾಮರ್ಥ್ಯವನ್ನು,ಪಶ್ಯ – ನೋಡು, ತೇ – ನಿನಗೆ, ಯತ್ — ಯಾವದು, ಶಕ್ಯಂ – ಮಾಡಲು ಸಾಧ್ಯವೋ, ತತ್ – ಅದನ್ನು, ಕುರುಷ್ವ – ಮಾಡು, ಶಕ್ತಿತಃ—ಸಾಮರ್ಥ್ಯವಿದ್ದಷ್ಟು, ಯತತಃ—ಕೊಲ್ಲಲು ಪ್ರಯತ್ನಮಾಡತಕ್ಕ, ತೇ— ನಿನ್ನ ಸಕಾಶದಿಂದ, ಅಹಂ— ನಾನು, ಗರ್ಭಂ – ಗರ್ಭವನ್ನು, ಉಜ್ಜೀವಯಾಮಿ – ಬದುಕಿಸುತ್ತೇನೆ. ॥೧೬೩॥

ಸಂತತಿರ್ನಶ್ಯಸಾಹಸ್ರಂ ಪಾಂಡವಾನಾಂ ಭವೇದ್ಭುವಿ ।।
ನುತ್ಪಾಲಿತಾಂ ನ ಕಶ್ಚಿತ್ತಾಂ ತಾವದ್ಧಂತುಂ ಕ್ಷಮಃಕ್ವಚಿತ್ ॥೧೬೪॥

ವರ್ಷಸಾಹಸ್ರಂ—ಸಾವಿರ ವರ್ಷಗಳ ವರೆಗೆ, ಪಾಂಡವಾನಾಂ - ಪಾಂಡವರ, ಸಂತತಿಃ – ಸಂತಾನವು, ಭುವಿ – ಭೂಮಿಯಲ್ಲಿ, ಭವೇತ್—ಇರಬೇಕು. ತಾವತ್—ಸಹಸ್ರ ವರ್ಷದ ತನಕ, ಮತ್ಪಾಲಿತಾಂ–ನನ್ನಿಂದ ರಕ್ಷಿಸಲ್ಪಟ್ಟ, ತಾಂ—ಆ ಪಾಂಡವರ ಸಂತತಿಯನ್ನು, ಹಂತುಂ–ಕೊಲ್ಲಲು, ಕ್ವಚಿತ್—ಎಲ್ಲಿಯೂ, ಕಶ್ಚಿತ್–ಯಾವನೊಬ್ಬನೂ, ನಕ್ಷಮಃ – ಸಮರ್ಥನಲ್ಲ. ॥೧೮೪॥

ಜಾನಾಮಿತೇ ಮತಿಂದುಷ್ಟಾಂಜಿಘಾಂಸೋಃಪಾರ್ಥಸಂತತಿಂ ॥
ಚಿಕೀರ್ಷೋರ್ಧಾರ್ತರಾಷ್ಟ್ರಸ್ಯತಂತುಂ ಭೂಯಃ ಸುದುಷ್ಕರಂ ॥೧೮೫॥

ಪಾರ್ಥಸಂತತಿಂ – ಪಾಂಡವರ ಸಂತಾನವನ್ನು, ಜಿಘಾಂಸೋಃ – ಕೊಲ್ಲಲು ಇಚ್ಛಿಸುವ, ಭೂಯಃ–ಮತ್ತೆ, ಸುದುಷ್ಕರಂ—ಸರ್ವಥಾ ಮಾಡಲಶಕ್ಯವಾದ, ಧಾರ್ತರಾಷ್ಟ್ರಸ್ಯ—ದುರ್ಯೋಧನನಿಗೆ, ತಂತುಂ—ಸಂತಾನವನ್ನು, ಚಿಕೀರ್ಷೋಃ–ಮಾಡಲು ಇಚ್ಛಿಸುವ, ತೇ – ನಿನ್ನ, ದುಷ್ಟಾಂ ಮತಿಂ—ಕೆಟ್ಟ ಬುದ್ಧಿಯನ್ನು, ಜಾನಾಮಿ – ತಿಳಿದಿರುತ್ತೇನೆ. ॥೧೮೫॥

ಮದಾಜ್ಞಯಾ ಸಾವಿಫಲಾ ಭವಿತ್ರೀ ವಾಂಛಾಮುಮುಕ್ಷಾ ವಿಮುಖಸ್ಯ ವಿಷ್ಣೋಃ ॥
ಯಥೈವ ತೇನೈವ ನರಾಧಿರೂಢೋಗನ್ಯಸ್ತವಸ್ಯಾನ್ನಚ ಭೂವಿಭಾಗಃ ॥೧೮೬॥

ವಿಷ್ಣೋಃ–ಪರಮಾತ್ಮನಿಗೆ, ವಿಮುಖಸ್ಯ – ವಿರುದ್ಧವಾದ ಕರ್ಮವುಳ್ಳವನ. ಮುಮುಕ್ಷಾ – ಮೋಕ್ಷದ ಇಚ್ಛೆಯು, ಯಥಾ–ಹೇಗೆ, ವಿಫಲೈವ – ವ್ಯರ್ಥವಾದದ್ದೋ, ಭವಿತ್ರೀ–ಆಗುವದೋ, ತಥಾ—ಹಾಗೆಯೇ, ಬೇಡ ಎಂದು ವಿಷ್ಣುವಿನ ಅಪ್ಪಣೆಯಿದ್ದರೂ ಅಸ್ತ್ರವನ್ನು ಬಿಡುತ್ತೇನೆಂಬ ಆಗ್ರಹವುಳ್ಳ, ತೇ—ನಿನ್ನ, ಸಾ ವಾಂಛಾ– ಆದಾವ ಪಾಂಡವರ ಸಂತಾನನಾಶದ ಮತ್ತು ದುರ್ಯೋಧನನ ಸಂತಾನದ ಇಚ್ಛೆಯು, ಮದಾಜ್ಞಯಾ–ನನ್ನ ಅಪ್ಪಣೆಯಿಂದ, ವಿಫಲಾಭವಿತ್ರೀ– ವ್ಯರ್ಥವಾಗುವದು, ತೇನೈವ – ನನ್ನ ಇಚ್ಛೆಗೆ ವಿರುದ್ಧವಾದ ನಿನ್ನ ಇಚ್ಛೆಯಿಂದಲೇ, ನರಾಧಿರೂಢಃ—ಮನುಷ್ಯಗೋಚರವಾದ, ಭೂವಿಭಾಗಃ—ಭೂಪ್ರದೇಶವು, ತವ – ನಿನಗೆ, ಗಮ್ಯಃ – ಸಂಚಾರಕ್ಕೆ ಯೋಗ್ಯವಾದದ್ದು, ನಸ್ಯಾತ್ – ಆಗಲಾರದು, ಅಥವಾ ತೇನ—ನನ್ನ ಆಜ್ಞೆಯ ಉಲ್ಲಂಘನದಿಂದ, ತ್ವಂ – ನೀನು, ನರಾಧಿರೂಢ ಏವ – ಮನುಷ್ಯರ ಮೇಲೆ ಕುಳಿತವನು, ಭವಿಷ್ಯಸಿ – ಆಗುವಿ ಸಾವಿರಾರು ಜನರು ಸೇರಿರುವಲ್ಲಿ ಕೋಲಾಹಲ ರೂಪದಿಂದ ಶಬ್ದವನ್ನು ಮಾಡುತ್ತಾ ಅಶ್ವತ್ಥಾಮನು ಜನರ ಶಿರಸ್ಸಿನಲ್ಲಿ ಏರಿ ಕೊಂಡಿರುತ್ತಾನೆಂದು ಪುರಾಣದಲ್ಲಿ ಪ್ರಸಿದ್ಧಿಯಿದೆ. ॥೧೮೬॥

ದುರ್ಗಂಧಯುಕ್ತೋ ವ್ರಣಸಂಚಿತಾಂಗಃ ಸದಾಚರಃ ಸ್ಯಾವಿಪಿನೇಷು ಮಂದಃ ॥
ಯಾವದ್ಭವಿಸ್ಯಾದಿಹ ಪಾರ್ಥತಂತುಃ ವ್ಯಾಸೋಽಪಿ ತಂಪ್ರಾಹ ತಥೇತಿ ದೇವಃ ॥೧೮೭॥

ಯಾವತ್—ಎಷ್ಟರವರೆಗೆ, ಇಹಭುವಿ – ಈ ಭೂಮಿಯಲ್ಲಿ, ಪಾರ್ಥತಂತುಃ – ಪಾಂಡವರ ಸಂತಾನವು, ಸ್ಯಾತ್ – ಇರುವುದೋ, ತಾವತ್ ಅಷ್ಟರತನಕ, ದುರ್ಗಂಧಯುಕ್ತಃ – ದುರ್ವಾಸನೆಯಿಂದ ಕೂಡಿದವನಾಗಿ, ವ್ರಣಸಂಚಿತಾಂಗಃ—ಹುಣ್ಣುಗಳಿಂದ ಕೂಡಿದ ಅವಯವವುಳ್ಳವನಾಗಿ, ಮಂದಃಸನ್— ದುರ್ಬಲನಾಗಿ, ವಿಪಿನೇಷು ಕಪಿಗಳಂತೆ ವನಗಳಲ್ಲಿರುವ ಮರಗಳಲ್ಲಿ, ಸದಾ—ಯಥಾವಾಗಲೂ, ಚರಃಸ್ಯಾಃ—ಸಂಚರಿಸುವವನಾಗುವಿ. ದೇವಃ-ಕ್ರೀಡಾದಿಗುಣಃ ಶಿಷ್ಟರಾದ, ವ್ಯಾಸೋಽಪಿ ವೇದವ್ಯಾಸ ದೇವರೂ ಕೂಡ, ತಂ—ಆ ಅಶ್ವತ್ಥಾಮನನ್ನು, ತಥೇತಿ–ಕೃಷ್ಣನು ಹೇಳಿದಂತೆಯೇ ಆಗಲಿ ಎಂದು, ಪ್ರಾಹ-ಹೇಳಿದರು. ॥೧೮೭॥

ರೂಪದ್ವಯೇನಾಪಿಹರೇಸ್ತಥೋಕ್ತೋ ಜಗಾದಕಾಲೀತನಯಂಸಕೃಷ್ಣಂ ॥
ತ್ವಯಾ ಸಹಸ್ಯಾನ್ಮಮಸಂಗಮೋ ವಿಭೋಯಥೇಷ್ಟತಃ ಸ್ಯಾನ್ನಚಮೇತ್ರವಿಘ್ನಃ ॥೧೮೮॥

ಹರೇಃ – ಪರಮಾತ್ಮನ, ರೂಪದ್ವಯೇನಾಪಿ – ವ್ಯಾಸ,ಕೃಷ್ಣರೆಂಬ ಎರಡುರೂಪಗಳಿಂದಲೂಕೂಡ, ತಥೋಕ್ತಃ– ದುರ್ಗಂಧಾದಿಗಳುಳ್ಳವನಾಗು ಎಂದು ಹೇಳಿಸಿಕೊಳ್ಳಲ್ಪಟ್ಟ ಸಃ- ಆ ಅಶ್ವತ್ಥಾಮನು, ಕಾಲೀತನಯಂ– ಸತ್ಯವತಿಯ ಪುತ್ರರಾದ, ಕೃಷ್ಣಂ– ಶ್ರೀವೇದವ್ಯಾಸರನ್ನು ಕುರಿತು, ಹೇವಿಭೋ – ಎಲೋ ವ್ಯಾಪ್ತರಾದ ವ್ಯಾಸರೇ, ಮಾಮ– ನನಗೆ, ಯಥೇಪ್ಸಿತಃ– ಇಚ್ಛಾನುಸಾರವಾಗಿ, ತ್ವಯಾ – ನಿಮ್ಮಿಂದ, ಸಹ – ಕೂಡಿಕೊಂಡು, ಸಂಗಮಃ – ಕೃಷ್ಣನಶಾಪವು ಪರಿಹರಿಸಿಕೊಳ್ಳಲು ಅಶಕ್ಯವಾದ್ದರಿಂದ ಸಾವಿರವರ್ಷದ ನಂತರವಾದರೂ ಸಂಗಮವು, ಸ್ಯಾತ್– ಆಗಲಿ. ಅತ್ರ – ಈ ಸಂಗಮ ವಿಷಯದಲ್ಲಿ, ಮೇ– ನನಗೆ, ವಿಘ್ನಃ – ತೊಂದರೆಯು, ನಚ ಸ್ಯಾತ್ – ಆಗದೇಇರಲಿ, ಇತಿ – ಎಂದು ಜಗಾದ – ಹೇಳಿದನು. ॥೧೪೪॥

ಇತ್ಯುಕ್ತ ಓವಿತಿಪ್ರಾಹ ಭಗವಾನ್ಬಾದರಾಯಣಃ ॥
ತಂಪ್ರಣಮ್ಯಯಯೌ ಸೋಽಪಿ ಸ್ವಪ್ನದೃಷ್ಟಮನುಸ್ಮರನ್ ॥೧೪೫॥

ಇತಿ – ಈ ರೀತಿಯಾಗಿ, ಉಕ್ತಃ – ಹೇಳಿಸಿಕೊಳ್ಳಲ್ಪಟ್ಟ, ಭಗವಾನ್ — ಷಡ್ಗುಣೈಶ್ವರ್ಯಸಂಪನ್ನರಾದ. ಬಾದರಾಯಣಃ – ವೇದವ್ಯಾಸರು, ಓವಿತಿ – ಹಾಗೆಯೇ ಆಗಲೆಂದರು, ಪ್ರಾಹ — ಹೇಳಿದರು, ಸೋಪಿ – ಅಶ್ವತ್ಥಾಮರಾದರೂ, ತಂ – ಆ ವ್ಯಾಸರನ್ನು, ಪ್ರಣಮ್ಯ—ನಮಸ್ಕರಿಸಿ, ಸ್ವಪ್ನದೃಷ್ಟಂ—ಸ್ವಪ್ನದಲ್ಲಿ ಕಂಡದ್ದನ್ನು, ಅನುಸ್ಮರನ್ ಸನ್ – ಸ್ಮರಿಸುತ್ತಾ, ಯಯೌ — ಹೋದನು. ॥೧೪೫॥

ಭಾ. ಅ. ೧೭೩—೧೪೫ ತನ್ನ ಬ್ರಹ್ಮಾಸ್ತ್ರವನ್ನು ತನಗೆ ಹಿಂತೆಗೆದುಕೊಳ್ಳಲಾಗದ ಅಶ್ವತ್ಥಾಮರನ್ನು ಕುರಿತು ಶ್ರೀವೇದವ್ಯಾಸರು 'ನೀನು ಈ ಮೊದಲೇ ಭೀಮನಿಗೆ ಸೋತಿರುವಿ, ಈಗ ನಿನ್ನ ಅಸ್ತ್ರವನ್ನೂ ಕೂಡ ಹಿಂತೆಗೆದುಕೊಳ್ಳಲಾಗದೇ ಅರ್ಜುನನಿಗೂ ಸೋತಿರುವಿ. ನಿನ್ನ ತಲೆಯಮೇಲೆ ಜನ್ಮತಃ ಇರುವ ಪ್ರಕಾಶವಾನವಾದ ಮಣಿಯನ್ನು ಭೀಮನಿಗೆ ಕೊಡು. ಮತ್ತು ನೀನು ಬಿಟ್ಟ ಬ್ರಹ್ಮಾಸ್ತ್ರವನ್ನು ಪಾಂಡವರ ದೆಶೆಯಿಂದ ಕೇವಲ ಮಾತಿನಿಂದಾದರೂ ಹಿಂತೆಗೆದುಕೊ; ಎಂದು ಹೇಳಿದರು. ಆಗ ಅಶ್ವತ್ಥಾಮರು ಜರಾಮರಣ ನಾಶಕವಾದ, ಹಸಿವೆ ನೀರಡಿಕೆಗಳನ್ನು ಪರಿಹರಿಸುವ, ದುರ್ಗಂಧ ಪರಿಹಾರಕವಾದ, ಪ್ರಕಾಶಕವಾದ ಮಣಿಯನ್ನು ಕೆತ್ತಿ ಶ್ರೀಭೀಮರಿಗೆ ಕೊಟ್ಟರು. ಐದು ಮಂದಿ ಪಾಂಡವರು ನನ್ನ ಅಸ್ತ್ರದಿಂದ ಬಿಡುಗಡೆ ಹೊಂದಲಿ ಎಂಬ ಮಾತನ್ನು ಹೇಳಿದರು. ಆಗ ಶ್ರೀವ್ಯಾಸರು ಅರ್ಜುನನಿಗೆ ಅಶ್ವತ್ಥಾಮನು ಬಿಟ್ಟ ಅಸ್ತ್ರವನ್ನೂ ಕೂಡ ನೀನೇ ಹಿಂತೆಗೆದುಕೊ' ಎಂದು ಹೇಳಿದರು. ಅರ್ಜುನನು ಹಾಗೆ ಮಾಡಿದನು. ಶ್ರೀಕೃಷ್ಣನು 'ಪಾಂಡವರ ಒಂದು ಸಂತತಿಗಾದರೂ ಅಸ್ತ್ರದಿಂದ ಏನೂ ಆಗದಿರಲಿ ಎಂದು ಹೇಳು ಎಂದನು. ಆಗ ಅಶ್ವತ್ಥಾಮರು ಶ್ರೀಕೃಷ್ಣನಿಗೆ 'ನೀನು ನಿನ್ನ ತಂಗಿಯ ಮಗನ ಪಕ್ಷಪಾತದಿಂದ ಹೀಗೆ ಹೇಳುತ್ತಿರುವಿ, ನಾನು ಆ ಉತ್ತರಾಗರ್ಭದಲ್ಲಿಯೇ ಬಿಡುತ್ತೇನೆ' ಎಂದು ಅಂದರು. ಆಗ ಶ್ರೀಕೃಷ್ಣನು ನೀನು ಆ ಗರ್ಭವನ್ನು ಕೊಲ್ಲುವದೇ ಎಂದು ನಿಶ್ಚಿತವಾಡಿದ್ದರೆ ನಿನ್ನ ಇಚ್ಛೆ ನಡೆಯದು; ನಾನು ಉತ್ತರೆಯ ಗರ್ಭವು ಬದುಕಬೇಕೆಂದು ಇಚ್ಛಿಸಿರುವೆನು. ಆದ್ದರಿಂದ ನಿನ್ನ ಸಂಕಲ್ಪವು ಎಷ್ಟರ ಮಟ್ಟಿಗೂ ಸಫಲವಾಗದು. ನೀನು ಅಭಿಮನ್ಯುವಿನ ಮೃತ ಶರೀರದಲ್ಲಿ ಬಿಟ್ಟರೆ ನಿನ್ನ ಅಸ್ತ್ರವು ಹೇಗೆ ಸಫಲವಾಗದೋ ಹಾಗೆಯೇ ಉತ್ತರಾ ಗರ್ಭದಲ್ಲಿ ಬಿಟ್ಟರೂ ಆಗದು. ನಿನ್ನಅಸ್ತ್ರದಿಂದ ನಿಹತವಾದ ಗರ್ಭವನ್ನು ಪುನಃ ಬದುಕಿಸುತ್ತೇನೆ' ಎಂದು ಹೇಳಿದರೂ ಕೂಡ ಅಶ್ವತ್ಥಾಮರು ಗರ್ಭದ ಮೇಲೆ ಅಸ್ತ್ರವನ್ನು ಹಾಕಿಯೇ ಬಿಡುತ್ತೇನೆಂದು ಹೇಳಿದರು, ಆಗ ಕ್ರುದ್ಧನಾದಂತೆ ತೋರಿಸಿದ ಶ್ರೀಕೃಷ್ಣನು 'ಹೇ ದುಷ್ಟಬುದ್ಧಿಯಾದ ಅಶ್ವತ್ಥಾಮನೇ, ನಿನಗೆ ಶಕ್ಯವಿದ್ದದ್ದನ್ನು ನೀನು ಮಾಡು, ನಂತರ ನನ್ನ ಶಕ್ತಿಯನ್ನು ನೋಡು. ಉತ್ತರಾಗರ್ಭನಾಶಕ್ಕಾಗಿ ಎಷ್ಟು ಪ್ರಯತ್ನ ಮಾಡಿದರೂ, ನಾನು ಖಂಡಿತ, ಬದುಕಿಸುತ್ತೇನೆ ಪಾಂಡವರ ಸಂತತಿಯು ಒಂದು ಸಾವಿರವರ್ಷ ಭೂಮಿಯಲ್ಲಿರಬೇಕೆಂದು ನಾನು ಸಂಕಲ್ಪಿಸಿರುವೆನು;ಹಾಗು ರಕ್ಷಿಸಲಿರುವೆನು. ಆದ್ದರಿಂದ ಅಲ್ಲಿಯು ವರೆಗೆ ಯಾರಿಗೂ ಆ ಗರ್ಭವನ್ನು ನಾಶಮಾಡಲು ಶಕ್ಯವಾಗದು. ನೀನು ಮಾಡಿದ ದುಷ್ಟವಾದ ವಿಚಾರ (ಪಾರ್ಥಸಂತತಿನಾಶಮಾಡುವ, ಕೌರವಸಂತತಿ ಹುಟ್ಟಿಸುವ ವಿಚಾರ) ವನ್ನು ನಾನು ತಿಳಿದಿರುವೆನು, ಆದರೆ ನನ್ನ ಆಜ್ಞೆಯಂತೆ ಖಂಡಿತವಾಗಿ ವಿಫಲವೇ ಆಗುವದು. ಈ ದುಷ್ಟವಿಚಾರ ಹಾಗು ನನ್ನ ಶ್ರೀವೇದವ್ಯಾಸರ ವಿರೋಧವಾಡಿದ ಫಲವಾಗಿ ನೀನು ಮನುಷ್ಯರಿರುವ ಭೂಭಾಗವನ್ನು ಹೊಂದದಂತೆ ಆಗುವದು; ಎಲ್ಲಿ ಬಹು ಜನರಮೇಲನವಿರುವದೋ

ಅಲ್ಲಿ ಜನರ ತಲೆಯ ಮೇಲೆ ಏರಿಕೊಂಡು ಕೂಡುತ್ತೀದಿ, ದುರ್ಗಂಧ, ಗಾಯಗಳಿಂದ ಸದಾಕೂಡಿಕೊಂಡು ಒಂದು ಸಾವಿರ ವರ್ಷಪರ್ಯಂತವಾಗಿ ಅರಣ್ಯ ವೃಕ್ಷಗಳಲ್ಲಿ ವಾಸಿಸುವಿ ಎಂದು ಅಂದನು. ಶ್ರೀವೇದವ್ಯಾಸದೇವರೂ ಕೂಡ ಶ್ರೀಕೃಷ್ಣನ ಮಾತನ್ನು ಅನುಮೋದಿಸಿದರು. ಹೀಗೆ ಎರಡು ಭಗವದ್ರೂಪಗಳಿಂದಲೂ ಹೀಗೆ ಬಿರುನುಡಿಗಳನ್ನು ಕೇಳಿದ ಅಶ್ವತ್ಥಾಮರು ಶ್ರೀವೇದವ್ಯಾಸದೇವರಿಗೆ— 'ನಿನ್ನ ಸಂಗವು ಒಂದು ಸಾವಿರ ವರ್ಷದನಂತರವಾದರೂ ತಪ್ಪದೇ ಆಗಲಿ; ಆಗ ಮಾತ್ರ ವಿಘ್ನ ಬರದಂತಾಗಲಿ, ಎಂದು ಪ್ರಾರ್ಥಿದರು. ಆಗ ಶ್ರೀವೇದವ್ಯಾಸದೇವರು ಆಗಲಿ ಎಂದು ಹೇಳಿದರು. ಅದನ್ನು ಕೇಳಿಕೊಂಡು ಅಶ್ವತ್ಥಾಮರು ತನ್ನ ಸ್ವಪ್ನದಲ್ಲಿ ಕಂಡದ್ದನ್ನು ಸ್ಮರಿಸುತ್ತಾ ಹೋದರು.

ಸ್ವಪ್ನೇಹಿ ದ್ರೌಪದೇಯಾನಾಂ ವಧೋ ದೃಷ್ಟೋಽತ್ಮನಾ ನಿಶಿ ॥
ಅರ್ಜುನೇನ ಪ್ರತಿಜ್ಞಾತಂ ದ್ರೌಪದ್ಯೈಸ್ವವಧಂಪ್ರತಿ ॥೧೯೦॥

ನಿಬಧ್ಯಾನಯನಂ ಚೈವ ತೇನೈವ ಶಿಬಿರಂ ಪ್ರತಿ ॥
ಮುಂಚೇತಿ ದ್ರೌಪದೀವಾಕ್ಯಂ ನೇತಿ ಭೀಮವಚಸ್ತಥಾ ॥೧೯೧॥

ಕೃಷ್ಣವಾಕ್ಯಾನ್ಮಣಿಂ ಹೃತ್ವಾದೇಶಾನ್ನಿರ್ಯಾಪಣಂ ತಥಾ ॥
ಇತ್ಯಾದಿ ಸ್ವಪ್ನದೃಷ್ಟಂ ಯತ್ಪ್ರಾಯಃ ಸತ್ಯಮಭೂದಿತಿ ॥

ಚಿಂತಯನ್ಪ್ರಯಯೌ ದಾವಂ ದ್ರೌಣಿಃ ಶಸ್ತ್ರಭೃತಾಂವರಃ ॥೧೯೨॥
ಸಕೃಷ್ಣೋಕ್ತಮುಪಿಪ್ರಾಪ್ಯ ಬಾದರಾಯಣ ಶಿಷ್ಯತಾಂ ॥
ಪ್ರಾಪ್ಯೋತ್ತರ ದ್ವಾಪರೇಚ ವೇದಾನ್ಸಂವಿಭಜಿಷ್ಯತಿ ॥೧೯೩॥

ಆತ್ಮನಾ – ತನ್ನಿಂದ, ನಿಶಿ – ರಾತ್ರಿಯಲ್ಲಿ, ದ್ರೌಪದೇಯಾನಾಂ – ದ್ರೌಪದಿಯ ಮಕ್ಕಳ, ವಧಃ – ನಾಶವು ಸ್ವಪ್ನೇ – ಸ್ವಪ್ನದಲ್ಲಿ, ದೃಷ್ಟೋಹಿ – ಕಾಣಲ್ಪಟ್ಟಿತು, ಅರ್ಜುನೇನ – ಅರ್ಜುನನಿಂದ, ದ್ರೌಪದ್ಯೈ – ದ್ರೌಪದಿಗೆ, ಮಕ್ಕಳ ನಾಶದಿಂದಉಂಟಾದ ದುಃಖಪರಿಹಾರಕ್ಕೋಸ್ಕರ, ಸ್ವವಧಂಪ್ರತಿ – ತನ್ನನಾಶವನ್ನು ಕುರಿತು, ಪ್ರತಿಜ್ಞಾತಂ — ಪ್ರತಿಜ್ಞೆ ಮಾಡಲ್ಪಟ್ಟದ್ದು. ತೇನೈವ – ಆ ಅರ್ಜುನನಿಂದಲೇ, ನಿಬಧ್ಯ – ಕಟ್ಟಿ, ಶಿಬಿರಂಪ್ರತಿ — ಶಿಬಿರವನ್ನು ಕುರಿತು ಆನಯನಂ— ತರುವಿಕೆಯನು, ಮುಂಚೇತಿ–ಬಿಡಿರಿ ಎಂದು,ದ್ರೌಪದೀವಾಕ್ಯಂ– ದ್ರೌಪದಿಯ ಮಾತು, ನೇತಿ–ಬಿಡಬಾರದೆಂದು,ಭೀಮವಚಃ– ಭೀಮನಮಾತು,ತಥಾ—ಹಾಗೂ, ಕೃಷ್ಣವಾಕ್ಯಾತ್— ಶ್ರೀಕೃಷ್ಣನಮಾತಿನಿಂದ, ಮಣಿಂ – ರತ್ನವನ್ನು ಹೃತ್ವಾ – ಅಪಹರಿಸಿ; ದೇಶಾತ್ – ದೇಶದಿಂದ ನಿರ್ಯಾಪಣಂ – ಹೊರದೊಡಿಸುವಿಕೆಯು, ಇತ್ಯಾದಿ–ಇವೇಮೊದಲಾದದ್ದು, ಯತ್—ಯಾವುದು ಸ್ವಪ್ನದಲ್ಲಿ ಕಾಣಲ್ಪಟ್ಟಿತೋ, ತತ್– ಅದು, ಪ್ರಾಯಃ— ಹೆಚ್ಚಿನ ಅಂಶವು, ಸತ್ಯಮಭೂತ್ — ಯಥಾರ್ಥವಾಯಿತು, ಇತಿ – ಎಂದು, ಚಿಂತಯನ್ – ಸ್ಮರಿಸುತಕ್ಕ, ಶಸ್ತ್ರಭೃತಾಂವರಃ—ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ,ದ್ರೌಣಿಃ— ಅಶ್ವತ್ಥಾಮರು, ದಾವಂ – ವನವನ್ನು ಕುರಿತು, ಪ್ರಯಯೌ – ಹೋದರು. ಸಃ— ಆ ಅಶ್ವತ್ಥಾಮಾಚಾರ್ಯರು, ಕೃಷ್ಣೋಕ್ತಂ – ಶ್ರೀಕೃಷ್ಣನಿಂದ ಹೇಳಲ್ಪಟ್ಟಶಾಪದ ಫಲವಾದ ದುರ್ಗಂಧಾದಿಗಳನ್ನು, ಪ್ರಾಪ್ಯ – ಸಾವಿರವರ್ಷದ ತನಕಹೊಂದಿ, ಪುನಃ – ನಂತರ, ಬಾದರಾಯಣಶಿಷ್ಯತಾಂ— ವೇದವ್ಯಾಸರ ಶಿಷ್ಯತ್ವವನ್ನು, ಪ್ರಾಪ್ಯ—ಹೊಂದಿ, ಉತ್ತರದ್ವಾಪರೇ – ಮುಂದೆಬರುವ ದ್ವಾಪರಯುಗದಲ್ಲಿ,ವೇದಾನ್—ಯುಗಾದಿವೇದಗಳನ್ನು, ಸಂವಿಭಜಿಷ್ಯತಿ—ವಿಭಾಗಮಾಡುವರು. ॥೧೯೦॥೧೯೧॥೧೯೨॥೧೯೩॥

ತತಃಸಪ್ತಋಷಿಭೂತ್ವಾಸಾರಾಶರ್ಯಪ್ರಸಾದತಃ ॥
ಏಕೀಭಾವಂಸ್ವರೂಪೇಣಯಾಸ್ಯತ್ಯಚ್ಯುತನಿಷ್ಠಯಾ ॥೧೯೪॥

ತತಃ– ವೇದವನ್ನು ವಿಭಾಗಮಾಡಿದ ನಂತರ, ಸಃ – ಅಶ್ವತ್ಥಾಮನು, ಪಾರಾಶರ್ಯಪ್ರಸಾದತಃ–ಶ್ರೀವೇದವ್ಯಾಸರ ಅನುಗ್ರಹದಿಂದ, ಸಪ್ತರ್ಷಿಃ – ಸಪ್ತರ್ಷಿನಾಮಕನು, ಭೂತ್ವಾ– ಆಗಿ, ಅಚ್ಯುತನಿಷ್ಠಯಾ–ಪರಮಾತ್ಮನಲ್ಲಿ ಭಕ್ತಿದಾರ್ಢ್ಯದಿಂದ, ಸ್ವರೂಪೇಣ– ತನ್ನ ರುದ್ರಾಖ್ಯ ಮೂಲರೂಪದಿಂದ, ಏಕೀಭಾವಂ – ಐಕ್ಯವನ್ನು, ಯಾಸ್ಯತಿ—ಹೊಂದುವನು. ॥೧೯೯॥

ಕೃಪೋಽಥಪಾಂಡವಾನ್ಪ್ರಾಪ್ಯಗೌರವಾತ್ಪೂಜಿತಶ್ಚತೈಃ ॥
ಅಭೂದಾಚಾರ್ಯಏವಾಸೌ ರಾಜ್ಞಾಂತತ್ತಂತುಭಾವಿನಾಂ ॥೧೯೫॥

ಅಥ— ಅನಂತರ, ಕೃಪಃ– ಕೃಪಾಚಾರ್ಯರು, ಪಾಂಡವಾನ್–ಪಾಂಡವರನ್ನು, ಪ್ರಾಪ್ಯ – ಹೊಂದಿ, ಗೌರವಾತ್–ಗೌರವದಿಂದ, ತೈಃ – ಆ ಪಾಂಡವರಿಂದ, ಪೂಜಿತಃ – ಪೂಜಿಸಿಕೊಳ್ಳಲ್ಪಟ್ಟರು. ಅಸೌ – ಈ ಕೃಪಾಚಾರ್ಯರು, ತತ್ತಂತು ಭಾವಿನಾಂ—ಆ ಪಾಂಡವರ ವಂಶದಲ್ಲಿ ಮುಂದೆ ಹುಟ್ಟುವ, ರಾಜ್ಞಾಂ–ಕ್ಷೇಮಕನವರೆಗಿನ ರಾಜರಿಗೆ, ಆಚಾರ್ಯಃ–ಗುರುಗಳು, ಅಭೂತ್ – ಆದರು. ॥೧೯೫॥

ಬಾದರಾಯಣಶಿಷ್ಯತ್ವಂಪುನಃ ಪ್ರಾಪ್ಯಭಜನ್ನಮುಂ ॥
ಸಾಕಂಸ್ವಭಾಗಿನೇಯೇನ ಭಾವ್ಯೇಕೋಮುನಿಸಪ್ತಕೇ ॥೧೯೬॥

ಪುನಃ – ಪಾಂಡವರ ಸಂತಾನವು ನಾಶವಾದ ನಂತರ,ಬಾದರಾಯಣ ಶಿಷ್ಯತ್ವಂ–ವೇದವ್ಯಾಸರ ಶಿಷ್ಯತ್ವವನ್ನು,ಪ್ರಾಪ್ಯ–ಹೊಂದಿ, ಅಮುಂ—ಈ ವೇದವ್ಯಾಸರನ್ನು, ಭಜನ್‌ಸನ್—ಸೇವಿಸುವವರಾಗಿ, ಸ್ವಭಾಗಿನೇಯೇನ–ತನ್ನ ತಂಗಿಯ ಮಗನಾದ ಅಶ್ವತ್ಥಾಮನಿಂದ, ಸಾಕಂ—ಕೂಡಿಕೊಂಡು, ಮುನಿಸಪ್ತಕೇ – ಏಳು ಮುನಿಗಳ ಮಧ್ಯದಲ್ಲಿ,ಏಕಃ ಒಬ್ಬಮುನಿಯು, ಭಾವೀ–ಆಗುವರು, ॥೧೯೬॥

~~ಕೃತವರ್ಮಾದ್ವಾರವತೀಂ ಯಯೌ ಕೃಷ್ಣಾನುಮೋದಿತಃ ॥೧೯೭॥~~

ಕೃಷ್ಣಾನುಮೋದಿತಃ— ಕೃಷ್ಣನಿಂದ ಆಜ್ಞಾಪಡೆದ, ಕೃತವರ್ಮಾ–ಕೃತವರ್ಮನು, ದ್ವಾರವತೀಂ – ದ್ವಾರಕಾಪಟ್ಟಣವನ್ನು ಕುರಿತು, ಯಯೌ – ಹೋದನು. ॥೧೯೭॥

ಕೃಷ್ಣಾಯೈತಂಮಣಿಂದತ್ವಾಭೀಮಸ್ತಾಂಪರ್ಯಸಾಂತ್ವಯತ್ ॥
ವಿಕೋಪಾ ಭೀಮವಾಕ್ಯೇನರಾಜ್ಞೇಸಾಚ ಮಣಿಂದದೌ ॥೧೯೮॥

ಭೀಮಃ – ಭೀಮನು, ತಂ ಮಣಿಂ – ಅಶ್ವತ್ಥಾಮನಿಂದ ಕೊಡಲ್ಪಟ್ಟ ರತ್ನವನ್ನು,ಕೃಷ್ಣಾಯೈ–ದ್ರೌಪದಿಗೆ, ದತ್ವಾ–ಕೊಟ್ಟು, ತಾಂ— ಆ ದ್ರೌಪದಿಯನ್ನು, ಪರ್ಯಸಾಂತ್ವಯತ್ – ಸಪರಾಧಾನಪಡಿಸಿದನು. ಭೀಮವಾಕ್ಯೇನ – ಭೀಮನ ಮಾತಿನಿಂದ, ವಿಕೋಪಾ – ಪುತ್ರವಧನಿಮಿತ್ತ ಕೋಪರಹಿತಳಾದ, ಸಾ–ಆ ದ್ರೌಪದಿಯು, ರಾಜ್ಞೇ– ಯುಧಿಷ್ಠಿರನಿಗೋಸ್ಕರ, ಮಣಿಂ— ರತ್ನವನ್ನು, ದದೌ – ಕೊಟ್ಟಳು. ॥೧೯೮॥

ರಾಜಾಹರ್ತೇಚಮುಷ್ಣೌದತ್ತೇ ಮುಹ್ಯಂ ಭೀಮೇನಲೌಕಿಕಾಃ ॥
ಸ್ತ್ರೀಪಕ್ಷಪಾತಂ ರಾಜಾಚ ಶಂಕೇಯುರ್ಮಾರುತೇರಿತಿ ॥೧೯೯॥

ಮಣಿಂರಾಜ್ಞೇದದೌ ಕೃಷ್ಣಾಭರ್ತೃಪ್ರಿಯಹಿತೇರತಾ ॥
ಸೋಽಪ್ಯಬದ್ಧ್ವಾಮಣಿಂ ಮೂರ್ಧ್ನಿರೇಜೇರಾಜಾಗವಾಮಿವ ॥೨೦೦॥

ಭೀಮೇನ—ಭೀಮನಿಂದ, ಮಹ್ಯಂ— ನನಗೋಸ್ಕರ, ದತ್ತೇ – ಕೊಡಲ್ಪಟ್ಟ, ರಾಜಾರ್ಹೇ – ರಾಜನಿಗೆಯೋಗ್ಯವಾದ, ಮಣೌ – ಮಣಿಯು (ಮತ್ಸಮೀಪೇವಿ ವಿದ್ಯಮಾನೇ ಸತಿ) -- (ನನ್ನ ಹತ್ತಿರವೇ ಇರುತ್ತಿರಲು) ಲೌಕಿಕಾಃ— ಹೆಂಡತಿಯಲ್ಲಿ ಪಕ್ಷಪಾತ ಉಳ್ಳಜನರು, ರಾಜಾ ಚ— ಧರ್ಮರಾಜನೂ ಕೂಡ, ಮಾರುತೇಃ – ಭೀಮನಿಗೆ, ಸ್ತ್ರೀಪಕ್ಷಪಾತಂ ಶಂಕೇಯುಃ— ಭೀಮನು ಸ್ತ್ರೀಯರಲ್ಲಿ ಪಕ್ಷಪಾತ ಉಳ್ಳವನು, ಎಂಬ ವಿಪರೀತ ಜ್ಞಾನಉಳ್ಳವರಾಗುವರು ಎಂದು ವಿಚಾರಮಾಡಿ, ಭರ್ತೃಪ್ರಿಯಹಿತೇ ರತಾ— ಗಂಡನ ಅತಿಶಯಿತಹಿತದಲ್ಲಿ ಆಸಕ್ತಳಾದ, ಕೃಷ್ಣಾ— ದ್ರೌಪದಿಯು, ರಾಜ್ಞೇ – ಧರ್ಮರಾಜನಿಗೆ, ಮಣಿಂ – ರತ್ನವನ್ನು, ದದೌ – ಕೊಟ್ಟಳು. ಸೋಪಿ— ಆ ಧರ್ಮರಾಜನಾದರೂ, ಮಣಿಂ – ರತ್ನವನ್ನು ಮೂರ್ಧ್ನಿ – ಶಿರಸ್ಸಿನಲ್ಲಿ, ಆಬದ್ಧ— ಕಟ್ಟಿಕೊಂಡು, ಗವಾಂ – ಕಿರಣಗಳಿಗೆ, ರಾಜೇವ— ರಾಜನಾದ ಸೂರ್ಯನಂತೆ, ರೇಜೇ – ಪ್ರಕಾಶಿಸಿದನು. ॥೧೯೯॥೨೦೦॥

ವೇದೇಶ್ವರೇಣಾಖಿಯುದೂತ್ತಮೇನ ಕೃಷ್ಣೇನ ಯುಕ್ತಾಸ್ತತ ಆಶುಪಾರ್ಥಾಃ ।।
ಯಯುಃ ಸಭಾರ್ಯಾನಿಜರಾಜಧಾನೀಂ ಹತ್ವೇವ ಸಂತೋಽಂತರರೀನ್ಸ್ವರಾಜ್ಯಂ ।।೨೦೧।।

ತತಃ – ಅನಂತರ, ವೇದೇಶ್ವರೇಣ— ವೇದಗಳಿಗೆ ಅಧಿಪತಿಯಾದ ಶ್ರೀವೇದವ್ಯಾಸರಿಂದಲೂ, ಯದೂತ್ತಮೇನ ಕೃಷ್ಣೇನ – ಯಾದವರಲ್ಲಿ ಶ್ರೇಷ್ಠನಾದ ಶ್ರೀಕೃಷ್ಣನಿಂದಲೂ, ಯುಕ್ತಾಃ – ಕೂಡಿದ, ಪಾರ್ಥಾಃ – ಪಾಂಡವರು, ಸಂತಃ – ಸಜ್ಜನರು, ಅಂತಃ– ಶರೀರದೊಳಗಿರುವ, ಅರೀನ್ – ಕಾಮಾದಿಶತ್ರುಗಳನ್ನು, ಹತ್ವಾ— ಕೊಂದು, ಅಪರೋಕ್ಷಜ್ಞಾನವನ್ನು ಹೊಂದಿ, ಸ್ವರಾಜ್ಯಮಿವ – ಸ್ವತಂತ್ರನಾದಪರಮಾತ್ಮನ ಮೋಕ್ಷವನ್ನೆಂಬಂತೆ, ಅಂತಃ— ತಮ್ಮಗೃಹಗಳಲ್ಲಿರುವ, ಅರೀನ್— ಶತ್ರುಗಳಾದ ದುರ್ಯೋಧನಾದಿಗಳನ್ನು, ಹತ್ವಾ–ಕೊಂದು, ಸಭಾರ್ಯಾಸ್ಸಂತಃ – ತಮ್ಮ ಪತ್ನಿಯರಿಂದ ಕೂಡಿದವರಾಗಿ, ನಿಜರಾಜಧಾನೀಂ – ತಮ್ಮ ಹಸ್ತಿನಾವತೀ ಪಟ್ಟಣವನ್ನು ಕುರಿತು, ಯಯುಃ – ಹೋದರು. ॥೨೦೧॥

ಭಾ. ಅ. ೧೯೦–೨೦೧(ಶ್ರೀಮದಾಚಾರ್ಯರು ಈಗ ಅಶ್ವತ್ಥಾಮಾಚಾರ್ಯರಿಗೆ ಸ್ವಪ್ನದೃಷ್ಟವಾದ ವಿಷಯವನ್ನು ನಿರೂಪಿಸುತ್ತಾರೆ. ಇದರಿಂದ ಶ್ರೀಮದ್ಭಾಗವತ ಪ್ರಥಮಸ್ಕಂಧದಲ್ಲಿಯೂ ಈ ಕಥೆಗೂ ಶ್ರೀಮನ್ಮಹಾಭಾರತದಲ್ಲಿರುವ ಈ ಕಥೆಗೂ ತೋರುವ ವಿರೋಧವು ಪರಿಹೃತವಾಗಿದೆ. ಸ್ವಪ್ನದೃಷ್ಟವಾದ ವಿಷಯವನ್ನು ಭಾಗವತ ನಿರೂಪಿಸಿದೆ. ವಸ್ತುತಃ ನಡೆದ ಘಟನೆಯನ್ನು ಶ್ರೀಮಹಾಭಾರತ ಹೇಳಿದೆ. ಹೀಗಾಗಿ ವಿರೋಧವಿಲ್ಲ.)ಅಶ್ವತ್ಥಾಮರು ಸ್ವಪ್ನದಲ್ಲಿ ತಾನು ದ್ರೌಪದೀಪುತ್ರರವಧವಮಾಡಿದ್ದನ್ನು, ತನ್ನ ವಧಕ್ಕಾಗಿ ದ್ರೌಪದೀ ಎದುರು ಅರ್ಜುನನು ಪ್ರತಿಜ್ಞೆ ಮಾಡಿದ್ದನ್ನು, ತನ್ನನ್ನು ಕಟ್ಟಿ ಶಿಬಿರಕ್ಕೆ ತಂದದ್ದನ್ನು, ಬಿಟ್ಟು ಬಿಡಿರಿ ಎಂದು ದ್ರೌಪದೀದೇವಿ ಹೇಳಿದ್ದನ್ನು,ಶ್ರೀಭೀಮಸೇನದೇವರು ಬೇಡ ಎಂದು ಹೇಳಿದ್ದನ್ನು,ಶ್ರೀಕೃಷ್ಣನ ಮಾತಿನ ಪ್ರಕಾರ ತನ್ನ ತಲೆಯಮೇಲೆ ಇರುವ ಮಣಿಯನ್ನು ತೆಗೆದು ತನ್ನನ್ನು ಹೊರಗೆ ಹಾಕಿದ್ದನ್ನು ಇಷ್ಟನ್ನೆಲ್ಲ ಕಂಡಿದ್ದರು. ಈಗ ವಾಸ್ತವಿಕ ಘಟನೆಗಳು ನಡೆದ ಮೇಲೆ ಸ್ವಪ್ನದಲ್ಲಿ ಕಂಡದ್ದು ಬಹುಭಾಗ ಸತ್ಯವಾಗಿದೆ ಎಂದು ಕೊಂಡು ವನಕ್ಕೆ ಹೋದರು. ಅವರು ಶ್ರೀಕೃಷ್ಣನು ಹೇಳಿದಂತೆ ದುರ್ಗಂಧಾದಿಗಳನ್ನು ಒಂದುಸಾವಿರ ವರ್ಷಪರ್ಯಂತ ಹೊಂದಿ, ನಂತರ ಶ್ರೀಬಾದರಾಯಣದೇವರ ಶಿಷ್ಯರಾಗಿ ಮುಂದಿನ ದ್ವಾಪರಯುಗದಲ್ಲಿ ವೇದವಿಭಾಗ ಕಾರ್ಯವನ್ನು ಮಾಡುತ್ತಾರೆ. ಅನಂತರ, ಶ್ರೀವ್ಯಾಸರ ಅನುಗ್ರಹದಿಂದ, ಸಪ್ತಋಷಿಗಳಲ್ಲೊಬ್ಬರಾಗಿ, ದೃಢವಾದ ಭಗವದ್ಭಕ್ತಿಯನ್ನು ಹೊಂದಿ, ಮೂಲರೂಪಕ್ಕೆ ಸೇರುತ್ತಾರೆ. ಕೃಪಾಚಾರ್ಯರು ಪಾಂಡವರಲ್ಲಿ ಬಂದು ಅವರಿಂದ ಪೂಜಿತರಾಗಿ ಅವರ ವಂಶದ ರಾಜರಿಗೆ ಗುರುವಾಗಿದ್ದು, ಆ ವಂಶದನಂತರ ಶ್ರೀಬಾದರಾಯಣದೇವರ ಶಿಷ್ಯತ್ವವನ್ನು ಹೊಂದಿ ಅವರನ್ನು ಸೇವಿಸಿ, ತಮ್ಮ ಸೋದರಳಿಯ ಅಶ್ವತ್ಥಾಮರ ಜೊತೆಗೆ ಸಪ್ತಋಷಿಗಳಲ್ಲೊಬ್ಬರಾಗುವರು. ಕೃತವರ್ಮನು ಶ್ರೀಕೃಷ್ಣನಿಂದ ಕೂಡಿಕೊಂಡು ದ್ವಾರಕೆಗೆ ಹೋದನು. ಅಶ್ವತ್ಥಾಮರಿಂದ ಪಡೆದ ಮಣಿಯನ್ನು ಶ್ರೀಭೀಮಸೇನದೇವರು ಶ್ರೀದ್ರೌಪದೀದೇವಿಗೆ ಕೊಟ್ಟು ಸಮಾಧಾನ ಮಾಡಿದರು. ಅವರ ಮಾತಿನಿಂದ ಸಿಟ್ಟನ್ನು ಬಿಟ್ಟು ಮಣಿಯನ್ನು ಧರ್ಮರಾಜನಿಗೇ ಕೊಟ್ಟಳು. ಏಕೆಂದರೆ ತನ್ನಲ್ಲೇ ಇದ್ದರೆ, ರಾಜರಲ್ಲಿರಲು ಯೋಗ್ಯವಾದ ಮಣಿಯನ್ನು ಭೀಮನು ಹೆಂಡತಿಗೆ ಕೊಟ್ಟನು, ಆದ್ದರಿಂದ ಅವನು ಸ್ತ್ರೀಪಕ್ಷಪಾತಿಯು ಎಂದು ಜನರಾಗಲೀ ಧರ್ಮರಾಜನಾಗಲೀ ಶಂಕಿಸಬಹುದು. ಹಾಗೆ ಪತಿಯ ಬಗೆಗೆ ಸಂದೇಹ ಬರುವದಕ್ಕೆ ಆಸ್ಪದವನ್ನು ಪತ್ನಿಯು ಮಾಡಬಾರದು ಎಂದು

ವಿಚಾರಿಸಿ ಕೊಟ್ಟಳು. ಧರ್ಮರಾಜನು ಆ ಮಣಿಯನ್ನು ಶಿರಸ್ಸಿಗೆ ಕಟ್ಟಿಕೊಂಡು ಸೂರ್ಯನಂತೆ ಶೋಭಿಸುತ್ತಿದ್ದನು. ಹೀಗೆ ಶ್ರೀಕೃಷ್ಣ ಶ್ರೀವೇದವ್ಯಾಸರ ಅನುಗ್ರಹದಿಂದ ದುಷ್ಪರಾದ ಕೌರವಸಂಹಾರವಾಡಿದ ಪಾಂಡವರು ಸಜ್ಜನರು ಅಂತರ್ವೈರಿಗಳಾದ ಕಾಮ-ಕ್ರೋಧಾದಿಗಳನ್ನು ಸಂಹರಿಸಿ ಮೋಕ್ಷಸಾವಾಜ್ಯವನ್ನು ಹೊಂದುವಂತೆ ಆ ಪರವಾತ್ಮನ ರೂಪದ್ವಯದಿಂದ, ಪತ್ನಿಯರಿಂದ ಸಮೇತರಾಗಿ ತಮ್ಮ ರಾಜಧಾನಿಯನ್ನು ಪ್ರವೇಶಿಸಿದರು.

ಯುಧಿಷ್ಠಿರಸ್ಯಾನು ವಿಚಿತ್ರವೀರ್ಯಸುತಸ್ಯಪಾದಾವಭಿವಂದಮಾನಂ ॥
ಆಕೃಷ್ಯಭೀಮಂ ಪರಮೇಶ್ವರೋಽಯೋಮಯಾಕೃತಿಂ ಧಾತ್ಪುರತೋನೃಪಸ್ಯ ॥೨೦೨॥

ಪರಮೇಶ್ವರಃ— ಶ್ರೀಕೃಷ್ಣನು, ಯುಧಿಷ್ಠಿರಸ್ಯಾನು — ಧರ್ಮರಾಜನು ಧೃತರಾಷ್ಟ್ರನಿಗೆ ನಮಸ್ಕಾರ ಮಾಡಿದ ಅನಂತರ, ವಿಚಿತ್ರವೀರ್ಯಸುತಸ್ಯ- ವಿಚಿತ್ರವೀರ್ಯನಮಗನಾದ ಧೃತರಾಷ್ಟ್ರನ,ಪಾದೌ – ಚರಣಗಳನ್ನು, ಅಭಿವಂದಮಾನಂ- ನಮಸ್ಕರಿಸತಕ್ಕ, ಭೀಮಂ— ಭೀಮನನ್ನು, ಆಕೃಷ್ಯ— ಎಳೆದು, ಅಯೋಮಯಾಕೃತಿಂ – ಲೋಹಾತ್ಮಕವಾದ ಪ್ರತಿಮೆಯನ್ನು, ನೃಪಸ್ಯ— ಧೃತರಾಷ್ಟ್ರನ, ಪುರತಃ ಮುಂಭಾಗದಲ್ಲಿ, ಧಾತ್ - ಇಟ್ಟನು. ॥೨೦೨॥

ಭೀಮಾಕೃತಿಂ ತಾಂ ಸ ಸುಯೋಧನೇನಕಾರಾಯಿತಾಮಭ್ಯಸನೇ ಗದಾಯಾಃ ॥
ಆಶ್ಲಿಷ್ಯಚೂರ್ಣೀಕೃತವಾನಸೃಗ್ವಮನ್ಹಾ ತಾತ ಭೀಮೇತಿವದನ್ಪಪಾತ ॥೨೦೩॥

ಸಃ— ಆ ಧೃತರಾಷ್ಟ್ರನು, ಸುಯೋಧನೇನ – ದುರ್ಯೋಧನನಿಂದ, ಗದಾಯಾಃ – ಗದೆಯ, ಅಭ್ಯಸನೇ—ಅಭ್ಯಾಸ ಕ್ಕೋಸ್ಕರ, ಕಾರಾಯಿತಾಂ – ಮಾಡಿಸಲ್ಪಟ್ಟ, ತಾಂ ಭೀಮಾಕೃತಿಂ – ಆ ಭೀಮನ ಪ್ರತಿಮೆಯನ್ನು, ಆಶ್ಲಿಷ್ಯ – ಆಲಿಂಗಿಸಿ, ಚೂರ್ಣೀಕೃತವಾನ್ – ಪುಡಿಪುಡಿ ಮಾಡಿದನು, ಅಸೃಕ್ – ರಕ್ತವನ್ನು, ವಮನ್ಸನ್ – ವಾಂತಿಮಾಡುವವನಾಗಿ,ಹಾ ತಾತ ಭೀಮ – ಎಲೆ ಮಗನಾದ ಭೀಮನೇ(ಕೊಲ್ಲಲ್ಪಟ್ಟೆ), ಇತಿ-ಎಂದು,ವದನ್ಸನ್-ಹೇಳತಕ್ಕವನಾಗಿ,ಪಪಾತ-ಬಿದ್ದನು, ॥೨೦೩॥

ತಮಾಹ ಕೃಷ್ಣೋನಹತೋಽದ್ಯಭೀಮೋನ ಚತ್ವಯಾಽನ್ಯೈರಪಿಶಕ್ಯತೇಽಸೌ ॥
ಹಂತುಂ ಸ್ವಬುದ್ಧಿಃ ಪ್ರಥಿತಾತ್ವಯಾದ್ಯಪಾಪಾಹಿತೇ ಬುದ್ಧಿರದ್ಯಾಪಿರಾಜನ್ ॥೨೦೪॥

ಕೃಷ್ಣಃ – ಶ್ರೀಕೃಷ್ಣನು, ತಂ – ಧೃತರಾಷ್ಟ್ರನನ್ನು ಕುರಿತು, ಆಹ — ಹೇಳಿದನು. ಹೇ ರಾಜನ್ — ಎಲೋ ರಾಜನಾದ ಧೃತರಾಷ್ಟ್ರನೇ, ಭೀಮಃ — ಭೀಮನು, ಅದ್ಯ — ಈಗ,ನ ಹತಃ – ಕೊಲ್ಲಲ್ಪಡಲಿಲ್ಲ,ಅಸೌ – ಈ ಭೀಮನು, ತ್ವಯಾ- ನಿನ್ನಿಂದ, ಅನ್ಯೈರಪಿ — ಇತರರಾದ ದೇವ ದೈತ್ಯರಿಂದಲೂ ಕೂಡ, ಹಂತುಂ—ಕೊಲ್ಲಲು, ನ ಶಕ್ಯತೇ-ಸಾಧ್ಯನಾಗಲಾರನು. ಅದ್ಯ—ಈಗ, ತ್ವಯಾ— ನಿನ್ನಿಂದ, ಸ್ವಬುದ್ಧಿಃ – ಸ್ವಕೀಯವಾದ ದುಷ್ಟಬುದ್ಧಿಯು, ಪ್ರಥಿತಾ – ಪ್ರಕಟಿತವಾಯಿತು, ಅದ್ಯಾಪಿ - ಈಗಲೂ ಕೂಡ, (ಮಕ್ಕಳು ಸತ್ತರೂಕೂಡ)ತೇ— ನಿನ್ನ, ಬುದ್ಧಿಃ—ಬುದ್ಧಿಯು, ಪಾಪಾ ಹಿ — ಪಾಪವಿಷಯದಲ್ಲಿಯೇ ಆಸಕ್ತವಾಗಿದೆ. ಆಶ್ಚರ್ಯವು. ॥೨೦೪॥

ಸ್ವಬುದ್ಧಿದೋಷಾದತಿಪಾಪಶೀಲಪುತ್ರಾಖ್ಯಪಾಪಾನಿ ವಿವರ್ಧಯಿತ್ವಾ ॥
ನೀತೋವಶಂ ತೈಃ ಫಲಮುದ್ಯಭುಂಜನ್ನ ಕ್ರೋಧಿತುಂ ಚಾರ್ಹಸಿಭೀಮಸೇನೇ ॥೨೦೫॥

ಸ್ವಬುದ್ಧಿದೋಷಾತ್ — ನಿನ್ನ ಬುದ್ಧಿಯದೋಷದಿಂದ, ಅತಿಪಾಪಶೀಲಪುತ್ರಾಖ್ಯಪಾಪಾನಿ — ಅತ್ಯಂತಪಾಪಸ್ವಭಾವವುಳ್ಳಮಕ್ಕಳೆಂಬು ಹೆಸರುಳ್ಳ ಪಾಪಗಳನ್ನು, ವಿವರ್ಧಯಿತ್ವಾ—ವಿಶೇಷವಾಗಿ ಬೆಳೆಸಿ, ತೈಃ—ಆ ಮಕ್ಕಳಿಂದ, ವಶಂ-ನೀತ ಸ್ಸನ್ – ಅಧೀನತ್ವವನ್ನು ಹೊಂದಿಸಿಕೊಳ್ಳಲ್ಪಟ್ಟವನಾಗಿ, ಅದ್ಯ – ಈಗ, ಫಲಂ—ಪಾಪ ಫಲವನ್ನು ಭುಂಜನ್ಸನ್ –

ಅನುಭವಿಸುವವನಾಗಿ, ಭೀಮಸೇನೇ — ಭೀಮಸೇನನಲ್ಲಿ, ಕ್ರೋಧಿತುಂ — ಕೋಪಮಾಡಲು, ನಾರ್ಹಸಿ — ಯೋಗ್ಯನಾಗುವುದಿಲ್ಲ. ॥೨೦೫॥

ಇತ್ಯುಕ್ತೇಶಾಂತಬುದ್ಧೈವ ರಾಜ್ಞಾsಹೂತೋವೃಕೋದರಃ ॥
ಅಭ್ಯವಂದತತತ್ಪಾದಾವನುಜಾದ್ಯಾಶ್ಚತಸ್ಯಯೇ ॥೨೦೬॥

ಇತ್ಯುಕ್ತೇ ಸತಿ–ಶ್ರೀಕೃಷ್ಣನು ಈ ರೀತಿಯಾಗಿ ಹೇಳುತ್ತಿರಲು, ಶಾಂತಬುದ್ಧ್ಯೈವ–ಸಮಾಧಾನವಾದ ಬುದ್ಧಿಯಿಂದಲೇ, ರಾಜ್ಞಾ – ರಾಜನಾದ ಧೃತರಾಷ್ಟ್ರನಿಂದ, ಆಹೂತಃ – ಕರೆಯಲ್ಪಟ್ಟ, ವೃಕೋದರಃ – ಭೀಮಸೇನನು, ತತ್ಪಾದೌ – ಆ ಧೃತರಾಷ್ಟ್ರನ ಚರಣಗಳನ್ನು, ಅಭ್ಯವಂದಂತ — ನಮಸ್ಕರಿಸಿದನು, ತಸ್ಯ —ಆ ಭೀಮನ, ಯೇ – ಅನುಜಾದ್ಯಾಃ – ಯಾವ ತಮ್ಮಂದಿರೋ ಅವರು, ದ್ರೌಪದ್ಯಾದಿ ಹೆಂಡಂದಿರೂ ಕೂಡ, ವವಂದಿರೇ– ನಮಸ್ಕರಿಸಿದರು. ॥೨೦೬॥

ಆವ—ಭೀಮನನ್ನು ಎಳೆದು ಕಬ್ಬಿಣದ ಪ್ರತಿಮೆಯನ್ನು ಮುರಿದಿಟ್ಟ ಶ್ರೀಕೃಷ್ಣನ ಅಭಿಪ್ರಾಯವನ್ನು ಹೇಳುತ್ತಾರೆ.

ವಜ್ರಾಚ್ಚದೃಢದೇಹತ್ವಾದವಿಕಾರೇವೃಕೋದರೇ ॥
ನದೋಷೋವಿವೃತೋಸ್ಯ ಸ್ಯಾದಿತಿ ಕೃಷ್ಣೇನ ವಂಚಿತಃ ॥೨೦೭॥

ವಜ್ರಾಚ್ಚ – ವಜ್ರದಿಂದಲೂ ಕೂಡ, ದೃಢದೇಹತ್ವಾತ್ – ಘಟ್ಟಿಯಾದ ಶರೀರವಿರುವದರಿಂದ, ವೃಕೋದರೇ– ಭೀಮನು, ಅವಿಕಾರೇ ಸತಿ— ಅವಯವ ವಿಕಾರವಿಲ್ಲದವನಾಗುತ್ತಿರಲು, ಅಸ್ಯ— ಈ ಧೃತರಾಷ್ಟ್ರನ, ದೋಷಃ – ಬುದ್ಧಿ ದೋಷವು, ವಿವೃತಃ - ಪ್ರಕಾಶಿತವಾದದ್ದು, ನ ಸ್ಯಾತ್–ಆಗಲಾರದು, ಇತಿ – ಈಕಾರಣದಿಂದ, ಕೃಷ್ಣೇನ—ಶ್ರೀಕೃಷ್ಣನಿಂದ, ವಂಚಿತಃ – ಧೃತರಾಷ್ಟ್ರನು ವಂಚಿಸಲ್ಪಟ್ಟನು, ॥೨೦೭॥

ಸರ್ವಾನಾಶ್ಲಿಷ್ಯಚಪ್ರೇಮ್ಣಾಯುಯೋಜನೃಪತಿರಾಶಿಷಃ ॥
ಕುಲನಾಶಕರಃ ಪಾಪಃ ಶಾಪಯೋಗ್ಯಸ್ತವಹ್ಯಯಂ ॥೨೦೮॥

ಇತ್ಯುಕ್ತೈವ ವಪ್ರಣಮತೋ ಗಾಂಧಾರೀ ಸುಪದಾಂಗುಲೀಃ ॥
ದದರ್ಶಧರ್ಮರಾಜಸ್ಯ ಪಟಾಂತೇನ ಪ್ರಕೋಪಿತಾ ॥೨೦೯॥

ತಸ್ಯಾಃಕ್ರೋಧಾಗ್ನಿನಿರ್ದಗ್ಧನಖಃ ಸಕುನಖೋsಭವತ್ ॥೨೧೦॥

ನೃಪಃ – ಧೃತರಾಷ್ಟ್ರನು, ಸರ್ವಾನ್ – ಧರ್ಮರಾಜನೇ ಮೊದಲಾದ ಐವರನ್ನೂ, ಪ್ರೇಮ್ಣಾ— ಪ್ರೀತಿಯಿಂದ, ಆಶ್ಲಿಷ್ಯ— ಆಲಿಂಗಿಸಿ, ಆಶಿಷಃ ಯುಯೋಜ — ಆಶೀರ್ವಾದಗಳನ್ನು ಮಾಡಿದನು. ಕುಲನಾಶಕರಃ— ವಂಶನಾಶವನ್ನು ಮಾಡಿದ, ತವ–ನಿನ್ನ, ಶಾಪಯೋಗ್ಯಃ–ಶಾಪಕ್ಕೆ ಯೋಗ್ಯನಾದವನು, ಅಹಂ – ನಾನು, ಇತಿ—ಈ ರೀತಿಯಾಗಿ, ಉಕ್ತ್ವೈವ–ಹೇಳಿಕೊಂಡೇ, ಪ್ರಣಮತಃ – ನಮಿಸತಕ್ಕ, ಧರ್ಮರಾಜಸ್ಯ— ಧರ್ಮರಾಜನ, ಸುಪದಾಂಗುಲೀಃ – ಶೋಭನ ಪಾದಗಳ ಬೆರಳುಂಗಳನ್ನು, ಪ್ರಕೋಪಿತಾ —ಕುಪಿತಳಾದ ಗಾಂಧಾರಿಯೂ, ಪಟಾಂತೇನ—ವಸ್ತ್ರದಿಂದ ಕಟ್ಟಲ್ಪಟ್ಟ ಕಣ್ಣಿನ ತುದಿಯಿಂದೇ ದದರ್ಶ—ನೋಡಿದಳು, ತಸ್ಯಾಃ – ಆ ಗಾಂಧಾರಿಯ, ಕ್ರೋಧಾಗ್ನಿನಿರ್ದಗ್ಧನಖಃ – ಕೋಪವೆಂಬ ಬೆಂಕಿಯಿಂದ ಸುಡಲ್ಪಟ್ಟ ಉಗುರುಳ್ಳ, ಸಃ – ಆ ಧರ್ಮರಾಜನು, ಕುನಖಿಃ – ಕುಚ್ಛಿತವಾದ ಉಗುರುಳ್ಳವನು, ಅಭವತ್ – ಆದನು, ॥೨೦೮॥ ೨೦೯॥ ॥೨೧೦॥

ವಂದಮಾನಂಪುನರ್ಭೀಮಮಾಹಸಾ ಕ್ರೋಧವಿಹ್ವಲಾ ॥
ಅಧರ್ಮತಃ ಕಥಂ ಭೀಮಸುತಂ ಮೇತ್ವಂ ನಿಜಘ್ನಿವಾನ್ ॥೨೧೧॥

ಪುನಃ – ಧರ್ಮರಾಜನ ಅಂಗುಲಿಯನ್ನು ನೋಡಿದ ನಂತರ, ವಂದಮಾನಂ – ನಮಸ್ಕರಿಸುವ, ಭೀಮಂ – ಭೀಮನನ್ನು, ಕುರಿತು, ಕ್ರೋಧವಿಹ್ವಲಾ – ಕೋಪದಿಂದ ಚಂಚಲಳಾದ, ಸಾ—ಆ ಗಾಂಧಾರಿಯು, ಹೇ ಭೀಮ – ಎಲೋ ಭೀಮನೇ, ಅಧರ್ಮತಃ - ಅಧರ್ಮದಿಂದ, ತ್ವಂ – ನೀನು,ಕಥಂ – ಹೇಗೆ, ಮೇ – ನನ್ನ, ಸುತಂ – ಮಗನನ್ನು,ನಿಜಘ್ನಿವಾನ್ – ಕೊಂದಿ, ಇತಿ – ಎಂದು, ಆಹ—ಹೇಳಿದಳು. ॥೨೧೧॥

ಇತ್ಯುಕ್ತೋಽಸ್ಯಾಃ ಶಮಯಿತುಂ ಕ್ರೋಧಮಗ್ರೇವೃಕೋದರಃ ॥
ಓಮ್ಆಹ ನ ಪ್ರಾಣಸಂದೇಹೇ ಪಾಪಂ ಸ್ಯಾತ್ಪಾಪಿನೋವಧೇ ॥೨೧೨॥

ಇತಿ— ಈ ರೀತಿಯಾಗಿ, ಉಕ್ತಃ-ಹೇಳಿಸಿಕೊಳ್ಳಲ್ಪಟ್ಟ, ವೃಕೋದರಃ – ಭೀಮನು, ಅಗ್ರೇ—ಮೊದಲು,ಅಸ್ಯಾಃ– ಈ ಗಾಂಧಾರಿಯ ಕ್ರೋಧಂ— ಕೋಪವನ್ನು, ಶಮಯಿತುಂ — ಶಾಂತಿ ಮಾಡಲು, ಪ್ರಾಣಸಂದೇಹೇ ಸತಿ – ಪ್ರಾಣ ಉಳಿಯುವ ಬಗ್ಗೆ ಸಂದೇಹವು ಉಂಟಾಗುತ್ತಿರಲು, ಪಾಪಿನಃ— ಹರಿದ್ವೇಷಿಯ, ವಧೇ – ಕೊಲ್ಲುವ ವಿಷಯದಲ್ಲಿ, ಪಾಪಂ ನ ಸ್ಯಾತ್— ಪಾಪವು ಉಂಟಾಗಲಾರದು. ಅಧರ್ಮದಿಂದ ಕೊಲ್ಲಲ್ಪಟ್ಟನು ಎಂಬ ಗಾಂಧಾರಿಯ ಮತವನ್ನು ಅಂಗೀಕರಿಸಿ ಭೀಮನು ಸಮಾಧಾನವನ್ನು ಹೇಳಿದನು. ವಸ್ತುತಃ ಭೀಮನು ಅಧರ್ಮದಿಂದ ಕೊಲ್ಲಲಿಲ್ಲ. ॥೨೧೨॥

ಇತ್ಯುಕ್ತ್ವಾತಾಂ ಪುನಃ ಪ್ರಾಹಪ್ರತಿಜ್ಞಾಹಾನಿಮಂತರಾ ॥
ನಮೋಽಸ್ತಿಪ್ರಾಣಸಂದೇಹ ಇತಿ ಜಾನನ್ವೃಕೋದರಃ ॥೨೧೩॥

ಯಥಾಪ್ರತಿಜ್ಞಂ ಭ್ರಾತೃವ್ಯಾನ್ನಘ್ನತೇಮಮ ನಿಜಘ್ನುಷಃ ॥
ಕ್ವಾಧರ್ಮಃಕ್ಷತ್ರಜಾತೇಸ್ತು ತದ್ಧಾನೌ ಜೀವನಂ ನಹಿ ॥೨೧೪॥

ಆವ – ಬಲಿಷ್ಠನಾದ ಭೀಮನಿಗೆ ಪ್ರಾಣಸಂದೇಹವು ಹೇಗೆಂದರೆ ಅದರ ಅಭಿಪ್ರಾಯವನ್ನು ಹೇಳುತ್ತಾನೆ.

ಪ್ರತಿಜ್ಞಾಹಾನಿಂ ಪ್ರತಿಜ್ಞಾಹಾನಿಯನ್ನು, ಅಂತರಾ-ಹೊರತು, ಮೇ– ನನಗೆ, ಪ್ರಾಣಸಂದೇಹಃ—ಪ್ರಾಣತ್ಯಾಗ್ಯದ ಸಂದೇಹವು. ನಾಸ್ತಿ – ಇಲ್ಲವೆಂದು, ಜಾನನ್— ತಿಳಿದಿರುವ, ವೃಕೋದರಃ— ಭೀಮನು, ತಾಂ- ಆ ಗಾಂಧಾರಿಯನ್ನು ಕುರಿತು, ಇತಿ– ಈ ರೀತಿಯಾಗಿ, ಉಕ್ತ್ವಾ – ಹೇಳಿ, ಪುನಃ— ಮತ್ತೆ, ಪ್ರಾಹ – ಹೇಳಿದನು ಯಥಾಪ್ರತಿಜ್ಞಂ —ಪ್ರತಿಜ್ಞೆಯನ್ನು ಅತಿಕ್ರಮಿಸದೇ, ರಣೇ – ಯುದ್ಧದಲ್ಲಿ ಭ್ರಾತೃವ್ಯಾನ್ – ವೈರಿಗಳನ್ನು, ನಿಜಘ್ನುಷಃ – ಕೊಲ್ಲತಕ್ಕ, ಕ್ಷತ್ರಜಾತೇಃ- ಕ್ಷತ್ರಿಯ ಜಾತಿಯವನಾದ, ಮಮ—ನನಗೆ, ಅಧರ್ಮಃ ಕ್ವ-ಅಧರ್ಮವು ಎಲ್ಲಿ ? ಅಧರ್ಮವು ಇಲ್ಲವೇ ಇಲ್ಲ. ಹಿ—ಯಾವ ಕಾರಣದಿಂದ, ತದ್ಧಾನೌಸತ್ಯಾಂ—ಪ್ರತಿಜ್ಞಾಹಾನಿಯುಂಟಾಗುತ್ತಿರಲು, ಜೀವನಂ ನಹಿ-ಜೀವನವು ಇಲ್ಲವೇ ಇಲ್ಲ. ಆದ್ದರಿಂದ ಪ್ರತಿಜ್ಞಾಹಾನಿಯಾಗುವುದೇ ಪ್ರಾಣಸಂದೇಹವು ಆಗಿರುತ್ತದೆ. ॥೨೧೩॥೨೧೪॥

ಪಾಪಾ ನ ಶುದ್ಧಧರ್ಮೇಣ ಹಂತವ್ಯಾಇತಿಚಶ್ರುತಿಃ ॥
ಅನ್ಯವತ್ಪಾಪಹನನಂ ಪಾಪಾಯೇತ್ಯಾಹಹಿಶ್ರುತಿಃ ॥
ಅತೋಽಸುರಾನ್ನೈಕೃತಿಕಾನ್ನಿಕೃತ್ಯಾಘ್ನಂತಿ ದೇವತಾಃ ॥೨೧೫॥

ಆವ— ಪ್ರತಿಜ್ಞೆ ಇಲ್ಲದಿದ್ದರೂ ಗದಾಯುದ್ಧದಲ್ಲಿ ನಾಭಿಯಿಂದ ಕೆಳಗೆ ಹನನವು ಧರ್ಮವೆಂದು ಹೇಳುತ್ತಾರೆ.

ಪಾಪಾಃ – ಪಾಪಿಷ್ಠರು, ಶುದ್ಧಧರ್ಮೇಣ – ಶುದ್ಧಧರ್ಮದಿಂದ ಹಂತವ್ಯಾಃ ನ—ಕೊಲ್ಲಲು ಯೋಗ್ಯರಲ್ಲ. ಇತಿ— ಎಂದು, ಶ್ರುತಿಃ— ವೇದವು ಇದೆ. ಹಿ—ಯಾವ ಕಾರಣದಿಂದ, ಅನ್ಯವತ್ – ಧಾರ್ಮಿಕರ ಸಂಹಾರದಂತೆ, ಪಾಪಹನನಂ—

ಪಾಪಿಷ್ಠರ ವಧವು ಪಾಪಾಯ — ಪಾಪಕ್ಕೆ ಕಾರಣ ಆಗುವದು, ಇತಿ — ಎಂದೂ, ಶ್ರುತಿಃ — ವೇದವಿದೆಯೋ, ಅತಃ — ಆದ್ದರಿಂದ, ನೈಕೃತಿಕಾನ್ — ಕಪಟಿಗಳಾದ, ಆಘುರಾನ್ — ಅಸುರರನ್ನು, ದೇವತಾಃ — ದೇವತೆಗಳು, ನಿಕೃತ್ಯಾ — ಕಪಟದಿಂದ, ಘ್ನಂತಿ — ಕೊಲ್ಲುತ್ತಾರೆ ॥೨೦೫॥

ಆವ — ಆ ಶ್ರುತಿಯನ್ನು ಉದಾಹರಿಸುತ್ತಾರೆ —

ನಿಕೃತ್ಯಾನಿಕೃತಿಂ ಹನ್ಯಾನ್ನಿಕೃತ್ಯಾ ನೈವಧಾರ್ಮಿಕಾನ್ ॥
ಇತಿ ಶ್ರುತ್ಯರ್ಹಿ ಪರಮಾ ಪಠ್ಯತೇ ಪೈಂಗಿಭಿಸ್ಸದಾ ॥೨೦೬॥

ನಿಕೃತ್ಯಾ — ಕಪಟದಿಂದ, ನಿಕೃತಿಂ — ಕಪಟಿಯನ್ನು, ಹನ್ಯಾತ್ — ಕೊಲ್ಲುತಕ್ಕದ್ದು, ನಿಕೃತ್ಯಾ — ಕಪಟದಿಂದ, ಧಾರ್ಮಿಕಾನ್ — ಧರ್ಮಿಷ್ಠರನ್ನು, ನೈವ ಹನ್ಯಾತ್ — ಕೊಲ್ಲಬೇಬಾರದು, ಇತಿ — ಈ ರೀತಿಯಾಗಿ, ಪರಮಂ — ಅಪೌರುಷೇಯವಾದ, ಶ್ರುತಿಃ — ವೇದವು, ಪೈಂಗಿಭಿಃ — ಪೈಂಗಿ ಋಷಿಗಳಿಂದ, ಸದಾ — ಯಾವಾಗಲೂ, ಪಠ್ಯತೇ — ಪಠಿಸಲ್ಪಡುತ್ತದೆ. ॥೨೦೬॥

ಇತ್ಯುಕ್ತಾ ತಂ ಪುನಃ ಪ್ರಾಹ ಕಥಂ ತೇ ನರಶೋಣಿತಂ ॥
ಪೀತಂ ನರೇಣೈವ ಸತಾ ನಪೀತಮಿತಿಸೋಬ್ರವೀತ್ ॥೨೦೭॥

ದಂತಾಂತರಂ ನಮೇಪ್ರಾಪ ಶೋಣಿತಂ ತ್ವತ್ಸುತಸ್ಯ ತತ್ ॥
ಪ್ರತಿಜ್ಞಾಪಾಲನಾಯಾಪಿ ಪ್ರತಿಕರ್ತುಂಚ ತತ್ಕೃತಂ ॥೨೦೮॥

ಇತಿ — ಈ ರೀತಿಯಾಗಿ, ಉಕ್ತಾ — ಹೇಳಿಸಿಕೊಳ್ಳಲ್ಪಟ್ಟ ಗಾಂಧಾರಿಯು, ತಂ — ಆ ಭೀಮನನ್ನು ಕುರಿತು, ಪುನಃ — ಮತ್ತೆ, ಪ್ರಾಹ — (ಹೇಳಿದಳು,) ನರೇಣೈವ ಸತಾ — ಮನುಷ್ಯನೇ ಆದ, ತೇ — ನಿನ್ನಿಂದ, ನರಶೋಣಿತಂ — ಮನುಷ್ಯನ ರಕ್ತವು, ಕಥಂ — ಹೇಗೆ, ಪೀತಂ — ಕುಡಿಯಲ್ಪಟ್ಟಿತು ? ಇತಿ — ಎಂದು, ಹೇಳಿದಳು, ಸಃ — ಆ ಭೀಮನು, ನ ಪೀತಂ — ಕುಡಿಯಲ್ಪಡಲಿಲ್ಲ, ಇತಿ — ಎಂದು, ಅಬ್ರವೀತ್ — ಹೇಳಿದನು, ತ್ವತ್ಸುತಸ್ಯ — ನಿನ್ನ ಮಗನ, ತತ್ — ಆ ರಕ್ತವು, ಮೇ — ನನ್ನ, ದಂತಾಂತರಂ — ಹಲ್ಲುಗಳ ಒಳಭಾಗವನ್ನು, ನಪ್ರಾಪ್ತಃ — ಪ್ರವೇಶಿಸಲಿಲ್ಲ, ಪ್ರತಿಜ್ಞಾಪಾಲನಾಯ — ರಕ್ತವನ್ನು ಪಾನ ಮಾಡುವೆನು ಎಂಬ ಪ್ರತಿಜ್ಞೆಯ ರಕ್ಷಣೆಗಾಗಿ, ಪ್ರತಿಕರ್ತುಂ — ದುಃಶಾಸನನಿಂದ ಮಾಡಲ್ಪಟ್ಟ ಪತಿವ್ರತೆಯು ಕೇಶಗಳ ಆಕರ್ಷಣ, ವಸ್ತ್ರಾಪಹಾರಾದಿ ಮಹಾಪಾಪಕ್ಕೆ ಪ್ರತೀಕಾರ ಮಾಡುವದಕ್ಕೋಸ್ಕರ, ತತ್ — ಆ ಪಾನರೂಪವಾದ ಕರ್ಮವು, ಕೃತಂ — ಮಾಡಲ್ಪಟ್ಟಿತು. ಮಹಾಪಾಪಕ್ಕೆ ಮಹಾಶಿಕ್ಷೆಯನ್ನೇ ಮಾಡತಕ್ಕದ್ದು, ಹಾಗೆ ಮಾಡದಿದ್ದರೆ ದೋಷವು ಬರುವುದು. ॥೨೦೭॥ ॥೨೦೮॥

ಆವ — ರಕ್ತಪಾನದಲ್ಲಿ ಎರಡು ಮುಖ್ಯ ಕಾರಣಗಳನ್ನು ಹೇಳಿ ಕಾರಣಾಂತರವನ್ನು ಹೇಳುತ್ತಾನೆ.

ಭೀಷಣಾಯಂಚ ಶತ್ರೂಣಾಂ ಪೀತವಚ್ಚೇತ್ಪ್ರದರ್ಶಿತಂ ॥
ವೇದವ್ಯಷ್ಟ್ಯಾ ಧರ್ಮೋsಯಮಿತಿ ಪಾಪಜನಂ ಪ್ರತಿ ॥೨೦೯॥

ಇತ್ಯುಕ್ತೋವಾಚ ನೈವಾಂಧದ್ವಯಸ್ಯಾಸ್ಯ ವೃಕೋದರ ॥
ಘ್ನತಾ ಪುತ್ರಶತಂ ಯುಷ್ಮನ್ಮಾತ್ರಂ ಚೋರ್ವರಿತಂ ತ್ವಯಾ ॥೨೧೦॥

ಶತ್ರುಣಾಂ – ವೈರಿಗಳಿಗೆ, ಭೀಷಣಾಯ ಚ – ಭಯವನ್ನುಂಟುಮಾಡುವದಕ್ಕೋಸ್ಕರವೂ ಕೂಡ, ಪೀತವತ್ – ರಕ್ತವನ್ನು ಕುಡಿದವನಂತೆ, ಪ್ರದರ್ಶಿತಂ – ತೋರಿಸಲ್ಪಟ್ಟಿತು, ವಸ್ತುತಃ ಪಾನ ಮಾಡಲಿಲ್ಲ, ಅಯಂ ಧರ್ಮಃ – ಈ ಪ್ರತಿಜ್ಞಾಪಾಲನ ರೂಪವಾದ ಧರ್ಮವು, ಪಾಪಜನಂಪ್ರತಿ – ದುಷ್ಟಜನರನ್ನು ಕುರಿತೇ, ವೇದದೃಷ್ಟಿಃ – ವೇದದಿಂದ ಪ್ರತಿಪಾದಿಸಲ್ಪಟ್ಟಿದೆ, ಸಜ್ಜನರನ್ನು ಕುರಿತು ಹೇಳಲ್ಪಡಲಿಲ್ಲ, ಇತ್ಯುಕ್ತಾ – ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ ಗಾಂಧಾರಿಯು, ಹೇವೃಕೋದರ – ಎಲೋ ಭೀಮಸೇನನೇ, ಅಸ್ಯ ಅಂಧದ್ವಯಸ್ಯ – ಜಾತ್ಯಂಧ ಪತಿಯಾಗಿ ವಸ್ತ್ರ ಬಂಧನದಿಂದ ಅಂಧರಾದ ನಮ್ಮಿಬ್ಬರ, ಪುತ್ರಶತಂ – ನೂರು ಮಕ್ಕಳನ್ನು, ಘ್ನತಾ – ಕೊಲ್ಲುತಕ್ಕ, ತ್ವಯಾ – ನಿನ್ನಿಂದ, ಯಷ್ಟಿಮಾತ್ರಂಚ – ಆಧಾರ ದಂಡಸ್ಥಾನೀಯನಾದ ಒಬ್ಬ ಮಗನೂ ಕೂಡ, ಕಥಂ ನು ಉರ್ವರಿತಂ ? – ಏಕೆ ಉಳಿಸಲ್ಪಡಲಿಲ್ಲ ?, ಇತಿ – ಎಂದು, ಉವಾಚ – ಹೇಳಿದಳು ॥೨೧೯॥ ॥೨೨೦॥

ತಾಮಾಹ ಭೀಮಃ ಪಾಪಿಷ್ಠಾ ವಧಯೋಗ್ಯಾಪರಾಧಿನಃ ॥
ಸರ್ವೇಹತಾ ಇತಿಪುನಃ ಸಾಽಹಯೇನಾಕೃತಸ್ತವ ॥೨೨೧॥
ಅಪರಾಧಃ ಸ ಏಕೋಽಪಿ ಕಿಂ ನಾಸ್ತೀತ್ಯವದತ್ಸತಾಂ ॥
ಸರ್ವೈಃ ಸಮೇತೈಃ ಕೃಷ್ಣಸ್ಯ ಬಂಧನಾಯವಿನಿಶ್ಚಿತಂ ॥೨೨೨॥

ಭೀಮಃ – ಭೀಮನು, ತಾಂ – ಆ ಗಾಂಧಾರಿಯನ್ನು ಕುರಿತು, ಪಾಪಿಷ್ಠಾಃ – ಹರಿದ್ವೇಷವೆಂಬ ಪಾಪದಲ್ಲಿ ಆಸಕ್ತರಾದ, ವಧಯೋಗ್ಯಾಪರಾಧಿನಃ – ಕೊಲ್ಲಲಿಕ್ಕೆ ತಕ್ಕದಾದ ಅಪರಾಧವುಳ್ಳ, ಸರ್ವೇ – ಎಲ್ಲರೂ, ಹತಾಃ – ಕೊಲ್ಲಲ್ಪಟ್ಟರು, ಇತಿ – ಎಂದು, ಅಹ – ಹೇಳಿದನು, ಸಾ – ಆ ಗಾಂಧಾರಿಯು, ಪುನಃ – ಮತ್ತೆ, ಯೇನ – ಯಾವ ನನ್ನ ಮಗನಿಂದ, ತವ – ನಿನಗೆ, ಅಪರಾಧಃ – ಅಪರಾಧವು, ಅಕೃತಃ – ಮಾಡಲ್ಪಡಲಿಲ್ಲವೋ, ಸಃ – ಅಂತಹ, ಏಕೋಪಿ – ಒಬ್ಬ ಮಗನೂ ಕೂಡ, ನಾಸ್ತಿಕಿಂ – ಇರಲಿಲ್ಲವೋ, ಇತಿ – ಎಂದು, ಅಹ – ಹೇಳಿದಳು, ಸಃ – ಭೀಮನು, ತಾಂ – ಆ ಗಾಂಧಾರಿಯಮ್ಮನ್ನು ಕುರಿತು, ಅಪರಾಧವನ್ನು ಮಾಡದಿರುವ ಒಬ್ಬ ಮಗನೂಕೂಡ ಇಲ್ಲವೆಂದು ಹೇಳಿದನು, ಸಮೇತೈಃ – ಮಿಲಿತರಾದ, ಸರ್ವೈಃ – ಎಲ್ಲರಿಂದಲೂ, ಕೃಷ್ಣಸ್ಯ ಬಂಧನಾಯ – ಕೃಷ್ಣನನ್ನು ಕಟ್ಟುವದಕ್ಕೋಸ್ಕರ, ವಿನಿಶ್ಚಿತಂ – ನಿಶ್ಚಯವು ಮಾಡಲ್ಪಟ್ಟಿತು. ॥೨೨೧॥ ॥೨೨೨॥

ಅನ್ಯಾನಿಚ ಸುಪಾಪಾನಿ ಕೃತಾನ್ಯತ್ರ ಪುರಾಪಿ ಚ ॥
ವಾಸುದೇವಂ ಸಭಾಸಂಸ್ಥಂ ಬ್ರುವಾಣಂ ಧರ್ಮಸಂಹಿತಾಂ ॥೨೨೩॥
ಪುನಃಪುನರವಜ್ಞಾಯ ಯಾಂತಂ ದ್ಯೂರ್ಯೋಧನಂ ಬಹಿಃ ॥
ಸರ್ವೇಽನ್ವಗಚ್ಛನ್ನಿತ್ಯಾದೀನ್ಯಭಿಪ್ರೇತ್ಯವೃಕೋದರಃ ॥೨೨೪॥
ನೈಕೋಪ್ಯನಪರಾಧೀನೋ ಸ್ವಯಂತಾನನುಶಿಕ್ಷಿತುಂ ॥
ಅಸಮರ್ಥಾಮಯಿ ಕ್ರೋಧಂ ಕಿಂಕರೋಷಿ ನಿರರ್ಥಕಂ ॥೨೨೫॥

ಅತ್ರ – ಈ ಯುದ್ಧದಲ್ಲಿ, ಪುರಾಪಿ ಚ – ಈ ಹಿಂದೆ ಬಾಲ್ಯಾವಸ್ಥೆಯನ್ನು ಆರಂಭಿಸಿ ಅಜ್ಞಾತವಾಸ ಪರ್ಯಂತರವಾಗಿಯೂ ಕೂಡ, ಅನ್ಯಾನಿ ಸುಪಾಪಾನಿ – ಅತ್ಯಂತ ಪಾಪರೂಪ ಕರ್ಮಗಳು, ಕೃತಾನಿ – ಮಾಡಲ್ಪಟ್ಟವೆ, ಧರ್ಮಸಂಹಿತಾಂ – ಧರ್ಮ ಶಾಸ್ತ್ರಾರ್ಥದಿಂದ ಕೂಡಿದ್ದು ಹೇಗೋ ಹಾಗೆ, ಬ್ರುವಾಣಂ – ಹೇಳತಕ್ಕ, ಸಭಾಸಂಸ್ಥಂ – ಸಭೆಯಲ್ಲಿ ಕುಳಿತಿರುವ, ವಾಸುದೇವಂ – ಶ್ರೀ ಕೃಷ್ಣನನ್ನು, ಪುನಃ ಪುನಃ – ಮತ್ತೂ ಮತ್ತೂ, ಅವಜ್ಞಾಯ – ತಿರಸ್ಕರಿಸಿ, ಬಹಿಃ – ಸಭೆಯಿಂದ

ಹೊರಗೆ, ಯಾಂತಂ – ಹೋಗತಕ್ಕ, ದುರ್ಯೋಧನಂ – ದುರ್ಯೋಧನನನ್ನು, ಸರ್ವೇ – ನಿನ್ನ ಎಲ್ಲ ಮಕ್ಕಳು, ಅನ್ವಗಚ್ಛನ್ – ಅನುಸರಿಸಿ ಹೋದರು, ಇತ್ಯಾದೀನಿ – ಇವೇ ಮೊದಲಾದವುಗಳನ್ನು, ಅಭಿಪ್ರೇತ್ಯ—ಮನಸ್ಸಿನಲ್ಲಿ ನಿಶ್ಚಯಿಸಿ, ವೃಕೋದರಃ – ಭೀಮಸೇನನು ಮೇ—ನನಗೆ, ಅನಪರಾಧೀ—ಅಪರಾಧವನ್ನು ಮಾಡದಿರುವ, ಏಕೋऽಪಿ – ಒಬ್ಬ ಮಗನೂ ಕೂಡ, ನ – ಇರಲೇ ಇಲ್ಲ, ಸ್ವಯಂ – ಸ್ವತಃ ನೀನು, ತಾನ್ – ಆ ಮಕ್ಕಳಿಗೆ, ಅನುಶಿಷ್ಟಿಂ—ಬುದ್ಧಿಮಾರ್ಗವನ್ನು ಹೇಳಲು, ಅಸಮರ್ಥಾ ಸತೀ – ಸಾಮರ್ಥ್ಯವಿಲ್ಲದವಳಾಗಿ, ಮಯಿ – ನನ್ನಲ್ಲಿ, ನಿರರ್ಥಕಂ—ಪ್ರಯೋಜನವಿಲ್ಲದ, ಕ್ರೋಧಂ–ಕೋಪವನ್ನು, ಕಿಂ ಕರೋಷಿ – ಏಕೆ ಮಾಡುವಿ ಇತಿ ಅನದತ್— ಎಂದು ಹೇಳಿದನು. ॥೨೨೩॥ ॥೨೨೪॥ ॥೨೨೫॥

ಇತ್ಯುಕ್ತಾ ಸಾऽಭವತ್ತೂಷ್ಣೀಂ ಕ್ರಮಾತ್ಸರ್ವೈಶ್ಚ ಪಾಂಡವೈಃ॥
ವಂದಿತಾ ವ್ಯಾಸವಾಕ್ಯೈಶ್ಚ ಕಿಂಚಿಚ್ಛಾಂತಾಚ ಸಾऽಭವತ್ ॥೨೨೬॥

ಇತಿ – ಈ ರೀತಿಯಾಗಿ, ಉಕ್ತಾ – ಭೀಮನಿಂದ ಹೇಳಿಸಿಕೊಳ್ಳಲ್ಪಟ್ಟ, ಸಾ – ಆ ಗಾಂಧಾರಿಯು, ತೂಷ್ಣೀಂ – ಸುಮ್ಮನೆ, ಅಭವತ್—ಆದಳು, ಸರ್ವೈಃ—ಎಲ್ಲಾ, ಪಾಂಡವೈಃ—ಪಾಂಡವರಿಂದ, ಕ್ರಮಾತ್—ವಯಸ್ಸಿನ ಕ್ರಮದಿಂದ, ವಂದಿತಾ—ನಮಸ್ಕರಿಸಿಕೊಳ್ಳಲ್ಪಟ್ಟ, ಸಾ–ಆ ಗಾಂಧಾರಿಯು, ವ್ಯಾಸವಾಕ್ಯೈಶ್ಚ–ಶ್ರೀ ವೇದವ್ಯಾಸರ ಮಾತಿನಿಂದಲೂ ಕೂಡ, ಕಿಂಚಿತ್—ಸ್ವಲ್ಪ, ಶಾಂತಾ – ಕೋಪವನ್ನು ಬಿಟ್ಟು ಸಮಾಧಾನ ಹೊಂದಿದವಳು, ಅಭವತ್ – ಆದಳು. ॥೨೨೬॥

ಭಾ. ಅ. ೨೦೨–೨೨೬ ಪಾಂಡವರು ತಮ್ಮ ಹಸ್ತಿನಾವತಿ ಪ್ರವೇಶಮಾಡಿ, ಅಲ್ಲಿರುವ ತಮ್ಮ ದೊಡ್ಡಪ್ಪನಾದ ಧೃತರಾಷ್ಟ್ರನಿಗೆ ನಮಸ್ಕರಿಸಲು ಹೋದಾಗ, ಮೊದಲು ಧರ್ಮರಾಜನು ನಮಸ್ಕರಿಸಿದ ನಂತರ, ಶ್ರೀ ಭೀಮಸೇನದೇವರು ನಮಸ್ಕರಿಸಲೆಂದು ಮುಂದೆ ಹೊರಟಾಗ, ಶ್ರೀಕೃಷ್ಣನು ಅವರನ್ನು ಹಿಂದೆ ಎಳೆದು, ಅವರ ಬದಲಾಗಿ ದುರ್ಯೋಧನನು ತನ್ನ ಗದಾಯುದ್ಧದ ಅಭ್ಯಾಸಕ್ಕೆಂದು ಮಾಡಿಸಿಕೊಂಡ, ಉಕ್ಕಿನಿಂದ ಮಾಡಿದ, ಅಲ್ಲಿಯೇ ಇದ್ದ ಭೀಮ ಪ್ರತಿಮೆಯನ್ನು ಧೃತರಾಷ್ಟ್ರನ ಮುಂದೆ ಇಟ್ಟನು. ಅದನ್ನೇ ಭೀಮನೆಂದು ತಿಳಿದು ಅಂಧನಾದ ಧೃತರಾಷ್ಟ್ರನು ಗಟ್ಟಿಯಾಗಿ ಆಲಿಂಗಿಸಿ ಅದನ್ನು ಪುಡಿ–ಪುಡಿಮಾಡಿ, ತಾನೂ ರಕ್ತ ಕಾರುತ್ತಾ, ಭೀಮಾ ಸತ್ತಿಯೋ ಎಂದು ಒದರುತ್ತಾ ಬಿದ್ದನು. ಆಗ ಶ್ರೀ ಕೃಷ್ಣನು ಧೃತರಾಷ್ಟ್ರನಿಗೆ– 'ಭೀಮನು ಸತ್ತಿಲ್ಲ, ನಿನ್ನಿಂದಾಗಲಿ ಯಾರಿಂದಾಗಲಿ ಸಾಯಿಸಲು ಶಕ್ಯವಿಲ್ಲ. ಆದರೆ ಅವನನ್ನು ಕೊಲ್ಲುವ ಇಚ್ಛೆ–ದುರುದ್ದೇಶಗಳು ನಿನಗಿದ್ದವು ಎಂಬುದು ಮಾತ್ರ ಪ್ರಕಟವಾಯಿತು, ನಿನ್ನ ದುಷ್ಟ ಮಕ್ಕಳು ಸತ್ತಮೇಲೂ ಕೂಡ ನಿನ್ನ ದುಷ್ಟ ಬುದ್ಧಿ ಮಾತ್ರ ಹೋಗಿಲ್ಲ, ಆಶ್ಚರ್ಯ. ನಿನ್ನ ಬುದ್ಧಿದೋಷದಿಂದ ಅತಿ ಪಾಪಿಷ್ಠರಾದ ನಿನ್ನ ಮಕ್ಕಳೆಂಬ ಪಾಪಗಳನ್ನೇ ಬೆಳೆಸಿ, ಅವರ ವಶನಾಗಿ ಮಾಡಿದ ಪಾಪಕಾರ್ಯಗಳ ಫಲವನ್ನು ಈಗ ನೀನು ಉಣ್ಣುತ್ತಿರುವಿ. ಹೀಗಿರುವಾಗ ಭೀಮಸೇನನ ಮೇಲೆ ಸಿಟ್ಟು ಮಾಡುವದು ನಿನಗೆ ತರವಲ್ಲ' ಎಂದು ಹೇಳಿದನು, ಆಗ ಧೃತರಾಷ್ಟ್ರನು ಮೊದಲಿನಂತೆ ದುಷ್ಟವಲ್ಲದ ಅಭಿಪ್ರಾಯದಿಂದ ಶ್ರೀಭೀಮರನ್ನು ಕರೆದಾಗ, ಅವರು ಅವನ ಪಾದಕ್ಕೆರಗಿದರು; ಹಾಗು ದ್ರೌಪದಿ ದೇವಿಯು ಅರ್ಜುನಾದಿ ತಮ್ಮಂದಿರೂ ನಮಸ್ಕರಿಸಿದರು. ಧೃತರಾಷ್ಟ್ರನು ಎಲ್ಲರನ್ನೂ ಆಲಿಂಗಿಸಿ ಆಶೀರ್ವದಿಸಿದನು. ಹೀಗೆ ಉಕ್ಕಿನ ಪ್ರತಿಮೆಯಂತೆ ಪುಡಿಯಾದ್ದರಿಂದ ಧೃತರಾಷ್ಟ್ರನ ದುರ್ಬುದ್ಧಿಯು ಮನಸ್ಸಿನಲ್ಲಿ ಮಾಡಿಕೊಂಡಿದ್ದ ಗೂಢ ದಾಪ್ಟ ವಿಚಾರ ಜಗಕ್ಕೆಲ್ಲ ಪ್ರಕಟವಾಯಿತು. ಒಂದು ವೇಳೆ ಶ್ರೀಕೃಷ್ಣನು ಹಾಗೆ ಮಾಡದೇ ಇದ್ದರೆ, ಶ್ರೀಭೀಮರೇ ಮುಂದೆ ಹೋಗಿದ್ದರೆ ಧೃತರಾಷ್ಟ್ರನು ಹಾಗೆ ಗಟ್ಟಿಯಾಗಿ ಅಪ್ಪಿಕೊಂಡಾಗಲೂ ಕೂಡ ಏನೂ ಆಗುತ್ತಿರಲಿಲ್ಲ. ಏಕೆಂದರೆ ಶ್ರೀಭೀಮರ ದೇಹವು ವಜ್ರಕ್ಕಿಂತಲೂ ಕಠಿಣವಾದದ್ದು. ಹೀಗಾಗಿ ಧೃತರಾಷ್ಟ್ರನ ಗೂಢ ದುಷ್ಟಾಭಿಪ್ರಾಯವು ಯಾರಿಗೂ ತಿಳಿಯುತ್ತಿರಲಿಲ್ಲ. ಇಷ್ಟೆಲ್ಲ ಮಾಡಿಸುವದಕ್ಕಾಗಿ ಶ್ರೀಕೃಷ್ಣನು ಹಾಗೆ ಧೃತರಾಷ್ಟ್ರನಿಗೆ ವಂಚನೆ ರೂಪವಾದ ಕಾರ್ಯವನ್ನು ಮಾಡಿದನು. ನಂತರ ಗಾಂಧಾರಿಯ ಹತ್ತಿರ ಬಂದ ಧರ್ಮರಾಜನು 'ನಿನ್ನ ಕುಲನಾಶ ಮಾಡಿದ್ದರಿಂದ ನಿನ್ನ ಶಾಪಕ್ಕೆ ಯೋಗ್ಯನಾದ, ಪಾಪಿಯಾದ ನಾನು ಧರ್ಮರಾಜನು ನಮಸ್ಕರಿಸುತ್ತೇನೆ' ಎಂದು ಹೇಳುತ್ತಾ ನಮಸ್ಕರಿಸಿದಾಗ, ಗಾಂಧಾರಿಯು ತನ್ನ ಕಣ್ಣಪಟ್ಟಿಯ ಕೆಳ ಭಾಗದಿಂದ ಸಿಟ್ಟಿನಿಂದ ನೋಡಿದಾಗ ಅವಳ ಆ ದೃಷ್ಟಿಯು ಧರ್ಮರಾಜನ ಪಾದದ ಬೆರಳುಗಳ ಮೇಲೆ ಬಿದ್ದಿತು. ಅದರಿಂದ ಅವನ ಉಗುರುಗಳು ಅವಳ ಕ್ರೋಧಾಗ್ನಿಯಿಂದ ಸುಟ್ಟಂತೆ ಕಪ್ಪಾದವು; ಶ್ರೀಭೀಮರು ಬಂದು ನಮಸ್ಕರಿಸುವಾಗ ಅವಳು

'ಭೀಮಸೇನಾ, ನನ್ನ ಮಗ (ದುರ್ಯೋಧನ) ನನ್ನು ಅಧರ್ಮದಿಂದ ಹೇಗೆ ಕೊಂದಿ ?' ಎಂದು ಕೇಳಿದಳು. ಆಗ ಶ್ರೀ ಭೀಮರು ಮೊದಲು ಅವಳ ಸಿಟ್ಟು ಕಡಿಮೆಯಾಗಲಿ ಎಂಬ ದೃಷ್ಟಿಯಿಂದ ಪ್ರಾಣಕ್ಕೆ ಅಪಾಯ ಒದಗಿದಾಗ ಪಾಪಿ ವೈರಿಯನ್ನು) ಅಧರ್ಮದಿಂದ ಕೊಂದರೂ ದೋಷವಿಲ್ಲ ಎಂದು ತನ್ನ ಆಪತ್ತಿನಲ್ಲಿ ಕೊಂದಿರುವಂತೆ ಮೊದಲು ಹೇಳಿ, ನಂತರ ಸಮರ್ಥರಾದ ತಮಗೆ ಪ್ರತಿಜ್ಞಾಹಾನಿ ಎಂಬುದನ್ನು ಬಿಟ್ಟು ಬೇರೆ ಯಾವ ಅಪಾಯವೂ ಇರಲಿಲ್ಲ. ಕ್ಷತ್ರಿಯರಿಗೆ ಪ್ರತಿಜ್ಞಾ ಪಾಲನ ಮಾಡಲಾಗದಿದ್ದರೆ, ಅವರು ಇದ್ದರೂ ಇಲ್ಲದಂತೆ ಎಂಬುದನ್ನು ತಿಳಿಸಿ, ತಾವು ಪ್ರತಿಜ್ಞಾ ಪಾಲನೆಗಾಗಿಯೇ ಕಟಿ ಪ್ರದೇಶದಲ್ಲಿ ಹೊಡೆದದ್ದು ಎಂಬುದನ್ನು ಸ್ಪಷ್ಟಪಡಿಸಿ, ಅಧರ್ಮವಿಲ್ಲವೇ ಇಲ್ಲ ಎಂದು ತಿಳಿಸಿದರು. 'ಅಲ್ಲದೇ ದುಷ್ಟರನ್ನು ಧರ್ಮಿಗಳನ್ನು ಕೊಲ್ಲುವಂತೆ ಕೊಲ್ಲಲೇಬಾರದು. ಕಪಟಿಗಳನ್ನು ಕಪಟದಿಂದ ಕೊಲ್ಲಬೇಕು; ಧರ್ಮದಿಂದ ಕೊಂದರೇ ಪಾಪ ಬರುವದು ಎಂದು ಶ್ರುತಿಯು ಇದ್ದದ್ದರಿಂದಲೂ ದೋಷವಿಲ್ಲ' ಎಂದು ತಿಳಿಸಿದರು. ಆಗ ಗಾಂಧಾರಿಯು ಮನುಷ್ಯ ರಕ್ತವನ್ನು ಹೇಗೆ ಕುಡಿದಿ ?' ಎಂದು ಕೇಳಿದಳು. ಆಗ ಶ್ರೀ ಭೀಮರು ವಸ್ತು ಸ್ಥಿತಿಯಾದ– ನಾನು ರಕ್ತ ಕುಡಿದಂತೆ ತೋರಿಸಿದ್ದು ವಿನಃ, ರಕ್ತವು ನನ್ನ ಹಲ್ಲಿನ ಒಳಗೂ ಕೂಡ ಹೋಗಿಲ್ಲ. ಅದನ್ನೂ ಕೂಡ ಪ್ರತಿಜ್ಞಾ ರಕ್ಷಣೆಗಾಗಿ, ಶತ್ರುಗಳಿಗೆ ಭಯವಾಗುವದಕ್ಕಾಗಿ ಮಾಡಿದ್ದು ಎಂದು ಹೇಳಿದರು. ಆಗ ಗಾಂಧಾರಿಯು 'ಈ ಕುರುಡು ದಂಪತಿಗಳಿಗೆ ಆಶ್ರಯಕ್ಕಾಗಿ ಕೋಲಿನಂತೆ ಒಬ್ಬ ಪುತ್ರನನ್ನೂ ಉಳಿಸದೇ ಎಲ್ಲ ನೂರುಮಂದಿಯನ್ನು ಕೊಂದೆಯಲ್ಲ' ಎಂದು ಅಂದಳು. ಆಗ ಶ್ರೀಭೀಮರು ಎಲ್ಲರೂ ವಧ ಮಾಡಿಸಿಕೊಳ್ಳಲು ಯೋಗ್ಯರಾಗಲು ಬೇಕಾದ ಮಹಾಪರಾಧವನ್ನು ಮಾಡಿದ್ದರಿಂದ ಎಲ್ಲರನ್ನೂ ಕೊಂದೆನು ಎಂದು ಅಂದರು. ಆಗ 'ಒಬ್ಬನಾದರೂ ನಿರಪರಾಧಿಯು ಇರಲಿಲ್ಲವೇ ?' ಎಂದು ಕೇಳಿದಳು. ಆಗ ಶ್ರೀ ಭೀಮರು 'ಇರಲಿಲ್ಲ; ಎಲ್ಲರೂ ಒಟ್ಟುಸೇರಿ ಶ್ರೀ ಕೃಷ್ಣ ಬಂಧನಕ್ಕಾಗಿ, ದುರಾಲೋಚನೆ ಮಾಡಿದರು. ಶ್ರೀ ಕೃಷ್ಣನು ಸಂಧಿಗಾಗಿ ಬಂದು ಧರ್ಮಬೋಧೆಯನ್ನು ಮಾಡುತ್ತಿರುವಾಗ, ಶ್ರೀ ಕೃಷ್ಣನನ್ನು ಪುನಃ ಪುನಃ ತಿರಸ್ಕರಿಸಿ ಹೊರ ಹೊರಟ ದುರುಳ ದುರ್ಯೋಧನನನ್ನು ಬೆನ್ನುಹತ್ತಿ ಎಲ್ಲರೂ ಹೋದರು. ಹೀಗೆ ಅನ್ಯ ಪಾಪಗಳನ್ನೂ ಮೊದಲಿನಿಂದ ಮಾಡುತ್ತಲೇ ಇದ್ದರು. ಅವರೆಲ್ಲರಿಗೆ ಸರಿಯಾದ ಬುದ್ಧಿಯನ್ನು ಹೇಳಲು ಅಸಮರ್ಥಳಾದ ನೀನು ಸುಮ್ಮನೇ ನನ್ನ ಮೇಲೆ ವ್ಯರ್ಥವಾಗಿ ಏಕೆ ಕ್ರೋಧ ಮಾಡುತ್ತಿರುವಿ ?' ಎಂದು ಹೇಳಿದರು. ಆಗ ಗಾಂಧಾರಿಯು ನಿರುತ್ತರಳಾದಳು. ಉಳಿದ ಎಲ್ಲ ಪಾಂಡವರು, ಪರಿವಾರದವರು ನಮಸ್ಕರಿಸಿದರು. ಶ್ರೀ ವೇದವ್ಯಾಸದೇವರೂ ಉಪದೇಶ ಮಾತನ್ನು ಅವಳಿಗೆ ಹೇಳಿದರು. ಆಗ ಗಾಂಧಾರಿಯು ಸ್ವಲ್ಪ ಸಮಾಧಾನ ಹೊಂದಿದಳು.

ತಸ್ಯಾಯಾಶ್ಚ ಸ್ನುಷಾಃ ಸರ್ವಾಸ್ತಾಭಿಃ ಸಹ ಪುರಸ್ಕೃತಾಂ ॥
ಕೃತ್ವಾತಂ ಧೃತರಾಷ್ಟ್ರಂಚ ವಿದುರಾದೀಂಶ್ಚ ಸರ್ವಶಃ ॥೨೨೭॥

ಪಾಂಡವಾಃ ಪೃಥನಸ್ಥಾನಂ ಸಭಾರ್ಯಾಃ ಪೃಥಯಾ ಸಹ ॥
ಕೃಷ್ಣಾಭ್ಯಾಂ ಚ ಯಯುಸ್ತತ್ರ ಗಾಂಧಾರ್ಯಾಸ್ತಪಸೋ ಬಲಂ ॥೨೨೮॥

ಜಾನನ್ಪಾಂಡವರಕ್ಷಾರ್ಥಂ ಚಿಕೀರ್ಷುಸ್ತತ್ತಪೋವ್ಯಯಂ ॥
ವೇದೇಶ್ವರೋದದೌ ಚಕ್ಷುರ್ದಿವ್ಯಂಸತ್ಯವತೀ ಸುತಃ ॥೨೨೯॥

ಸಭಾರ್ಯಾಃ – ಹೆಂಡಂದಿರಿಂದ ಕೂಡಿದ, ಪಾಂಡವಾಃ — ಪಾಂಡವರು, ಪೃಥಯಾ — ಕುಂತಿಯಿಂದ, ಕೃಷ್ಣಾಭ್ಯಾಂಚ – ವಾಸಿಷ್ಠ ಯಾದವ ಕೃಷ್ಣರಿಂದಲೂ ಕೂಡ, ಸಹ – ಕೂಡಿಕೊಂಡು, ತಸ್ಯಾಃ — ಆ ಗಾಂಧಾರಿಯ, ಯಾಃಸರ್ವಾಃ ಸ್ನುಷಾಃ — ಯಾವ ಎಲ್ಲಾ ಸೊಸೆಯರೋ, ತಾಭಿಃ – ಅವರಿಂದ, ಸಹ ವರ್ತವನಾಂ – ಕೂಡಿಕೊಂಡಿರುವ ಗಾಂಧಾರಿಯನ್ನು, ಪುರಸ್ಕೃತಾಂ—ಮುಂದೆ ಇರತಕ್ಕವಳನ್ನಾಗಿ, ಕೃತ್ವಾ- ಮಾಡಿ, ತಂ ಧೃತರಾಷ್ಟ್ರಂಚ – ಆ ಧೃತರಾಷ್ಟ್ರನನ್ನು, ಸರ್ವಶಃ ವಿದುರಾದೀಂಶ್ಚ—ಎಲ್ಲಾ ವಿದುರಾದಿಗಳನ್ನೂ ಕೂಡ, ಪುರಸ್ಕೃತ್ಯ – ಮುಂದೆ ಮಾಡಿಕೊಂಡು, ಪೃಥನಸ್ಥಾನಂ –

ರಣಭೂಮಿಯನ್ನು ಕುರಿತು, ಯಯುಃ– ಹೋದರು. ತತ್ರ— ಆ ರಣಭೂಮಿಯಲ್ಲಿ, ಗಾಂಧಾರ್ಯಾಃ—ಗಾಂಧಾರಿಯ, ತಪಸಃ ತಪಸ್ಸಿನ, ಬಲಂ – ಸಾಮರ್ಥ್ಯವನ್ನು, ಜಾನನ್ – ತಿಳಿದಿರುವ, ವೇದೇಶ್ವರಃ — ವೇದಗಳಿಗೆ ಅಧಿಪತಿಯಾದ, ಸತ್ಯವತೀಸುತಃ – ಸತ್ಯವತಿಯ ಮಗನಾದ ಶ್ರೀವೇದವ್ಯಾಸರು, ಪಾಂಡವರಕ್ಷಾರ್ಥಂ— ಪಾಂಡವರನ್ನು ರಕ್ಷಿಸುವದಕ್ಕಾಗಿ, ತತ್ತಪೋವ್ಯಯಂ—ಆ ಗಾಂಧಾರಿಯ ತಪಸ್ಸಿನ ನಾಶವನ್ನು. ಚಿಕೀರ್ಷುಸ್ಸನ್—ಮಾಡಲಿಚ್ಛೆಯುಳ್ಳವರಾಗಿ, ದಿವ್ಯಂಚಕ್ಷುಃ – ವಿಲಕ್ಷಣವಾದಕಣ್ಣನ್ನು, ದದೌ – ಗಾಂಧಾರಿಗೆ ಕೊಟ್ಟರು. ॥೨೨೭॥೨೨೮॥೨೨೯॥

ತೇನದೃಷ್ಟ್ವಾಪ್ರೇತದೇಹಾನ್ಸರ್ವಾಂಸ್ತತ್ರಸಮಾಕುಲಾ ॥
ಶಶಾಪಯಾದವೇಶಾನಂ ತ್ವಯಾಸ್ಮತ್ಕುಲನಾಶನಂ ॥
ಯತ್ಕೃತಂ ತತ್ತವಕುಲಂಗಚ್ಛತ್ವನ್ಯೋನ್ಯತಃಕ್ಷಯಂ ॥೨೩೦॥

ತೇನ – ಆ ದಿವ್ಯಚಕ್ಷುಸ್ಸಿನಿಂದ, ತತ್ರ– ಆ ರಣರಂಗದಲ್ಲಿ, ಸರ್ವಾನ್ – ಎಲ್ಲಾ, ಪ್ರೇತದೇಹಾನ್ — ಸತ್ತಿರುವ ದುರ್ಯೋಧನಾದಿಗಳ ಶರೀರಗಳನ್ನು, ದೃಷ್ಟ್ವಾ— ನೋಡಿ, ಸಮಾಕುಲಾಸತೀ – ದುಃಖದಿಂದ ಸಂಭ್ರಾಂತಳಾಗಿ, ಯಾದವೇಶಾನಂ – ಯಾದವರಿಗೆ ಸ್ವಾಮಿಯಾದ ಶ್ರೀಕೃಷ್ಣನನ್ನು, ಯತ್— ಯಾವಕಾರಣದಿಂದ, ತ್ವಯಾ – ನಿನ್ನಿಂದ, ಅಸ್ಮತ್ಕುಲನಾಶನಂ – ನಮ್ಮಸಂತಾನದ ನಾಶವು, ಕೃತಂ – ಮಾಡಲ್ಪಟ್ಟಿತೋ, ತತ್— ಆ ಕಾರಣದಿಂದ ತವ ಕುಲಂ— ನಿನ್ನ ವಂಶವು ಅನ್ಯೋನ್ಯತಃ – ಪರಸ್ಪರವಾಗಿ, ಕ್ಷಯಂ – ನಾಶವನ್ನು, ಗಚ್ಛತು – ಹೊಂದಲಿ. ಇತಿ— ಎಂದು ಶಶಾಪ – ಶಪಿಸಿದಳು. ॥೨೩೦॥

ಇತ್ಯುಕ್ತೋಭಗವಾನ್ಕೃಷ್ಣೋಸ್ವಚಿಕೀರ್ಷಿತಮೇವತತ್ ॥
ಅಸ್ತ್ವೇವಮಿತ್ಯಾಹವಿಭುರೀಶ್ವರೋಽಪ್ಯನ್ಯಥಾ ಕೃತೌ ॥೨೩೧॥

ತೇನ ತಸ್ಯಾಸ್ತ್ವಪೋನಷ್ಟಂ ಹೀನಾಸಾತೋಽಹಿಭರ್ತೃತಃ ॥೨೩೨॥
ನಾಶಯೇದ್ಧಿ ಸ್ವಯಂವಿಷ್ಣುಃ ಸ್ವಯೋಗ್ಯಾದಧಿಕಾನ್ಗುಣಾನ್ ॥೨೩೩॥

ಇತಿ— ಈರೀತಿಯಾಗಿ, ಉಕ್ತಃ – ಹೇಳಿಸಿಕೊಳ್ಳಲ್ಪಟ್ಟ, ಭಗವಾನ್ – ಷಡ್ಗುಣೈಶ್ವರ್ಯ ಸಂಪನ್ನನಾದ, ವಿಭುಃ– ವ್ಯಾಪ್ತನಾದ ಶ್ರೀಕೃಷ್ಣನು, ಅನ್ಯಥಾಕೃತೌ — ಗಾಂಧಾರಿಯು ಶಾಪಫಲಿಸದಂತೆ ಮಾಡುವದರಲ್ಲಿ, ಈಶ್ವರೋಪಿ – ಸಮರ್ಥನಾದರೂ ಕೂಡ, ಸ್ವಚಿಕೀರ್ಷಿತಮೇವ – ತನ್ನಿಂದಲೇ ಮಾಡಲು ಇಷ್ಟವಾದ, ತತ್ – ಆ ಕುಲನಾಶವು, ಏವಮಸ್ತು – ನೀನು ಹೇಳಿದಂತೆಯೇ ಆಗಲಿ, ಇತಿ – ಎಂದು ಅಹ – ಹೇಳಿದನು. ತೇನ— ಆ ಶಾಪಪ್ರದಾನದಿಂದ, ತಸ್ಯಾಃ – ಆ ಗಾಂಧಾರಿಯ, ತಪಃ – ತಪಸ್ಸು, ನಷ್ಟಂ – ನಾಶವಾಯಿತು. ಅತಃ – ಶಾಪಪ್ರಯುಕ್ತ ತಪಸ್ಸು ನಷ್ಟವಾದ್ದರಿಂದ, ಸಾ– ಆ ಗಾಂಧಾರಿಯು, ಭರ್ತೃತಃ ಗಂಡನಸಕಾರದಿಂದ, ಹೀನಾ— ಗಂಡನಸಮಾನಧರ್ಮಕ್ಕಾಗಿ ಕಣ್ಣನ್ನು ವಸ್ತ್ರದಿಂದ ಬಂಧಿಸಿ ಕೊಂಡದ್ದರಿಂದಲೂ, ಪರಪುರುಷ ನಿರೀಕ್ಷಣಾದಿಗಳು ಇಲ್ಲದಿರುವದರಿಂದ ಗಂಡನಿಂದ ಅಧಿಕವಾದ ಯಾವ ಪುಣ್ಯವು ಪ್ರಾಪ್ತವಾಯಿತೋ ಆಪುಣ್ಯದಿಂದ ರಹಿತಳಾದಳು. ವಿಷ್ಣುಃ – ಪರಮಾತ್ಮನು, ಸ್ವಯಂ – ತಾನೇ, ಸ್ವಯೋಗ್ಯಾದಧಿಕಾನ್— ತಮ್ಮ ತಮ್ಮಯೋಗ್ಯತೆಗಿಂತ ಹೆಚ್ಚಾದ, ಗುಣಾನ್ – ಗುಣಗಳನ್ನು, — ನಾಶಯೇತ್ — ನಾಶಮಾಡುವನು. ಹಿ – 'ಏಧಮಾನದ್ವಿಟ್' ಎಂಬ ಶ್ರುತಿಯಲ್ಲಿ ಈವಿಷಯವು ಪ್ರಸಿದ್ಧವು. ॥೨೩೦॥೨೩೨॥೨೩೩॥

ತತಆಶ್ಲಿಷ್ಯಭರ್ತೄಣಾಂ ದೇಹಾನ್ಪರುದತೀಃಸ್ತ್ರಿಯಃ ॥
ಸರ್ವಾದುರ್ಯೋಧನಾದೀನಾಂ ದರ್ಶಯಾಮಾಸಕೇಶವಃ ॥
ಕೃಷ್ಣಾಯೈ ಸಾ ಚ ತಂದೇವಮಸ್ತುವತ್ಪೂರ್ಣಷಡ್ಗುಣಂ ॥೨೩೪॥

ತತಃ—ಅನಂತರ, ಕೇಶವಃ - ಶ್ರೀಕೃಷ್ಣನು, ಭರ್ತೃಣಾಂ – ತಮ್ಮ ತಮ್ಮ ಗಂಡಂದಿರ, ದೇಹಾನ್ – ಶರೀರಗಳನ್ನು, ಆಶ್ಲಿಷ್ಯ – ಆಲಿಂಗಿಸಿ, ಪ್ರರುದತೀಃ – ಅಳತಕ್ಕ, ದುರ್ಯೋಧನಾದೀನಾಂ—ದುರ್ಯೋಧನಾದಿಗಳ, ಸರ್ವಾಃ— ಎಲ್ಲಾ, ಸ್ತ್ರಿಯಃ— ಪತ್ನಿಯರನ್ನು, ಕೃಷ್ಣಾಯೈ— ದ್ರೌಪದಿಗೆ, ದರ್ಶಯಾಮಾಸ – ಭೀಮಾ ಸಂಹೃತರಾದ ತಮ್ಮ ತಮ್ಮ ಗಂಡಂದಿರನ್ನು ಆಲಿಂಗಿಸಿ, ಮುಕ್ತಕೇಶರಾಗಿರುವ ಕೌರವಸ್ತ್ರೀಯರನ್ನು ತೋರಿಸುವೆನು ಎಂಬ ತನ್ನ ಪ್ರತಿಜ್ಞೆಯಂತೆ ತೋರಿಸಿದನು. ಸಾಪಿ – ಆ ದ್ರೌಪದಿಯಾದರೂ, ಪೂರ್ಣಷಡ್ಗುಣಂ ಪರಿಪೂರ್ಣಗಳಾದ ಐಶ್ವರ್ಯಾದಿಷಡ್ಗುಣಗಳುಳ್ಳ, ದೇವಂ-ಕ್ರೀಡಾದಿ ಗುಣ ವಿಶಿಷ್ಟನಾದ, ತಂ—ಆ ಶ್ರೀಕೃಷ್ಣನನ್ನು, ಅಸ್ತುವತ್ ಸ್ತೋತ್ರ ಮಾಡಿದಳು. ॥೨೩೪॥

ತತೋದೇಹಾನ್ಪ್ರಸಿದ್ಧಾನಾಂ ಪಾರ್ಥಾಃಸಮುದಹನ್ಸತಾಂ ।।
ಅನ್ಯೇಷಾಂಧೃತರಾಷ್ಟ್ರಾದೀನ್ಪುರಸ್ಕೃತ್ಯೈವ ಕಾಂಶ್ಚನ ॥೨೩೫॥

ಸೂತೈಃಪಂಚಭಿರೇವಸ್ವೈಃ ಸರಸ್ವತ್ಯಾಂ ಪ್ರಚಿಕ್ಷಿಪುಃ ॥
ಸ್ನೇಹಾನ್ನೃಪೋಯಮೌ ಚ ಸ್ವಾನಾಜೌ ತಸ್ಮಿನ್ನ್ಯಯೋಜಯನ್ ।।
ಶವಾಃಪ್ರಾಯೋ ಬಹುತ್ವೇನ ತತ್ರತತ್ರೈವಸಂಸ್ಥಿತಾಃ ॥೨೩೬॥

ತತಃ – ಅನಂತರ, ಪ್ರಸಿದ್ಧಾನಾಂ — ಪ್ರಸಿದ್ಧರಾದ, ಸತಾಂ – ಸಜ್ಜನರಾದ ದ್ರೋಣಾದಿಗಳ, ದೇಹಾನ್ — ಶರೀರಗಳನ್ನು, ಸಮುದಹನ್ – ಸುಟ್ಟರು. ಪಾರ್ಥಾಃ – ಪಾಂಡವರು, ಧೃತರಾಷ್ಟ್ರಾದೀನ್ – ಧೃತರಾಷ್ಟ್ರನೇ ಮೊದಲಾದವರನ್ನು, ಪುರಸ್ಕೃತ್ಯ – ಮುಂದೆಮಾಡಿಕೊಂಡು, ಪಂಚಭಿಃ – ಐದುಮಂದಿ, ಸ್ವೈಃ— ತಮ್ಮ, ಸೂತೈಃ – ಸೂತರಿಂದ, ಅನ್ಯೇಷಾಂ— ಇತರರಾದ ದುರ್ಯೋಧನಾದಿ ಅಸಜ್ಜನರ, ಕಾಂಶ್ಚನ— ಕೆಲವು ದೇಹಗಳನ್ನು, ಸರಸ್ವತ್ಯಾಂ— ಸರಸ್ವತೀ ನದಿಯಲ್ಲಿ, ಪ್ರಚಿಕ್ಷಿಪುಃ— ಹಾಕಿಸಿದರು. ಅವ— ಭಾಗವತಧರ್ಮದಲ್ಲಿ ಆಸಕ್ತನಾದ ಭೀಮನಿಗೂ ಇಂದ್ರಾವತಾರನಾದ ಅರ್ಜುನನಿಗೂ ಅಸಜ್ಜನರ ಸಂಸ್ಕಾರದಲ್ಲಿ ಅಭಿಪ್ರಾಯವಿರಲಿಲ್ಲವೆಂದು ಸೂಚಿಸುವದಕ್ಕಾಗಿ ಅಪವಾದವನ್ನು ಹೇಳುತ್ತಾರೆ. ~~ಸ್ನೇಹಾತ್ – ಬಂಧುಸ್ನೇಹದಿಂದ, ನೃಪಃ— ಧರ್ಮರಾಜನು, ಯಮೌ ಚ— ನಕುಲ ಸಹದೇವರೂ ಕೂಡ, ತಸ್ಮಿನ್ ಆಜೌ—~~ ಆ ಯುದ್ಧದಲ್ಲಿ, ಮೃತರಾದವರ ಹೆಣಗಳನ್ನು ಬಿಸಾಡುವದಕ್ಕೋಸ್ಕರ, ಸ್ವಾನ್ — ತಮ್ಮವರಾದ ಐದುಸೂತರನ್ನು, ನ್ಯಯೋಜಯನ್ – ಆಜ್ಞಾಪಿಸಿದರು. ಶವಾಃ – ಹೆಣಗಳು, ಬಹುತ್ವೇನ – ಬಹಳವಾಗಿದ್ದಕಾರಣ, ಪ್ರಾಯಃ ತತ್ರತತ್ರೈವ– ಬಹುಶಃ ಎಲ್ಲಿ ಎಲ್ಲಿ ಮೃತರಾಗಿದ್ದರೋ ಅಲ್ಲಿಅಲ್ಲಿಯೇ, ಸಂಸ್ಥಿತಾಃ – ಇದ್ದವು. ॥೨೩೫॥೨೩೬॥

ತತೋದದತ್ಸುಪಾನೀಯಂ ಗಂಗಾಯಾಂ ಸ್ವಜನಸ್ಯತು ।
ಪೃಥಾಕರ್ಣಾಯ ದತ್ತೇತಿ ಪಾರ್ಥಾನಾಹಾಗ್ರಜಂ ಚ ತಂ ॥೨೩೭॥

ತತಃ – ಅನಂತರ, ಸ್ವಜನಸ್ಯತು – (ಧೃತರಾಷ್ಟ್ರ ಯುಧಿಷ್ಠಿರಾದಿಗಳು)ತಮ್ಮ ಬಂಧು-ಬಾಂಧವರಿಗೆ, ಗಂಗಾಯಾಂ– ಭಾಗೀರಥಿಯಲ್ಲಿ, ಪಾನೀಯಂ – ತಿಲಾಂಜಲಿಯನ್ನು ದದತ್ಸುಸತ್ಸು– ಕೊಡುತ್ತಿರಲು, ಪೃಥಾ—ಕುಂತಿಯು, ಕರ್ಣಾಯ– ಕರ್ಣನಿಗೋಸ್ಕರ, ದತ್ತ—ಕೊಡಿರಿ, ಇತಿ – ಎಂದು, ಪಾರ್ಥಾನ್ – ಪಾಂಡವರನ್ನು ಕುರಿತು, ಆಹ – ಹೇಳಿದಳು. ತಂ— ಆ ಕರ್ಣನನ್ನು. ಅಗ್ರಜಂ ಚ— ಅಣ್ಣನನ್ನಾಗಿಯೂ ಕೂಡ, ಆಹ— ಹೇಳಿದಳು. ॥೨೩೭॥

ತತೋಹಾಹೇತಿವಿಲಪನ್ರಾಜಾಪರಮದುಃಖಿತಃ ॥
ಶಶಾಪ ಸರ್ವನಾರೀಣಾಂ ಗುಹ್ಯಂ ಹೃದಿ ನ ತಿಷ್ಠತು ॥೨೩೮॥

ತತಃ – ಕರ್ಣನು ತಮ್ಮಅಣ್ಣನೆಂದು ಕೇಳಿದ ನಂತರ, ರಾಜಾ – ಧರ್ಮರಾಜನು ಪರಮದುಃಖಿತ ಸ್ಸನ್–ಅತಿದುಃಖಿವುಳ್ಳವನಾಗಿ, ಹಾಹೇತಿವಿಲಪನ್ – ಹಾಹಾಕಾರವನ್ನು ಮಾಡತಕ್ಕವನಾಗಿ, ಸರ್ವನಾರೀಣಾಂ—ಎಲ್ಲಾಸ್ತ್ರೀಯರ, ಹೃದಿ—

ಮನಸ್ಸಿನಲ್ಲಿ, ಗುಹ್ಯಂ – ಗೋಪ್ಯವಾದದ್ದು, ನ ತಿಷ್ಠತು – ನಿಲ್ಲದೇ ಹೋಗಲಿ, ಇತಿ—ಎಂದು, ಶಶಾಪ – ಶಾಪಕೊಟ್ಟನು. ॥೨೩೮॥

ಹಾಮಾತಸ್ತವ ಧೃತ್ಯೈವವಯಂಸರ್ವೇಭೃಶಂ ಹತಾಃ ॥
ಜ್ಯೇಷ್ಠಂಪಿತೃಸಮಂ ಹತ್ವಾಪ್ರತಿಪತ್ಸ್ಯಾಮಕಾಂಗತಿಂ ॥೨೩೯॥

ಹೇ ಮಾತಃ—ಎಲೋ ತಾಯಿಯೇ, ತವ – ನಿನ್ನ, ಧೃತ್ಯೈವ – ಧೈರ್ಯದಿಂದಲೇ, ವಯಂ ಸರ್ವೇ – ನಾವೆಲ್ಲರೂ, ಭೃಶಂ – ಚೆನ್ನಾಗಿ, ಹತಾಃ – ಪಾಪವುಳ್ಳವರಾಗಿ ಮಾಡಲ್ಪಟ್ಟಿವು. ಹಾ ಕಷ್ಟವಾಯಿತು. ಪಿತೃಸಮಂ – ತಂದೆಗೆ ಸದೃಶನಾದ, ಜ್ಯೇಷ್ಠಂ ಅಣ್ಣನಾದ ಕರ್ಣನನ್ನು, ಹತ್ವಾ - ಕೊಂದು, ಕಾಂ ಗತಿಂ– ಯಾವ ಕೆಟ್ಟನರಕಾದಿಗಳನ್ನು, ಪ್ರತಿಪತ್ಸ್ಯಾಮ– ಹೊಂದುವೆವು. ॥೨೩೯॥

ಏವಂವದಂತಂ ಕೌಂತೇಯಂ ವಾಸುದೇವಃ ಸನಾರದಃ ॥
ಶಮಯಾಮಾಸ ಸದ್ವಾಕ್ಯೈರ್ಗುಣಾನ್ಕರ್ಣಸ್ಯಚಾಬ್ರವೀತ್ ॥೨೪೦॥

ಏವಂ – ಈರೀತಿಯಾಗಿ ವದಂತಂ - ಹೇಳತಕ್ಕ ಕೌಂತೇಯಂ – ಕುಂತಿಯ ಮಗನಾದ ಧರ್ಮಜನಿಗೆ, ಸನಾರದಃ– ನಾರದರಿಂದ ಕೂಡಿದ. ವಾಸುದೇವಃ–ಶ್ರೀಕೃಷ್ಣನು, ಸದ್ವಾಕ್ಯೈಃ– ಸಮಾಧಾನಕರಗಳಾದ ಮಾತುಗಳಿಂದ, ಶಮಯಾಮಾಸ– ಶಾಂತನನ್ನಾಗಿಮಾಡಿದನು. ಕರ್ಣಸ್ಯ – ಕರ್ಣನ, ಗುಣಾನ್— ನೀನು ಜ್ಯೇಷ್ಠನಾಗಿ ರಾಜ್ಯವನ್ನು ಪಾಲಿಸು; ನಿನ್ನಶಾಸನದಲ್ಲಿ ಪಾಂಡವರನ್ನು ಇರುವಂತೆ ಮಾಡುವೆನು. ಈ ರೀತಿಯಾಗಿ ಹೇಳಿದರೂ ಕೂಡ ರಾಜ್ಯಭಾರವನ್ನು ಮಾಡುವದಿಲ್ಲ. ದುರ್ಯೋಧನನಿಗಾಗಿ ಪ್ರಾಣಗಳನ್ನೇ ಬಿಡುವೆನು ಎಂದು ಇವೇಮೊದಲಾದ ಗುಣಗಳನ್ನೂ ಕೂಡ, ಅಬ್ರವೀತ್— ಹೇಳಿದನು. ॥೨೪೦॥

ತತಸ್ತೇಪ್ರೇತಕಾರ್ಯಾಣಿ ಚಕ್ರುಃ ಸರ್ವೇಪಿಸರ್ವಶಃ ॥
ಸರ್ವೇಷಾಮಧಿರಾಜ್ಯೇಚಸ್ಥಿತೋಽಭೂತ್ಪಾಂಡವಾಗ್ರಜಃ ॥೨೪೧॥

ತತಃ - ಅನಂತರ, ತೇ ಸರ್ವೇ— ಆ ಎಲ್ಲಾ ಪಾಂಡವರು, ಸರ್ವಶಃ ಪ್ರೇತಕಾರ್ಯಾಣಿ – ತಿಲೋದಕ, ಪಿಂಡದಾನ ಮೊದಲಾದ ಸತ್ತವರಿಗೆ ಮಾಡತಕ್ಕ ಎಲ್ಲಾ ಕರ್ಮಗಳನ್ನು, ಚಕ್ರುಃ – ಮಾಡಿದರು. ಚ ಮತ್ತೆ, ಪಾಂಡವಾಗ್ರಜಃ – ಭೀಮಾದಿಗಳಿಗೆ ಅಣ್ಣನಾದ ಧರ್ಮರಾಜನು, ಸರ್ವೇಷಾಂ – ಎಲ್ಲಾರಾಜರ, ಅಧಿರಾಜ್ಯೇ – ಸಾಮ್ರಾಜ್ಯದಲ್ಲಿ ಸ್ಥಿತಃ— ಇರತಕ್ಕವನು, ಅಭೂತ್ – ಆದನು. ॥೨೪೧॥

ಭಾ. ಅ. ೨೨೭—೨೪೧ ಪಾಂಡವರು ತಮ್ಮ ಪತ್ನಿಯರು, ಗಾಂಧಾರಿ, ಅವಳ ಎಲ್ಲ ಸೊಸೆಯಂದಿರು, ಧೃತರಾಷ್ಟ್ರ, ವಿದುರ, ಕುಂತಿ, ಶ್ರೀಕೃಷ್ಣ ಶ್ರೀವೇದವ್ಯಾಸದೇವರು ಇವರೆಲ್ಲರಿಂದ ಕೂಡಿಕೊಂಡು ಯುದ್ಧಭೂಮಿಗೆ ಹೋದರು. ಆಗ ಗಾಂಧಾರಿಯು ವಿಶೇಷ ಪಾತಿವ್ರತ್ಯ ತಪೋಬಲವುಳ್ಳವಳೆಂಬುದನ್ನು ತಿಳಿದ ಶ್ರೀವೇದವ್ಯಾಸದೇವರು ಆದರಿಂದ ಅವಳು ತನ್ನ ಗಂಡನ ಪುಣ್ಯಕ್ಕಿಂತ ಹೆಚ್ಚು ಪುಣ್ಯವುಳ್ಳವದ್ದರಿಂದಲೂ, ಆ ಪುಣ್ಯದಿಂದ ಪಾಂಡವರಿಗೆ ಉಪದ್ರವವನ್ನು ಮಾಡಲೂ ಬಹುದು ಎಂದೂ, ಅವಳನ್ನು ಗಂಡನಿಗಿಂತ ಕಡಿಮೆಯವಳನ್ನಾಗಿ ಮಾಡಲು ಮತ್ತು ಪಾಂಡವರಿಗೆ ಉಪದ್ರವವಾಗಲಾರದಂತೆ ಮಾಡಲು, ಆ ಪುಣ್ಯಹ್ರಾಸವನ್ನೇ ಮಾಡಲಿಚ್ಛಿಸಿ ಅವಳಿಗೆ ದಿವ್ಯದೃಷ್ಟಿಯನ್ನು (ಕಣ್ಣು ಪಟ್ಟಿಇದ್ದರೂ ಕಾಣುವಂತೆ) ಕೊಟ್ಟರು. ಆವರಿಂದ ಅವಳು ಅಲ್ಲಿ ಬಿದ್ದಿರುವ ತನ್ನ ಪುತ್ರರ ಪ್ರೇತದೇಹಗಳನ್ನು ನೋಡಿ ದುಃಖಿತಳಾಗಿ ಶ್ರೀಕೃಷ್ಣನಿಗೇ ನಮ್ಮ ಕುಲನಾಶ ಮಾಡಿದ ನಿನ್ನ ಕುಲವು ಪರಸ್ಪರ ಅಂತಃ ಕಲಹದಿಂದ ನಾಶವನ್ನು ಹೊಂದಲಿ ಎಂದು ಶಪಿಸಿದಳು. ಆ ಶಾಪವನ್ನು ಸುಳ್ಳು ಮಾಡಲು ಸಮರ್ಥನಾದರೂ ಶ್ರೀಕೃಷ್ಣನು ತನ್ನ ಯಾದವಕುಲ ನಾಶವನ್ನು ಮುಂದೆ ಮಾಡಲು ತಾನು ಮೊದಲೇ ಇಚ್ಛಿಸಿದ್ದರಿಂದ ತಾನು ವ್ಯಾಸರೂ ಒಂದೇ ಆದ್ದರಿಂದ ಶ್ರೀವ್ಯಾಸರು ಇಚ್ಛಿಸಿದ ಕಾರ್ಯವಾಗಬೇಕೆಂದೇ ಅವಳ ಶಾಪದಂತೆ ನಡೆಯಲಿ ಎಂದು ಹೇಳಿದನು.ಆದರಿಂದ ಅವಳ ಅಧಿಕ ತಪಃ ಪುಣ್ಯವು ನಷ್ಟವಾಯಿತು.ಹೀಗೆ ಯಾರಿಗೆ ಯಾರಿಗೆ ಅವರ ಯೋಗ್ಯತೆ ವಿೀರಿ

ಪುಣ್ಯವು ಪ್ರಾಪ್ತವಾಗುವದೋ ಆ ಅಧಿಕವಾದದ್ದನ್ನು ಭಗವಂತನಾದ ಶ್ರೀನಾರಾಯಣನು ಸ್ವಯಂ ನಾಶಮಾಡಿ ಅವರ ಯೋಗ್ಯತಾನುಸಾರವಾದದ್ದನ್ನು ಉಳಿಸುವನು. ಆಗ ಅಲ್ಲಿ ಗಾಂಧಾರಿಯು ಸೊಸೆಯಂದಿರು ತಮ್ಮ ತಮ್ಮ ಪತಿಶವಗಳನ್ನು ಆಲಿಂಗಿಸಿಕೊಂಡು ಅಳುತ್ತಿದ್ದರು. ಆ ದೃಶ್ಯವನ್ನು ಶ್ರೀಕೃಷ್ಣನು ದ್ರೌಪದೀದೇವಿಗೆ ತೋರಿಸಿ ತನ್ನ ಪ್ರತಿಜ್ಞೆಯನ್ನು ಪೂರ್ಣ ಮಾಡಿಕೊಂಡನು. ಶ್ರೀದ್ರೌಪದೀದೇವಿಯರು ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸಿದರು. ನಂತರ ದ್ರೋಣಾದಿ ಸಜ್ಜನರ ದೇಹಗಳನ್ನು ಪಾಂಡವರು ಸುಟ್ಟರು. ದುರ್ಯೋಧನ ಮೊದಲಾದ ಕೆಲವರ ದೇಹಗಳನ್ನು ಧರ್ಮ, ನಕುಲ-ಸಹದೇವರ ಮಾತಿನ ಪ್ರಕಾರ ಸರಸ್ವತೀ ನದಿಯಲ್ಲಿ ಬೀಸಾಡಿದರು. ಶ್ರೀಭೀಮಾರ್ಜುನರು ಮಾತ್ರ ಆ ದುಷ್ಟರ ದೇಹದ ಸಂಸ್ಕಾರದ ಬಗ್ಗೆ ಹೇಳಲಿಲ್ಲ. ಕೆಲವರ ದೇಹಗಳನ್ನು ನದಿಯಲ್ಲಿ ಒಗೆದರೂ ಕೂಡ, ಉಳಿದ ಶವಗಳು ಬಹಳಇದ್ದದ್ದರಿಂದ ಅವು ಇಷ್ಟಲ್ಲಿಯೇ ಇದ್ದವು. ನಂತರ ಪಾಂಡವರು ಗಂಗೆಗೆ ಹೋಗಿ ಮೃತರ ತರ್ಪಣಕಾರ್ಯವನ್ನು ಮಾಡುತ್ತಿದ್ದಾಗ, ಕುಂತೀದೇವಿಯು ಕರ್ಣನಿಗೂ ತರ್ಪಣ ಕೊಡಿರಿ, ಎಂದಳು. ಏಕೆ ಎಂದು ಧರ್ಮರಾಜನು ಕೇಳಿದಾಗ 'ಅವನು ನಿಮ್ಮ ಅಣ್ಣ' ಎಂದು ಹೇಳಿದಳು. ಆಗ ಅದನ್ನು ತಿಳಿದ ಧರ್ಮರಾಜನು ಬಹು ದುಃಖಪಡುತ್ತಾ ಪಿತೃಸಮನಾದ ಅಣ್ಣನನ್ನು ಕೊಂದ ನಾವು ಎಂಥ ಗತಿಯನ್ನು ಹೊಂದಬಹುದು. ಇದೆಲ್ಲ ನೀನು ಆ ವಿಷಯವನ್ನು ಗುಪ್ತವಾಗಿಟ್ಟದ್ದರಿಂದ ಆದದ್ದು. ಆದ್ದರಿಂದ ಇನ್ನು ಮೇಲೆ ಯಾವ ಹೆಣ್ಣುಮಕ್ಕಳ ಮನಸ್ಸಿನಲ್ಲಿಯೂ ಯಾವ ವಿಷಯವೂ ಗುಪ್ತವಾಗಿ ಉಳಿಯದಿರಲಿ, (ಒಬ್ಬರಿಗೊಬ್ಬರು ಹೇಳುವಂತಾಗಲಿ) ಎಂದು ಶಪಿಸಿದನು. ಆ ಧರ್ಮರಾಜನನ್ನು ಶ್ರೀಕೃಷ್ಣನೂ ಶ್ರೀನಾರದರೂ ಸಮಾಧಾನಮಾಡಿದರು. ಕರ್ಣನ ಸ್ವಾಮಿನಿಷ್ಠೆ ಮೊದಲಾದ ಗುಣಗಳನ್ನು ಶ್ರೀಕೃಷ್ಣನು ಹೇಳಿದನು. ಆಮೇಲೆ ಮೃತರ ಉದ್ದಿಶ್ಯ ಪಿಂಡಪ್ರದಾನಾದಿ ಉತ್ತರಕ್ರಿಯಾಗಳನ್ನು ಮಾಡಿದರು. ಧರ್ಮರಾಜನು ಸರ್ವರಾಜರ ಅಧಿರಾಜಸ್ಥಾನವನ್ನು ಪಡೆದನು.

ಇಲ್ಲಿಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ವಿರಚಿತವಾದ ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯದಲ್ಲಿ ದುರ್ಯೋಧನಾದಿಗಳ ವಧ ಪಾಂಡವರ ಪುರಪ್ರವೇಶಗಳನ್ನು ನಿರೂಪಿಸುವ ಇಪ್ಪತ್ತೆಂಟನೆಯ ಅಧ್ಯಾಯದ ಮೂಲ, ಪ್ರತಿಪದಾನುವಾದ, ಭಾವಾನುವಾದಗಳು ಮುಗಿದವು.

— ಶ್ರೀಕೃಷ್ಣಾರ್ಪಣಮಸ್ತು, ಶ್ರೀಮಧ್ವೇಶಾರ್ಪಣಮಸ್ತು —

ಬ್ರಾಹ್ಮಣ್ಯ ರಕ್ಷಣಕ್ಕಾಗಿ ಅವಶ್ಯ ಆಚರಣೀಯವಾದ ಮೂರು ಅಂಶಗಳ ಕಾರ್ಯಕ್ರಮ.

೧) ತ್ರಿಕಾಲ ಸಂಧ್ಯಾವಂದನ-(ಸಂಧ್ಯಾಹೀನೋऽ ಶುಚಿರ್ನಿತ್ಯಂ ಅನರ್ಹಃ ಸರ್ವಕರ್ಮಸು— ಸಂಧ್ಯಾವಂದನ ಮಾಡದವನು ನಿತ್ಯ ಅಶುದ್ಧನು; ಎಲ್ಲ ಕರ್ಮಗಳಿಗೂ ಅಯೋಗ್ಯನು; -ಇದು ಮಾನವ ಕುಲದ ಮೂಲ ಪುರುಷ ಮನುಷನ ವಚನ).

೨) ಏಕಾದಶೀ ಉಪೋಷಣ-ಏಕಾದಶ್ಯುಪವಾಸಸ್ಯ ಕಲಾಂನಾರ್ಹಂತಿ ಷೋಡಶೀಂ-ಏಕಾದಶ್ಯು ಪವಾಸದ ಪುಣ್ಯದ ಹದಿನಾರನೆಯ ಅಂಶದಷ್ಟು ಪುಣ್ಯವೂ ಕೂಡ ಇತರ ವ್ರತಗಳಿಗಿಲ್ಲ. ಏಕಾದಶಿಯನ್ನು ಆಚರಿಸದೇ ಉಳಿದ ಎಲ್ಲ ವ್ರತಗಳೂ ವ್ಯರ್ಥ. ಶ್ರೀಕೃಷ್ಣಾಮೃತಮಹಾರ್ಣವದಲ್ಲಿ ಶ್ರೀಮದಾಚಾರ್ಯರು ಉದಾಹರಿಸಿದ ಪ್ರಮಾಣ ವಾಕ್ಯ);

೩) ಶುದ್ಧ ಆಹಾರ ಸ್ವೀಕಾರ – ದೇವರಿಗೆ ನಿವೇದಿತ ಆಹಾರವೇ ಶುದ್ಧ ಆಹಾರ. (ಭುಂಜತೇ ತೇತ್ವಘಂ ಪಾಪಾಃಯೇ ಽಚಂತ್ಯಾತ್ಮಕಾರಣಾತ್. ದೇವರಿಗೆ ನಿವೇದಿಸದೇ ಆಹಾರವನ್ನು ತಿನ್ನುವವನು ಪಾಪವನ್ನೇ ತಿಂವಂತೆ. ಶ್ರೀಭಗವದ್ಗೀತೆಯಲ್ಲಿ ಶ್ರೀಕೃಷ್ಣವಾಕ್ಯ).

॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀ ಮದ್ಭನುಮದ್ಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋನಮಃ

೨೯ನೇ ಅಧ್ಯಾಯವು

ಯದೈವ ಕೃಷ್ಣಾಸಕಲಾಧಿರಾಜ್ಯೇ ಯುಧಿಷ್ಠಿರಂ ಯೌವರಾಜ್ಯೇ ಚ ಭೀಮಂ ॥
ವಿಪ್ರೈರ್ಯುತಾವಭಿಷಿಚ್ಯಾSಶಿಷಶ್ಚ ಯುಕ್ತಾ ದತ್ವಾಹರ್ಷಯಾವಾಸತುಸ್ತೌ ॥೧॥

ಯದಾ – ಯಾವಾಗ, ವಿಪ್ರೈಃ ಯುತೌ –ಬ್ರಾಹ್ಮಣರಿಂದ ಕೂಡಿದ, ತೌ ಕೃಷ್ಣೌ – ಆ ಶ್ರೀಕೃಷ್ಣಶ್ರೀವೇದವ್ಯಾಸರು, ಸಕಲಾಧಿರಾಜ್ಯೇ—ಎಲ್ಲರಾಜಾಧಿರಾಜಸ್ಥಾನದಲ್ಲಿ, ಯುಧಿಷ್ಠಿರಂ – ಧರ್ಮರಾಜನನ್ನು, ಚ-ಮತ್ತು, ಭೀಮಂ – ಶ್ರೀಭೀಮರನ್ನು, ಯೌವರಾಜ್ಯೇ – ಯುವರಾಜಪಟ್ಟದಲ್ಲಿ, ಅಭಿಷಿಚ್ಯ—ಅಭಿಷೇಕಿಸಿ, ಯುಕ್ತಾಃ ಆಶಿಷಃ— ಯೋಗ್ಯವಾದಆಶೀರ್ವಾದಗಳನ್ನು, ದತ್ವಾ – ಕೊಡಿ, ಹರ್ಷಯಾವಾಸತುಃ – ಸಂತೋಷಪಡಿಸಿದರೋ ॥೧॥

ತದೈವ ಚಾರ್ವಾಕ ಇತಿಪ್ರಸಿದ್ಧಂ ರಕ್ಷಸ್ತ್ರಿದಂಡೀ ಯತಿರೇವ ಭೂತ್ವಾ ॥
ಯುಧಿಷ್ಠಿರಂ ಗರ್ಹಯಾಮಾಸ ವಿಪ್ರಾಸ್ತ್ವಾಂ ಗರ್ಹಯಂತೀತಿ ಸುಪಾಪಶೀಲಂ ॥೨॥

ತದಾ ಏವ – ಆ ಸಮಯದಲ್ಲಿಯೇ, ಚಾರ್ವಾಕ ಇತಿ ಪ್ರಸಿದ್ಧಂ – ಚಾರ್ವಾಕ ಎಂಬ ಹೆಸರಿನಿಂದ ಪ್ರಸಿದ್ಧನಾದ ರಕ್ಷಃ—ರಾಕ್ಷಸನು, ತ್ರಿದಂಡೀಯತಿಃ ಏವ ಭೂತ್ವಾ— ತ್ರಿದಂಡಿಸನ್ಯಾಸಿಯ ವೇಷತಾಳಿ,ಯುಧಿಷ್ಠಿರಂ—ಧರ್ಮರಾಜನನ್ನು, ಸುಪಾಪಶೀಲಂ—ಅತಿ ಪಾಪಿಯಾದ, ತ್ವಾಂ – ನಿನ್ನನ್ನು, ವಿಪ್ರಾಃ – ಬ್ರಾಹ್ಮಣರು, ಗರ್ಹಯಂತಿ—ನಿಂದಿಸುತ್ತಿದ್ದಾರೆ,ಇತಿ–ಎಂದು, ಗರ್ಹಯಾಮಾಸ—ನಿಂದಿಸಿದನು. ॥೨॥

ಶ್ರುತ್ವೈವ ತದ್ದುಃಖಿತಮಾಶು ಧರ್ಮಜಂ ದೃಷ್ಟ್ವಾ ವಿಪ್ರಾಃ ಶೇಪುರಮುಂಭೃಶಾರ್ತಾಃ ॥
ಅಗರ್ಹಿತಂ ನಿತ್ಯಮುಸ್ಮಾಭಿರೇನಂ ಯತೋSವೋಚೋ ಗರ್ಹಿತಮದ್ಯ ಪಾಪ ॥
ಭಸ್ಮೀಭವಾSಶ್ವೇವತತಸ್ತ್ವತೀರಿತೇ ಕ್ಷಣಾದಭೂತ್ ಪಾಪತಮಃ ಸ ಭಸ್ಮಸಾತ್ ॥೩॥

ತತ್ – ಆ ಮಾತನ್ನು, ಶ್ರುತ್ವೈವ – ಕೇಳಿಯೇ, ದುಃಖಿತಂ ಧರ್ಮಜಂ— ದುಃಖಪಡುವ ಧರ್ಮರಾಜನನ್ನು, ದೃಷ್ಟ್ವಾವ— ನೋಡಿ, ವಿಪ್ರಾಃ - ಬ್ರಾಹ್ಮಣರು, ಆಶು – ಕೂಡಲೇ, ಭೃಶಾರ್ತಾಃ ಸಂತಃ — ಅತಿದುಃಖಪಡುವವರಾಗಿ,

ಪಾಪ– ಎಲೇ ಪಾಪಿ (ಚಾರ್ವಾಕನೇ) ಸನ್ಯಾಸಿಯೇ, ನಿತ್ಯಂ– (ಎಂದೂ) ಯಶಾವಾಗಲೂ, ಅಸ್ಮಾಭಿಃ ಅಗರ್ಹಿತಂ – ನಮ್ಮಿಂದ ನಿಂದಿಸಲ್ಪಡದ, ಏನಂ – ಈ ಧರ್ಮರಾಜನನ್ನು, ಯತಃ– ಯಶಾಪಕಾರಣದಿಂದ, ಗರ್ಹಿತಂ – ನಮ್ಮಿಂದ ನಿಂದಿತ ನನ್ನಾಗಿ, ಅದ್ಯ – ಈಗ, ಅವೋಚಃ– ಹೇಳಿದೆಯೋ, ತತಃ – ಆ ಕಾರಣದಿಂದ, (ತ್ವಂ—ನೀನು), ಆಶು – ಕೂಡಲೇ, ಭಸ್ಮೀಭವ—ಸುಟ್ಟು ಬೂದಿಯಾಗು, ಇತಿ–ಎಂದು ಅಮುಂ – ಆ ಚಾರ್ವಾಕನನ್ನು, ಶೇಪುಃ–ಶಪಿಸಿದರು. ಇತಿ ಈರಿತೇ ಸತಿ– ಹೀಗೆ ಶಾಪವನ್ನು ಕೊಡುತ್ತಿರಲು, ತತಃ ಕ್ಷಣಾತ್ – ಆ ಕ್ಷಣದಲ್ಲಿಯೇ, ಸಃಪಾಪತಮಃ – ಅತ್ಯಂತ ಪಾಪಿಯಾದ ತ್ರಿದಂಡಿಯು, ಭಸ್ಮಸಾದ್ ಅಭೂತ್ – ಸುಟ್ಟುಹೋದನು. ॥೩॥

ಭಸ್ಮೀಕೃತೇಽಸ್ಮಿನ್ ಯತಿವೇಷಧಾರಿಣಿ ಯುಧಿಷ್ಠಿರಂ ದುಃಖಿತಂ ವೃಷ್ಣಿಸಿಂಹಃ ॥
ಪ್ರೋವಾಚನಾಯಂ ಯತಿರುಗ್ರಕರ್ಮಾ ಸುಯೋಧನಸ್ಯೈವ ಸಖಾ ಸುಪಾಪಃ ॥೪॥

ಯತಿವೇಷಧಾರಿಣಿ ಅಸ್ಮಿನ್ – ಯತಿವೇಷಧಾರಿಯಾದ ಈ ಚಾರ್ವಾಕನೆಂಬ ರಾಕ್ಷಸನು, ಭಸ್ಮೀಕೃತೇ ಸತಿ— ವಿಪ್ರ ಶಾಪದಿಂದ ಸುಟ್ಟುಸಾಯುತ್ತಿರಲು, ದುಃಖಿತಂ – ದುಃಖಿಪಡುತ್ತಿರುವ, ಯುಧಿಷ್ಠಿರಂ – ಧರ್ಮರಾಜನನ್ನು ಕುರಿತು, ವೃಷ್ಣಿಸಿಂಹಃ–ಯಾದವ ಶ್ರೇಷ್ಠನಾದ ಶ್ರೀಕೃಷ್ಣನು, ಅಯಂ–ಸತ್ತ ಈ ವ್ಯಕ್ತಿಯು, ನ ಯತಿಃ—ಯತಿಯಲ್ಲ, ಉಗ್ರಕರ್ಮಾ– ಕ್ರೂರಕಾರ್ಯಮಾಡುವ, ಸುಪಾಪಃ— ಮಹಾಪಾಪಿಯಾದ, ಸುಯೋಧನಸ್ಯಸಖಾ ಏವ– ದುರ್ಯೋಧನನ ಗೆಳೆಯನೇ ಆಗಿರುವನು, (ಇತಿ-ಎಂದು) ಪ್ರೋವಾಚ— ಹೇಳಿದನು. ॥೪॥

ರಕ್ಷೋಽಧಮೋಽಯಂ ನಿಹತೋಽದ್ಯ ವಿಪ್ರೈಸ್ತನ್ನಾಶುಚಃಕೃತಕಾರ್ಯೋಽಸಿ ರಾಜನ್ ॥
ಇತೀರಿತಃ ಶಾಂತಮನಾಃ ಸ ವಿಪ್ರಾನ್ ಸಂತರ್ಪಯಾಮಾಸ ಧನೈಶ್ಚ ಭಕ್ತ್ಯಾ ॥೫॥

ಅಯಂ ರಕ್ಷೋಽಧಮಃ —ಇಂಥ ನೀಚನಾದ ಈ ರಾಕ್ಷಸನು, ಅದ್ಯ— ಈಗ, ವಿಪ್ರೈಃ—ಬ್ರಾಹ್ಮಣರಿಂದ, ನಿಹತಃ– ಸಂಹೃತನಾಗಿರುವನು. ತತ್ – ಇವನು ರಾಕ್ಷಸನಾದ್ದರಿಂದ, ರಾಜನ್—ಧರ್ಮರಾಜನೇ, ವೃಶಾ ಶುಚಃ – ದುಃಖಿಸಬೇಡ, ಕೃತಕಾರ್ಯಃ ಅಸಿ— ನಿನ್ನ ಕರ್ತವ್ಯಕರ್ಮವನ್ನು ಬ್ರಾಹ್ಮಣರೇ ಮಾಡಿದ್ದರಿಂದ ಕೃತಕಾರ್ಯನಿರುವಿ. ಇತಿ ಈರಿತಃ— ಹೀಗೆ ಶ್ರೀಕೃಷ್ಣನಿಂದ ಬೋಧಿತನಾದ, ಸಃ— ಆ ಧರ್ಮರಾಜನು, ಶಾಂತಮನಾಃ ಸನ್ – ಸಮಾಧಾನಯುಕ್ತ ಮನಸ್ಸುಳ್ಳವನಾಗಿ, ವಿಪ್ರಾನ್ — ಬ್ರಾಹ್ಮಣರನ್ನು,ಭಕ್ತ್ಯಾ – ಭಕ್ತಿವಿಶ್ವಾಸಗಳಿಂದ, ಧನೈಶ್ಚ – ಧನದಾನಾದಿಗಳಿಂದಲೂ, ಸಂತರ್ಪಯಾಮಾಸ– ಸಂತೋಷಪಡಿಸಿದನು. ॥೫॥

ಅಸಾಂತ್ವಯಚ್ಚ ಬಾಂಧವಾನ್ ಸ ಪೌರಸಂಶ್ರಿತಾದಿಕಾನ್ ॥
ದದೌ ಯಥೇಷ್ಟತೋ ಧನಂ ರರಕ್ಷ ಚಾನು ಪುತ್ರವತ್ ॥೬॥

ಸಃ – ಆ ಧರ್ಮರಾಜನು, ಪೌರಸಂಶ್ರಿತಾದಿಕಾನ್ – ನಾಗರಿಕರು, ಆಶ್ರಯಿಸಿದವರು ಮೊದಲಾದವರನ್ನು, ಬಾಂಧವಾನ್ ಚ – ಬಂಧುಗಳನ್ನೂ ಕೂಡ, ಅಸಾಂತ್ವಯತ್— ಸಮಾಧಾನಪಡಿಸಿದನು. ಯಥೇಷ್ಟತಃ— ಅವರ ಇಚ್ಛೆಯನು ಸಾರವಾಗಿ, ಧನಂ ದದೌ – ದುಡ್ಡನ್ನು ಕೊಟ್ಟನು. ಚ–ಹಾಗು, ಪುತ್ರವತ್— ತನ್ನ ಮಕ್ಕಳಂತೆ, ಅನುರರಕ್ಷ–ಪ್ರಜೆಗಳನ್ನು ರಕ್ಷಿಸಿದನು. ॥೬॥

ಭಾ. ಅ. ೧–೬ ಶ್ರೀಕೃಷ್ಣ – ಶ್ರೀವೇದವ್ಯಾಸರು ಧರ್ಮರಾಜನನ್ನು ರಾಜನನ್ನಾಗಿ, ಭೀಮಸೇನದೇವರನ್ನು ಯುವರಾಜನನ್ನಾಗಿ ಅಭಿಷೇಕಮಾಡಿ ಆಶೀರ್ವದಿಸಿದರು. ಅದೇ ಸಮಯದಲ್ಲಿ ಚಾರ್ವಾಕನೆಂಬ ರಾಕ್ಷಸನು ತ್ರಿದಂಡಿಯತಿ ವೇಷಧರಿಸಿ ಬಂದು ಬ್ರಾಹ್ಮಣರು ಪಾಪಿಯಾದ ನಿನ್ನನ್ನು ನಿಂದಿಸುತ್ತಿದ್ದಾರೆ. ಎಂದು ಯುಧಿಷ್ಠಿರನಿಗೆ ಹೇಳಿದನು. ಅದನ್ನು ಕೇಳಿ ದುಃಖಿತನಾದ ಧರ್ಮರಾಜನನ್ನು ನೋಡಿ ಬ್ರಾಹ್ಮಣರು ತಾವೆಂದೂ ನಿಂದಿಸದಿದ್ದರೂ ನೀನು ಸುಳ್ಳುಹೇಳಿ ಅವನಿಗೆ

ದುಃಖಿಪ್ರದನಾದ ಪಾಪಿಯೇ, ನೀನು ಸುಟ್ಟುಬೂದಿಯಾಗು ಎಂದು ಶಪಿಸಿದರು. ಆ ಪ್ರಕಾರ ಅವನು ಸುಟ್ಟುಬೂದಿಯಾದನು. ಯತಿಯು ಸತ್ತನೆಂದು ದುಃಖಿಸುತ್ತಿರುವ ಧರ್ಮರಾಜನಿಗೆ ಇವನು ಯತಿಯಲ್ಲ, ಕ್ರೂರನೂ ಪಾಪಿಷ್ಠನೂ, ದುರ್ಯೋಧನನ ಗೆಳೆಯನೂ ಆದ ಚಾರ್ವಾಕನೆಂಬ ರಾಕ್ಷಸನು;ಯತಿವೇಷಹಾಕಿಕೊಂಡು ಬಂದು ನಿನಗೆ ಮೋಸಮಾಡಿರುವನು. ಆದ್ದರಿಂದ ಇವನ ಬಗ್ಗೆ ದುಃಖಿಸಬೇಡ, ಎಂದು ಶ್ರೀಕೃಷ್ಣನು ಬೋಧಿಸಿ ಸಮಾಧಾನ ಮಾಡಿದನು. ಅದರಿಂದ ಸಂತುಷ್ಟನಾದ ಧರ್ಮರಾಜನು ರಾಕ್ಷಸನನ್ನುಕೊಂದು ಮಹಾಕಾರ್ಯ ಮಾಡಿದ ಬ್ರಾಹ್ಮಣರನ್ನು ಬಹು ಭಕ್ತಿವಿಶ್ವಾಸಗಳಿಂದ, ಧನದಾನಾದಿಗಳಿಂದ ಸಂತೋಷಪಡಿಸಿದನು. ತನ್ನ ಬಾಂಧವರನ್ನು, ಪ್ರಜೆಗಳನ್ನು ಯಾರಿದ್ದಲ್ಲಿ ಬಂಧುಗಳನ್ನು ಕಳೆದುಕೊಂಡು ದುಃಖಿಸುತ್ತಿದ್ದವರನ್ನು ಸಮಾಧಾನ ಮಾಡಿದನು. ಪ್ರಜೆಗಳಿಗೆ ಸಾಕಷ್ಟು ಧನವನ್ನು ಕೊಡುತ್ತಿದ್ದನು. ತನ್ನ ಮಕ್ಕಳಂತೆ ಪ್ರಜೆಗಳನ್ನು ರಕ್ಷಿಸಿದನು.

ಸ ಭೀಷ್ಮದ್ರೋಣಕರ್ಣಾನಾಂ ವಧಾದ್ ದುರ್ಯೋಧನಸ್ಯ ಚ ॥
ಪಾಪಾಶಂಕೀ ತಪ್ಯಮಾನೋ ರಾಜ್ಯತ್ಯಾಗೇ ಮನೋ ದಧೇ ॥೭॥

ಸಃ – ಆ ಧರ್ಮರಾಜನು, ಭೀಷ್ಮದ್ರೋಣಕರ್ಣಾನಾಂ— ಭೀಷ್ಮ ದ್ರೋಣ ಕರ್ಣರ, ಚ–ಮತ್ತು,ದುರ್ಯೋಧನಸ್ಯ— ದುರ್ಯೋಧನನ, ವಧಾತ್— ಸಂಹಾರದಿಂದ, ಪಾಪಾಶಂಕೀಸನ್ — ಪಾಪ ಬಂದಿದೆಯೋ ಎಂಬ ಸಂಶಯವುಳ್ಳವನ್ನಾಗಿ, ತಪ್ಯಮಾನಃ ಸನ್— ಸಂತಾಪಪಡುವವನಾಗಿ, ರಾಜ್ಯತ್ಯಾಗೇ — ರಾಜ್ಯತ್ಯಾಗಮಾಡುವ ಬಗ್ಗೆ, ಮನಃ ದಧೇ–ಮನಸ್ಸನ್ನು ಮಾಡಿದನು. ॥೭॥

ಸೋಽನುಜ್ಞೈಃ ಕೃಷ್ಣಯಾ ವಿಪ್ರೈರಪ್ಯುಕ್ತೋ ಧರ್ಮಶಾಸನಂ ॥
ಭೀಮಂ ಸಂಪ್ರಾರ್ಥಯಿತ್ವೈವ ನ ವೇತ್ಸೀತ್ಯಾಹ ಫಲ್ಗುನಂ ॥೮॥

ಸಃ— ಆ ಯುಧಿಷ್ಠಿರನು, ಅನುಜ್ಞೈಃ — ತಮ್ಮಂದಿರಿಂದ, ಕೃಷ್ಣಯಾ– ದ್ರೌಪದಿದೇವಿಯಿಂದ, ವಿಪ್ರೈರಪಿ — ಬ್ರಾಹ್ಮಣರಿಂದಲೂ ಕೂಡ, ಧರ್ಮಶಾಸನಂ — ಧರ್ಮಾಧರ್ಮವಿಷಯದಲ್ಲಿ, ಉಕ್ತಃಸನ್ — ಹೇಳಿಸಿಕೊಂಡವನಾಗಿ, ಭೀಮಂ – ಶ್ರೀಭೀಮಸೇನದೇವರನ್ನು, ಸಂಪ್ರಾರ್ಥಯಿತ್ವೈವ— ನೀನು ಬಯಸಿಬಿಟ್ಟು ಈ ವಿಷಯದಲ್ಲಿಗೆ ಏನೂ ಹೇಳಬೇಡ, ನೀನೇರಾಜನಾಗು ಎಂದು ಪ್ರಾರ್ಥಿಸಿಯೇ, ಫಲ್ಗುನಂ—ಅರ್ಜುನನನ್ನು ಕುರಿತು, ನ ವೇತ್ಸಿ ಇತಿ ಆಹ – ಈ ಧರ್ಮಾಧರ್ಮಗಳನ್ನು ನೀನು ತಿಳಿದಿಲ್ಲ ಎಂದು ಹೇಳಿದನು. ॥೮॥

ತಸ್ಮಿನ್ ಕ್ರುದ್ಧೇನೃಪಂ ಪ್ರಾಹುರ್ವಿಪ್ರಾಸ್ತ್ವತ್ತೋಽಪಿ ತತ್ತ್ವವಿತ್ ॥
ಶಕ್ರೋಽರ್ಜುನ ಇತಿ ಶ್ರುತ್ವಾಪ್ಯೇತದ್ಧರ್ಮೇ ಸಸಂಶಯಂ ॥೯॥

ಮತ್ಸ್ನೇಹಾದೇವ ಸರ್ವೇಽಪಿ ಧರ್ಮೋಽಯಮಿತಿ ವಾದಿನಃ ॥
ಇತ್ಯೇವಂ ಶಂಕಮಾನಂ ತಮೂಚತುರ್ವಿಪ್ರಯೋದವೌ ॥
ಕೃಷ್ಣೌ ಧರ್ಮೋಽಯಮಿತ್ಯೇವ ಶಾಸ್ತ್ರಯುಕ್ತ್ಯಾ ಪುನಃ ಪುನಃ ॥೧೦॥

ತಸ್ಮಿನ್– ಅರ್ಜುನನು, ಕ್ರುದ್ಧೇಸತಿ–ಸಿಟ್ಟಿಗೇಳುತ್ತಿರಲು, ವಿಪ್ರಾಃ–ಬ್ರಾಹ್ಮಣರು,ಶಕ್ರಃ ಅರ್ಜುನಃ–ಇಂದ್ರಾವತಾರಿಯಾದ ಅರ್ಜುನನು, ತ್ವತ್ತಃ ಅಪಿ– ನಿನಗಿಂತಲೂ ಕೂಡ, ತತ್ತ್ವವಿತ್ – ಅಧಿಕ ತತ್ತ್ವಜ್ಞನು. ಇತಿ – ಎಂದು, ನೃಪಂ– ಧರ್ಮರಾಜನಿಗೆ, ಪ್ರಾಹುಃ–ಹೇಳಿದರು. ಏತತ್ ಶ್ರುತ್ವಾಽಪಿ–ಹೀಗೆ ಹೇಳಿದ್ದನ್ನು ಕೇಳಿದರೂ ಕೂಡ, ಧರ್ಮೇ ಸಸಂಶಯಂ– ಧರ್ಮಯುದ್ಧದ ಬಗ್ಗೆ ಸಂಶಯಸಹಿತನಾದ, ಮತ್ಸ್ನೇಹಾದೇವ— ನನ್ನ ಮೇಲಿನಪ್ರೀತಿಯಿಂದಲೇ, ಸರ್ವೇಽಪಿ – ಎಲ್ಲರೂ ಕೂಡ,ಅಯಂ ಧರ್ಮಃಇತಿ – ಇದು (ಯುದ್ಧವು) ಧರ್ಮವೇ ಎಂದು, ವಾದಿನಃ – ಹೇಳುತ್ತಿದ್ದಾರೆ, ಇತ್ಯೇವಂ – ಈ ರೀತಿ,

ಶಂಕಮಾನಂ ತಂ – ಶಂಕಿಸುತ್ತಿದ್ದ ಧರ್ಮರಾಜನನ್ನು ಕುರಿತು, ವಿಪ್ರಯೂಚತುಃ — ಬ್ರಾಹ್ಮಣ ಯುದುಕುಲೋತ್ಪನ್ನರಾದ, ಕೃಷ್ಣೌ —ಶ್ರೀಕೃಷ್ಣ ಶ್ರೀವೇದವ್ಯಾಸರಿಬ್ಬರೂ, ಅಯಂ ಧರ್ಮ ಏವ ಇತಿ – ಇದು ಧರ್ಮವೇ ಎಂದೂ, ಶಾಸ್ತ್ರಯುಕ್ತ್ಯಾ – ಶಾಸ್ತ್ರ ಯುಕ್ತಿಗಳಿಂದ, ಪುನಃ ಪುನಃ— ಮೇಲಿಂದ ಮೇಲೆ ಉಚತುಃ— ಹೇಳಿದರು. ॥೯॥೧೦॥

ನಾತಿನಿಶ್ಚಿತಬುದ್ಧಿಂ ತಂ ತದಾऽಪಿ ಪುರುಷೋತ್ತಮೌ ।
ಹತಪಕ್ಷಗತತ್ವೇನ ತ್ವಚ್ಛಂಕಾಯೈ ಅಗೋಚರಃ ।
ಯತೋ ಭೀಷ್ಮಸ್ತತೋ ಯಾಹಿ ತಮಿತ್ಯೂಚತುರವ್ಯಯೌ ॥೧೧॥

ತದಾಪಿ – ಆಗಲೂ ಕೂಡ, ನಾತಿನಿಶ್ಚಿತಬುದ್ಧಿಂ ತಂ – ಅತಿ ನಿಶ್ಚಿತಬುದ್ಧಿಇಲ್ಲದ ಧರ್ಮರಾಜನಿಗೆ, ಅವ್ಯಯೌ ನಾಶವಿಲ್ಲದ, ಪುರುಷೋತ್ತಮೌ — ಸರ್ವೋತ್ತಮ ನಾರಾಯಣನ ಸ್ವರೂಪರಾದ, ಶ್ರೀಕೃಷ್ಣ ಶ್ರೀವೇದವ್ಯಾಸದೇವರು ಯತಃ – ಯಾವಕಾರಣದಿಂದ, ಭೀಷ್ಮಃ— ಭೀಷ್ಮರು, ಹತಪಕ್ಷಗತತ್ವೇನ – ಸಂಹೃತವಾದ ವೈರಿ ಪಕ್ಷದಲ್ಲಿದ್ದವರಾದ್ದರಿಂದ, ತ್ವಚ್ಛಂಕಾಯೈ ಅಗೋಚರಃ – ನನ್ನ ಮೇಲಿನ ಸ್ನೇಹದಿಂದ ಅಧರ್ಮವನ್ನು ಧರ್ಮವನ್ನಾಗಿ ಹೇಳುತ್ತಾರೇನೋ ಎಂಬ ಸಂಶಯಕ್ಕೆ ಆಸ್ಪದರಲ್ಲವೋ, ತತಃ – ಆ ಕಾರಣದಿಂದ ತಂ – ಅವರನ್ನು ಕುರಿತು, ಯಾಹಿ – ಹೋಗು, ಇತಿ —ಎಂದು, ಊಚತುಃ – ಹೇಳಿದರು. ॥೧೧॥

ಸತಾಭ್ಯಾಂ ಭ್ರಾತೃಭಿಶ್ಚೈವ ಮುನಿಭಿಶ್ಚ ಸಮನ್ವಿತಃ ।
ಭೀಷ್ಮಂ ಯಯೌ ಲಜ್ಜಿತೇऽಸ್ಮಿಂಸ್ತಂ ಭೀಷ್ಮಾಯಾऽಹ ಕೇಶವಃ ॥೧೨॥

ಸಃ — ಆ ಧರ್ಮರಾಜನು, ತಾಭ್ಯಾಂ – ಶ್ರೀಕೃಷ್ಣವ್ಯಾಸರಿಂದ, ಭ್ರಾತೃಭಿಃ — ಸಹೋದರರಿಂದ, ಚ – ಮತ್ತು ಮುನಿಭಿಃ – ಋಷಿಗಳಿಂದ, ಸಮನ್ವಿತಃ ಸನ್ ಏವ — ಕೂಡಿಕೊಂಡವನಾಗಿಯೇ, ಭೀಷ್ಮಂ ಯಯೌ — ಭೀಷ್ಮರ ಸಮೀಪಕ್ಕೆ ಹೋದನು. ~~ಅಸ್ಮಿನ್— ಈ ಧರ್ಮರಾಜನು, ಲಜ್ಜಿತೇ ಸತಿ – ನಾವೇ ಈ ಭೀಷ್ಮನನ್ನು ಹೀಗೆ ಹಿಂಸಿಸಿದವರು; ಈಗ ಧರ್ಮ~~ವನ್ನು ತಿಳಿಸಲು ಹೇಗೆ ಕೇಳುವದು ಎಂದು ಲಜ್ಜಿತನಾಗಿರುತ್ತಿರಲು, ಕೇಶವಃ – ಶ್ರೀಕೃಷ್ಣನು, ಭೀಷ್ಮಾಯ — ಭೀಷ್ಮರಿಗೆ, ತಂ – (ಧರ್ಮಜ್ಞಾನ ಮಾಡಿಕೊಳ್ಳಲು ಬಂದಿದ್ದಾನೆ ಎಂದು) ಆ ಧರ್ಮರಾಜನ ಬಗ್ಗೆ, ಆಹ— ಹೇಳಿದನು. ॥೧೨॥

ಪೃಚ್ಛೇತ್ಯುಕ್ತಃ ಸ ಭೀಷ್ಮೇಣ ಪಪ್ರಚ್ಛಾಖಿಲಮುಂಜಸಾ ।
ತತೋವಾಚಾಖಿಲಾನ್ ಧರ್ಮಾನ್ ಕೃಷ್ಣೋ ಭೀಷ್ಮಶರೀರಗಃ ॥೧೩॥

ಪೃಚ್ಛ—ಪ್ರಶ್ನೆ ಮಾಡು (ಕೇಳು), ಇತಿ—ಎಂದು, ಭೀಷ್ಮೇಣ — ಭೀಷ್ಮರಿಂದ, ಉಕ್ತಃ – ಹೇಳಿಸಿಕೊಳ್ಳಲ್ಪಟ್ಟ, ಸಃ – ಆ ಧರ್ಮರಾಜನು, ಅಖಿಲಂ—ತಾನು ಕೇಳಬೇಕಾಗಿದ್ದ ಎಲ್ಲದರ ಬಗ್ಗೆ, ಅಂಜಸಾ ಪಪ್ರಚ್ಛ – ನಿಸ್ಸಂಕೋಚವಾಗಿ ಪ್ರಶ್ನಿಸಿದನು. ತತ್ರ—ಅವನು ಪ್ರಶ್ನೆಮಾಡಿದಾಗ, ಭೀಷ್ಮ ಶರೀರಗಃ – ಭೀಷ್ಮರ ಶರೀರದಲ್ಲಿರುವ, ಕೃಷ್ಣಃ—ಶ್ರೀಕೃಷ್ಣನು, ಅಖಿಲಾನ್ ಧರ್ಮಾನ್ – ಎಲ್ಲ ಧರ್ಮಗಳನ್ನು, ಉವಾಚ— ಹೇಳಿದನು. ॥೧೩॥

ಅವ – ಭೀಷ್ಮರಲ್ಲಿದ್ದು ಶ್ರೀಕೃಷ್ಣನೇ ಉಪದೇಶಿಸಿದ್ದಕ್ಕೆ ಕಾರಣವನ್ನು ಹೇಳುತ್ತಾರೆ—

ಭೀಷ್ಮೋऽಪ್ಯಾಹ ಹರಿಂ ಪಾರ್ಥಾ ಬೋಧನೀಯಾಸ್ತ್ವಯೈವಹಿ ।
ಕಾ ಶಕ್ತಿರ್ಮನು ದೇವೇಶ ಪಾರ್ಥಾನ್ ಬೋಧಯಿತುಂ ಪ್ರಭೋ ॥೧೪॥

ಹಿ— ಯಾವ ಕಾರಣದಿಂದ, ಭೀಷ್ಮಃ ಅಪಿ – ಭೀಷ್ಮಾಚಾರ್ಯರೂಕೂಡ, ಹರಿಂ— ಶ್ರೀಕೃಷ್ಣನನ್ನು ಕುರಿತು, ಹೇ ಪ್ರಭೋ ದೇವೇಶ – ಸರ್ವಸಮರ್ಥನಾದ, ದೇವೋತ್ತಮನೂ– ಶ್ರೀಕೃಷ್ಣನೇ, ಪಾರ್ಥಾನ್ ಬೋಧಯಿತುಂ–ಪಾಂಡವರಿಗೆ

ಬೋಧನ ಮಾಡಲು ಮಮ — ನನಗೆ, ಕಾ ಶಕ್ತಿಃ—ಎಲ್ಲಿಯ ಸಾಮರ್ಥ್ಯವು. (ಸಾಮರ್ಥ್ಯವಿಲ್ಲ ಎಂದು ತಾತ್ಪರ್ಯ.) ಪಾರ್ಥಾಃ—ಪಾಂಡವರು, ತ್ವಯಾಏವ — ನಿನ್ನಿಂದಲೇ, ಬೋಧನೀಯಾಃ — ಬೋಧಿಸಲ್ಪಡಬೇಕು, ಇತಿ — ಎಂದು, ಆಹ — ಹೇಳಿದರೋ, (ತಸ್ಮಾತ್ — ಆದ್ದರಿಂದ) ॥೧೪॥

ಇತ್ಯುಕ್ತೋ ಭಗವಾನಾಹ ತ್ವತ್ಕೀರ್ತ್ಯೈ ತ್ವಯಿ ಸಂಸ್ಥಿತಃ ।
ಪ್ರವಕ್ಷ್ಯಾಮ್ಯಖಿಲಾನ್ ಧರ್ಮಾನ್ ಸೂಕ್ಷ್ಮಂ ತತ್ವಮಪೀತಿ ಹ ॥೧೫॥

ಇತಿ ಉಕ್ತಃ — ಹೀಗೆ ಭೀಷ್ಮರಿಂದ ಹೇಳಿಸಿಕೊಳ್ಳಲ್ಪಟ್ಟ, ಭಗವಾನ್ — ಶ್ರೀಕೃಷ್ಣನು, ತ್ವತ್ಕೀರ್ತ್ಯೈ —ನಿನಗೆ ಕೀರ್ತಿಬರುವದಕ್ಕಾಗಿ, ತ್ವಯಿ ಸಂಸ್ಥಿತಃ ಸನ್—ನಿನ್ನಲ್ಲಿ ಇರುವವನಾಗಿ, ಅಖಿಲಾನ್ ಧರ್ಮಾನ್ — ಎಲ್ಲ ಧರ್ಮಗಳನ್ನು, ಸೂಕ್ಷ್ಮಂ ತತ್ವಂ ಅಪಿ — ಸೂಕ್ಷ್ಮ ತತ್ವಗಳನ್ನೂ ಕೂಡ, ಪ್ರವಕ್ಷ್ಯಾಮಿ ಹೇಳುವೆನು ಇತಿ — ಎಂದು, ಆಹ — (ಭೀಷ್ಮರಿಗೆ) ಹೇಳಿದ್ದನೋ, ತಸ್ಮಾತ್ — ಆದ್ದರಿಂದ ಭೀಷ್ಮರಲ್ಲಿ ನಿಂತು ತಾನೇ ಉಪದೇಶಿಸಿದನು. ॥೧೫॥

ಭಾ. ಅ.—೭-೧೫ ಭೀಷ್ಮ ದ್ರೋಣಕರ್ಣ ದುರ್ಯೋಧನರ ವಧಗಳನ್ನು ಮಾಡಿದ್ದರಿಂದ ತನಗೆ ಪಾಪಬಂದಿದೆ ಎಂದು ಶಂಕಿಸುತ್ತಿದ್ದ ಧರ್ಮರಾಜನು ಸಂತಪಿಸುತ್ತಾ ರಾಜ್ಯವನ್ನೇ ತ್ಯಜಿಸುವ ಮನಸ್ಸನ್ನು ಮಾಡಿದನು. ಸಹೋದರರು, ದ್ರೌಪದೀದೇವಿಯರು, ಬ್ರಾಹ್ಮಣರು ಇವರೆಲ್ಲರೂ ಧರ್ಮದ ಬಗ್ಗೆ ತಿಳಿಹೇಳಿದರೂ ಕೂಡ, ಭೀಮಸೇನ ದೇವರಿಗೆ ದಯವಿಟ್ಟು 'ನನ್ನ ಹತ್ತಿರ ಧರ್ಮದ ಬಗ್ಗೆ ಮಾತಾಡಬೇಡ; ನೀನೇ ರಾಜನಾಗು ಎಂದು ವಿಜ್ಞಾಪಿಸಿ, ಅರ್ಜುನನನ್ನು ಕುರಿತು ನಿನಗೇನು ಧರ್ಮ ಗೊತ್ತಿದೆ ? ನಿನಗೆ ತಿಳಿಯುದು ಎಂದು ಗದರಿಸುತ್ತಿದ್ದನು. ಅರ್ಜುನನು ಕುಪಿತನಾದಾಗ, ಬ್ರಾಹ್ಮಣರು 'ಅರ್ಜುನನು ನಿನಗಿಂತ ಹೆಚ್ಚು ಧರ್ಮಜ್ಞನು' ಎಂದು ಧರ್ಮಜನಿಗೆ ಹೇಳುತ್ತಿದ್ದರು. ಅದನ್ನೂ ಕೇಳಿದರೂ ಕೂಡ ಸಂಶಯವನ್ನು ಬಿಡದೇ ಇವರೆಲ್ಲ ನನ್ನ ಮೇಲೆ ಅಭಿಮಾನದಿಂದ ನಾವು ಮಾಡಿದ ಯುದ್ಧವನ್ನು ಧರ್ಮಯುದ್ಧವೆಂದು ಹೇಳುತ್ತಿದ್ದಾರೆ ಎಂದು ಶಂಕಿಸುತ್ತಿದ್ದ ಧರ್ಮಜನಿಗೆ ಶ್ರೀಕೃಷ್ಣ ಶ್ರೀವೇದವ್ಯಾಸರು ಧರ್ಮವೇ ಎಂದು ಪುನಃ ಪುನಃ ಶಾಸ್ತ್ರಯುಕ್ತಿಗಳಿಂದ ಹೇಳಿದರೂ ಕೂಡ ಸಂಶಯವನ್ನೇ ಬಿಡದ ಧರ್ಮರಾಜನನ್ನು ಕುರಿತು ಭೀಷ್ಮರ ಬಳಿಗೆ ಹೋಗು; ಅವರು ನಿನ್ನ ವಿರುದ್ಧ ಪಕ್ಷದವರಲ್ಲಿದ್ದವರು. ನಿನ್ನ ಅಭಿಮಾನದಿಂದ ಹೇಳುತ್ತಾರೋ ಎಂಬ ಶಂಕೆಗೆ ಅವಕಾಶವೇ ಇಲ್ಲ' ? ಎಂದು ಶ್ರೀಕೃಷ್ಣವ್ಯಾಸರಿಬ್ಬರೂ ಹೇಳಿದರು. ಆಗ ಧರ್ಮಜನು ಅವರಿಂದ, ಸಹೋದರರಿಂದ, ಮಂತ್ರಿಗಳಿಂದ ಕೂಡಿಕೊಂಡು ಭೀಷ್ಮರ ಹತ್ತಿರ ಬಂದನು. ಅವರ ಹತ್ತಿರ ಮಾತನಾಡಲು (ನಾವೇ ಇವರನ್ನು ಹೀಗೆ ಶರಶಯ್ಯಾದಲ್ಲಿ ಮಲಗಿಸಿದವರು ಈಗ ಇವರ ಹತ್ತಿರ ಮುಖ ಹೇಗೆ ತೋರಿಸುವದು, ಮಾತಾಡುವದು ಎಂದು) ನಾಚುತ್ತಿರಲು ಶ್ರೀ ಕೃಷ್ಣನೇ ಸ್ವಯಂ ಧರ್ಮನು ಧರ್ಮವನ್ನು ತಿಳಿಯಲು ಬಂದಿದ್ದಾನೆಂದು ಹೇಳಿದನು. ಕೇಳು ಎಂದು ಭೀಷ್ಮರು ಅಂದಾಗ ತಾನು ತಿಳಿಯಬೇಕಾದದ್ದನ್ನು ಎಲ್ಲವನ್ನು ಕೇಳಿದನು. ಭೀಷ್ಮರ ಶರೀರದಲ್ಲಿ ನಿಂತು ಶ್ರೀಕೃಷ್ಣನು ಬೋಧಿಸಿದನು. ಪಾಂಡವರಿಗೆ ಬೋಧಿಸಲು ನನಗೆಲ್ಲಿಯ ಶಕ್ತಿ ಎಂದು ಭೀಷ್ಮರು ಅಂದಾಗ ನಿನ್ನ ಕೀರ್ತಿಗಾಗಿ ನಿನ್ನ ಶರೀರದಲ್ಲಿ ನಿಂತು ನಾನೇ ಬೋಧಿಸುವೆನು ಎಂದು ಶ್ರೀಕೃಷ್ಣನು ಹೇಳಿದ್ದರಿಂದ ಹಾಗೆ ಮಾಡಿದನು.

ರಾಜ್ಞಃ ಪ್ರಥಮತೋ ಧರ್ಮೋ ಭಗವದ್ಧರ್ಮಪಾಲನಂ ।
ತದರ್ಥಂ ಕಂಟಕೋದ್ಧಾರೋ ಧರ್ಮಾ ಭಾಗವತಾ ಅಪಿ
ಮನೋವಾಕ್ಕರ್ಮಭಿರ್ವಿಷ್ಣೋರಚ್ಛಿದ್ರತ್ವೇನ ಚಾರ್ಚನಂ ॥೧೬॥

ರಾಜ್ಞಃ—ಕ್ಷತ್ರಿಯನಿಗೆ, ಭಗವದ್ಧರ್ಮಪಾಲನಂ — ಭಗವತ್ಪ್ರೀತಿಕರ ಧರ್ಮರಕ್ಷಣೆಯು, ಪ್ರಥಮತಃ ಧರ್ಮಃ — ಮುಖ್ಯ ಮೊದಲಧರ್ಮವು, ತದರ್ಥಂ —ಅದರ ಸಲುವಾಗಿ, ಕಂಟಕೋದ್ಧಾರಃ — ಧರ್ಮಕಂಟಕರಾದ ದುಷ್ಟರ ಸಂಹಾರವು, ಭಾಗವತಾ ಧರ್ಮಾಃ ಅಪಿ — ಇನ್ನುಳಿದ ಭಾಗವತ ಧರ್ಮಗಳೂ ಕೂಡ ಆಚರಿಸಲ್ಪಡಬೇಕು; ಚ—ಮತ್ತು, ಮನೋವಾಕ್ಕ

ಪರ್ಯಭಿಃ — ತ್ರಿಕರಣಪೂರ್ವಕವಾಗಿ, ಅಚ್ಛಿದ್ರತ್ವೇನ — ನ್ಯೂನತಾರಹಿತವಾಗಿ; ದೋಷರಹಿತವಾಗಿ. ವಿಷ್ಣೋಃ ಅರ್ಚನಂ ಅಪಿ — ಶ್ರೀ ವಿಷ್ಣು ಪೂಜೆಯೂ ಕೂಡ ಕರ್ತವ್ಯವೇ ಆಗಿದೆ. ॥೧೬॥

ಪೂರ್ಣಾಶೇಷಗುಣೋ ವಿಷ್ಣುಃ ಸ್ವತಂತ್ರಶ್ಚೈಕ ಏವ ತು ॥
ತದ್ವಶಂ ಸರ್ವಮನ್ಯಚ್ಚ ಸರ್ವದೇತಿ ವಿನಿಶ್ಚಯಃ ॥೧೭॥

ವಿಷ್ಣುಃ ಏಕ ಏವ—ಶ್ರೀಮನ್ನಾರಾಯಣನೊಬ್ಬನೇ, ಪೂರ್ಣಾಶೇಷಗುಣಃ—ಎಲ್ಲ ಗುಣಪೂರ್ಣನು, ಸ್ವತಂತ್ರಃ — ಸ್ವತಂತ್ರನು, ಸರ್ವಂ ಅನ್ಯಚ್ಚ — ಅವನಿಂದ ಭಿನ್ನವಾದ ಎಲ್ಲವೂ, ಸರ್ವದಾ — ಯಾವಾಗಲೂ, ತದ್ವಶಂತು — ಅವನ ಅಧೀನವೇ, ಇತಿ ನಿಶ್ಚಯಃ — ಎಂಬುದು ಪ್ರಮಾಣ ಸಿದ್ಧವಾದದ್ದು. ॥೧೭॥

ದೇವತಾಕ್ರಮವಿಜ್ಞಾನಮಪೂಜಾಽನ್ಯಸ್ಯ ವೈ ಹರೇಃ ॥
ಪೂಜಾ ಭಾಗವತತ್ವೇನ ದೇವಾದೀನಾಂ ಚ ಸರ್ವಶಃ ॥೧೮॥

ದೇವತಾಕ್ರಮವಿಜ್ಞಾನಂ — ದೇವತೆಗಳ ತಾರತಮ್ಯ ಜ್ಞಾನವು, ಹರೇಃ ಅನ್ಯಸ್ಯ — ಶ್ರೀಹರಿಯಿಂದ ಇತರರಾದ ದೇವತೆಗಳ, ಅಪೂಜಾ ವೈ — ಸರ್ವೋತ್ತಮತ್ವೇನ ಪೂಜೆಯನ್ನು ಖಂಡಿತ ಮಾಡದಿರುವದು, ಸರ್ವಶಃ ದೇವಾದೀನಾಂ— ಎಲ್ಲ ದೇವಋಷಿ ಮೊದಲಾದವರ, ಭಾಗವತತ್ವೇನ ಪೂಜಾ — ಭಗವತ್ಪರಿವಾರ ದೃಷ್ಟಿಯಿಂದ ಪೂಜೆ ಮಾಡುವದು (ಇವೆಲ್ಲ ಕರ್ತವ್ಯಗಳು). ॥೧೮॥

ವೃಥಾ ಕರ್ಮಾಕೃತಿಃ ಕ್ವಾಪಿ ನಿರಾಶೀಸ್ತ್ವಂ ಸದೈವ ಚ ॥
ವಿಷ್ಣೋರ್ಭಾಗವತಾನಾಂ ಚ ಪ್ರತೀಪಸ್ಯಾಕೃತಿಃ ಸದಾ ॥
ಪರಸ್ಪರ ವಿರೋಧೇತು ವಿಶಿಷ್ಟಸ್ಯಾನುಕೂಲತಾ ॥೧೯॥

ಕ್ವಾಪಿ ವೃಥಾಕರ್ಮಾಕೃತಿಃ — ಎಂದೂ ವ್ಯರ್ಥ ಕರ್ಮಮಾಡದಿರುವದು, ಸದೈವ ನಿರಾಶೀಸ್ತ್ವಂ— ಯಾವಾಗಲೂ ಕಾಮ್ಯ ಫಲಾಪೇಕ್ಷೆಯನ್ನು ಮಾಡದಿರುವದು, ಸದಾ—ಯಾವಾಗಲೂ, ವಿಷ್ಣೋಃ ಭಾಗವತಾನಾಂ ಚ — ಶ್ರೀವಿಷ್ಣುವಿನ, ಅವನ ಭಕ್ತರ, ಪ್ರತೀಪಸ್ಯ ಅಕೃತಿಃ— ವಿರೋಧವನ್ನಾಚರಿಸದಿರುವದು, ಪರಸ್ಪರವಿರೋಧೇತು — ಇಬ್ಬರು ಭಗವದ್ಭಕ್ತರಿಗೆ ವಿರೋಧ ಬಂದಾಗ, ವಿಶಿಷ್ಟಸ್ಯ — ಅವರಿಬ್ಬರಲ್ಲಿ ಶ್ರೇಷ್ಠನಾದವನ, ಅನುಕೂಲತಾ — ಅನುಸರಣೆ ಮಾಡುವದು (ಇವೆಲ್ಲ ಕರ್ತವ್ಯಗಳು) ॥೧೯॥

ಪ್ರಿಯಂ ವಿಷ್ಣೋಸ್ತದೀಯಾನಾಮಪಿ ಸರ್ವಂ ಸಮಾಚರೇತ್ ॥
ಧರ್ಮಮಪ್ಯಪ್ರಿಯಂ ತೇಷಾಂ ನೈವ ಕಿಂಚಿತ್ ಸಮಾಚರೇತ್ ॥೨೦॥

ವಿಷ್ಣೋಃ ತದೀಯಾನಾಂ — ಶ್ರೀಮನ್ನಾರಾಯಣನಿಗೆ, ಅವನ ಭಕ್ತರಿಗೆ, ಪ್ರಿಯಂ — ಪ್ರಿಯವಾದ, ಸರ್ವಂ ಅಪಿ — ಎಲ್ಲವನ್ನೂ ಕೂಡ, ಸಮಾಚರೇತ್ — ಆಚರಿಸಬೇಕು. ತೇಷಾಂ — ಅವರಿಗೆ, ಅಪ್ರಿಯಂ — ಪ್ರೀತಿಕರವಲ್ಲದ, ಧರ್ಮಮಪಿ — ಧರ್ಮವಾದದ್ದನ್ನೂಕೂಡ, ಕಿಂಚಿತ್ — ಸ್ವಲ್ಪವೂ, ನೈವ ಸಮಾಚರೇತ್—ಆಚರಿಸಲೇಕೂಡದು. ॥೨೦॥

ಸಾಮ್ಯೇ ವಿರೋಧೇ ಚ ಬಹೂನನುವರ್ತೇತ ವೈಷ್ಣವಾನ್ ॥
ಏತೇ ಸಾಧಾರಣಾ ಧರ್ಮಾ ಜ್ಞೇಯಾ ಭಾಗವತಾ ಇತಿ ॥೨೧॥

ಸಾಮ್ಯೇ — ಭಗವದ್ಭಕ್ತರಲ್ಲಿ ಸಮತ್ವ ವಿರುವಾಗ, ವಿರೋಧೇ — ಅವರ ಆಚರಣೆಗಳಲ್ಲಿ ವಿರೋಧ ಕಾಣುತ್ತಿರುವಾಗ, ಬಹೂನ್ ವೈಷ್ಣವಾನ್ — ಬಹಳ ಭಗವದ್ಭಕ್ತರನ್ನು, ಅನುವರ್ತೇತ — ಅನುಸರಿಸಬೇಕು. ಏತೇ — ಇಲ್ಲಿಯವರೆಗೆ ನಿರೂಪಿತವಾದವುಗಳು, ಸಾಧಾರಣಾಃ ಭಾಗವತಾಃ ಧರ್ಮಾಃ ಇತಿ — ಎಲ್ಲರಿಗೂ ಅನ್ವಯಿಸುವ ಭಾಗವತ ಧರ್ಮಗಳು ಎಂದು, ಜ್ಞೇಯಾಃ—ತಿಳಿಯಲ್ಪಡಬೇಕು. ॥೨೧॥

ಅವ — ಆಯಾ ವರ್ಣದವರ ವಿಶೇಷ ಭಾಗವತ ಧರ್ಮಗಳನ್ನು ತಿಳಿಸುತ್ತಾರೆ.

ತತ್ತ್ವ ವಿಜ್ಞಾಪನಂ ಧರ್ಮೋ ವಿಪ್ರಸ್ಯ ತು ವಿಶೇಷತಃ ॥
ಶಾರೀರದಂಡ ಸಂತ್ಯಾಗಃ ಪುತ್ರಭಾರ್ಯಾದಿಕಾನೃತೇ ॥
ತತ್ರಾಪಿ ನಾಂಗಹಾನಿಃ ಸ್ಯಾದ್ ವೇದನಾ ವಾ ಚಿರಂ ನತು ॥೨೨॥

ವಿಪ್ರಸ್ಯ — ಬ್ರಾಹ್ಮಣನಿಗೆ, ವಿಶೇಷತಃ ಧರ್ಮಃ— ಅಸಾಧಾರಣವಾದ ಧರ್ಮವು, ತತ್ವ ವಿಜ್ಞಾಪನಂ — ತತ್ವ ಬೋಧನೆಯು. ಪುತ್ರ ಭಾರ್ಯಾದಿಕಾನ್ ಋತೇ — ಮಕ್ಕಳು, ಹೆಂಡತಿ, ಶಿಷ್ಯ ಇವರನ್ನು ಬಿಟ್ಟು ಬೇರೆಯವರ ಬಗ್ಗೆ, ಶಾರೀರದಂಡ ಸಂತ್ಯಾಗಃ — ಶರೀರ ದಂಡನ ಮಾಡುವದನ್ನು ತ್ಯಜಿಸುವಿಕೆಯು, ತತ್ರಾಪಿ — ಪುತ್ರಾದಿಗಳಿಗೆ ಶಾರೀರ ದಂಡನ ಮಾಡುವಾಗಲೂ ಕೂಡ, ಅಂಗಹಾನಿಃ ಯಥಾ ನಸ್ಯಾತ್ — ಅವಯವ ನಾಶವಾಗದಿರುವಂತೆ, ಚಿರಂ ವೇದನಾ ವಾ ಯಥಾ ನತು ಸ್ಯಾತ್ — ಬಹಳ ಸಮಯ ನೋವಾಗದಿರುವಂತೆ ಶಿಕ್ಷೆಮಾಡುವದು ಕರ್ತವ್ಯವು ॥೨೨॥

ನಚಾರ್ಥದಂಡಃ ಕರ್ತವ್ಯೋ ವಿಪ್ರವೈಶ್ಯಾದಿಭಿಃ ಕ್ವಚಿತ್ ।
ಶಾರೀರದಂಡ ವಿಷಯೇ ವೈಶ್ಯಾದೀನಾಂ ಚ ವಿಪ್ರವತ್ ॥೨೩॥

ವಿಪ್ರವೈಶ್ಯಾದಿಭಿಃ — ಬ್ರಾಹ್ಮಣ, ವೈಶ್ಯ ಮೊದಲಾದವರಿಂದ, ಕ್ವಚಿತ್ — ಎಂದೂ ಕೂಡ, ಅರ್ಥದಂಡಃ — ಧನದ ದಂಡನವು, ನಚಕರ್ತವ್ಯಃ — ವಿಧಿಸಲ್ಪಡಬಾರದು. ಶಾರೀರದಂಡ ವಿಷಯೇ ಚ — ಶರೀರ ದಂಡಮಾಡುವ ವಿಚಾರದಲ್ಲಿ ಕೂಡ, ವೈಶ್ಯಾದೀನಾಂ ವಿಪ್ರವತ್ — ಬ್ರಾಹ್ಮಣರಂತೆ ನಡೆಯಬೇಕು. ॥೨೩॥

ಯಥಾಲಬ್ಧೇನ ವರ್ತೇತ ಭಿಕ್ಷಯಾ ವಾದ್ವಿಜೋತ್ತಮಃ ।
ಶಿಷ್ಯಯಾಜ್ಯೋಪಲಬ್ಧೈರ್ವಾ ಕ್ಷತ್ರಧರ್ಮೇಣವಾssಪದಿ ॥೨೪॥

ದ್ವಿಜೋತ್ತಮಃ—ಬ್ರಾಹ್ಮಣನು, ಯಥಾಲಬ್ಧೇನ — ಈಶ್ವರೇಚ್ಛೆಯಿಂದಲಬ್ಧವಾದ ಧನದಿಂದ, ಭಿಕ್ಷಯಾ ವಾ — ಭಿಕ್ಷಾಟನೆಯಿಂದಾಗಲಿ, ಶಿಷ್ಯಯಾಜ್ಯೋಪಲಬ್ಧೈ ವಾ — ಶಿಷ್ಯರಿಂದ, ಯಾಗಮಾಡುವವರಿಂದ ದಕ್ಷಿಣಾರೂಪವಾಗಿ ಬಂದ ಧನದಿಂದಾಗಲಿ, ವರ್ತೇತ — ಜೀವನ ನಡೆಸಬೇಕು, ಆಪದಿ—ಆಪತ್ತಿನಲ್ಲಿ, ಕ್ಷತ್ರಧರ್ಮೇಣ ವಾ — ಕ್ಷತ್ರಿಯ ವೃತ್ತಿಯಿಂದಾಗಲಿ ಜೀವಿಸಬಹುದು. ॥೨೪॥

ಮಹಾಪದಿ ವಿಶಾಂ ಧರ್ಮೈಃ ಕ್ಷತ್ರಿಯಃ ಸುರವಿಪ್ರಯೋಃ ।
ಅನ್ಯತ್ರ ಸರ್ವತವಿತ್ತೇನ ವರ್ತೇತೈತಾಂಶ್ಚ ಪಾಲಯನ್ ॥೨೫॥

ಮಹಾಪದಿ— (ಬ್ರಾಹ್ಮಣರಿಗೆ) ದೊಡ್ಡ ಆಪತ್ತು ಬಂದಾಗ ಕ್ಷತ್ರಿಯ ವೃತ್ತಿಯಿಂದಲೂ ಜೀವನ ನಡೆಯದಿರುವಾಗ, ವಿಶಾಂ ಧರ್ಮೈಃ — ವೈಶ್ಯ ಧರ್ಮಗಳಿಂದ (ವ್ಯಾಪಾರಾದಿಗಳಿಂದ) ವರ್ತೇತ— ಜೀವನ ನಡೆಸಬಹುದು. ಕ್ಷತ್ರಿಯಃ—

ಕ್ಷತ್ರಿಯನು, ಸುರವಿಪ್ರಯೋಃ ಅನ್ಯತ್ರ — ದೇವಬ್ರಾಹ್ಮಣರನ್ನು ಬಿಟ್ಟು, ಸರ್ವವಿತ್ತೇನ—ಉಳಿದವರ ಧನ (ಕರಾದಿರೂಪ) ದಿಂದ. ಏತಾನ್ ಪಾಲಯನ್ – ಇವರನ್ನು ರಕ್ಷಿಸುತ್ತಾ, ವರ್ತೇತ – ಜೀವಿಸಬೇಕು. ॥೨೫॥

ವಿರೋಧಿನಃ ಕ್ಷತ್ರಿಯಾಚ್ಚ ಪ್ರಸಹ್ಯೈವ ಹರೇದ್ ಧನಂ ।
ಸಾಮಾದಿಕ್ರಮತೋಧರ್ಮಾನ್ ವರ್ತಯೇದ್ ದಂಡತೋಽಂ ತತಃ ।
ಅಪಲಾಯೀ ಸದಾ ಯುದ್ಧೇ ಸತಾಂ ಕಾರ್ಯಮೃತೇ ಭವೇತ್ ॥೨೬॥

ವಿರೋಧಿನಃ – ದೇವ,ದೇವ ಭಕ್ತರ ವಿರೋಧಿಯಾದ, ಕ್ಷತ್ರಿಯಾತ್ – ಕ್ಷತ್ರಿಯನ ದೆಸೆಯಿಂದ, ಧನಂ-ಹಣವನ್ನು, ಪ್ರಸಹ್ಯೈವ – ಬಲಾತ್ಕಾರಿಸಿಯೇ, ಹರೇತ್— ತೆಗೆದುಕೊಳ್ಳಬೇಕು, ಧರ್ಮಾನ್ – ವರ್ಣಾಶ್ರಮಾಚಾರ ಧರ್ಮಗಳನ್ನು ಸಾಮಾದಿಕ್ರಮತಃ–ಕ್ರಮವಾಗಿ ಸಾಮ,ದಾನ,ಭೇದ ಈ ಉಪಾಯಗಳಿಂದ,ಅಂತತಃ ದಂಡತಃ–ಕೊನೆಗೆ ದಂಡೋಪಾಯದಿಂದ ವರ್ತಯೇತ್—ನಡೆಸಬೇಕು. ಯುದ್ಧೇ –ಯುದ್ಧದಲ್ಲಿ, ಸತಾಂ ಕಾರ್ಯಂ ಋತೇ – ಸಜ್ಜನರಿಗೆ ಅನುಕೂಲವಾಗುವ ಸಂದರ್ಭಗಳನ್ನು ಬಿಟ್ಟು, ಅಸತಾಂ ಕಾರ್ಯಂ ಋತೇ – ದುಷ್ಟಜನರ ಪಕ್ಷದಲ್ಲಿ ನಿಂತು ಯುದ್ಧ ಮಾಡುವ ಸಂದರ್ಭಗಳನ್ನು ಬಿಟ್ಟು, ಅಪಲಾಯೀ – ಓಡದೇ ಇರುವವನು, ಭವೇತ್ – ಆಗಬೇಕು. ॥೨೬॥

ಕೃಷಿವಾಣಿಜ್ಯಗೋರಕ್ಷಾ ಕುಸೀದಂ ವೈಶ್ಯಜೀವನಂ ।
ಪರಿಚರ್ಯೈವ ಶೂದ್ರಸ್ಯ ವೃತ್ತಿರನ್ಯೇ ಸ್ವಪೂರ್ವವತ್ ।
ವರ್ತೇಯುಃ ಬ್ರಾಹ್ಮಣಾದ್ಯಾಶ್ಚ ಕ್ರಮಾತ್ ಪೂಜ್ಯಾ ಹರಿಪ್ರಿಯಾಃ ॥೨೭॥

ಕೃಷಿವಾಣಿಜ್ಯಗೋರಕ್ಷಾಕುಸೀದಂ – ಕೃಷಿ (ಒಕ್ಕಲುತನ), ವ್ಯಾಪಾರ, ಗೋರಕ್ಷಣ, ಬಡ್ಡಿವ್ಯವಹಾರ ಇವು, ವೈಶ್ಯರಿಗೆ ಜೀವನವೃತ್ತಿಗಳು, ಶೂದ್ರಸ್ಯ— ಶೂದ್ರನಿಗೆ, ಪರಿಚರ್ಯೈವ— ಉತ್ತಮವರ್ಣದವರ ಸೇವೆಯೇ, ವೃತ್ತಿಃ – ಜೀವನ ವೃತ್ತಿಯು, ಅನ್ಯೇ – ಚತುರ್ವರ್ಣದಲ್ಲಿ ಸೇರದವರು, ಕುಂಬಾರ ಕವಡಿ ಮೊದಲಾದವರು, ಸ್ವಪೂರ್ವವತ್ – ತಮ್ಮ ಪೂರ್ವಜರಂತೆ, ವರ್ತೇಯುಃ— ಜೀವನ ನಡೆಸಬೇಕು ಹರಿಪ್ರಿಯಾಃ – ಶ್ರೀ ಹರಿಭಕ್ತರಾದ, ಬ್ರಾಹ್ಮಣಾದ್ಯಾಃ – ಬ್ರಾಹ್ಮಣರೇ ಮೊದಲಾದವರು. ಕ್ರಮಾತ್ ಚ-ಭಕ್ತಿ ಕ್ರಮದಿಂದಲೇ, ಪೂಜ್ಯಾಃ — ಗೌರವಾರ್ಹರು. ॥೨೭॥

ಹರಿಭಕ್ತ್ಯಾವನುಚ್ಚಸ್ತು ವರ್ಣೋಽಚ್ಚೋನಾತಿಪೂಜ್ಯತೇ ।
ವಿನಾ ಪ್ರಣಾಮಂ ಪೂಜ್ಯಸ್ತು ವರ್ಣಹೀನೋ ಹರಿಪ್ರಿಯಃ ।
ಆದರಸ್ತತ್ರ ಕರ್ತವ್ಯೋ ಯತ್ರ ಭಕ್ತಿರ್ಹರೇರ್ವರಾ ॥೨೮॥

ವರ್ಣೋಽಚ್ಚಃ ತು – ವರ್ಣದಿಂದ ಉತ್ತಮನಾಗಿದ್ದರೂ, ಹರಿಭಕ್ತ್ಯಾ ಅನುಚ್ಚಃ – ಭಗವದ್ಭಕ್ತಿಯಲ್ಲಿ ಹೀನನಾಗಿದ್ದವನು, ನಾತಿಪೂಜ್ಯತೇ—ಭಕ್ತಿಯಿಂದ ಉಚ್ಚನಾಗಿರುವಂಥ ವರ್ಣದಿಂದ ಹೀನನಾಗಿರುವವನನ್ನು ಪೂಜಿಸಲ್ಪಡುವದಿಲ್ಲ. ತು – ಆದರೆ, ವರ್ಣಹೀನಃ ಹರಿಪ್ರಿಯಃ— ವರ್ಣಾಧಮನಾದ ಭಗವದ್ಭಕ್ತನು, ಪ್ರಣಾಮಂ ವಿನಾ— ನಮಸ್ಕಾರ ರೂಪಗೌರವವನ್ನು ಬಿಟ್ಟು, ಪೂಜ್ಯಃ – ಉಳಿದ ಗೌರವಗಳಿಗೆ ಪಾತ್ರನು. (ಆದ್ದರಿಂದ) ಯತ್ರ—ಯಾರಲ್ಲಿ, ಹರೇಃ ಭಕ್ತಿಃ ವರಾ – ಶ್ರೀಹರಿಭಕ್ತಿಯು ಅಧಿಕವಾಗಿದೆಯೋ, ತತ್ರ ಆದರಃ ಕರ್ತವ್ಯಃ— ಅಲ್ಲಿ ಹೆಚ್ಚು ಆದರವು ಮಾಡಲ್ಪಡಬೇಕು. ॥೨೮॥

ಭಾ. ಅ. ೧೬—೨೮ ರಾಜನಿಗೆ ಭಗವದ್ಧರ್ಮರಕ್ಷಣೆಯು ಮುಖ್ಯ ಕರ್ತವ್ಯವು. ಅದರ ಸಲುವಾಗಿ ಧರ್ಮವಿರೋಧಿಗಳ ಸಂಹಾರ ಕಾರ್ಯವು ಕರ್ತವ್ಯವೇ. ತ್ರಿಕರಣಪೂರ್ವಕವಾಗಿ ಯಾವದೇ ನ್ಯೂನತೆಗಳಿಲ್ಲದೇ ಶ್ರೀಮನ್ನಾರಾಯಣನ

ಅರ್ಚನೆಯು ಕರ್ತವ್ಯವು. ಶ್ರೀನಾರಾಯಣನೇ ಸರ್ವೋತ್ತಮನು, ಸ್ವತಂತ್ರನು; ಉಳಿದದ್ದೆಲ್ಲ ಅವನ ಆಧೀನವಾದದ್ದು, ಆದ್ದರಿಂದ ಸರ್ವೋತ್ತಮತ್ವೇನ ಅರ್ಚನೆಯನ್ನು ಶ್ರೀನಾರಾಯಣನದೇ ಮಾಡಬೇಕು.ಬೇರಾರದೂ ಮಾಡಬಾರದು.ಭಗವತ್ಪರಿ ಪಾರವೃಷ್ಟಿಯಿಂದ ಅವರವರ ಯೋಗ್ಯತಾನುಸಾರವಾದ ಪೂಜೆಯನ್ನು ಇತರ ದೇವತೆಗಳದೂ ಮಾಡಬೇಕು. ವ್ಯರ್ಥವಾದ ಜಲತಾಡನಾದಿಕಾರ್ಯಗಳನ್ನು ಮಾಡಬಾರದು. ಕರ್ತವ್ಯದ ಆಚರಣೆಯಲ್ಲಿ ಲೌಕಿಕ ಫಲಕಾಮನೆ ಇರಬಾರದು. ಶ್ರೀಹರಿಗೆ ಅವನ ಭಕ್ತರಿಗೆ ವಿರೋಧವನ್ನು ಮಾಡಬಾರದು. ಇಬ್ಬರು ಭಕ್ತರಿಗೆ ವಿರೋಧ ಬಂದಾಗ, ಅವರಲ್ಲಿ ಶ್ರೇಷ್ಠ ಭಕ್ತನ ಅನುಸರಣೆ ಮಾಡಿಕೊಂಡಿರಬೇಕು. ಭಗವಂತನಿಗೆ ಅವನ ಭಕ್ತರಿಗೆ ಪ್ರಿಯವಾದದ್ದನ್ನೇ ಆಚರಿಸಬೇಕು. ಧರ್ಮವೆಂದು ತೋರುತ್ತಿದ್ದರೂ ಕೂಡ ಅದು ಅವರಿಗೆ ಅಪ್ರಿಯವಾಗಿದ್ದರೆ ಆದರಿಸಲೇಬಾರದು. ಸಮಾನ ಭಗವದ್ಭಕ್ತರಲ್ಲಿ ವಿರೋಧ ಬಂದಾಗ, ಬಹುಭಕ್ತರ ಮಾರ್ಗವನ್ನು ಅನುಸರಿಸಬೇಕು. ಇಲ್ಲಿಯವರೆಗೆ ಹೇಳಿದವು ಸಾಮಾನ್ಯ ಎಲ್ಲ ಭಕ್ತರ ಧರ್ಮಗಳು. ೧) ಬ್ರಾಹ್ಮಣನಾದವನು ಮುಖ್ಯವಾಗಿ ತತ್ತ್ವೋಪದೇಶನ ಕಾರ್ಯವನ್ನು ನಡೆಸಬೇಕು. ಶರೀರ ದಂಡನ ರೂಪ ಶಿಕ್ಷಾವನ್ನು ಇತರರ ಮೇಲೆಮಾಡಲು ಅಧಿಕಾರವಿಲ್ಲ. ತನ್ನ ಶಿಷ್ಯ,ಪತ್ನಿ,ಪುತ್ರಾದಿಗಳಿಗೆ ದೇಹ,ಅವಯವಗಳ ಹಾನಿಯಾಗದಂತೆ, ಬಹುವೇದನಾ ಆಗದಂತೆ ಶಿಕ್ಷಾವನ್ನು ಶರೀರದಂಡನವನ್ನು ಮಾಡಬಹುದು. ಅರ್ಥದಂಡವನ್ನೂ ಕೂಡ ವಿಧಿಸಲು ಕ್ಷತ್ರಿಯನಿಗೆ ಅಧಿಕಾರ; ವಿಪ್ರವೈಶ್ಯಾದಿಗಳಿಗಿಲ್ಲ. ಬ್ರಾಹ್ಮಣನು ಜೀವನಕ್ಕಾಗಿ ಅರ್ಥಸಂಗ್ರಹ ಮಾಡಲು ಪ್ರಯತ್ನಿಸದೇ ಇರುವದು. ದೇವೇಚ್ಛೆಯಿಂದಲೇ ಬಂದ ಧನದಿಂದ ಜೀವಿಸುವದು ಶ್ರೇಷ್ಠಧರ್ಮವು. ಭಿಕ್ಷೆಯಿಂದ, ಶಿಷ್ಯ ಯಜಮಾನರಿಂದ ಬಂದ ದಕ್ಷಿಣಾ ಧನದಿಂದ ಜೀವಿಸಬಹುದು. ಆಪತ್ತಿನಲ್ಲಿ ಕ್ಷತ್ರವೃತ್ತಿಯಿಂದ ಬದುಕಬಹುದು. ಅದರಿಂದಲೂ ನಡೆಯದ ಆಪತ್ತು ಬಂದಾಗ ವೈಶ್ಯವೃತ್ತಿಯನ್ನು ಅನುಸರಿಸಬಹುದು; ೨) ಕ್ಷತ್ರಿಯನಾದವನು ದೇವ ಬ್ರಾಹ್ಮಣರ ಧನವನ್ನು ಬಿಟ್ಟು ವೈಶ್ಯಾದಿಗಳಿಂದ ಕರರೂಪವಾಗಿ ಪಡೆದು, ಎಲ್ಲ ಪ್ರಜೆಗಳನ್ನೂ ರಕ್ಷಿಸುತ್ತಾ ಇರಬೇಕು. ಭಗವದ್ವಿರೋಧಿಯಾದ ಕ್ಷತ್ರಿಯನಿಂದ ವಿತ್ತಾಪಹಾರ ಮಾಡಲೇಬೇಕು. ಸಾಮಾದಿ ಉಪಾಯಗಳಿಂದ ಧರ್ಮವನ್ನು ಪ್ರಜೆಗಳಿಂದ ಮಾಡಿಸಬೇಕು. ಕೊನೆಗೆ ದಂಡೋಪಾಯದಿಂದಾದರೂ ಮಾಡಿಸಬೇಕು. ದುಷ್ಟ(ಜರಾಸಂಧಾದಿಗಳಂಥವರ)ಪಕ್ಷದಲ್ಲಿ ನಿಂತು ಯುದ್ಧಮಾಡುವ ಪ್ರಸಂಗ ಬಂದಾಗ ಯುದ್ಧದಿಂದ ಓಡಬಹುದು; ಸತ್ಪಕ್ಷದಲ್ಲಿದ್ದರೂ ತಾನು ಯುದ್ಧದಿಂದ ಓಡುವದರಿಂದ ಸಜ್ಜನರಿಗೆ ಹಿತವಾಗುವದಿದ್ದರೆ ಓಡಬಹುದು. ಉಳಿದ ಸಂದರ್ಭಗಳಲ್ಲಿ ಎಂದೂ ಯುದ್ಧದಿಂದ ಓಡಬಾರದು. ೩) ವೈಶ್ಯನು ಕೃಷಿ, ಗೋರಕ್ಷಣ, ವ್ಯಾಪಾರ, ಬಡ್ಡಿವ್ಯವಹಾರ ಇತ್ಯಾದಿಗಳಿಂದ ಜೀವನ ನಡೆಸಬಹುದು. ೪) ಶೂದ್ರನು ತ್ರಿವರ್ಣದವರ ಸೇವೆಯಿಂದಲೇ ಜೀವಿಸಬೇಕು. ೫) ಚತುರ್ವರ್ಣಕ್ಕೆ ಸೇರದ ಮಿಶ್ರಜಾತೀಯರು ಯೋಗ್ಯರಾದ ತಮ್ಮ ಕುಲವೃದ್ಧರು ನಡೆದಂತೆ ನಡೆಯಬೇಕು. ಬ್ರಾಹ್ಮಣಾದಿವರ್ಣದವರು ಕ್ರಮವಾಗಿ ಪೂಜ್ಯರು. ಅವರಲ್ಲಿಯೂ ಭಗದ್ಭಕ್ತ್ಯಾದಿಗಳ ಅನುಸಾರವಾಗಿ ಪೂಜಾರ್ಹರು. ಉತ್ತಮ ವರ್ಣದವನಾದರೂ ಶ್ರೀಹರಿಭಕ್ತನಲ್ಲದಿದ್ದರೆ, ಪೂಜಾರ್ಹನಾಗಲಾರನು. ವರ್ಣಾಧಮನಾದರೂ ಭಕ್ತನಾದರೆ ಪೂಜಾರ್ಹನು. ಆದರೆ ಅವನು ಪ್ರಣಾಮ, ಪಂಕ್ತಿಗಳನ್ನು ಬಿಟ್ಟು ಉಳಿದ ಗೌರವಗಳಿಗೆ ಅರ್ಹನು. ಅಂತು ಶ್ರೀಹರಿಭಕ್ತಿ ವಿಶೇಷಾನುಸಾರವಾಗಿ ವಿಶೇಷ ಆದರ ವಿಶ್ವಾಸಗಳಿಗೆ ಅರ್ಹರು.

ಜ್ಞಾಪನಂ ಕ್ಷತ್ರಿಯಾಣಾಂ ಚ ಧರ್ಮೋ ವಿಪ್ರಾಭ್ಯನುಜ್ಞಯಾ ।
ತದಭಾವೇತು ವೈಶ್ಯಾನಾಂ ಶೂದ್ರಸ್ಯ ಪರಮಾಪದಿ ॥೨೯॥

ವಿಪ್ರಾಭ್ಯನುಜ್ಞಯಾ — ಬ್ರಾಹ್ಮಣರ ಅನುಮತಿಯಿಂದ, ಜ್ಞಾಪನಂ – ತತ್ತ್ವೋಪದೇಶ ಮಾಡುವದು (ಉಪದೇಶಕ ಬ್ರಾಹ್ಮಣರಿಲ್ಲದಿರುವಾಗ), ಕ್ಷತ್ರಿಯಾಣಾಂ ಚ ಧರ್ಮಃ— ಕ್ಷತ್ರಿಯರಿಗೂ ಕರ್ತವ್ಯವು. ತದಭಾವೇ — ಅಂಥ ಕ್ಷತ್ರಿಯನೂ ಇಲ್ಲದಿರುವಾಗ, ವೈಶ್ಯಸ್ಯ – ಬ್ರಾಹ್ಮಣರ ಅನುಮತಿಯಂತೆ ವೈಶ್ಯನ ಕರ್ತವ್ಯವು. ಪರಮಾಪದಿ – ಅಂಥ ವೈಶ್ಯನೂ ಇಲ್ಲದಿರುವಾಗ, ಶೂದ್ರಸ್ಯ — ಶೂದ್ರನಿಗೆ, ವಿಜ್ಞಾಪನಂ – ತನ್ನ ಪತ್ನೀ ಪುತ್ರಾದಿಗಳಿಗೆ ಉಪದೇಶ ಮಾಡುವದು ಕರ್ತವ್ಯವು. ॥೨೯॥

"ವರ್ಣೇಷ್ವಜ್ಞೇಷ್ವವರ್ಣಸ್ತು ನಜ್ಞಾನೀ ಸ್ಯಾತ್ ಕಥಂಚನ" ।
ಇತಿ ಶ್ರುತೇರವರ್ಣಸ್ಯ ಜ್ಞಾಪನ ಪ್ರಾಪ್ತಿರೇವ ನ ॥೩೦॥

ವರ್ಣೇಷು – ಚತುರ್ವರ್ಣದವರು, ಅಜ್ಞೇಷುಸತ್ಸು — ಅಜ್ಞರಾದರೆ, ಅವರ್ಣಃ — ವರ್ಣಬಾಹ್ಯನು, ಕಥಂಚನ ಜ್ಞಾನೀ ನ ಸ್ಯಾತ್ತು— ಹೇಗೂ ಜ್ಞಾನಿಯೇ ಆಗಲಾರ. ಇತಿ ಶ್ರುತೇಃ – ಈ ರೀತಿ ವೇದ ವಾಕ್ಯವಿದ್ದದ್ದರಿಂದ, ಅವರ್ಣಸ್ಯ ಜ್ಞಾಪನ ಪ್ರಾಪ್ತಿರೇವ ನ – ವರ್ಣ ಬಾಹ್ಯನು ಉಪದೇಶ ಮಾಡುವ ಪ್ರಸಂಗವೇ ಬರಲಾರದು. ಸ್ವಯಂ ಜ್ಞಾನವಿಲ್ಲದವನು ಹೇಗೆ ಉಪದೇಶಿಸಿಯಾನು ? ॥೩೦॥

ಜ್ಞೇಯಂ ಸರ್ವಂತ್ರಿವರ್ಣಸ್ಥೈ ಸ್ತ್ರೀಭಿರ್ವೇದಾನ್ ವಿನಾऽಖಿಲಂ ।
ಸ್ವೀಯಪುನ್ನಿಯತಿಃ ಸ್ತ್ರೀಣಾಂ ಸ್ವದಾರನಿಯತಿರ್ನೃಣಾಂ ॥೩೧॥

ತ್ರಿವರ್ಣಸ್ಥೈಃ- ತ್ರಿವರ್ಣೀಯ ಪುರುಷರಿಂದ, ಸರ್ವಂಜ್ಞೇಯಂ–ವೇದಾದಿ ಸಕಲ ಶಾಸ್ತ್ರವು ತಿಳಿಯಲು ಯೋಗ್ಯವು, ಸ್ತ್ರೀಭಿಃ— (ತ್ರಿವರ್ಣೀಯರಾದರೂಕೂಡ) ಸ್ತ್ರೀಯರಿಂದ, ವೇದಾನ್ ವಿನಾ ಅಖಿಲಂ ಜ್ಞೇಯಂ — ವೇದಗಳನ್ನು ಬಿಟ್ಟು ಉಳಿದದ್ದು ತಿಳಿಯಲು ಯೋಗ್ಯವು. ಸ್ತ್ರೀಣಾಂ – ಸ್ತ್ರೀಯರಿಗೆ, ಸ್ವೀಯಪುನ್ನಿಯತಿಃ— ತಮ್ಮ ತಮ್ಮ ಪತಿಗಳಿಂದಲೇ ಕೂಡಿರುವದು, ಧರ್ಮಃ- ನಿಯಮವು. ನೃಣಾಂ — ಪುರುಷರಿಗೆ, ಸ್ವದಾರನಿಯತಿಃ— ತಮ್ಮ ತಮ್ಮ ಪತ್ನಿಯರಿಂದಲೇ ಕೂಡಿರುವದು, ಧರ್ಮಃ – ನಿಯಮವು. (ಮುಂದಿನ ಶ್ಲೋಕದಲ್ಲಿಯ ಧರ್ಮಃ ಎಂಬ ಪದಕ್ಕೆ ಇಲ್ಲಿಯೇ ಅನ್ವಯ) ॥೩೧॥

ಧರ್ಮೋ ಗುಣೋತ್ತಮಾನಾಂ ತು ಸ್ಮೃತ್ಯೈವಾಂಧಂತಮೋ ವ್ರಜೇತ್ ।
ಗುಣ ಸರ್ವಸ್ವಹಾನಿಃ ಸ್ಯಾದುತ್ತರೋತ್ತರತೋऽತ್ರ ಚ ॥೩೨॥

ಗುಣೋತ್ತಮಾನಾಂ- ಶ್ರೀಹರಿಭಕ್ತ್ಯಾದಿ ಗುಣಗಳಿಂದ ಉತ್ತಮರಾದ ದೇವ ಋಷ್ಯಾದಿ ಸ್ತ್ರೀಯರ ಒಗ್ಗೆ,ಸ್ಮೃತ್ಯಾ ಏವ — ಮನಸ್ಸಿನಲ್ಲಿ ಇಚ್ಛಾ ಮಾಡುವದರಿಂದಲೇ, ಅಂಧಂ ತಮಃ ವ್ರಜೇತ್ – ಅಂಧಂತಮಸ್ಸನ್ನು ಹೊಂದಬೇಕಾಗುತ್ತದೆ. ಅತ್ರಚ – ದೇವ ಋಷಿ ಸ್ತ್ರೀಯರನ್ನು ಬಿಟ್ಟು ಇಲ್ಲಿಯ ಮಾನುಷ್ಯ ಸ್ತ್ರೀಯರಲ್ಲಿಯೂ ಕೂಡ, ಉತ್ತರೋತ್ತರತಃ— ತಮಗಿಂತ ಉತ್ತಮ ಸ್ತ್ರೀಯರ ಪಹಾರಾದಿಗಳ ದೆಶೆಯಿಂದ, ಗುಣ ಸರ್ವಸ್ವಹಾನಿಃ – ಜ್ಞಾನಾದಿ ಸರ್ವಗುಣ ಹಾನಿಯಾಗಿ, ಸ್ಯಾತ್ – ಆಗುತ್ತದೆ. ॥೩೨॥

ಅಧೋऽಧೋऽಧಿಕದೋಷಃ ಸ್ಯಾತ್ ಸ್ತ್ರೀಣಾಮನ್ಯತ್ರ ಮುಧ್ಯತಃ ।
ವೇದಾ ಅಸ್ಮೃತ್ತಮು ಸ್ತ್ರೀಭಿಃ ಕೃಷ್ಣಾದ್ಯಾಭಿರಿವಾಖಿಲಾಃ ॥೩೩॥

ಅವ— ೧) ಸ್ತ್ರೀಯರೂ ಪರಪುರುಷ ಸಂಗಮಾಡುವದರಿಂದ ದುಷ್ಪಫಲಬೋಗಿಗಳಾಗುತ್ತಾರೆ ಎಂದೂ ಇಲ್ಲಿ ತಿಳಿಸುತ್ತಾರೆ ಮತ್ತು ೨) ಉತ್ತಮ ಸ್ತ್ರೀಯರಿಗೆ ವೇದಾಧಿಕಾರವುಂಟು ಎಂಬುವದನ್ನು ತಿಳಿಸುತ್ತಾರೆ:

ಸ್ತ್ರೀಣಾಂ – ಸ್ತ್ರೀಯರಿಗೆ, ಅನ್ಯತ್ರ—ತಮ್ಮ ಪತಿಯ ದೆಶೆಯಿಂದ ಬೇರೆ ಪುರುಷರ ಮುಧ್ಯದಲ್ಲಿ, ಮುಧ್ಯತಃ— ಸ್ವ ಪತಿಸಮಾನನನ್ನು ಆರಂಭಿಸಿ, ಅಧಃ ಅಧಃ— ನೀಚ ನೀಚನಾದಹಾಗೆ, ಅಧಿಕ ದೋಷಃ ಸ್ಯಾತ್ – ಹೆಚ್ಚು ಹೆಚ್ಚು ದೋಷವು ಬರುವದು. ಕೃಷ್ಣಾದ್ಯಾಭಿಃ ಉತ್ತಮ ಸ್ತ್ರೀಭಿಃ – ದ್ರೌಪಡಿಯೇ ಮೊದಲಾದ ಉತ್ತಮ ಸ್ತ್ರೀಯರಿಂದ, ಅಖಿಲಾಃ ವೇದಾಃ ಅಪಿ– ಎಲ್ಲ ವೇದಾದಿಗಳೂ ಕೂಡ, ಜ್ಞೇಯಾಃ – ಜ್ಞೇಯಂಗಳಾಂ. ॥೩೩॥

ದೇವ್ಯೋ ಮುನಿಸ್ತ್ರಿಯಶ್ಚೈವ ನರಾದಿಕುಲಜಾ ಅಪಿ ।
ಉತ್ತಮಾ ಇತಿ ವಿಜ್ಞೇಯಾಸ್ಸಚ್ಛೂದ್ರೈರಪ್ಯವೈದಿಕಂ ।
ಜ್ಞೇಯಮನ್ಯೈರ್ಹರೇರ್ನಾಮ ನಿಜಕರ್ತವ್ಯಮೇವ ಚ ॥೩೪॥

ದೇವ್ಯಃ– ದೇವಸ್ತ್ರೀಯರು, ಚ– ಮತ್ತು, ಮುನಿಸ್ತ್ರಿಯಃ–ಮುನಿಸ್ತ್ರೀಯರು, ನರಾದಿಕುಲಜಾ ಅಪಿ–ನರವಾನರಾದಿ ಕುಲದಲ್ಲಿ ಹುಟ್ಟಿದರೂ ಕೂಡ, ಉತ್ತಮಾ ಏವ ಇತಿ–ಉತ್ತಮರೇ ಎಂದು, ವಿಜ್ಞೇಯಾಃ – ತಿಳಿಯಲ್ಪಡಬೇಕು. ಸಚ್ಛೂದ್ರೈರಪಿ– ಯೋಗ್ಯರಾದ ಶೂದ್ರರಿಂದಲೂ ಕೂಡ, ಅವೈದಿಕಂ ಜ್ಞೇಯಂ- ವೇದವ್ಯತಿರಿಕ್ತ ಪುರಾಣಾದಿಗಳು ತಿಳಿಯಲ್ಪಡಬೇಕು. ಅನ್ಯೈಃ—ವರ್ಣಬಾಹ್ಯರಿಂದ, ಹರೇಃ ನಾಮ ಏವ–ಭಗವನ್ನಾಮ ಗ್ರಹಣವೇ, ನಿಜಕರ್ತವ್ಯಂ–ತಮ್ಮ ಕರ್ತವ್ಯವು. ॥೩೪॥

ಸರ್ವಥಾऽಂಧಂ ತಮೋ ಯಾತಿ ನರಂ ಸದೃಶಮೇವ ವಾ ।
ಯೋ ವಿಷ್ಣೋರ್ವನ್ಯತೇ ಕಿಂಚಿದ್ ಗುಣೈಃ ಕೈಶ್ಚಿದಪಿ ಕ್ವಚಿತ್ ॥೩೫॥

ಯಃ–ಯಾವನು, ಕಿಂಚಿತ್—ಯಾವದೇ ವಸ್ತುವನ್ನು ಕೈಶ್ಚಿತ್ ಗುಣೈಃ ಅಪಿ– ಕೆಲವು ಗುಣಗಳಿಂದಲೂ ಕೂಡ, ಕ್ವಚಿತ್ – ಒಮ್ಮೊಕೂಡ, ವಿಷ್ಣೋಃ ವರಂ, ಸದೃಶಂ ವಾ— ಶ್ರೀನಾರಾಯಣನಿಗಿಂತ ಉತ್ತಮವನ್ನಾಗಿ, ಅವನಿಗೆ ಸಮವನ್ನಾಗಿಯಾದರೂ, ಮನ್ಯತೇ – ತಿಳಿಯುತ್ತಾನೋ, ಸಃ – ಅವನು, ಸರ್ವಥಾ ಅಂಧಂ ತಮಃ ವ್ರಜೇದೇವ – ಅವಶ್ಯವಾಗಿ ಅಂಧಂತಮಸ್ಸಿಗೆ ಹೋಗಿಯೇ ಹೋಗುವನು. ॥೩೫॥

ಬ್ರಹ್ಮೇಶಾನಾದಿಕಮಪಿ ಭೇದಂ ಯೋವಾನ ಮನ್ಯತೇ ॥
ಭೇದದೃಕ್ ತದ್ಗುಣಾದೌ ಚ ಪ್ರಾದುರ್ಭಾವಗತೇऽಪಿ ಯಃ ॥೩೬॥

(ಯಃ) ಬ್ರಹ್ಮೇಶಾನಾದಿಕಮಪಿ – (ಯಾವನು) ಬ್ರಹ್ಮರುದ್ರಾದಿಗಳನ್ನು ವಿಷ್ಣುವಿನಿಗಿಂತ ಉತ್ತಮ ಸಮ ಎಂದೂ ತಿಳಿಯುವನೋ, ಭೇದಂ ವಾ ನ ಮನ್ಯತೇ— ದೇವರಿಗೂ ಜಗತ್ತಿಗೂ ಭೇದವನ್ನು ತಿಳಿಯುವದಿಲ್ಲವೋ ಚ—ಮತ್ತು, ತದ್ಗುಣಾದೌ – ಅವನ(ಶ್ರೀಹರಿಯ) ಗುಣಕ್ರಿಯಾದಿಗಳಲ್ಲಿ, ಭೇದದೃಕ್–ಭೇದವನ್ನು ತಿಳಿಯುವನೋ, ಅವನು, ಅಂಧಂತಮಃ ವ್ರಜೇದೇವ – ಅಂಧಂತಮಸ್ಸನ್ನು ಹೊಂದುತ್ತಾನೆ. ॥೩೬॥ (ವಿ.ಸೂ– ಈ ಶ್ಲೋಕದಲ್ಲಿರುವ ಪ್ರಾದುರ್ಭಾವಗತೇऽಪಿ) ಎಂಬ ಪದವನ್ನು ಮುಂದಿನ ಶ್ಲೋಕಕ್ಕೆ ಅನ್ವಯಿಸಿಕೊಳ್ಳಬೇಕು)

ಪ್ರಾಕೃತಂ ದೇಹಮುತವಾ ದುಃಖಾಜ್ಞಾನಶ್ರಮಾದಿಕಂ ॥
ಮನ್ಯತೇ ತಾರತಮ್ಯಂ ವಾ ತದ್ಭಕ್ತೇಷ್ವನ್ಯಥೈವ ಯಃ ॥೩೭॥

ಯಃ ಅಪಿ— ಯಾವನು, ಪ್ರಾದುರ್ಭಾವಗತೇ ಅಪಿ— ಅವತಾರರೂಪದಲ್ಲಿಯೂ ಕೂಡ, ಪ್ರಾಕೃತಂ ದೇಹಂ— ಪ್ರಾಕೃತದೇಹವನ್ನು,ಅಥವಾ–ಅಥವಾ,ದುಃಖಾ,ಜ್ಞಾನಶ್ರಮಾದಿಕಂ—ದುಃಖ,ಅಜ್ಞಾನ, ಶ್ರಮಮೊದಲಾದ ದೋಷಗಳನ್ನು, ತಾರತಮ್ಯಂ ವಾ – ಅವತಾರರೂಪಗಳಲ್ಲಿ ತಾರತಮ್ಯವನ್ನಾಗಲೀ, ಮನ್ಯತೇ– ತಿಳಿಯುತ್ತಾನೋ, ತದ್ಭಕ್ತೇಷು–ಭಗವದ್ಭಕ್ತರಲ್ಲಿ, ಅನ್ಯಥಾ ಏವ – ತಾರತಮ್ಯವಿಲ್ಲೆಂದಾಗಲೀ, ವಿಪರೀತ ತಾರತಮ್ಯವನ್ನಾಗಲೀ,ಮನ್ಯತೇ– ತಿಳಿಯುತ್ತಾನೋ,(ಸಃಚ– ಅವನೂ ಕೂಡ, ಅಂಧಂತಮಸ್ಸಿಗೆ ಹೋಗುತ್ತಾನೆ). ॥೩೭॥

ಮನೋವಾಕ್ತನುಭಿರ್ಯೋ ವಾ ತಸ್ಮಿಂಸ್ತದ್ಭಕ್ತ ಏವ ವಾ ॥
ವಿರೋಧಕೃದ್ ವಿಷ್ಣ್ವಧೀನಾದನ್ಯತ್ ಕಿಂಚಿದಪಿ ಸ್ಮರನ್ ॥೩೮॥

ಯೋವಾ—ಮತ್ತೆ ಯಾವನು, ಮನೋವಾಕ್ತನುಭಿಃ – ಮನಸ್ಸು ವಾಕ್ಕಾಯಗಳಿಂದ, ತಸ್ಮಿನ್ ತದ್ಭಕ್ತೇಷುವಾ– ಆ ದೇವರಲ್ಲಿ ದೇವರಭಕ್ತರಲ್ಲಾಗಲೀ, ವಿರೋಧಕೃತ್ – ವಿರೋಧ ಮಾಡುವನೋ, ಕಿಂಚಿತ್—ಯಾವದೇ ಪದಾರ್ಥವನ್ನು, ವಿಷ್ಣ್ವಧೀನಾತ್ ಅನ್ಯತ್—ಶ್ರೀವಿಷ್ಣುವಿನ ಅಧೀನಕ್ಕಿಂತ ಬೇರೆಯನ್ನಾಗಿ ಅಂದರೆ ಶ್ರೀವಿಷ್ಣ್ವಧೀನವಲ್ಲದ್ದನ್ನಾಗಿ, ಸ್ಮರನ್— ಸ್ಮರಿಸುವವನೋ (ಸಃ ಅಂಧಂತಮಃ ಯಾತಿ – ಅವನು ಅಂಧಂತಮಸ್ಸನ್ನು ಹೊಂದುತ್ತಾನೆ.) ॥೩೮॥

ಅನ್ಯಾಧೀನತ್ವವಿಜ್ಞಾನಸ್ಯ ಸರ್ವಪೂರ್ತ್ಯವಿದೇವ ಚ ॥
ಭಕ್ತಿಹೀನಶ್ಚ ತೇ ಸರ್ವೇ ತಮೋಽಂಧಂ ಯಾಂತ್ಯಸಂಶಯಂ ॥೩೯॥

ಅಸ್ಯ— ಈ ಶ್ರೀನಾರಾಯಣನಿಗೆ, ಅನ್ಯಾಧೀನತ್ವವಿತ್ - ಪರಾಧೀನತ್ವವನ್ನು ತಿಳಿದವನು, ಸರ್ವಪೂರ್ತ್ಯವಿದೇವ ಚ— ಮತ್ತು ಸರ್ವ ಗುಣಪೂರ್ಣತ್ವವನ್ನು ತಿಳಿಯದವನು, ಭಕ್ತಿಹೀನಶ್ಚ – ಶ್ರೀಹರಿ ಭಕ್ತಿಹೀನನಾದವನು, ಹೀಗೆ ತೇ ಸರ್ವೇ – ಅವರೆಲ್ಲರು, ಅಸಂಶಯಂ – ನಿಶ್ಚಯವಾಗಿ, ಅಂಧಂತಮಃ ಯಾಂತಿ – ಅಂಧಂತಮಸ್ಸನ್ನು ಹೊಂದುತ್ತಾರೆ. ॥೩೯॥

ತತ್ತ್ವೇ ಸಂಶಯಯುಕ್ತಾ ಯೇ ಸರ್ವೇ ತೇ ನಿರಯೋಪಗಾಃ ॥
ದೋಷೇಭ್ಯಸ್ತೇ ಗುಣಾಧಿಕ್ಯೇ ನೈವ ಯಾಂತ್ಯಧಮಾಂ ಗತಿಂ ॥
ಗುಣದೋಷಸಾಮ್ಯೇಮಾನುಷ್ಯಂ ಸರ್ವದೈವ ಪುನಃ ಪುನಃ ॥೪೦॥

ಯೇ— ಯಾರು, ತತ್ತ್ವೇ – ತತ್ತ್ವ (ಶ್ರೀ ವಿಷ್ಣು ಸರ್ವೋತ್ತಮತ್ವ ಮೊದಲಾದವು) ಗಳ ಬಗ್ಗೆ, ಸಂಶಯಯುಕ್ತಾಃ— ಸಂಶಯದಿಂದ ಕೂಡಿದವರೋ, ತೇ ಸರ್ವೇ - ಅವರೆಲ್ಲರೂ, ನಿರಯೋಪಗಾಃ – ನಿತ್ಯ ನರಕವನ್ನು ಹೊಂದುವವರು, ದೋಷೇಭ್ಯಃ - ಸಂಶಯಾದಿ ದೋಷಗಳಿಗಿಂತ, ಗುಣಾಧಿಕ್ಯೇ—ಜ್ಞಾನಾದಿ ಗುಣಗಳು ಹೆಚ್ಚು ಇದ್ದರೆ, ಅಧಮಾಂ ಗತಿಂ – ತಮಸ್ಸನ್ನು, ನೈವ ಯಾಂತಿ—ಹೊಂದುವದಿಲ್ಲ. ಗುಣದೋಷಸಾಮ್ಯೇ— ಗುಣದೋಷಗಳು ಸಮವಿದ್ದರೆ, ಸರ್ವದಾ— ಯಾವಾಗಲೂ, ಪುನಃ ಪುನಃ—ಮತ್ತೂ ಮತ್ತೂ, ಮಾನುಷ್ಯಂ— ಮನುಷ್ಯಜನ್ಮವನ್ನೇ ಹೊಂದುತ್ತಾರೆ. ॥೪೦॥

ಯಾವದ್ದೋಷಕ್ಷಯಶ್ಚೋರ್ಧ್ವಗತಿಃ ಕ್ರಮಶ ಏವತು ।
ಸರ್ವದೋಷಕ್ಷಯೇ ಮುಕ್ತಿರಾತ್ಮಯೋಗ್ಯಾನುಸಾರತಃ ॥೪೧॥

ಭಕ್ತಿಜ್ಞಾನೋನ್ನತಾವೇವ ಸ್ವರ್ಗಶ್ಚ ಶುಭಕರ್ಮಣಃ ।
ವಿಷ್ಣುವೈಷ್ಣವವಾಕ್ಯೇನ ಹಾನಿಃ ಪಾಪಸ್ಯ ಕರ್ಮಣಃ ॥೪೨॥

ಯಾವತ್—ಎಷ್ಟು ಎಷ್ಟು, ದೋಷಕ್ಷಯಃ – ದೋಷಗಳ ನಾಶವಾಗುವದೋ, ತಾವತ್ – ಅಷ್ಟು, ಕ್ರಮಶಃ — ಕ್ರಮವಾಗಿ, ಊರ್ಧ್ವಗತಿಃ – ಊರ್ಧ್ವಗತಿಯು ಆಗುವದು, ಸರ್ವದೋಷಕ್ಷಯೇ – ಎಲ್ಲ ದೋಷ ನಾಶವಾದಾಗ, ಆತ್ಮಯೋಗ್ಯಾನುಸಾರತಃ ಭಕ್ತಿಜ್ಞಾನೋನ್ನತಾವೇವ – ತನ್ನ ಯೋಗ್ಯತಾನುಸಾರ, ಭಕ್ತಿ ಜ್ಞಾನಾದಿ ಸದ್ಗುಣಗಳು ಹೆಚ್ಚಾದಂತೆ, ಮುಕ್ತಿಃ – ಮೋಕ್ಷವು ಆಗುವದು, ಶುಭ ಕರ್ಮಣಃ—ಶುಭ ಕರ್ಮದಿಂದ, ಸ್ವರ್ಗಃ – ಸ್ವರ್ಗಲೋಕವು ಆಗುವದು, ವಿಷ್ಣುವೈಷ್ಣವವಾಕ್ಯೇನ—ಭಗವಂತನ ಅವನ ಭಕ್ತರ ವಾಕ್ಯದಿಂದ, ಪಾಪಸ್ಯ ಕರ್ಮಣಃ–ಪಾಪಕರ್ಮದ,ಹಾನಿಃ— ಹಾನಿಯು ಆಗುವದು. ॥೪೧-೪೨॥

ಇತ್ಯಾದಿಧರ್ಮಸರ್ವಸ್ವಂ ಭೀಷ್ಮಸ್ಥೇನೈವ ವಿಷ್ಣುನಾ ।
ಪಾರ್ಥಾನಾಂ ಗದಿತಂತಚ್ಚ ಶ್ರುತ್ವಾ ಧರ್ಮಸುತೋಽನುಜಾನ್ ॥
ಪಪ್ರಚ್ಛ ವಿದುರಂಚೈವ ಸಾರಂ ಧರ್ಮಾದಿಷುತ್ರಿಷು ॥೪೩॥

ಇತ್ಯಾದಿ ಧರ್ಮಸರ್ವಸ್ವಂ—ಹೀಗೆ ಎಲ್ಲ ಧರ್ಮಸಾರವು, ಭೀಷ್ಮಸ್ಥೇನ ವಿಷ್ಣುನಾ ಏವ —ಶ್ರೀ ಭೀಷ್ಮರಲ್ಲಿರುವ ಶ್ರೀ ಹರಿಯಿಂದಲೇ, ಪಾರ್ಥಾನಾಂ — ಪಾಂಡವರಿಗೆ, ಗದಿತಂ – ಹೇಳಲ್ಪಟ್ಟಿತು, ತಚ್ಚ ಶ್ರುತ್ವಾ – ಅದನ್ನೆಲ್ಲ ಕೇಳಿ,

ಧರ್ಮಸುತಃ–ಧರ್ಮರಾಜನು, ಅನುಜಾನ್–ತಮ್ಮಂದಿರನ್ನು, ವಿದುರಂ ಚ– ವಿದುರರನ್ನು ಕುರಿತೂ ಕೂಡ, ಧರ್ಮಾದಿಷು– ಧರ್ಮ ಮೊದಲಾದ ಮೂರರಲ್ಲಿ, ಸಾರಂ–ಶ್ರೇಷ್ಠವಾದದ್ದು ಯಾವದು ಎಂಬುದರ ಬಗ್ಗೆ, ಪಪ್ರಚ್ಛ–ಪ್ರಶ್ನಿಸಿದನು, ॥೪೩॥

ಅಹಕ್ಷತ್ತಾ ಧರ್ಮಮೇವ ಸಾರಮರ್ಥಂಚ ಮಧ್ಯಮಂ ।
ನೀಚಂ ಕಾಮಂ ನಿಷ್ಫಲತ್ವಾದರ್ಥಮೇವಾರ್ಜುನೋಽಬ್ರವೀತ್ ॥೪೪॥

ಸಾರಂ ಸದ್ವಿವಿಧೋಜ್ಞೇಯೋದೈವೋ ಮಾನುಷ ಏವಚ ।
ದೈವೋ ವಿದ್ಯಾ ಹಿರಣ್ಯಾದಿರ್ಮಾನುಷಃ ಪರಿಕೀರ್ತಿತಃ ॥೪೫॥

ಕ್ಷತ್ತಾ – ವಿದುರರು, ಧರ್ಮಮೇವ ಸಾರಂ – ಧರ್ಮವನ್ನೇ ಶ್ರೇಷ್ಠವಾದದ್ದನ್ನಾಗಿ, ಅರ್ಥಂ ಚ ಮಧ್ಯಮಂ– ಅರ್ಥವನ್ನು ಮಧ್ಯಮವನ್ನಾಗಿ, ನಿಷ್ಫಲತ್ವಾತ್ – ವಿಫಲವಾದ್ದರಿಂದ, ಕಾಮಂ ನೀಚಂ – ಕಾಮವನ್ನು ಅಧಮವನ್ನಾಗಿ, ಆಹ – ಹೇಳಿದರು, ಅರ್ಜುನಃ – ಅರ್ಜುನನು ಅರ್ಥಮೇವ— ಅರ್ಥವನ್ನೇ, ಸಾರಂ – ಶ್ರೇಷ್ಠವಾದದ್ದನ್ನಾಗಿ, ಅಬ್ರವೀತ್– ಹೇಳಿದನು, ಸಃ— ಆ ಅರ್ಥವೂ, ದೈವಃ ಮಾನುಷಃ ಇತಿ – ದೈವವು ಮಾನುಷವು ಎಂದು, ದ್ವಿವಿಧ ಏವ ಜ್ಞೇಯಃ– ಎರಡು ವಿಧದ್ದಾಗಿಯೇ ತಿಳಿಯಲ್ಪಡಬೇಕು, ದೈವಃ – ದೈವರೂಪವಾದ ಅರ್ಥವು, ವಿದ್ಯಾ – ಜ್ಞಾನವು, ಮಾನುಷಃ– ಮಾನುಷಾರ್ಥವು, ಹಿರಣ್ಯಾದಿಃ – ಭಂಗಾರ, ಬೆಳ್ಳಿ, ದುಡ್ಡು ಮೊದಲಾದ ಸಂಪತ್ತು, ಇತಿ– ಎಂದು, ಪರಿಕೀರ್ತಿತಃ– ಹೇಳಲ್ಪಡುತ್ತದೆ. ॥೪೪–೪೫॥

ಮಧ್ಯಮೋ ಧರ್ಮ ಏವಾತ್ರ ಸಾಧ್ಯಂ ಸಾಧನಮೇವಚ ।
ವಿದ್ಯಾಹ್ವಯೋಽರ್ಥೋ ಧರ್ಮಸ್ಯ ವಿದ್ಯಯೈವ ಚ ಮುಚ್ಯತೇ ॥೪೬॥

ಮಾನುಷೋಽರ್ಥೋಽಪಿ ವಿದ್ಯಾಯಾಃ ಕಾರಣಂ ಸುಪ್ರಯೋಜಿತಃ ।
ತುಷ್ಟೋಽರ್ಥೇನ ಗುರುರ್ಯಸ್ಮಾತ್ ಕೈವಲ್ಯಂ ದಾತುಮುಪ್ಯಲಂ ॥೪೭॥

ಅತ್ರ - ಈ ಮೂರರಲ್ಲಿ, ಧರ್ಮಃ ಏವ - ಧರ್ಮವೇ, ಮಧ್ಯಮಃ—ಮಧ್ಯಮ ಪುರುಷಾರ್ಥವು, ಎರಡೂ ತರಹದ ಅರ್ಥವು ಶ್ರೇಷ್ಠ. ಏಕೆಂದರೆ ಅವು ಧರ್ಮಸಾಧ್ಯವೂ, ಧರ್ಮ ಸಾಧನಗಳೂ ಆಗಿವೆ ಎಂದು ವಿವರಿಸುತ್ತಾರೆ – ವಿದ್ಯಾಹ್ವಯಃ ಅರ್ಥಃ— ವಿದ್ಯೆ ಎಂಬ ದೈವರೂಪ ಅರ್ಥವು, ಧರ್ಮಸ್ಯ ಸಾಧ್ಯಂ ಸಾಧನಂ ಚ – ಧರ್ಮಕ್ಕೆ ಸಾಧ್ಯವು, ಸಾಧನವೂ ಆಗಿದೆ. ಏಕೆಂದರೆ ಜ್ಞಾನಪೂರ್ವಕ ಕರ್ಮವನ್ನು ಆಚರಿಸಿದರೆ ಧರ್ಮವು ಹುಟ್ಟುವದರಿಂದ ವಿದ್ಯೆಯು ಸಾಧನವಾಯಿತು. 'ಕರ್ಮಣಾ ಜ್ಞಾನಮಾತನೋತಿ,' 'ತಪಸಾ ಬ್ರಹ್ಮ ವಿಜಿಜ್ಞಾಸಸ್ವ' ಇತ್ಯಾದಿ ಶ್ರುತಿಗಳನುಸಾರ ಕರ್ಮದಿಂದ ಶುದ್ಧಾಂತಃಕರಣನಾದವನಿಗೇ ಜ್ಞಾನ ಬರುವದರಿಂದ ವಿದ್ಯೆಯು ಸಾಧ್ಯವೂ ಆಯಿತು. ಚ – ಹಾಗು, ವಿದ್ಯಯೈವ ಮುಚ್ಯತೇ – ವಿದ್ಯೆಯಿಂದಲೇ ಸಂಸಾರ ಬಂಧನದಿಂದ ಬಿಡಿಸಲ್ಪಡುತ್ತಾನೆ. ಆದ್ದರಿಂದಲೂ ವಿದ್ಯೆಯೇ ಶ್ರೇಷ್ಠವು. ಮಾನುಷಃ ಅರ್ಥಃ ಅಪಿ ಸುಪ್ರಯೋಜಿತಃ – ಮಾನುಷಾರ್ಥವಾದ ಹಿರಣ್ಯಾದಿಯೂ ಕೂಡ, ಚೆನ್ನಾಗಿ ವಿನಿಯೋಗಿಸಲ್ಪಟ್ಟರೆ, ವಿದ್ಯಾಯಾಃ ಕಾರಣಂ – ವಿದ್ಯೆಗೆ ಕಾರಣವಾಗುವದು. ಜ್ಞಾನಿಗಳಾದ ವಿಷ್ಣುಭಕ್ತರಲ್ಲಿ ಶ್ರೀವಿಷ್ಣುಪ್ರೀತ್ಯರ್ಥವಾಗಿ ದ್ರವ್ಯವು ಕೊಡಲ್ಪಟ್ಟರೆ ಜ್ಞಾನಕ್ಕೆ ಕಾರಣವಾಗುವದು ಎಂದು ಭಾವ. ಕೈವಲ್ಯವನ್ನು ತೋರಿಸುತ್ತಾರೆ – ಅರ್ಥೇನ ತುಷ್ಟಃ – ದ್ರವ್ಯದಿಂದ ಸಂತುಷ್ಟನಾದ, ಗುರುಃ ಗುರುವು, ಕೈವಲ್ಯಂ ಅಪಿ ಮೋಕ್ಷವನ್ನೂ ಕೂಡ, ದಾತುಂ – ಕೊಡಲು, ಅಲಂ – ಸಮರ್ಥನು. ಅಂದ ಮೇಲೆ ಜ್ಞಾನವನ್ನು ಕೊಡುವನು ಎಂದು ಏನು ಹೇಳುವದು. ॥೪೬–೪೭॥

ಅವ– ಅರ್ಥವು ಧರ್ಮದ್ವಾರಾವೇ ಗುರು ಪ್ರೀತಿಕರವಾದ್ದರಿಂದ ಅದು ಹೇಗೇ ಶ್ರೇಷ್ಠ ಎಂಬ ಶಂಕೆಗೆ ಉತ್ತರವನ್ನು ಹೇಳುತ್ತಾರೆ –

ಧರ್ಮಾರ್ಥತಾಂ ವಿನಾಪ್ಯರ್ಥೈಃ ತುಷ್ಯೇಯುರ್ಗುರುದೇವತಾಃ।
ಯದ್ಯನುದ್ದೇಶಿತೋ ಧರ್ಮೋ೭ಪ್ಯರ್ಥಮೇವಾನುಸಂವ್ರಜೇತ್ ॥೪೮॥

ಧರ್ಮಾರ್ಥತಾಂ ವಿನಾ೭ಪಿ – ಧರ್ಮಾರ್ಥವಾಗಿ ವಿನಿಯೋಗಿಸಲ್ಪಡದಿದ್ದಾಗ್ಯೂ ಕೂಡ; ಅರ್ಥೈಃ—ಸಾಕ್ಷಾತ್ ದ್ರವ್ಯದಿಂದಲೇ, ಗುರುದೇವತಾಃ ತುಷ್ಯೇಯುಃ – ಗುರುದೇವತೆಗಳು ಸಂತುಷ್ಟರಾಗುತ್ತಾರೆ. ಯದ್ಯಪಿ ಅನುದ್ದೇಶಿತಃ ಧರ್ಮಃ – ಧರ್ಮವು ಉದ್ದಿಷ್ಟವಾಗಿಲ್ಲದಿದ್ದರೂ ಕೂಡ, ಅರ್ಥಂ ಅನುಸಂವ್ರಜೇದೇವ—ಅರ್ಥಾನುಸಾರಿಯಾಗಿ ಬಂದೇ ಬರುವದು. ಶ್ರೀ ಹರಿ ಗುರುಗಳಲ್ಲಿ ದ್ರವ್ಯ ವಿನಿಯೋಗ ಮಾಡಿದಾಗ, ಪಾತ್ರರ ಸಾಮರ್ಥ್ಯದಿಂದ ಕಿಂಚಿತ್ ಪುಣ್ಯವು ಅನುದ್ದಿಷ್ಟವಾಗಿದ್ದರೂ ಕೂಡ ಬಂದೇ ಬರುವದು. ಅದು ಹೇಗೆಂದರೆ ಆಕಳನ್ನು ಕೊಂಡುಕೊಳ್ಳುವಾಗ ಹಗ್ಗವೂ ಬರುವಂತೆ ಬರುವದು. ಆದರೆ ಉದ್ದಿಷ್ಟವಲ್ಲವಾದ್ದರಿಂದ ಅದು ಅರ್ಥದ ಫಲವಲ್ಲ. ಆದ್ದರಿಂದಲೂ ಅರ್ಥವು ಶ್ರೇಷ್ಠವು ಎಂಬ ಭಾವವು. ॥೪೮॥

ಗುರುತಾರ್ಥಗತ್ಯೈವಸ್ಯಾತ್ ಕಾಮೋ(s)ಧಸ್ತಾ)ದ್ಯರ್ಥಾದ್ಧಿ ನಿಷ್ಫಲಃ।
ಯುವಾಮತ್ರ ವಿದಾಂ ಶ್ರೇಷ್ಠಾವರ್ಜುನೋಕ್ತಮನೂಚತುಃ ॥೪೯॥

ಗುರುತಾ – ಶ್ರೇಷ್ಠತ್ವವು, ಅರ್ಥಗತಾ ಏವ ಸ್ಯಾತ್—ಅರ್ಥದಲ್ಲಿರುವದೇ ಆಗಿದೆ, ಹಿ – ಯಾವ ಕಾರಣದಿಂದ, ಕಾಮಃ – ಕಾಮವು, ನಿಷ್ಫಲಃ – ವಿಫಲವೋ, ಆದ್ದರಿಂದ, ಅರ್ಥಾತ್ – ಅರ್ಥಕ್ಕಿಂತ (ಅಧಸ್ತಾತ್ — ನೀಚ ಸ್ಥಾನೀಯವು.) ವಿದಾಂ ಶ್ರೇಷ್ಠೌ ಯಮೌ —ಜ್ಞಾನಿಶ್ರೇಷ್ಠರಾದ ನಕುಲ–ಸಹದೇವರು, ಅರ್ಜುನೋಕ್ತಂ—ಅರ್ಜುನನಿಂದ ಉಕ್ತವಾದದ್ದನ್ನೇ, ಅನೂಚತುಃ—ನಮಗೂ ಸಮ್ಮತ ಎಂದು ಹೇಳಿದರು. ॥೪೯॥

ಭಾ. ಅ. ೨೯-೪೯ — ಉಪದೇಶಕನಾದ ಬ್ರಾಹ್ಮಣನಿಲ್ಲದಿದ್ದರೆ, ಕ್ಷತ್ರಿಯನು ಬ್ರಾಹ್ಮಣರ ಅನುಜ್ಞೆ ತೆಗೆದು ಕೊಂಡು ಉಪದೇಶ ಮಾಡಬೇಕು. ಅಂಥ ಕ್ಷತ್ರಿಯನೂ ಇಲ್ಲದಿದ್ದರೆ, ವೈಶ್ಯನು ಅವನೂ ಇಲ್ಲದಿದ್ದಲ್ಲಿ ಶೂದ್ರನು ಮಾಡಬೇಕು; ಶೂದ್ರನು ತನ್ನ ಪತ್ನೀ ಪುತ್ರಾದಿ ಅನುಗರಿಗೆ ಮಾಡಬೇಕು. ಚತುರ್ವರ್ಣದವರೂ ಇಲ್ಲದಿದ್ದಲ್ಲಿ ವರ್ಣಬಾಹ್ಯನು ಮಾಡಬಹುದೇ ಎಂದು ಪ್ರಶ್ನೆ ಬಂದರೆ, ಅವನಿಗೆ ಜ್ಞಾನವಾಗುವ ಅವಕಾಶವೇ ಇಲ್ಲದ್ದರಿಂದ ಅವನು ಉಪದೇಶ ಮಾಡಲು ಹೇಗೆ ಶಕ್ಯ? ಎಂದು ಶ್ರುತಿಯೇ ಆಕ್ಷೇಪಿಸುತ್ತಿರುವದರಿಂದ ಅವರಿಗೆ ಆ ಅಧಿಕಾರ ಇಲ್ಲ. ತ್ರಿವರ್ಣ ಪುರುಷರು ಎಲ್ಲ ಶಾಸ್ತ್ರಗಳನ್ನೂ ಓದಲು ಅರ್ಹರು. ಸ್ತ್ರೀಯರು ವೇದಗಳನ್ನು ಬಿಟ್ಟು ಎಲ್ಲವನ್ನೂ ತಿಳಿಯಬಹುದು. ದೇವ ಋಷ್ಯಾದಿ ಸ್ತ್ರೀಯರಂಥ ಉತ್ತಮ ಸ್ತ್ರೀಯರು ವೇದಗಳನ್ನೂ ತಿಳಿಯಲು ಅಧಿಕೃತರು. ಅವರು ನರಾದಿ ಯೋನಿಗಳಲ್ಲಿ ಅವತರಿಸಿದಾಗಲೂ ಅಧಿಕಾರ ಇದ್ದೇ ಇದೆ. ಅವರು ಎಲ್ಲೇ ಇದ್ದರೂ ಉತ್ತಮರೇ. ಸಚ್ಛೂದ್ರರಾದವರು (ಮುಂಕ್ತಿಯೋಗ್ಯರಾದವರೂ ಆದರೆ ಶೂದ್ರ ಯೋನಿಯಲ್ಲಿ ಬಂದವರು.) ವೇದವ್ಯತಿರಿಕ್ತ ಪುರಾಣಗಳನ್ನು ತಿಳಿಯಬಹುದು. ವರ್ಣಬಾಹ್ಯರಾದವರು ಭಗವನ್ನಾಮಕೀರ್ತನ ಮಾಡಬೇಕು. ಸ್ತ್ರೀಯರು–ಪುರುಷರು ತಮ್ಮ ತಮ್ಮ ಪತಿಪತ್ನೀ ನಿಯತರಾಗಿರಬೇಕು. ದೇವ ಋಷ್ಯಾದಿ ಉತ್ತಮ ಸ್ತ್ರೀಯರನ್ನು ಮನಸಾ ಅಪೇಕ್ಷಿಸಿದರೂ ಕೂಡ ಅಂಧಂತಮಸ್ಸಿಗೆ ಹೋಗಬೇಕಾಗುವದು (ತಮೋಯೋಗ್ಯನಾದರೆ). ಮನುಷ್ಯ ಸ್ತ್ರೀಯರಾದರೂ ಕೂಡ ಸ್ವೋತ್ತಮರಾಗಿದ್ದರೆ ಅವರ ಸಂಗ ಮಾಡಿದರೆ ಧರ್ಮಜ್ಞಾನಾದಿ ಎಲ್ಲ ಗುಣ ನಾಶವಾಗುವದು. ಆದ್ದರಿಂದ ಪರಸ್ತ್ರೀ ಸಂಗ ಮಾಡಲೇಬಾರದು. ಸ್ತ್ರೀಯರೂ ಕೂಡ ಪರಪುರುಷ ಸಂಗ ಮಾಡಲೇಕೂಡದು; ತಮ್ಮ ಪತಿಗೆ ಸ್ವರೂಪತಃ ಸಮನಾದರೂ ದೋಷ, ಅಧಮನಾದರೂ ಎಷ್ಟು ಎಷ್ಟು ಅಧಮನೋ ಅಷ್ಟು ಹೆಚ್ಚು ದೋಷ ಘಟಿಸುವದು. ಆದ್ದರಿಂದ ಪರಪುರುಷ ಸ್ಪರ್ಶವು ತ್ಯಾಜ್ಯವು.

೧) ಶ್ರೀಮನ್ನಾರಾಯಣನ ಸಾಮ್ಯವನ್ನು ಕೆಲವು ಗುಣದಿಂದ ಬ್ರಹ್ಮ ರುದ್ರಾದಿ ಇತರರಿಗೆ ಹೇಳಿದರೂ.

೨) ಶ್ರೀಮನ್ನಾರಾಯಣನಿಗಿಂತ ಉತ್ತಮತ್ವವನ್ನು ಇತರರಿಗೆ ಹೇಳಿದರೂ,

೩) ಶ್ರೀಮನ್ನಾರಾಯಣನ ಗುಣ, ಕ್ರಿಯೆಗಳಿಗೆ ಅವತಾರಗಳಿಗೆ ಭೇದ ತಿಳಿದರೂ,

೪) ಶ್ರೀ ಹರಿಗೆ ಮೂಲರೂಪ ಅವತಾರ ರೂಪಗಳಲ್ಲಿ ಪ್ರಾಕೃತ ದೇಹ, ಅಜ್ಞಾನ, ಶ್ರಮ, ದುಃಖ ಇತ್ಯಾದಿ ದೋಷಗಳನ್ನು ಚಿಂತಿಸಿದರೂ,

೫) ಶ್ರೀ ಹರಿಯ ಅವತಾರ ರೂಪಗಳಲ್ಲಿ ತಾರತಮ್ಯವನ್ನು ಚಿಂತಿಸಿದರೂ,

೬) ದೇವತೆಗಳಲ್ಲಿ ತಾರತಮ್ಯವಿಲ್ಲ ಎಂದೂ ತಿಳಿದರೂ, ಶಾಸ್ತ್ರಹೇಳುವ ತಾರತಮ್ಯಕ್ಕೆ ವಿರುದ್ಧವಾಗಿ ತಿಳಿದರೂ,

೭) ಭಗವಂತನ, ಭಗವದ್ಭಕ್ತರ ವಿರೋಧವನ್ನು ಮನಸ್ಸಿನಿಂದ, ವಾಗಿಂದ್ರಿಯದಿಂದ, ಕಾಯದಿಂದ ಮಾಡಿದರೂ,

೮) ಶ್ರೀ ವಿಷ್ಣುಭಿನ್ನವಾದ ಜಗತ್ತನ್ನು ಶ್ರೀ ವಿಷ್ಣ್ವಧೀನ ಇಲ್ಲವೆಂದು ತಿಳಿದರೂ,

೯) ಶ್ರೀ ವಿಷ್ಣುವಿನ ಗುಣ ಪೂರ್ಣತ್ವವನ್ನು ತಿಳಿಯದಿದ್ದರೂ, ಶ್ರೀ ವಿಷ್ಣುಭಕ್ತಿಹೀನನಾದರೂ ನಿಶ್ಚಿತವಾಗಿ ಅಂಧಂತಮಸ್ಸಿಗೆ ಹೋಗುತ್ತಾರೆ.

ತತ್ವಗಳ ಬಗ್ಗೆ ನಿತ್ಯ ಸಂಶಯ ಉಳ್ಳವರು ಅನರ್ಥವನ್ನೇ ಹೊಂದುವರು. ಒಬ್ಬರಲ್ಲಿರುವ ಗುಣದೋಷಗಳ ಪೈಕಿ ಗುಣಭಾಗವು ಹೆಚ್ಚಿದ್ದು, ದೋಷಭಾಗ ಕಮ್ಮಿ ಇರುವವರು ಅಧಮ ಗತಿಯನ್ನು ಹೊಂದುವದಿಲ್ಲ. ಗುಣದೋಷಗಳು ಸಮಾನವಾಗಿದ್ದರೆ ಪುನಃ ಪುನಃ ಸಂಸಾರಕ್ಕೆ ಬರುವರು. ಹೆಚ್ಚು ಹೆಚ್ಚು ದೋಷ ಪರಿಹಾರವಾದಾಗ ಉತ್ತಮ ಉತ್ತಮ ಲೋಕ ಪ್ರಾಪ್ತಿಯಾಗುವದು. ಎಲ್ಲ ದೋಷಗಳು ಹೋದಾಗ ತನ್ನ ಯೋಗ್ಯತಾನುಸಾರ ಭಕ್ತ್ಯಾದಿ ಗುಣದ ಉನ್ನತಿ ಬರುವಾಗ ಮೋಕ್ಷ ಪ್ರಾಪ್ತಿಯಾಗುವದು. ಸ್ವಕರ್ತವ್ಯ ನಿರತನಾದಾಗ ಅದರಿಂದ ತುಷ್ಟರಾದ ಭಗವಂತ ಅವನ ಭಕ್ತರಾದವರು ನಿನ್ನ ಪಾಪವೆಲ್ಲ ನಷ್ಟವಾಗಲಿ ಎಂದು ಹೇಳಿದರೂ ಎಲ್ಲ ಪಾಪಾಪನೋದನವಾಗುವದು. ಕೇವಲ ಕರ್ಮವು ಸ್ವರ್ಗಕ್ಕೆ ಸಾಧನವಾದೀತೇ ವಿನಃ ಮೋಕ್ಷಕ್ಕೆ ಅಲ್ಲ. ಇತ್ಯಾದಿ ಧರ್ಮ ತತ್ವ ರಹಸ್ಯಗಳನ್ನು ಶ್ರೀ ಭೀಷ್ಮಾಚಾರ್ಯರ ಒಳಗಿದ್ದ ಶ್ರೀಕೃಷ್ಣನಿಂದ ತಿಳಿದ ಯುಧಿಷ್ಠಿರನು ತನ್ನ ಸಹೋದರರನ್ನು ಪದುರರನ್ನು ಧರ್ಮಾದಿ ಪುರುಷಾರ್ಥತ್ರಯದಲ್ಲಿ ಯಾವದು ಶ್ರೇಷ್ಠ? ಎಂದು ಕೇಳಿದನು. ವಿದುರರು ಧರ್ಮವೇ ಶ್ರೇಷ್ಠ, ಅರ್ಥ ಮಧ್ಯಮ, ಕಾಮ ಅಧಮ ಎಂದರು. ಅರ್ಜುನನು ಅರ್ಥವೇ ಶ್ರೇಷ್ಠ, ಧರ್ಮ ಮಧ್ಯಮ, ಕಾಮ ಅಧಮ ಎಂದನು. ಅರ್ಥವೂ ದೈವ ಮಾನುಷ ಎಂದು ಎರಡು ವಿಧ. ದೈವಾರ್ಥವೆಂದರೆ ಜ್ಞಾನ, ಮಾನುಷಾರ್ಥವೆಂದರೆ ದ್ರವ್ಯಾದಿಗಳು. ಇವೆರಡೂ ಧರ್ಮಕ್ಕಿಂತಲೂ ಶ್ರೇಷ್ಠ ಎಂದನು. ಆಗ ನಕುಲ ಸಹದೇವರೂ ಕೂಡ 'ಅರ್ಜುನನು ಹೇಳಿದ್ದು ತಮಗೂ ಸಮ್ಮತ' ಎಂದರು.

ಅಥಾಹ ಭೀಮಃ ಪ್ರವರಸ್ತತ್ತ್ವದೃಶಾಂ ಸಮಸ್ತಾನಭಿಭಾಷ್ಯ ಹರ್ಷಾತ್ ।
ಸ್ಮಯನ್ನಕಾಮಾದತಿರಿಕ್ತಮುಸ್ತಿ ಕಿಂಚಿಚ್ಛುಭಂಕ್ವಾವರತಾಂ ಸ ಯಾಯಾತ್ ॥೫೦॥

ಅಥ – ಅರ್ಜುನಾದಿಗಳು ತಮ್ಮ ಅಭಿಪ್ರಾಯ ಹೇಳಿದ ನಂತರ, ಸತತ್ತ್ವದೃಶಾಂ ಪ್ರವರಃ – ಶ್ರೇಷ್ಠ ತತ್ತಜ್ಞಾನಿಗಳಲ್ಲಿ ಶ್ರೇಷ್ಠರಾದ, ಭೀಮಃ – ಶ್ರೀ ಭೀಮಸೇನ ದೇವರು, ಹರ್ಷಾತ್ – ಸಂತೋಷದಿಂದ, ಸಮಸ್ತಾನ್ ಅಭಿಭಾಷ್ಯ –

ಎಲ್ಲರನ್ನು ಸಂಬೋಧಿಸಿ, ಸ್ಮಯನ್ – ಆಶ್ಚರ್ಯಾಯುಕ್ತರನ್ನಾಗಿ ಮಾಡುತ್ತಾ, ಅಹ—ಈ ಮುಂದಿನಂತೆ ಹೇಳಿದರು, ಕಾಮಾತ್ ಅತಿರಿಕ್ತಂ ಕಿಂಚಿತ್ ಶುಭಂ – ಕಾಮುಕ್ಕಿಂತ ಬೇರೆಯಾದ ಯಾವದೂ ಶುಭವಾದ ಪುರುಷಾರ್ಥವು, ನ ಅಸ್ತಿ—ಇರುವದಿಲ್ಲ, ಸಃ – ಆ ಕಾಮವು, ಅವರತಾಂ – ಅಧಮತೆಯನ್ನು, ಕ್ವ ಯಾಯಾತ್ – ಹೇಗೆ ಹೊಂದೀತು. ? ॥೫೦॥

ಕಾಮ್ಯಂ ಹಿಕಾಮಾಭಿಧಮಾಹುರಾರ್ಯಾಃ ಕಾಮ್ಯೈಃ ಪುಮರ್ಥಾಸ್ಸಹಸಾಧನೈರ್ಯತ್ ।
ಅಕಾಮ್ಯತಾಂ ಯಾತ್ಯಪುಮರ್ಥವೇವ ಪುಮರ್ಥಿತ್ವಾದ್ಧಿ ಪುಮರ್ಥ ಉಕ್ತಃ ॥೫೧॥

ಕಾಮುವೇ ಶ್ರೇಷ್ಠವಾದದ್ದು ಎಂಬುದಕ್ಕೆ ಕಾರಣವನ್ನು ಹೇಳುತ್ತಾ 'ಕಾಮು' ಶಬ್ದಕ್ಕೆ ಎರಡು ಬೇರೆ ಬೇರೆ ಅರ್ಥಗಳಿವೆ. ಆ ಎರಡೂ ಅರ್ಥಗಳಲ್ಲಿಯೂ ಕಾಮುವೇ ಶ್ರೇಷ್ಠ ಎಂಬುದನ್ನು ತೋರಿಸುತ್ತಾರೆ.

ಹಿ—ಯಾವ ಕಾರಣದಿಂದ, ಆರ್ಯಾಃ—ಜ್ಞಾನಿಗಳು, ಕಾಮ್ಯಂ ಹಿ—ಇಚ್ಛಿಸಲ್ಪಟ್ಟ ಪದಾರ್ಥವನ್ನೇ, ಕಾಮಾಭಿಧಂ—ಕಾಮು ಎಂಬ ಹೆಸರುಳ್ಳದ್ದನ್ನಾಗಿ, ಆಹುಃ—ಹೇಳುವರೋ, ಪುಮರ್ಥಾ—ಪುರುಷಾರ್ಥಗಳು, ಸಾಧನೈಃ ಸಹ—ಅವುಗಳ ಸಾಧನಗಳಿಂದ ಸಹಿತವಾಗಿ, ಕಾಮ್ಯಾಃ—ಇಚ್ಛಿಸಲ್ಪಡುತ್ತವೆಯೋ, ಯತ್—ಏಕೆಂದರೆ, (ಯದಿ – ಒಂದು ವೇಳೆ), ಅಕಾಮ್ಯತಾಂ ಯಾತಿ—ಅಕಾಮ್ಯತೆಯನ್ನು ಹೊಂದಿದರೆ ಅಂದರೆ ಇಚ್ಛಿಸಲ್ಪಡದಿದ್ದರೆ, ತರ್ಹಿ – ಆ ಪಕ್ಷದಲ್ಲಿ (ಸಃ – ಅದು), ಅಪುಮರ್ಥ ಏವ ಭವೇತ್ – ಪುರುಷಾರ್ಥವಲ್ಲವೆಂದೇ ಆದೀತು, (ಹಿ—ಏಕೆಂದರೆ), ಪುಮರ್ಥಿತ್ವಾತ್ – ಚೇತನರಿಂದ ಅಪೇಕ್ಷಿಸಲ್ಪಡುವದರಿಂದ, ಪುಮರ್ಥ ಇತಿ – ಪುರುಷಾರ್ಥ ಎಂದು, ಉಕ್ತಃ – ಹೇಳಿಸಿಕೊಳ್ಳಲ್ಪಡುವದು. ಆದ್ದರಿಂದ ಪುರುಷಾರ್ಥಗಳು ಅವುಗಳ ಸಾಧನಗಳು ಎಲ್ಲವೂ ಕಾಮು ಶಬ್ದದಿಂದ ಕರಿಸಿಕೊಳ್ಳಲ್ಪಡುತ್ತವೆ. ॥೫೧॥

ಅವಃ—ಸಾಧನಗಳು ಇಚ್ಛಿಸಲ್ಪಡದಿದ್ದರೆ ಸಾಧನಗಳೇ ಆಗಲಾರವು ಎಂದು ತಿಳಿಸುತ್ತಾರೆ—

~~ವಿಜ್ಞಾನಭಕ್ತ್ಯಾದಿಕಮಪ್ಯತೀವ ತತ್ಸಾಧನಂ ಕಾಮುಬಹಿಷ್ಕೃತಂ ಚೇತ್ ।~~
ನ ಸಾಧನಂ ಸ್ಯಾತ್ ಪರಮೋಹಿ ಮೋಕ್ಷೋ ನ ಸಾಧ್ಯತಾಂ ಯಾತಿ ವಿನಾ ಹಿ ಕಾಮಾತ್ ॥೫೨॥

ಅತೀವತತ್ಸಾಧನಂ—ಮೋಕ್ಷಾದಿ ಪುರುಷಾರ್ಥಗಳಿಗೆ ಅತಿ ಮುಖ್ಯ ಸಾಧನಗಳಾದ, ವಿಜ್ಞಾನಭಕ್ತ್ಯಾದಿಕಂ ಅಪಿ—ಜ್ಞಾನ ಭಕ್ತ್ಯಾದಿಗಳೂ ಕೂಡ, ಕಾಮು ಬಹಿಷ್ಕೃತಂ ಚೇತ್—ಕಾಮಿಸಲ್ಪಡದೇ ಇದ್ದರೆ, ಸಾಧನಂ ನ ಸ್ಯಾತ್ – ಸಾಧನಗಳಾಗಲಾರವು (ಅಷ್ಟೇ ಅಲ್ಲ) ಪರಮಃ ಮೋಕ್ಷಃ—ಶ್ರೇಷ್ಠ ಪುರುಷಾರ್ಥವಾದ ಮೋಕ್ಷವೂ ಕೂಡ, ಕಾಮಾತ್ ವಿನಾ – ಅದರ ಬಗ್ಗೆ ಕಾಮನೆ ಇಲ್ಲದೇ, ಸಾಧ್ಯತಾಂ ನ ಹಿ ಯಾತಿ – ಸಾಧ್ಯತೆಯನ್ನು ಹೊಂದುವದೇ ಇಲ್ಲ (ಸಾಧ್ಯವಾಗುವದೇ ಇಲ್ಲ) ॥೫೨॥

ಅವ—ಮೋಕ್ಷಾದಿ ಸರ್ವ ಪುರುಷಾರ್ಥ ನಿಯಾಮಕನಾದ ಶ್ರೀ ಹರಿಯೂ ಕೂಡ ಕಾಮ್ಯನೇ ಎಂದುತಿಳಿಸುತ್ತಾರೆ–

ಪರಾತ್ಪರೋಽಪ್ಯಾದಿಪುಮಾನ್ ಹರಿಶ್ಚ ಸ್ವಸ್ಯೇತರೇಷಾಮಪಿ ಕಾಮ್ಯ ಏವ ।
ಅಕಾಮಿತೋಽವಾಗ್ಗತಿಮೇವದದ್ಯಾತ್ಕಾಮಃ ಪುಮರ್ಥೋಽಖಿಲ ಏವತೇನ ॥೫೩॥

ಪರಾತ್ ಪರಃ – ಶ್ರೇಷ್ಠರಾದ ಲೋಕಪಾಲಕರಾದ ಶ್ರೀ ರಮಾ ಬ್ರಹ್ಮಾದಿ ಚೇತನರಿಗಿಂತಲೂ ಶ್ರೇಷ್ಠನಾದ, ಆದಿ ಪುಮಾನ್—ಪುರಾಣ ಅಥವಾ ಜಗತ್ಕಾರಣ ಪುರುಷನಾದ, ಹರಿಃಅಪಿ—ಶ್ರೀ ಹರಿಯೂ ಕೂಡ, ಸ್ವಸ್ಯ—ತನಗೆ, ಚ – ಮತ್ತು, ಇತರೇಷಾಮಪಿ—ಇತರರಿಂದಲೂ ಕೂಡ, ಕಾಮ್ಯಃ ಏವ – ಕಾಮ್ಯನೇ ಆಗಿದ್ದಾನೆ, (ಅವನನ್ನು ಇಚ್ಛಿಸಿದಾಗಲೇ ಅವನು ಫಲಪ್ರದನಾಗುವನು). ಅಕಾಮಿತಃ ಚೇತ್ – ಅವನು ಇಚ್ಛಿಸಲ್ಪಡದಿದ್ದರೆ, (ಸಃ—ಅವನು), ಅವಾಗ್ಗತಿಮೇವ–

ಅಧೋಗತಿಯನ್ನೇ, ದದ್ಯಾತ್—ಕೊಡುವನು, ತೇನ – ಆ ಕಾರಣದಿಂದ, ಕಾಮಃ ಏವ – ಕಾಮುವೇ, ಅಖಿಲಃ ಪುಮರ್ಥಃ—ಪೂರ್ಣವಾದ, ಶ್ರೇಷ್ಠ ಪುರುಷಾರ್ಥವು. ॥೫೩॥

ಇಚ್ಛೈವ ಕಾಮೋಽಸ್ತು ತಥಾಽಪಿ ನೈತಾಮೃತೇ ಹಿಚಿತ್ತಂ ಘಟಕುಡ್ಯವತ್ಸ್ಯಾತ್ ।
ಸಾರಸ್ತತಸ್ಸೈವ ಚಿದಾತ್ಮಿಕಾಽಪಿ ಸಾ ಚೇತನಾ ಗೂಢತನುಸ್ಸದೈವ ॥೫೪॥

ಅವ–ಕಾಮ ಶಬ್ದಕ್ಕೆ ಇಚ್ಛೆ ಎಂಬ ಅರ್ಥವಿರುವಾಗಲೂ ಅದೇ ಶ್ರೇಷ್ಠವಾದದ್ದು ಎಂಬ ಶ್ರೀಭೀಮರ ಹೇಳಿಕೆಯನ್ನು ಈ ಶ್ಲೋಕದಲ್ಲಿ ವಿವರಿಸುತ್ತಾರೆ—

ಇಚ್ಛಾ ಏವ – ಇಚ್ಛೆಯೇ, ಕಾಮಃ ಅಸ್ತು – ಕಾಮ ಶಬ್ದಾರ್ಥವಿರಲಿ, ತಥಾಪಿ—ಹಾಗಿದ್ದರೂ ಕೂಡ, (ಅದೇ ಶ್ರೇಷ್ಠವು), ಹಿ – ಯಾವ ಕಾರಣದಿಂದ, ಏತಾಂ ಋತೇ – ಈ ಇಚ್ಛೆ ಇಲ್ಲದೇ, ಚಿತ್ತಂ—ಮನಸ್ಸು, ಘಟಕುಡ್ಯವತ್ – ಕೊಡ, ಗೋಡೆ ಮೊದಲಾದ ಜಡ ಪದಾರ್ಥಗಳಂತೆ, ಸ್ಯಾತ್ – ಆಗುವದೋ, ತತಃ—ಆದ್ದರಿಂದ, ಸಾ ಏವ – ಇಚ್ಛಾರೂಪವಾದ ಕಾಮುವೇ, ಸಾರಃ—ಶ್ರೇಷ್ಠವು, ಸಾ – ಆ ಇಚ್ಛೆಯು, ಚಿದಾತ್ಮಿಕಾಪಿ – ಚೇತನ ಸ್ವರೂಪವೇ ಆದರೂ ಕೂಡ, ಚೇತನಾ—ಚೇತನ ಸ್ವರೂಪವಾದ ಆ ಇಚ್ಛೆಯು, (ಸಂಸಾರದಲ್ಲಿ), ಸದಾ – ಯಾವಾಗಲೂ, ಗೂಢತನುಃ ಏವ— ಗುಪ್ತವಾದ ಸ್ವರೂಪವುಳ್ಳದ್ದೇ ಆಗಿರುವದು. ॥೫೪॥

ನ ಪ್ರಶ್ನಯೋಗ್ಯಃ ಪೃಥಗೇಷ ಕಾಮುಸ್ತೇನೈವರಾಜನ್ಯದಿ ತಾರತಮ್ಯಂ ।
ಇಚ್ಛಸ್ಯಯಂತೇ ತ್ರಿವಿಧೋ ಹಿವೇದ್ಯೋ ಧರ್ಮಾರ್ಥಯುಕ್ತಃ ಪರವೋ ಮತೋಽತ್ರ ॥೫೫॥

ಅವ – ಕಾಮುವು ಎಲ್ಲ ಪುರುಷಾರ್ಥಗಳಲ್ಲಿಯೂ ಸೇರಿದ್ದರಿಂದ ಪ್ರತ್ಯೇಕ ಅದರ ಶ್ರೇಷ್ಠತ್ವದ ಬಗ್ಗೆ ಕೇಳುವದೇ ಸರಿಯಲ್ಲ ಎಂಬುದನ್ನು, ಕಾಮುದಲ್ಲಿ ತ್ರೈವಿಧ್ಯವಿದ್ದು ಅವುಗಳ ತಾರತಮ್ಯವನ್ನು ತಿಳಿಸಲಾರಂಭಿಸುತ್ತಾರೆ—

ರಾಜನ್—ಹೇ ರಾಜನೇ, ತೇನೈವ – ಎಲ್ಲ ಪುರುಷಾರ್ಥ ತತ್ಸಾಧನಗಳಲ್ಲಿ ಈ ಕಾಮುವು ಸೇರಿಕೊಂಡೇ ಇರುವದರಿಂದ, ಏಷಃ ಕಾಮುಃ— ಈ ಕಾಮುವು, ಪೃಥಕ್ – ಪ್ರತ್ಯೇಕವಾಗಿ, ಪ್ರಶ್ನಯೋಗ್ಯಃ ನ—ಪ್ರಶ್ನೆ ಮಾಡಿಸಿಕೊಳ್ಳುವಂಥದ್ದು ಅಲ್ಲ. (ಶ್ರೇಷ್ಠತ್ವ ನಿಶ್ಚಿತವಾದ್ದರಿಂದ ಇದರ ಶ್ರೇಷ್ಠತ್ವ ಹೇಗೆ ಎಂದು ಪ್ರಶ್ನೆಯೇ ಕೂಡುವದಿಲ್ಲ ಎಂದು ಭಾವ.) ಯದಿ—ಒಂದು ವೇಳೆ, ಅತ್ರ ತಾರತಮ್ಯಂ – ಈ ಕಾಮುದ ಬಗ್ಗೆ ತಾರತಮ್ಯವನ್ನು, ಇಚ್ಛಸಿ—ತಿಳಿಯಲು ಇಚ್ಛಿಸುವಿಯಾದರೆ, (ಶೃಣು – ಕೇಳು), ಅಯಂ – ಈ ಕಾಮುವು, ತ್ರಿವಿಧಃ ಇತಿ – ಮೂರು ಪ್ರಕಾರವಾದದ್ದಾಗಿ, ವೇದ್ಯಃ—ತಿಳಿಯಲ್ಪಡಬೇಕು. ಅತ್ರ – ಈ ಮೂರು ಪ್ರಕಾರಗಳಲ್ಲಿ, ಧರ್ಮಾರ್ಥಯುಕ್ತಃ – ಧರ್ಮಕ್ಕೆ, ದೈವ ಮಾನುಷ ರೂಪವಾದ ಎರಡೂ ಅರ್ಥಗಳಿಗೆ ವಿರೋಧಿಯಿಲ್ಲದ ಕಾಮುವು ಪರವಃ – ಶ್ರೇಷ್ಠವಾದದ್ದು ಎಂದು, ಮತಃ–ಜ್ಞಾನಿಗಳಿಗೆ ಸಮ್ಮತವಾಗಿದೆ. ॥೫೫॥

ಏಕಾವಿರೋಧೀ ಯದಿ ಮಧ್ಯಮೋಽಸೌ ದ್ವಯೋರ್ವಿರೋಧೀ ತು ಸ ಏವ ನೀಚಃ ।
ತಸ್ಮಾತ್ತ್ವಬುದ್ಧಿಪ್ರಮುದಾಭಿರೇವ ಕಾಮುಂ ರಮೇಥಾ ಅನುರೂಪಕಾಮುಃ ॥೫೬॥

ಯದಿ – ಒಂದು ವೇಳೆ, ಅಸೌ – ಆ ಕಾಮುವು, ಏಕಾವಿರೋಧೀ – ಧರ್ಮ–ಅರ್ಥ ಎರಡರಲ್ಲಿ ಒಂದಕ್ಕೆ ಅವಿರೋಧಿಯಾಗಿದ್ದರೆ, (ಇನ್ನೊಂದಕ್ಕೆ ವಿರೋಧಿಯಾಗಿದ್ದರೆ,) ಅಸೌ – ಅಂಥ ಕಾಮುವು, ಮಧ್ಯಮಃ – ಮಧ್ಯಮವಾದದ್ದು, ದ್ವಯೋಃ—ಎರಡಕ್ಕೂ, ವಿರೋಧೀ – ವಿರೋಧಿಯಾಗಿದ್ದರೆ, ಸಃಏವ—ಅದೇ, ನೀಚಃ – ಅಧಮವಾದದ್ದು, ತಸ್ಮಾತ್ – ಆದ್ದರಿಂದ, ಸ್ವಬುದ್ಧಿಪ್ರಮುದಾಭಿರೇವ – ನಿನ್ನ ಸುಬುದ್ಧಿಗಳೆಂಬ ವನಿತೆಯರಿಂದಲೇ ಕೂಡಿಕೊಂಡು, ಅನುರೂಪಕಾಮುಃ

ಸನ್—ಯೋಗ್ಯವಾದ ಕಾಮ ಉಳ್ಳವನಾಗಿ, ಕಾಮಂ – ಯಥೇಚ್ಛವಾಗಿ, ರಮೇಥಾಃ—ವಿಹಾರ ಮಾಡುತ್ತಾ ಸಂತೋಷದಿಂದ ಇರು. ॥೫೬॥

ರಾಜನ್ನ ಕಾಮಾದಪರಂ ಶುಭಂ ಹಿ ಪರೋಹಿ ಕಾಮೋ ಹರಿರೇವಯೇನ ।
ಪ್ರಾಜ್ಞಸ್ಸುಹೃಚ್ಚಂದನಸಾರಲಿಪ್ತೋ ವಿಚಿತ್ರಮಾಲ್ಯಾಭರಣೈರುಪೇತಃ ॥
ಇದಂ ವಚೋ ವ್ಯಾಸಸಮಾಸಯುಕ್ತಂ ಸಂಪ್ರೋಚ್ಯ ಭೀಮೋ ವಿರರಾಮವೀರಃ ॥೫೭॥

ರಾಜನ್ – ಹೇ ಧರ್ಮರಾಜನೇ, ಕಾಮಾತ್ ಅಪರಂ ಶುಭಂ – ಕಾಮಕ್ಕಿಂತ ಶ್ರೇಷ್ಠವಾದದ್ದು ಬೇರೆ, ನ – ಇಲ್ಲ, ಯೇನ—ಯಾವ ಕಾರಣದಿಂದ, ಪ್ರಾಜ್ಞಃ—ಜ್ಞಾನಪೂರ್ಣನಾದ, ಸುಹೃತ್ – ಭಕ್ತರಲ್ಲಿ ಸ್ನೇಹವುಳ್ಳ, ಚಂದನಸಾರಲಿಪ್ತಃ—ಚಂದನಾದಿ ವಿಷಯ ಪದಾರ್ಥಗಳ ಸಾರ ಭಾಗದಿಂದ ಕೂಡಿದ, ವಿಚಿತ್ರಮಾಲ್ಯಾಭರಣೈಃ ಉಪೇತಃ— ವಿಚಿತ್ರವಾದ ಮಾಲೆ ಆಭರಣಾದಿಗಳಿಂದ ಕೂಡಿದ, ಹರಿರೇವ – ಶ್ರೀ ಹರಿಯೇ, ಪರಃ ಕಾಮಃ – ಶ್ರೇಷ್ಠನಾದ ಕಾಮನೋ ಆದ್ದರಿಂದ ಕಾಮವೇ ಶ್ರೇಷ್ಠವಾದದ್ದು, ವ್ಯಾಸಸಮಾಸಯುಕ್ತಂ – ಸಂಕ್ಷೇಪ ವಿಸ್ತರಗಳಿಂದ ಕೂಡಿದ, ಇದಂ ವಚಃ—ಈ ರೀತಿ ಮಾತನ್ನು, ಸಂಪ್ರೋಚ್ಯ –ಹೇಳಿ, ವೀರಃ –ಪರಾಕ್ರಮಿಯಾದ, ಭೀಮಃ- ಶ್ರೀಭೀಮಸೇನದೇವರು, ವಿರರಾಮ–ಸುಮ್ಮನಾದರು. ॥೫೭॥

ಪ್ರಶಸ್ಯ ಭೀಮಮನ್ಯಾಂಶ್ಚ ರಾಜಾಮೋಕ್ಷಮಥಾಸ್ತುವತ್ ।
ಸ್ವಯುಕ್ತೇರಪ್ರತೀಪತ್ವಾನ್ನಿರಾಚಕ್ರೇ ನ ಮಾರುತಿಃ ॥೫೮॥

ಇತಿ ಶ್ರೀ ಮದಾನಂದ ತೀರ್ಥ ಭಗವತ್ಪಾದಾಚಾರ್ಯ ವಿರಚಿತೇ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಸಮಸ್ತ ಧರ್ಮನಿರ್ಣಯೋ ನಾಮ ಏಕೋನತ್ರಿಂಶೋಧ್ಯಾಯಃ ॥೨೯॥

॥ ಶ್ರೀಕೃಷ್ಣಾರ್ಪಣಮಸ್ತು ॥

ರಾಜಾ—ಧರ್ಮರಾಜನು, ಭೀಮಂ – ಶ್ರೀ ಭೀಮಸೇನದೇವರನ್ನು, ಅನ್ಯಾಂಶ್ಚ — ವಿದುರ, ಅರ್ಜುನಾದಿಗಳನ್ನೂ ಕೂಡ, ಪ್ರಶಸ್ಯ – ಪ್ರಶಂಸಿಸಿ, ಅಥ —ನಂತರ, ಮೋಕ್ಷಂ—ಮೋಕ್ಷ ಪುರುಷಾರ್ಥವನ್ನು, ಅಸ್ತುವತ್ - ಶ್ರೇಷ್ಠ ಎಂದು ಪ್ರಶಂಸಿಸಿದನು, ಮಾರುತಿಃ – ಶ್ರೀ ಭೀಮಸೇನರು, ಸ್ವಯುಕ್ತೇಃ — ತಾನು ಕಾಮ ಶ್ರೇಷ್ಠ ಎಂದು ಹೇಳಿದ ಯುಕ್ತ್ಯಾದಿಗಳಿಗೆ, ಅಪ್ರತೀಪತ್ವಾತ್ – ಧರ್ಮರಾಜನು ಹೇಳಿದ್ದು ವಿರುದ್ಧವಲ್ಲವಾದ್ದರಿಂದ, ನ ನಿರಾಚಕ್ರೇ—ಧರ್ಮಜನ ಮಾತನ್ನು ನಿಷೇಧಿಸಲಿಲ್ಲ. ॥೫೮॥

ಈ ರೀತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ವಿರಚಿತವಾದ ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಸಮಸ್ತ ಧರ್ಮನಿರ್ಣಯವನ್ನು ನಿರೂಪಿಸುವ ಇಪ್ಪತ್ತೊಂಭತ್ತನೆಯ ಅಧ್ಯಾಯದ ಪ್ರತಿಪದಾರ್ಥ ಚಂದ್ರಿಕೆಯು ಮುಗಿಯಿತು.

॥ ಶ್ರೀಮದ್ವೇಶಾರ್ಪಣಮಸ್ತು ॥

ಭಾ. ಅ. ೫೦–೫೮ ಧರ್ಮರಾಜನ ಪ್ರಶ್ನೆಗೆ ವಿದುರಾರ್ಜುನರು ತಮ್ಮ ಉತ್ತರವನ್ನು ಕೊಟ್ಟನಂತರ, ಶ್ರೀಭೀಮಸೇನದೇವರು ಎಲ್ಲರನ್ನು ಆಶ್ಚರ್ಯಪಡಿಸುತ್ತಾ ಅವರೆಲ್ಲ ಉತ್ತಮವಾದದ್ದು ಬೇರೆ ಬೇರೆ ಹೇಳಿದ್ದರೂ ಕೂಡ ಅಧಮವನ್ನಾಗಿ ಎಲ್ಲರೂ ಹೇಳಿದ ಕಾಮವನ್ನು ಶೇಷ್ಠ ಪುರುಷಾರ್ಥವನ್ನಾಗಿ ಹೇಳಿದರು. ಕಾಮಶಬ್ದಕ್ಕೆ ಇಚ್ಛೆಗೆ ವಿಷಯವಾದ (ಅಂದರೆ ಇಷ್ಟವಾದ)ಪದಾರ್ಥ ಎಂತಲೂ,ಇಚ್ಛೆ ಎಂತಲೂ ಅರ್ಥವಾಗುವದು. ಯಾವದೇ ಪುರುಷಾರ್ಥವು ಪುರುಷಾರ್ಥ ಎಂದು ಆಗ ಬೇಕಾದರೆ ಕಾಮಕ್ಕೆ ಇಚ್ಛೆಗೆ ವಿಷಯವಾಗಲೇಬೇಕು. ಪುರುಷಾರ್ಥ ಎಂಬ ಶಬ್ದಕ್ಕೇನೇ ಹಾಗೆ ಅರ್ಥಬರುವದು.ಪುರುಷರಿಂದ ಅರ್ಥ್ಯಮಾನ(ಅಪೇಕ್ಷಣೀಯ)ವಾದದ್ದು ಎಂದು ಪುರುಷಾರ್ಥ ಎಂಬ ಶಬ್ದದ ಅರ್ಥ.ಪುರುಷಾರ್ಥಗಳು ಅವುಗಳ ಸಾಧನಗಳು ಎಲ್ಲವೂ ಅಪೇಕ್ಷಿತವಾದಾಗಲೇ ಅವುಗಳ ಬಗ್ಗೆ ಪ್ರವೃತ್ತಿ,ಸಂಪಾದನೆ ಎಲ್ಲ ಆಗಬಹುದು.ಉದಾಹರಣೆಗೆ ಸ್ವರ್ಗವನ್ನು ಇಚ್ಛಿಸದೆ ಯಜ್ಞವನ್ನು ಮಾಡಿಯಾನೆಯೇ ? ಮೋಕ್ಷವನ್ನು ಅಪೇಕ್ಷಿಸದೆಯೇ ಶ್ರವಣಮನನಗಳನ್ನು ಮಾಡಿಯಾನೆಯೇ ? ಅಷ್ಟೇಅಲ್ಲ

ಶ್ರವಣಮನನಾದಿಗಳನ್ನು ಇಚ್ಛಿಸಿ ಆದರಪೂರ್ವಕವಾಗಿ ಮಾಡಿದಾಗಲೇ ಫಲಪ್ರದವಾಗುವವು. ಆದ್ದರಿಂದ ಸಾಧನಗಳು ಅಪೇಕ್ಷಿತವಾಗಿಯೇ ಸಾಧನಗಳಾಗುವವು. ಪುರುಷಾರ್ಥಗಳು ಅಪೇಕ್ಷಿತವಾಗಿಯೇ ಸಾಧ್ಯಗಳಾಗುವವು. ಹೀಗೆ ಕಾಮವು ಎಲ್ಲದರಲ್ಲಿಯೂ ಕಾಯಿಪಲ್ಯೆಯಲ್ಲಿ ಉಪ್ಪಿನಿಶ್ರವಾಗಿಯೇ ಇರುವಂತೆ ಇರುವದರಿಂದ ಕಾಮವು ಶ್ರೇಷ್ಠವೇ ಆದದ್ದು. ಕಾಮಶಬ್ದಕ್ಕೆ ಶ್ರೀಹರಿಯು ಎಂದೂ ಅರ್ಥವಾಗಬಹುದು, ಏಕೆಂದರೆ ಅವನೂ ಕಾಮ್ಯನೇ ಆಗಿರುವನು. ತಾನು ತನ್ನಿಂದಲೂ ಕಾಮ್ಯನು; ಪರರಿಂದಲೂ ಕಾಮ್ಯನು. ಭಗವಂತನನ್ನು ಕಾಣಿಸದವರಿಗೆ ಸದ್ಗತಿಯೇ ಆಗಲಾರದು. ಅಧೋಗತಿಯೇ ಆಗುವದು. ಈ ಅರ್ಥವಿರುವಾಗ ಶ್ರೀಹರಿಯು ಸರ್ವೋತ್ತಮನಾದ್ದರಿಂದ ಕಾಮವು ಸರ್ವೋತ್ತಮವಾದದ್ದು.

ಇನ್ನು ಕಾಮಶಬ್ದಕ್ಕೆ ಇಚ್ಛೆ ಎಂದು ಅರ್ಥಇಟ್ಟುಕೊಂಡರೂ ಕೂಡ ಕಾಮವೇ ಶ್ರೇಷ್ಠ. ಏಕೆಂದರೆ ಜೀವನು ಇಚ್ಛೆ ಇಲ್ಲದಿದ್ದರೆ ಘಟಪಟಾದಿ ಜಡಪದಾರ್ಥಗಳಂತೆ ಆಗುವನು. ಆದ್ದರಿಂದ ಇಚ್ಛೆಯು ಬಗ್ಗೆ ಶ್ರೇಷ್ಠವೋ ಎಂಬ ಪ್ರಶ್ನೆಯೇ ಕೂಡುವದಿಲ್ಲ. ಆದರೆ ಕಾಮವು ಮೂರುವಿಧವಾಗಿದೆ. ೧) ಯಾವ ಕಾಮವು ಧರ್ಮ ಮತ್ತು ಅರ್ಥ ಎರಡಕ್ಕೂ ಅವಿರುದ್ಧವಾಗಿದೆಯೋ ಅದು ಉತ್ತಮಕಾಮವು. ಉದಾ– ವಿರಕ್ತಗುರುಗಳಿಂದ ವೈರಾಗ್ಯ ಪೂರ್ವಕವಾಗಿ ಶ್ರವಣಮನನ ನಿದಿಧ್ಯಾಸನಗಳನ್ನು ಮಾಡುವ ಬಗ್ಗೆ ಕಾಮನೆಯು. ಇದು ಎರಡು ತರಹದ ಅರ್ಥಗಳಿಗೂ ವಿರೋಧಿಯಲ್ಲ;ಧರ್ಮಕ್ಕೂ ವಿರೋಧಿಯಲ್ಲ. ೨) ಧರ್ಮಅರ್ಥಗಳಪೈಕಿ ಒಂದಕ್ಕೆ ಅವಿರೋಧಿಯಾಗಿದ್ದ ಕಾಮವು ಮಧ್ಯಮ ಕಾಮವು. ಉದಾ – ವಿಶ್ವಜಿತ್ ಯಾಗ ಮೊದಲಾದ ಕಾಮ್ಯ ಕರ್ಮಗಳು. ಇವು ಧರ್ಮಕ್ಕೆ ವಿರೋಧಿಯಲ್ಲದಿದ್ದರೂ ದೈವ ಅರ್ಥರೂಪವಾದ ವಿದ್ಯೆಗೆ ವಿರೋಧಿ; ಮಾನುಷ ಅರ್ಥರೂಪವಾದ ದುಡ್ಡಿಗೂ ವಿರೋಧಿಯು. ಮಹಾಮಹಾ ಯಾಗಗಳು ಮಹಾಧನವ್ಯಯದಿಂದಲೇ ಸಾಧ್ಯ. ಅಂಥವುಗಳನ್ನು ನಿಷ್ಕಾಮವಾಗಿ ಮಾಡಿದರೆ ಶ್ರೀಹರಿಪ್ರೀತಿ, ಜ್ಞಾನಲಾಭಗಳು ಇರುವದರಿಂದ ಆಗ ಅವು ವಿರೋಧಿಯಲ್ಲ. ಕಾಮ್ಯವಾದರೆ ಬಂಧಕವಾಗುವದರಿಂದ ವಿರೋಧಿಯೇ ಆಗುವವು. ಇನ್ನು ಮಾನುಷ ಅರ್ಥಕ್ಕೆ ಅವಿರೋಧಿಯಾಗಿದ್ದು ಧರ್ಮಕ್ಕೆ ವಿರೋಧಿಯಾದ ವ್ಯಾಪಾರಾದಿಗಳ ಕಾಮವು ಕೂಡ ಮಧ್ಯಮವಾದದ್ದು. ೩) ಧರ್ಮಅರ್ಥಗಳೆರಡಕ್ಕೂ ವಿರೋಧಿಯಾದ ಪರಸ್ತ್ರೀಗಮನ, ಮಾಂಸಭಕ್ಷಣ, ಸುರಾಪಾನ ಇತ್ಯಾದಿ ದುರ್ವ್ಯಾಪಾರಗಳ ಬಗ್ಗೆ ಕಾಮವು ಅಧಮಕಾಮವು, ಆದ್ದರಿಂದ ಮಧ್ಯಮ ಅಧಮ ಕಾಮಗಳನ್ನು ತ್ಯಜಿಸಿ ಉತ್ತಮ ಕಾಮಉಳ್ಳವರಾಗಿ ಸುಬುದ್ಧಿ (ಶ್ರೀಹರಿಗುಣಪೂರ್ಣತ್ವ ಬುದ್ಧಿ, ವೈರಾಗ್ಯ ಬುದ್ಧಿ, ಉಪಾಸನಾ ಬುದ್ಧಿ ಇತ್ಯಾದಿ) ಪ್ರಮದೆಗಳೆಂಬವ (ಸ್ತ್ರೀಯ) ರಿಂದ ಕೂಡಿಕೊಂಡು ಸಂತೋಷದಿಂದ ಇರು. ಲೌಕಿಕ ಸ್ತ್ರೀಯರು ಮುಂಖ್ಯ ಪ್ರಮದೆಯರಲ್ಲ, ಪ್ರ– ಉತ್ತಮವಾದ, ಮದ (ಮೊಕ್ಷದ) ಆನಂದವನ್ನು ಉಂಟುಮಾಡುವವರು ಪ್ರಮದೆಯರು. ಲೌಕಿಕಸ್ತ್ರೀಯರು ಮೋಕ್ಷಾನಂದಕ್ಕೆ ಸಹಾಯಕರಾದರೆ ಪ್ರಮದೆಯರಾಗಬಹುದು. ಸುಬುದ್ಧಿಗಳು ಮಾತ್ರ ನಿಶ್ಚಿತವಾಗಿ ಮೋಕ್ಷಾನಂದ ಪ್ರಾಪಕಗಳು. ಆದ್ದರಿಂದ ಸೃಕ್ಚಂದನ ವನಿತಾದಿಗಳು ಕಾಮಂಗಳು ಎಂದರೆ ಈ ರೀತಿ ಅರ್ಥವನ್ನು ತಿಳಿಯಬೇಕು. ಸರ್ವಜ್ಞನೂ, ಸದಾಭಕ್ತವತ್ಸಲನೂ, ಪ್ರಾಕೃತಗಂಧಾದಿಗತಸಾರ ಭೋಕ್ತೃವೂ ಆದ, ಲೋಕ ವಿಲಕ್ಷಣವಾದ ಮಾಲ್ಯಾಭರಣಗಳಿಂದ ಕೂಡಿದವನೂ ಆದ ಶ್ರೀಹರಿಯೇ ಮುಖ್ಯ ಕಾಮನಾದ್ದರಿಂದ, ಕಾಮಕ್ಕಿಂತ ಶ್ರೇಷ್ಠವಾದದ್ದು ಯಾವದೂ ಇಲ್ಲ. ಶ್ರೀಭೀಮರು ಈರೀತಿ ಸಂಕ್ಷೇಪವಿಸ್ತರಗಳಿಂದ ಹೇಳಿ ವಿರಮಿಸಿದರು. ಆಗ ಧರ್ಮರಾಜನು ಇವರ ಅಭಿಪ್ರಾಯವನ್ನು ತಿಳಿದು ಶ್ರೀಭೀಮರನ್ನು ವಿದುರಾದಿಗಳನ್ನು ಹೊಗಳಿ ತಾನು ಮೋಕ್ಷಪುರುಷಾರ್ಥವು ಶ್ರೇಷ್ಠವೆಂದು ಹೇಳಿದನು. ಈ ಮಾತು (ಕಾಮಶಬ್ದಕ್ಕೆ ತಾನು ಹೇಳಿದ ಅರ್ಥದರೀತಿಯಲ್ಲಿ ಮೋಕ್ಷವೂಕೂಡ ಕಾಮಶಬ್ದದಿಂದ ಕರಿಸಿಕೊಳ್ಳುವದರಿಂದ) ತಮ್ಮಮಾತಿಗೆ ವಿರೋಧಿಯಲ್ಲವಾದ್ದರಿಂದ ಶ್ರೀಭೀಮಸೇನದೇವರು ನಿಷೇಧಿಸಲಿಲ್ಲ.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯದಲ್ಲಿ ಸಮಸ್ತಧರ್ಮನಿರ್ಣಯವನ್ನು ನಿರೂಪಿಸುವ ಇಪ್ಪತ್ತೊಂಭತ್ತನೆಯ ಅಧ್ಯಾಯದ ವಿಶೇಷಾರ್ಥಸಹಿತವಾದ ಭಾವಾನುವಾದವು ಮುಗಿಯಿತು. ಈ ಕೃತಿಯಿಂದ ಶ್ರೀಹರಿವಾಯುಗುರುಗಳು ಪ್ರೀತರಾಗಲಿ. ಅವರಿಗೆ ಸಮರ್ಪಿತವಾಗಿದೆ.

॥ ಶ್ರೀಕೃಷ್ಣಾರ್ಪಣಮಸ್ತು ॥

ತಿದ್ದುಪಡಿ

ಪುಟ	ಸಾಲು	ಇದ್ದದ್ದು	ಸುಧಾರಣೆ
2	26	ಪೊಡಸಿ	ಪೋಡಸಿ
5	13	ನ್ನಾಗಿ	ನನ್ನಾಗಿ
6	12	ಆಪ	ಅಪ
6	18	ಯಾತಂ	ಯಾಂತಂ
6	26	ಆವ	ಅವ
11	26	ರ್ಕಣ	ಕರ್ಣ
14	5	ಸವೆ	ಸುವೆ
14	20	ಕರೆ	ಕರ
15	8	ದನು	ದರು
19	23	ರನು	ರನ್ನು
20	15	ಯು	ಯುು
21	22	ರಾರ್ಜ	ರಾಜ
27	9	ಭಿ	ಭೀ
29	24	ಯೀ	ಯೆ
34	35	ತಲ್ಪ	ತಲ್ಪ
~~35~~	~~25~~	~~ತಸ್ಯೀಸಿ~~	~~ತಸ್ಯಾಸೀ~~
36	1	ಹೋರ	ಹೊರ
36	28	ನಿಘಂ	ನಿಘ್ನಂ
36	29	ದುಶ್ಯಾ	ದುಂಶ್ಯಾ
39	13	ತೊಷ	ತೋಷ
39	14	ಆಶಿ	ಆಶೀ
40	10	ರಿಧ್ಯೇ	ರಿಮುಧ್ಯೇ
43	8	ದರ್ಯೋ	ದುರ್ಯೋ
45	19	ಸುವಲಾ	ಸವಲಾ
46	8	ದೂ	ದು
47	19	ವಿಸರ್ಜ	ವಿಸೆರ್ಜ
47	22	ಮು	ಮುಂ
48	20	ಪಕು	ಪ್ರಕು
48	21	ಸುರ್ಯ	ಸೂರ್ಯ
48	24	ಸರ	ಸರಂ
48	27	ವಂ	ವರಂ
50	6	ಮೈ	ಮೋ
50	21	ಆಶ್ವ	ಅಶ್ವ

ಪುಟ	ಸಾಲು	ಇದ್ದದ್ದು	ಸುಧಾರಣೆ
50	36	ಕೃಷಾ	ಕೃಷ್ಣಾ
51	14	ಯೋ	ಯೋಃ
52	8	ಶುಕು	ಶಕು
52	21	ಭಿಮು	ಭೀಮು
52	22	ಹಾಗು	ಹಾಗೂ
52	25	ವೀ	ವಿ
52	30	ಥನ	ಧನ
53	18	ದ	ದು
58	15	ನೋ	ನೊ
64	28	ಥ್ವೀ	ಥ್ವಿ
64	29	ನಿನ	ನಿನ್ನ
67	24	ಯೀಂ	ಯುಂ
70	16	ಫ್ಲೇಃ	ಫ್ಲೋ
73	11	ದ್ರೊಣೌ	ದ್ರೋಣೌ
73	24	ಸುದ	ಸುವ
75	16	ಪುನಧ	ಪುನರ್ಧ
77	17	ಯುಮುನು	ಯುವನಂ
77	25	ಏನಿದೊ	ಏನಿದೆಯೋ
78	14	ಅಂದಂ	ಅಂಧಂ
78	21	ಕೃಪ್ಣ	ಕೃಷ್ಣ
79	24	ದೇs	ದೇ
~~79~~	~~24~~	~~ಪುಪ್ಪ~~	~~ಪುಷ್ಪ~~
80	35	ಬಗಗೆ	ಬಗೆಗೆ
82	13	ಸಕ್ಳ	ಸಕೃ
82	22	ಪ್ರೆರಿ	ಪ್ರೇರಿ
83	25	ಸಾಮಾ	ಸಾಮಂ
84	18	ಚನ್	ಚ
84	27	ತಾಶ್ಚ	ತಾಂಶ್ಚ
85	3	ಖ್ಗಿ	ಖ
85	8	ಯತೆ	ಯಂತೆ
90	3	ನಿಮ್ಯ	ನಿಶಮ್ಯ
94	10	ಸವ	ದ್ರವ
97	16	ತ್ಕು	ತ್ಕೃ
98	19	ತಕ್ಳು	ತ್ಕೃ
99	26	ಪ್ಲವ	—
100	3	ಹೀಗೆ	—
100	6	ಸ್ಪಪ್ಪ	ಸ್ಪಷ್ಟ
100	22	ದೊ	ದೊ
104	7	ದಂ	ದ

ಪುಟ	ಸಾಲು	ಇದ್ದದ್ದು	ಸುಧಾರಣೆ
105	6	ವಾಹ	ಪ್ರಾಹ
105	17	ಜ್ಞ	ಜ್ಞಾ
105	19	ಧಾ	ಥಾ
106	6	ಶ್ರುತ್ರಿ	ಶ್ರುತಿ
107	7	ನಂ	ನೈವ
108	6	ಅನ	ಅವ
115	24	ತಾರಿ	ತಾದಿ
115	25	ಢು	ಧಂ
116	9	ದ್ರೊ	ದ್ರೋ
117	3	ಉ	ಊ
119	24	ವಿಷೋಃ	ವಿಷ್ಣೋಃ
122	7	ಆದರಿಸಲೇಬಾರದು	ಆಚರಿಸಲೇಬಾರದು
123	21	ಬೋಗಿ	ಭೋಗಿ
125	2	ಹೀಶ್ಚ	ಹೀನಶ್ಚ
125	4	ಶ್ರೀಹರಿ ಭಕ್ತಿ	ಶ್ರೀಹರಿಭಕ್ತಿ
127	30	ಅಧಮನಾದರೂ	ಅಧಮಾನಾದರಂತೂ